ಸಂಪುಟ ೩
ಸಂಚಿಕೆ ೧

ಕರ್ನಾಟಕ ಭಾರತಿ

ಸ್ವಾತಂತ್ರ್ಯೋತ್ಸವ ಸಂಚಿಕೆ
೧೯೭೦

ಧಾರವಾಡ
ಕರ್ನಾಟಕ ವಿಶ್ವವಿದ್ಯಾಲಯ

ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ'ಯು ಸೃಜನ, ವಿಮರ್ಶನ, ಸಂಶೋಧನ ಮತ್ತು ವೈಜ್ಞಾನಿಕ ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು, ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನ ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು, ಸಂಪಾದಕರು 'ಕರ್ನಾಟಕ ಭಾರತಿ', ಕನ್ನಡ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೩ ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು **ಎರಡು** ಪ್ರತಿಗಳನ್ನು ಕಳುಹಿಸಬೇಕು.

ಇನ್ನಿತರ ಯಾವದೇ ವಿಷಯಕ್ಕೆ ಡಾಯರೆಕ್ಟರ್, ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೩ ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ   ೨. ರಾಜ್ಯೋದಯ ಸಂಚಿಕೆ

೩. ಸಂಕ್ರಮಣ ಸಂಚಿಕೆ   ೪. ಅಕ್ಷಯತೃತೀಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೮-೦೦ (ಅಂಚೆವೆಚ್ಚ ಸಹಿತ)

ಬಿಡಿಸಂಚಿಕೆಯ ಬೆಲೆ : ರೂ. ೨-೫೦ (ಅಂಚೆವೆಚ್ಚ ಪ್ರತ್ಯೇಕ)

ಹಣವನ್ನು ಮನಿಯಾರ್ಡರ್ ಇಲ್ಲವೆ ಪೋಸ್ಟಲ್ ಆರ್ಡರ್ ಮೂಲಕ ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩ ಇವರಿಗೆ ಕಳುಹಿಸಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೩ ಸಂಚಿಕೆ : ೧

ಸ್ವಾತಂತ್ರ್ಯೋತ್ಸವ ಸಂಚಿಕೆ

ಕ್ರಿ.ಶ. ೧೯೭೦ ಶಾ.ಶ. ೧೮೯೨

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೩, ಸಂಚಿಕೆ : ೧
ಆಗಸ್ಟ್ ೧೯೭೦

ಪ್ರಕಾಶಕರು :

ಶ್ರೀ ಎಸ್. ಎಸ್. ಒಡೆಯರ, ಎಂ.ಎ., ಎಲ್‌ಎಲ್.ಬಿ.
ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೩

ಮುದ್ರಕರು :

ಶ್ರೀ ಬಿ. ಜಿ. ಗುತ್ತಲ, ಬಿ.ಎ., ಎಲ್‌ಎಲ್.ಬಿ.
ಸಂಯುಕ್ತ ಕರ್ನಾಟಕ ಪ್ರೆಸ್, ಕೊಪ್ಪೀಕರ್ ರೋಡ್, ಹುಬ್ಬಳ್ಳಿ–೨೦

ಪರಿವಿಡಿ

ಕಲಬುರ್ಗಿಯ ಸ್ನಾತಕೋತ್ತರ ಕೇಂದ್ರದ ಪ್ರಾರಂಭೋತ್ಸವ



ಪೂಜಾಸಮಾರಂಭ



ಕುಲಪತಿಗಳಿಂದ ಉದ್ಘಾಟನೆ

ಶ್ರೀಚನ್ನವೀರೇಶ್ವರಶತಕ

ಪ್ರಸ್ತಾವನೆ

ಕನ್ನಡ ಸಾಹಿತ್ಯ ವಾಹಿನಿಯು ಕಾಲಾನುಕಾಲಕ್ಕೆ ನೂತನ ಸಾಹಿತ್ಯ ಪ್ರಕಾರದ ಝುರಿಗಳನ್ನು ಮೈಗೂಡಿಸಿಕೊಂಡು ತುಂಬಿಹರಿಯುತ್ತ ಸಾಗಿಬಂದಿದೆ. ಚಂಪು, ಷಟ್ಪದಿ, ಸಾಂಗತ್ಯ, ತ್ರಿಪದಿ, ಶತಕ, ಅಷ್ಟಕ, ವಚನ, ಸ್ವರವಚನ, ಚೌಪದನ ಮುಂತಾದ ಹಲವಾರು ಪ್ರಕಾರಗಳನ್ನು ಬೆಳೆಸಿಕೊಂಡು ಇಂದಿಗೂ ಉಳಿಸಿಕೊಂಡುಬಂದುದು ಅದರ ವೈಶಿಷ್ಟ್ಯವಾಗಿದೆ. ಇಂತಹ ಒಂದು ಸಾಹಿತ್ಯ-ಪ್ರಕಾರ ಈ ಕಾಲದಲ್ಲಿ ಇದ್ದು ಮುಂದಿನ ಕಾಲದಲ್ಲಿ ಇಲ್ಲವೆಂದು ಹೇಳುವಂತಿಲ್ಲ. ಹಳೆಯ ಕಾಲದಿಂದಲೂ ಬೆಳೆದುಬಂದ ಚಂಪು, ಷಟ್ಪದಿ ಮುಂತಾದ ಸಾಹಿತ್ಯ-ಪ್ರಕಾರಗಳು ಇಂದು ಸೃಷ್ಟಿಯಾಗುತ್ತಿರುವುದು ವೈಶಿಷ್ಟ್ಯಪೂರ್ಣವಾಗಿದೆ. ಅದಕ್ಕೆ ಮುಖ್ಯ ಕಾರಣ ಜನತೆಯ ಅಭಿರುಚಿ. ಹೊಸದು ಅತಿಯೆನಿಸಿದಾಗ ಹಳೆಯುದರ ನೆನಪಾಗುವುದು ಸ್ವಾಭಾವಿಕ. ಹೀಗಾಗಿ ಇಂದಿಗೂ ನೂತನ ಪ್ರಕಾರಗಳ ಮಧ್ಯದಲ್ಲಿ ಹಳೆಯ ಪ್ರಕಾರವು ಮೂಡಿಬಂದರೆ ಅಚ್ಚರಿಯೇನಲ್ಲ.

ಶತಕಸಾಹಿತ್ಯವು ಸಂಸ್ಕೃತದಲ್ಲಿ ಹುಟ್ಟಿ ಕನ್ನಡಕ್ಕೆ ಬಳುವಳಿಯಾಗಿ ಬಂದು ಸಾವಿರ ವರ್ಷ ಸಂದುವು. ಅದು ತನ್ನ ಹಿರಿಮೆಗರಿಮೆಗಳನ್ನು ಕಾಯ್ದು-ಕೊಂಡು ಪಂಡಿತಪಾಮರರ ಮೆಚ್ಚುಗೆಪಡೆದು ನಿಂತಿದೆ. ಶತಕಗಳನ್ನು ಓದು ವವರೂ ಬರೆಯುವವರೂ ಇಂದೂ ಸಾಕಷ್ಟಿದ್ದಾರೆ. ಶ್ರೀಚನ್ನವೀರೇಶ್ವರಶತಕ-ವನ್ನು ರಚಿಸಿದ ಕವಿಗಳು ಅಂಥವರಲ್ಲಿ ಒಬ್ಬರು. ಅವರು ಲಿಂಗೈಕ್ಯರಾಗಿ ಬಹು-ದಿನಗಳಾಗಿಲ್ಲ. ಅವರಿಂದ ರಚಿತವಾದ ಶತಕ, ಹಾಡುಗಳು ಅವರನ್ನು ಅಮರ ರನ್ನಾಗಿ ಮಾಡಿವೆ.

ಶ್ರೀಚನ್ನವೀರೇಶ್ವರಶತಕವನ್ನು ರಚಿಸಿದ ಕವಿಯ ಹೆಸರು ಚನ್ನವೀರಯ್ಯ ನವರು ಪುರಾಣಿಕಮಠ. ಅವರು ಧಾರವಾಡ ಜಿಲ್ಲೆಯ ಮುಳಗುಂದ ಗ್ರಾಮ ದವರು. ಅವರದು ಪುರಾಣಿಕ ಮಠ. ಪುರಾಣಕಾವ್ಯಗಳನ್ನು ಓದಿ, ಅರ್ಥೈಸಿ, ಪ್ರವಚನ ಮಾಡುವುದಕ್ಕೆ ಆ ಮಠಾಧಿಕಾರಿಗಳು ಪೂರ್ವಕಾಲದಿಂದಲೂ ಪ್ರಸಿದ್ಧ ರಾದವರು. ಅಂತಹ ದಿವ್ಯಸಂಸ್ಕೃತಿಯನ್ನು ಆನುವಂಶಿಕವಾಗಿ ಬೆಳೆಸಿಕೊಂಡು ಬಂದ ಮನೆತನದಲ್ಲಿ ಶ್ರೀಚನ್ನವೀರೇಶಕವಿಗಳು ಜನ್ಮವೆತ್ತಿ ಕಾವ್ಯರಚನೆ ಮಾಡಿ ದುದು ಕನ್ನಡದ ಭಾಗ್ಯ.

ಶ್ರೀ ಚನ್ನವೀರೇಶ್ವರ ಕವಿಗಳು ಹೆಚ್ಚು ಕಲಿಯಲಿಲ್ಲ ; ಕಲಿಯುವುದಕ್ಕೆ ಅವಕಾಶವೇ ಇದ್ದಿಲ್ಲ. ಅವರು ತಮ್ಮ ತಂದೆಯನ್ನೇ ಗುರುವಾಗಿ ಅಂಗೀಕರಿಸಿ ಮನೆಯಲ್ಲಿಯೇ ಸಂಸ್ಕೃತ ಅಧ್ಯಯನ ಮಾಡಿದರು. ಸಾರ್ವಜನಿಕ ಶಾಲೆಯಲ್ಲಿ ಓದಿ ಮುಲಕೀ ಪರೀಕ್ಷೆಯನ್ನು ಉತ್ತಮ ಶ್ರೇಣಿಯಲ್ಲಿ ಪಾಸಾದರು. ಪ್ರಾಥ-ಮಿಕ ಶಾಲೆಯ ಶಿಕ್ಷಕರಾಗಿ, ಎರಡು ವರ್ಷದ ಟ್ರೇನಿಂಗ ಪಡೆದು, ಪರೀಕ್ಷೆಯಲ್ಲಿ ತೇರ್ಗಡೆಹೊಂದಿದರು. ಈ ಹೊತ್ತಿಗೆ ಅವರಿಗೆ ಕನ್ನಡ–ಸಂಸ್ಕೃತಗಳೆರಡರಲ್ಲಿಯೂ ಸಾಕಷ್ಟು ಪ್ರಭುತ್ವ ಬಂದಿತ್ತು. ಹಲವಾರು ಕಾವ್ಯಶಾಸ್ತ್ರಗ್ರಂಥಗಳನ್ನು ಓದಿದ್ದೂ ಆಯಿತು. ಅವರು ಸಣ್ಣ ಸಣ್ಣ ಹಳ್ಳಿಗಳಲ್ಲಿ ಶಿಕ್ಷಕರಾಗಿ ಇರಬೇಕಾಗಿ ಬಂದುದರಿಂದ ಹೆಚ್ಚಿನ ಅಭ್ಯಾಸಕ್ಕೆ ಅನುಕೂಲತೆ ದೊರೆಯಲಿಲ್ಲ. ಆದರೆ ಮಾರಾರಿಯ ಕೃಪೆಯಿಂದ ದೊರಕಿದ ಅವರ ಪ್ರತಿಭೆ ಮಾತ್ರ ಕಾವ್ಯರಚನೆಗೆ ಪ್ರೋತ್ಸಾಹ ನೀಡುತ್ತಿರಬೇಕು. ಅಂತೆಯೇ ಅವರು ಒಂದು ಶತಕವನ್ನೂ ಒಂದು ಷಟ್ಪದೀಕಾವ್ಯವನ್ನೂ ಹಲವಾರು ಹಾಡುಗಳನ್ನೂ ಬರೆದು ತೃಪ್ತಿ ಪಡೆದರು. ಸಧ್ಯಕ್ಕೆ ಅವರು ರಚಿಸಿದ ಶತಕವೊಂದನ್ನು ಮಾತ್ರ ಪ್ರಸಿದ್ಧಪಡಿಸ ಲಾಗಿದೆ. ಉಳಿದ ಕೃತಿಗಳನ್ನು ಮತ್ತೊಮ್ಮೆ ಪ್ರಕಟಿಸಲಾಗುವುದು.

ಶ್ರೀ ಚನ್ನವೀರ ಕವಿಗಳು ಉತ್ತಮವರ್ಗದ ಶಿಕ್ಷಕರು. ಅವರ ಅಡಿದಾವರೆ ಗಳಲ್ಲಿ ಕೂತು ಕಲಿಯುವ ಭಾಗ್ಯ ನನಗೊಂದು ವರ್ಷ ಬಂದಿತ್ತು. ಅವರ ಸದಾಚಾರ, ವಿದ್ಯಾಪ್ರೇಮ, ಬಾಲಕರ ಮೇಲಿದ್ದ ಮಮತೆ, ಸಮಯನಿಷ್ಠೆ, ನಾಡನುಡಿಯ ಅಭಿಮಾನ, ಸಾಹಿತ್ಯಾಭಿರುಚಿ ಅನುಪಮವಾಗಿದ್ದವು. ಮಳೆ ಬಾರದಾಗ ಹರಿಶ್ಚಂದ್ರಪುರಾಣವನ್ನು ಓದಿಸಿ, ಕೇಳಿ ಮಳೆರಾಯನನ್ನು ಕರೆಯಿಸಿ ಕೊಳ್ಳುವುದು ನಮ್ಮೂರ ಸಂಪ್ರದಾಯ. ಆ ಪುರಾಣವನ್ನು ಶ್ರೀ ಚನ್ನವೀರೇಶ ಮಾಸ್ತರರಿಂದಲೇ ಕೇಳಬೇಕು. ಎಂತಹ ಗಾಂಭೀರ್ಯ ! ಎಷ್ಟೊಂದು ಭಕ್ತಿ ! ಸಾಕ್ಷಾತ್ ಶಿವನೇ ಪ್ರತ್ಯಕ್ಷನಾಗಿ ಪುರಾಣ ಹೇಳುವಂತೆ ಇರುತ್ತಿತ್ತು ಆ ದೃಶ್ಯ ! ಪುರಾಣಸಮಾಪ್ತಿಗೆ ಮಳೆ ಬಂದೇ ಬರುತ್ತಿತ್ತು. ಬಂದ ಮಳೆಯನ್ನು ಮರೆತಿರಬಹುದು ; ಆದರೆ ಆಜಾನುಬಾಹುಗಳಿಂದೊಡಗೂಡಿದ ಪುರಾಣಿಕ ಚನ್ನವೀರಯ್ಯನವರನ್ನು ಮರೆಯುವುದು ಸಾಧ್ಯವಿಲ್ಲ. ಅವರ ವ್ಯಕ್ತಿತ್ವವೇ ಅಂತಹದು.

ಶ್ರೀ ಚನ್ನವೀರ ಕವಿಗಳು ಧರ್ಮವನ್ನೂ ಕಾವ್ಯಧರ್ಮವನ್ನೂ ಎಡಬಿಡದೆ ನಡೆಸಿಕೊಂಡು ಬಂದವರು. ಧರ್ಮ ಬೆಳೆಯಲೆಂದೇ ಕಾವ್ಯ ಕಟ್ಟಿದರೆಂದು ಹೇಳಿದರೆ ಅತಿಶಯೋಕ್ತಿ ಎನಿಸದು. ವೀರಶೈವ ಧರ್ಮದಲ್ಲಿ ಶ್ರದ್ಧೆಯನ್ನಿಟ್ಟು ಅದಕ್ಕೆ ಬೇಕಾದ ಆಚಾರವಿಚಾರಗಳನ್ನು ಕೊನೆಯವರೆಗೂ ನಡೆಸಿಕೊಂಡು ಬಂದರು. ಆನಂದವೆನಿಸಿದಾಗ ಆ ಧರ್ಮತತ್ವಗಳನ್ನೇ ಕಾವ್ಯಮಯವಾಗಿ

ಅವರು ಹಾಡಿದರು. ನಡೆನುಡಿಯಲ್ಲಿ ಒಂದುತನವಿತ್ತು; ಆಚಾರವಿಚಾರದಲ್ಲಿ ಹೊಂದಿಕೆಯಿತ್ತು. ಒಟ್ಟಿನಲ್ಲಿ ಅವರದು ಶರಣಜೀವನ, ಶಿಕ್ಷಕವೃತ್ತಿಯೇ ಕಾಯಕ, ಸಕಲ ಜೀವರಾಶಿಗೆ ಲೇಸಬಯಸುವುದೇ ಅವರ ಮನೋಭಾವ. ವ್ಯಕ್ತಿಯಿದ್ದಂತೆ ಕೃತಿರಚನೆಯಾಗುವುದು. ವ್ಯಕ್ತಿತ್ವವೇ ಕಾವ್ಯವೆಂದರೂ ಸರಿಯೇ! ಹೀಗಿರಲು ಶ್ರೀ ಚನ್ನವೀರ ಕವಿಗಳ ಕೃತಿಗಳು ಒಳ್ಳೆಯ ಸಾಹಿತ್ಯ ಕೃತಿಗಳೆಂದು ಬೇರೆ ಹೇಳಬೇಕಾಗಿಲ್ಲ.

ಶ್ರೀಚನ್ನವೀರೇಶ್ವರ ಶತಕವು ಒಂದು ಕಿರಿಯ ಕೃತಿಯಾದರೂ ಹಿರಿಮೆಯಿಂದ ಕೂಡಿದೆ. ವೀರಶೈವತತ್ವಜ್ಞಾನವನ್ನು ಸ್ವಲ್ಪದರಲ್ಲಿಯೇ ಸ್ವಾರಸ್ಯ ಬರುವ ಹಾಗೆ ಈ ಕೃತಿಯಲ್ಲಿ ಬಿತ್ತರಿಸಲಾಗಿದೆ. ಅಲ್ಲಲ್ಲಿ ಉತ್ತಮ ಸಾದೃಶ್ಯಗಳನ್ನು ಕೊಟ್ಟು ವಿಷಯವನ್ನು ಹೆಚ್ಚು ಸ್ಪಷ್ಟಗೊಳಿಸಲಾಗಿದೆ. ಶೈಲಿ ಸುಗಮವಾಗಿದ್ದು ಸರ್ವರಿಗೂ ತಿಳಿಯುವ ಹಾಗಿದೆ ಒಂದೆರಡು ಕಡೆ ತಪ್ಪು ಎಡೆವಾಯ್ದು ಬಂದಿದ್ದರೂ ಅವು ಕಾವ್ಯದ ಓಘದಲ್ಲಿ ಕೊಚ್ಚಿಕೊಂಡುಹೋಗುತ್ತವೆ. ಒಟ್ಟಿನಲ್ಲಿ ಈ ಶತಕವು ಜನಪ್ರಿಯವಾಗಬಲ್ಲದೆಂದು ನಮ್ಮ ನಂಬಿಕೆ.

ಶ್ರೀ ಚನ್ನವೀರ ಕವಿಗಳ ನಡೆ ಚೆನ್ನ, ನುಡಿ ಚೆನ್ನ. ತಾವು ಶರಣಜೀವನ ನಡೆಸಿದ್ದಲ್ಲದೆ ತಮ್ಮ ಶಿಷ್ಯರಲ್ಲಿ ಕೆಲವರಿಗೆ ದೀಕ್ಷಾಬೋಧೆ ಮಾಡಿದ್ದರು. ಅವರಲ್ಲಿ .ಲಿಂ. ಶ್ರೀ ಸಕ್ಕರೆಪ್ಪ ಕಣವಿ ಅವರು ಮುಖ್ಯರು. ಪ್ರಾಥಮಿಕ ಶಾಲೆಯ ಶಿಕ್ಷಕರಾಗಿದ್ದ ಅವರಿಗೆ ಧರ್ಮನಿಷ್ಠೆ, ಕಾವ್ಯಾಸಕ್ತಿ ಸಹಜವಾಗಿದ್ದವು. ಅವರು ತಮ್ಮ ಗುರುಗಳು ಹೇಳಿದ ಪದಪದ್ಯಗಳನ್ನು ಅತ್ಯಂತ ಭಕ್ತಿಯಿಂದ ತಮ್ಮ ಮುತ್ತಿನಂತಹ ಬರವಣಿಗೆಯಲ್ಲಿ ಸಂಗ್ರಹಿಸಿ ಕಾಪಾಡಿಕೊಂಡು ಬಂದರು. ಆ ಹಸ್ತಪ್ರತಿಗಳನ್ನು ಶ್ರೀ ಸಕ್ಕರೆಪ್ಪ ಮಾಸ್ತರರ ಚಿರಂಜೀವರಾದ ಶ್ರೀ ಚೆನ್ನವೀರ ಕಣವಿಯವರು ದಯವಿಟ್ಟು ಕೊಟ್ಟು ಅವುಗಳ ಪ್ರಕಾಶನಕಾರ್ಯಕ್ಕೆ ನೆರವಾಗಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು.

—ಸಂಪಾದಕರು

ಶ್ರೀಚನ್ನವೀರೇಶ್ವರಶತಕ

ಪ್ರಾಂಚತ್ಪಂಚಕಳಾನ್ವಿತಂ ಸುರನದೀಯುಕ್ತಂ ಜಟಾಜೂಟದೊಳ್
ಪಂಚಾಸ್ಯಾಂತಕಸಂಹರಂ ನಗಸುತಾಧೀಶಂ ಶಶಾಂಕಂ ಸದಾ
ಪಂಚಬ್ರಹ್ಮಸುರೇಂದ್ರವಂದಿತಪದಂ ಮಾಂಗಲ್ಯಮುಕ್ತಿಪ್ರದಂ
ಪಂಚಾಸ್ಯಂ ನಿಜಮೋದವೀಯುಲೆಮಗಂ ಶ್ರೀಚನ್ನವೀರೇಶ್ವರಾ || ೧ ||

ಪರಿಪೂರ್ಣಂ ಪರತತ್ವನಿತ್ಯಸುಖದಂ ಯೋಗೀಂದ್ರರಾಪೇಕ್ಷೆಯಂ
ಭರದಿಂ ಪೂರ್ಣಿಪ ಕಲ್ಪಭೂಜಸುಗುಣಂ ಸ್ವಲಭ್ಯಜಿತ್ಸೌಖ್ಯದಂ
ವರಮಾಯಾತಿಮಿರಾರ್ಕಶೈವಸುಮತಕ್ಷೀರಾಬ್ಧಿಚಂದ್ರಂ ಗುರುಂ
ಪರಮಾನಂದವನೀಯುಲೆನ್ನ ಮನಕಂ ಶ್ರೀಚನ್ನವೀರೇಶ್ವರಾ || ೨ ||

ಮೊದಲೊಳ್ನಿಷ್ಕಲಲಿಂಗಮಿರ್ದು ಬಳಿಕಂ ಚಿದ್ರೂಪಮಂ ತಾಳಿ ಸಂ-
ಮುದದಿಂ ಸರ್ವಚರಾಚರಾದಿಗಳಿವಂ ನಿರ್ಮಾಣಗೆಯ್ದಿರ್ದು ಮೇ-
ಣದನುದ್ಧಾರಿಸಲೆಂದು ಚಿತ್ಕಲೆಯು ತಾಂ ಪೊರ್ದಿತ್ತು ದಿವ್ಯಾಂಗಮಂ
ಸದಯಾಸದ್ಗುರುಮೂರ್ತಿಯಾಗಿ ಮೆರೆದಂ ಶ್ರೀಚನ್ನವೀರೇಶ್ವರಾ || ೩ ||

ಅರಿವಿಂಗಾಶ್ರಯುಮಾದ ಚಿತ್ಕಲೆಯು ತಾಂ ಚಿತ್ಪಿಂಡದೊಳ್ ಸಂತತಂ
ಗುರುಲಿಂಗಂ ಸುವಿಭೂತಿ ಜಂಗಮುವರಂ ರುದ್ರಾಕ್ಷಿಪಾದೋದಕಂ
ಹರಮಂತ್ರಂ ಕರಣಪ್ರಸಾದಮೆನಿಪೀ ನಾಮಾಷ್ಟಮಂ ಪೊರ್ದಿತೈ
ಗುರುಕಾರುಣ್ಯವ ತಾಳ್ದವಂ ತಿಳಿದಪಂ ಶ್ರೀಚನ್ನವೀರೇಶ್ವರಾ || ೪ ||

ಭಜಿಪೆಂ ಸಂತತ ಶಂಭುವಂ ಪ್ರಭುವಿನಂ ವಿಘ್ನೇಶನಂ ವೀರನ-
ದ್ರಿಜೆಯಂ ತಾರಕವೈರಿಯಂ ವೃಷಭನಂ ಶ್ರೀಚನ್ನನಂ ಭೃಂಗಿಯಂ
ರಜತಾದ್ರೀಶನ ಭಕ್ತರಂ ಋಷಿಗಳಂ ಮುಕ್ತಾಂಗನಾಮುಖ್ಯರಂ
ಭಜಿಸಲ್ ಮೋದವದಿಲ್ಲ ಮಿಕ್ಕ ಸುರರಂ ಶ್ರೀಚನ್ನವೀರೇಶ್ವರಾ || ೫ ||

ಅಸಮಾಕ್ಷಂ ಪ್ರಭುದೇವಚನ್ನಬಸವಂ ಷಡ್ಬ್ರಹ್ಮಸುಜ್ಞಾನಿಗಳ್
ಬಸವಾಧೀಶಮಹಾಗಣೇಂದ್ರಶರಣರ್ ಕೂಡಿರ್ದು ಸಂಪ್ರೀತಿಯಿಂ-
ದೊಸೆದಾಸಂವದಿ ಪಾಡಿ ಪೇಳ್ದ ನುಡಿಯಂ ಲೋಕಕ್ಕೆ ಮತ್ತೊರ್ಮೆ ನೀ-
ನುಸಿರೆಂದಾಜ್ಞೆಯ ಮಾಡಿ ಪೇಳಿಸಿದರೈ ಶ್ರೀಚನ್ನವೀರೇಶ್ವರಾ || ೬ ||

ಇದು ವೇದಾಂತದ ಸಾರ ಯೋಗಿಗಳ ಸದ್ಬೋಧಾಮೃತಂ ಶೈವಶಾ-
ಸ್ತ್ರದ ಸನ್ಮಾರ್ಗಶಿವಾದ್ವಯತ್ವದಿರವುಂ ಮೋಕ್ಷಕ್ಕೆ ಸತ್ಸಾಧನಂ
ಹೃದಯಾಂತಸ್ತಿಮಿರಾರ್ಕಮಿಂತಿದು ಸದಾ ಶಾಸ್ತ್ರಜ್ಞರಾದರ್ಶ ದಲ್
ಮುದದಿಂ ಸಾಧಿಸಿದರ್ಗೆ ಮುಕ್ತಿಯಹುದೈ ಶ್ರೀಚನ್ನವೀರೇಶ್ವರಾ || ೭ ||

ಜನನಾರಂಭಕೆ ಕಾಲವುತ್ತಮೆನಿಕುಂ ಮಾಸಾಷ್ಟದೊಳ್ ಮಧ್ಯಮಾ
ಜನನೀಗರ್ಭವ ದಾಟಿದಾ ಸಮಯದೊಳ್ ಸದ್ದೀಕ್ಷೆಯಂ ಮಾಳ್ಪುದೀ
ದಿನಗಳ್ ಮೀರಲು ಸಪ್ತವರ್ಷದೊಳಗಂ ಮಾಡಲ್ ಕನಿಷ್ಟಂ ಕಣಾ
ಮನುಜಂಗಾ ಘನಲಿಂಗದೀಕ್ಷೆಯಧಿಕಂ ಶ್ರೀಚನ್ನವೀರೇಶ್ವರಾ ॥ ೮ ॥

ತಲೆಯೊಳ್ ಹಸ್ತವನಿಕ್ಕೆ ಸದ್ಗುರುವು ತಾಂ ಸದ್ವೇಧದೀಕ್ಷಾಯ್ತು ಮೇಣ್
ಸಲೆ ಶ್ರೋತ್ರಾಂತರದೊಳ್ ಸುಮಂತ್ರವುಸಿರಲ್ ಸನ್ಮಂತ್ರ ದೀಕ್ಷಾಯ್ತು ಕೇಳ್
ಬಳಿಕಾ ಲಿಂಗವ ಹಸ್ತತಾಣದೊಳಿಡಲ್ ಸದ್ದೇಹದೀಕ್ಷಾಯ್ತು ನೋ-
ಡಿಳೆಯೊಳ್ ಭಕ್ತಗೆ ಮೂರು ದೀಕ್ಷೆ ಸಹಜಂ ಶ್ರೀಚನ್ನವೀರೇಶ್ವರಾ ॥ ೯ ॥

ಅಳಿಯುತ್ತಿರ್ಪುದು ವೇಧದೀಕ್ಷೆಯೊಳು ಕೇಳಾಣಾಮಲಂ ಪೂರ್ವದಾ
ಕುಲಮಾಯಾಮಲಮಂತ್ರದೀಕ್ಷೆಯೊಳು ತಾಂ ಕಾರ್ಮಿಕವೆಂದೆಂಬುದಾ-
ಮಲ ತಾಂ ಸತ್ಕ್ರಿಯೆದೀಕ್ಷೆಯಿಂ ದಿನದಿನಂ ತದ್ದೀಕ್ಷಿತಂ ಶುದ್ಧನಾ-
ಗಲು ತದ್ದೇಹದಿ ಶಂಭು ತೋರ್ಪ ನಿಜದಿಂ ಶ್ರೀಚನ್ನವೀರೇಶ್ವರಾ ॥ ೧೦ ॥

ಅರಿವೇ ಭಾವವು ದೇಹವಿಷ್ಟವಸುವೇ ಸತ್ಪ್ರಾಣಲಿಂಗಾಯ್ತು ಮೇ-
ಣೆರದಾ ಸದ್ಗುರು ಭಾವಲಿಂಗವಸುವೇ ಶ್ರೀಜಂಗಮೀ ದೇಹದೊಳ್
ಧರಿಸಿರ್ದಾ ಕರದಿಷ್ಟವೀ ತ್ರಿವಿಧವೊಂದಾಗಿರ್ಪುದಂ ಭಾವದಿಂ-
ದುರೆ ಕಣ್ಮಾನಸದಿಂದೆ ನಿಶ್ಚಯಿಸೆಲೈ ಶ್ರೀಚನ್ನವೀರೇಶ್ವರಾ ॥ ೧೧ ॥

ತನುವೇ ಶ್ರೀಗುರು ಭಾವ ಜಂಗಮವು ಮೇಣ್ ತತ್ಪ್ರಾಣವೇ ಲಿಂಗವೈ
ಘನವಾದೀ ತ್ರಿವಿಧತ್ವಮಂ ತಿಳಿದು ತಾಮೇಕತ್ವದಿಂ ಕಾಣಲಾ-
ತನೆ ಜನ್ಮಾಬ್ಧಿಯ ದಾಂಟಿ ಲಿಂಗಕೃಪೆಯಿಂ ಲಿಂಗೈಕ್ಯಮಂ ಪೊಂದುವಂ
ಘನಲಿಂಗಾಂಗಿಗೆ ಸಾಟಿಯುಂಟೆ ಧರೆಯೊಳ್ ಶ್ರೀಚನ್ನವೀರೇಶ್ವರಾ ॥ ೧೨ ॥

ಸುಡು ಕಂಡ್ಯಾ ಗುರುಬೋಧವಿಲ್ಲದವನಾ ಸದ್ಬುದ್ಧಿಯುಂ ಜಾಣ್ಮೆಯುಂ
ಸುಡು ದೇವಾರ್ಚನೆ ವೇಳ್ವ ಶಾಸ್ತ್ರನುಡಿಯುಂ ಶೈವಾದಿಕಾರ್ಯಂಗಳಂ
ಸುಡು ಸಂಸಾರವ ಯಾತ್ರೆ ತೀರ್ಥಫಲಮಂ ದಾನಾದಿಪುಣ್ಯಂಗಳಂ
ಮೃಡನಂ ಪೊಂದದ ಜನ್ಮನಾಶಮಿಳೆಯೊಳ್ ಶ್ರೀಚನ್ನವೀರೇಶ್ವರಾ ॥ ೧೩ ॥

ಘನಚಿಲ್ಲಿಂಗವ ನೋಡದಾ ನಯನಮುಂ ಜಿಹ್ವಸ್ಮಮುಂ ತಾಳದಾ
ಪಣೆಯುಂ ಶಾಂತಿಯ ಪೊಂದದಿರ್ಪ ತಪಮಂ ಸೋಮೇಶನಂ ಭಾವದೊಳ್
ಮನದೊಳ್ ಧ್ಯಾನವ ಗೆಯ್ಯದಿರ್ಪ ನರರಂ ಭೋಗಂಗಳಾಪೇಕ್ಷೆಯುಂ
ಮನವಂ ಮಾರದ ಯೋಗವಂ ಸುಡು ಸದಾ ಶ್ರೀಚನ್ನವೀರೇಶ್ವರಾ ॥ ೧೪ ॥

ಮೃಡಮಂತ್ರಾಕ್ಷರಸತ್ಯಮಂ ನುಡಿಯದಾ ಜಿಹ್ವಾಗ್ರಮಂ ಸರ್ವದಾ
ಮೃಡನಂ ನೋಡದ ನೇತ್ರಮಂ ಯಜಿಸದಾ ಹಸ್ತಂಗಳಂ ತತ್ವದಾ
ನುಡಿಯಂ ಕೇಳದ ಶ್ರೋತ್ರಮಂ ಚರಣಮಂ ತತ್ಕಾರಣಡ್ಡಾಡದಾ
ಜಡವಾದಿಂದ್ರಿಯನೆಲ್ಲವಂ ಸುಡು ಸದಾ ಶ್ರೀಚನ್ನವೀರೇಶ್ವರಾ || ೧೫ ||

ಮೊದಲೊಳ್ ಮಾನವಜನ್ಮದಲ್ಲಿ ವಿಷಯಾದುರ್ನೀತಿದುರ್ಮೋಹದಿಂ-
ದೊದಗಿರ್ಪಾ ನರ ಮುಂದೆ ದೀಕ್ಷೆವಡೆಯಲ್ ಸುಜ್ಞಾನಬೋಧಂಗಳಿಂ
ಮದನಾರೀಪದಪೂಜೆಮಾಡಿ ಹರನಾ ಕಾರುಣ್ಯದಿಂ ಮೃತ್ಯು ನೀ-
ಗದೆ ತಾಂ ಮಾಣ್ಬನೆ ದೀಕ್ಷೆಶಕ್ತಿಯೆನಿತೋ ಶ್ರೀಚನ್ನವೀರೇಶ್ವರಾ || ೧೬ ||

ವಿಷಯಾಪೇಕ್ಷೆಗೆ ಸಿಕ್ಕು ರೇಣುಕೆ ಮಹಾಜಾರತ್ವದೊಳ್ ನಿಲ್ಲಲಾ
ಋಷಿ ದುಃಶಾಪವ ನೀಡೆ ದೀಕ್ಷೆಪಡೆದಳ್ ಜೋಗಯ್ಯಯಕ್ಕಯ್ಯರಿಂ
ಕುಷಿಯಿಂ ವಾಲ್ಮಿಕಿನಾರದಾರ್ಯಋಷಿಯಿಂ ಸದ್ದೀಕ್ಷೆಯಂ ಪೊರ್ದಿ ತಾಂ
ಋಷಿಯಾದಂ ಬಹುಪೂಜ್ಯರಾದರಹಹಾ ಶ್ರೀಚನ್ನವೀರೇಶ್ವರಾ || ೧೭ ||

ಮಲ ಮೂರುಂ ನೆರೆ ಪೋಗದಿರ್ದ ಬಳಿಕಂ ತದ್ದೀಕ್ಷೆ ಶೈಥಿಲ್ಯಮಂ
ಸಲೆ ಪೊಂದಿತ್ತು ವಿಶುದ್ಧಮೋಕ್ಷಗುರುವಿಂ ದೀಕ್ಷಾವಿಧಂ ಸಂಕೃತಂ
ಜಲಗೋಲಿಲ್ಲದೆ ನಾವನೆಂತು ನದಿಯಂ ತಾ ದಾಂಟಿಸಲ್ ಬಲ್ಲನೇ
ಮಲದಿಂ ಬಂಧಿತನಾದವಂ ಪಶುಗುರುಂ ಶ್ರೀಚನ್ನವೀರೇಶ್ವರಾ || ೧೮ ||

ಗುರು ಪೇಳ್ದಾ ಹರಬೋಧೆ ನಾಟದಿಹುದೋ ಸದ್ದೀಕ್ಷೆ ಭಸ್ಮಾದುದೋ
ಗುರುಸಾಮರ್ಥ್ಯವು ಮಂದವಾಗಿರುವುದೋ ಲೋಕಕ್ಕೆ ಬಂದಾಕ್ಷಣಂ
ವರಲಿಂಗಾಯತರಾಗಿ ಧಾತ್ರಿಯ ಶಿಲಾವೃಕ್ಷಕ್ಕೆ ಮೆಯ್ಯಿಕ್ಕುವರ್
ಧರೆಯೊಳ್ ನೋಡಿವರಲ್ತೆ ದುಷ್ಟಭವಿಗಳ್ ಶ್ರೀಚನ್ನವೀರೇಶ್ವರಾ || ೧೯ ||

ತನುವಂ ಶುದ್ಧತೆಗೈದು ತನ್ನ ಕರದೊಳ್ ಶ್ರೀಲಿಂಗವನ್ನಿತ್ತೊಡಾ-
ತನೆಯಾದಂ ಮಹದೀಕ್ಷೆ ಸದ್ಗುರುವು ಕೇಳ್ ಸತ್‌ಶೀಲಮಂ ಕಾಯದೊಳ್
ಮನದೊಳ್ವರ್ತಿಸ ಪೇಳೆ ಶಿಕ್ಷೆ ಗುರು ತಾಂ ಕಾರುಣ್ಯದಿಂ ನೀನೆಯಾ-
ಘನಲಿಂಗೆಂದವರಲ್ತೆ ಮೋಕ್ಷಗುರು ಕೇಳ್ ಶ್ರೀಚನ್ನವೀರೇಶ್ವರಾ || ೨೦ ||

ಶಿರಕಕ್ಷೋರಮುಳ್ಳೈಕ್ಯಜಿಹ್ವೆ ಕರದೊಳ್ ಶ್ರೀಲಿಂಗಮಂ ದೇಹದೊಳ್
ಧರಿಸಲ್ ತಕ್ಕುದು ನಾಭಿಯಿಂ ಕೆಳಗಣಾ ತಾಣಂಗಳೊಳ್ ಧಾರಣಂ
ಸರಿಯಲ್ಲೆಂದುರೆ ಪೇಳ್ವ ಸೂತಕರು ತಾವ್ ಸರ್ವಾಂಗಸದ್ದೀಕ್ಷೆಯಿಂ
ನೆರೆಶುದ್ಧಾಗಿಹ ರೀತಿಯಂ ತಿಳಿಯರ್ರೈ ಶ್ರೀಚನ್ನವೀರೇಶ್ವರಾ || ೨೧ ||

ಮಲದೇಹಂ ಗುರುವಿಂದೆ ದೀಕ್ಷೆವಡೆಯಲ್ ಶುದ್ಧಾಗಿ ಮತ್ತಾತನುಂ
ಸಲೆ ಲಿಂಗಾಗಿ ವಿಶುದ್ಧಲಿಂಗದೊಳಗಂ ಕೂಡಿರ್ಪುದಾ ಕಾರಣಂ
ಮಲದೋಷಂಗಳ ನೀಗಿದಂಥ ಶರಣಂ ತನ್ನಿಚ್ಛೆಯೊಳ್ ದೇಹದೊಳ್
ಶಿಲೆಯಾಚಾರದ ಲಿಂಗಮಂ ತಳೆವಪಂ ಶ್ರೀಚನ್ನವೀರೇಶ್ವರಾ || ೧೧ ||

ಶತಪಾಪಂಗಳ ಮಾಡಿ ದುಃಖದೊಳಗಿರ್ಪಾ ಮಾನವಂ ಮುಂದೆ ತಾಂ
ಸತತಂ ಸದ್ಗುರುಸೇವೆ ಮಾಡಿಯುವರಿಂ ಸದ್ದೀಕ್ಷೆಯಂ ಪೊಂದಿಯುಂ
ಹಿತದಿಂ ಯೋಗವ ಮಾಡಿ ತನ್ನ ತಿಳಿದಾ ನಿತ್ಯತ್ವಮಂ ಪೊಂದುವಂ
ಕ್ಷಿತಿಯೊಳ್ ಮುಕ್ತಿಗೆ ದೀಕ್ಷೆ ಕಾರಣವಲಾ ಶ್ರೀಚನ್ನವೀರೇಶ್ವರಾ || ೧೨ ||

ಬರಿದೆ ಶ್ರೀಶಿವದೀಕ್ಷೆಯಿಂದ ಫಲಮೇಂ ತತ್ವಂಗಳಾ ಮರ್ಮಮಂ
ಗುರು ಪೇಳ್ದಾ ತೆರ ತಾನು ವರ್ತಿಸಿ ಮಹಾಯೋಗಾಂಗಮಂ ಸಾಧಿಸೀ-
ವರಸದ್ಭೂಮಿಕೆ ಮೀರಿನಿಲ್ಲಲು ಸದಾ ರಂಧ್ರಾಗ್ರದೊಳ್ ಶಂಭು ತಾ
ನೆರೆ ತೋರ್ಪಂ ಬಹುದೀಪ್ತಿಯಂತೆಸೆಯುತಂ ಶ್ರೀಚನ್ನವೀರೇಶ್ವರಾ || ೧೪ ||

ಶತಜನ್ಮಂಗಳ ಪುಣ್ಯದಿಂದೆ ಗುರುವಿಂ ಮೂದೀಕ್ಷೆಯಂ ಪೊಂದಿಯಾ-
ಸ್ಥಿತಿ ನಾಲ್ಕಂ ಮಿಗೆ ಮೀರಿನಿಂದ ಶರಣರ್ ದೇಹಂಗಳಂ ವರ್ಜಿಸಲ್
ಹಿತದಿಂ ಮಾನವರುತ್ತರಕ್ರಿಯೆಗಳಂ ಸ್ವಾಪ್ತರ್ಕಳಿಂ ಕೂಡಿ ತಾವ್
ಕ್ಷಿತಿಯೊಳೇತಕೆ ಮಾಳ್ಪರೋ ಶಿವಶಿವಾ ಶ್ರೀಚನ್ನವೀರೇಶ್ವರಾ || ೧೫ ||

ಗುರುನಾಥಂ ದಯೆಗೆಯ್ದುವಾ ತನುವಿನೊಳ್ ಚಿದ್ಭಾವದೊಳ್ ತೋಷದಿಂ
ಧರಿಸಿರ್ಪಾ ಘನಲಿಂಗಮಂ ತೊರೆಯುತಂ ಪೃಥ್ವೀಶಿಲಾವೃಕ್ಷಮಂ
ಭರದಿಂ ಪೂಜಿಸಿ ಮುಕ್ತರಾಗುವೆವು ನಾವೆಂದೆಂಬುವಾ ಮೂಢರಂ
ನರಕಕ್ಕಾ ಯಮ ಹಾಕದೇಕೆ ಬಿಡುವಂ ಶ್ರೀಚನ್ನವೀರೇಶ್ವರಾ || ೧೬ ||

ಮೊದಲೊಳ್ ಯೋಗವ ಮಾಡಿ ಭಕ್ತಿಬಲದಿಂ ನೇತ್ರಂಗಳೊಳ್ಭಾವದೊಳ್
ಹೃದಯಾವಸ್ಥಿತ ನಾದಬಿಂದುಕಲೆಯಿಂ ಕೂಡಿರ್ದ ಸೋಮೇಶನಂ
ಮುದದಿಂ ಕಂಡರು ಗೊಲ್ಲನಂಬಿಶರಣರ್ ಪಿಕ್ಕಿಸ್ತನದ್ವಂದ್ವದೊಳ್
ಸದಯಾಮೂರ್ತಿಯ ಭಾವಿಸಿರ್ದ ತಳದೊಳ್ ಶ್ರೀಚನ್ನವೀರೇಶ್ವರಾ || ೧೭ ||

ಶಿವನಂದಾಖ್ಯದಿಗಂಬ್ರಭದ್ರವಿಮಲಾನಂದಂ ಚಿದಾನಂದರೆಂ-
ಬುವ ನಾಮಂಗಳ ತಾಳ್ದು ಗಾಂಜಿಯುಪುವಿಂ ದುಷ್ಟಾನ್ನಪಾನಂಗಳಿಂ
ಭವಿಯಾಚಾರದಿ ವರ್ತಿಸುತ್ತ ಮಲಿನೊಳ್ ತದ್ಬ್ರಹ್ಮವಂ ಕಂಡೆವೆಂ-
ಬುವರಾ ಯೋಗವಿಹೀನರಾದ ದುರುಳರ್ ಶ್ರೀಚನ್ನವೀರೇಶ್ವರಾ || ೧೮ ||

ಶಿವಶಾಸ್ತ್ರಂಗಳ ಹೇಳಿ ಕೇಳಿ ಭವಿಯಾಚಾರಂಗಳಂ ಮಾಳ್ಪರೇ-
ಕವರಂ ಕಾಲನು ತನ್ನ ಲೋಕದೊಳಗಂ ವಾಸಂಗೊಳಲ್ ಪೋಹವಂ
ತವೆ ಮಾಳ್ಪಂ ನರಮಾನವರ್ಗೆ ತಿಳಿಸಲ್ ವೈರತ್ವಮಂ ಮಾಳ್ಪರೈ
ಜವದಿಂ ನಂಬುದು ಪೇಕೆ ತಾ ಕಟಕನಂ ಶ್ರೀಚನ್ನವೀರೇಶ್ವರಾ || ೨೯ ||

ಶಿವಶಾಸ್ತ್ರಂಗಳ ಪೇಳ್ವ ಯೋಗಿಜನಕಂ ವೈರತ್ವಮಂ ಮಾಡಿ ಪೇ-
ಣವರಂ ನಿಂದಿಸಿ ಕಾಡಿ ದುಷ್ಟಗುಣಮಂ ತಾವಾಂತಿರಲ್ ಪಾಪಿಗಳ್
ಜವದಿಂ ಕಾಲನು ಮೆಚ್ಚಿ ದುರ್ಪದವಿಯನ್ನೀವಂ ಮಹಾತಾಪದಾ
ಜವನೇ ದೇವರು ಪಾಪಿಗಳ್ಗೆ ನಿಜದಿಂ ಶ್ರೀಚನ್ನವೀರೇಶ್ವರಾ || ೩೦ ||

ಮೃಡಸತ್ಕೀರ್ತನೆಯಾಟನಾಟಕಗಳೊಳ್ ಸೇರಿರ್ದು ವಿತ್ತಾಶೆಯಿಂ-
ದೊಡಲಾಶಾದಿಗಳಿಂದೆ ಬೋಧಿಸುವರೈ ಪೃಥ್ವೀಮಹಾಪಂಡಿತರ್
ಮೃಡಶಾಸ್ತ್ರಂಗಳ ನೇಮ ಮೀರಿ ಸತತಂ ದುರ್ವಾರ್ತೆಯಿಂ ಕೂಡಿದಾ
ಜಡರನ್ನೇತಕೆ ದಂಡಧಾರಿ ಬಿಡುವಂ ಶ್ರೀಚನ್ನವೀರೇಶ್ವರಾ || ೩೧ ||

ಪರತತ್ವಂಗಳ ಶೀಲವನ್ನರಿಯದೆ ದೇಹೇಂದ್ರಿಯಂ ಮೀರದಾ
ಹರವೇಷಂಗಳ ತಾಳ್ದು ಡಾಂಭಿಕ ಮಹಾವಾಗ್ಜಾಲವನ್ನಾಡುತಂ
ಬರಿದೇ ಬೊಮ್ಮವ ಬಲ್ಲೆವೆಂದೆನುತ ಮರ್ವೇದಾಂತಿಗಳ್ ಜಾಡ್ಯರೊಳ್
ಚರಿಸುತ್ತಿರ್ಪರು ಕಾಲಸಾಧ್ಯರಿವರೇ ಶ್ರೀಚನ್ನವೀರೇಶ್ವರಾ || ೩೨ ||

ಮನದೊಳಿರ್ಪ ದುರಾಶೆಯಂ ತ್ಯಜಿಸದಾ ಮಶ್ಶೀಲಮಂ ದಾಟದಾ
ಮನುಜರ್ ಸಾಧುಗಳೆಂದು ಪೇಳುತ ಸದಾ ಸ್ತ್ರೀಜಾಲದೊಳಾಡುವರ್
ಘನನಿದ್ರಾಸುಖದಲ್ಲಿ ಬೊಮ್ಮವನು ನಾವ್ ನೋಡಿರ್ಪೆವೆಂದೆನ್ನುವರ್
ಘನಮಾಯಾಮಲಬದ್ಧಪಾಪಿಗಳಿವರ್ ಶ್ರೀಚನ್ನವೀರೇಶ್ವರಾ || ೩೩ ||

ಭುವಿಯೊಳ್ ಕಾಣುವ ಜೀವಸಂಕುಲವನಾ ಚಿದ್ರೂಪವೆಂತೆಂದು ಕಾ-
ಣುವರೈ ತಾಯಿಗಳೆಂದು ನಾರಿಕುಲಮಂ ದುಶ್ಚೇಷ್ಟೆಯಂ ಮಾಡರೈ
ಶಿವಪಾದಾಂಬುಜ ಸುಪ್ರಸಾದ ಸವಿದಾ ಸದ್ಯೋಗಿಗಳ್ ತಾವು ಮಾ-
ನವ ವರ್ಗಕ್ಕೆ ಸುತತ್ವ ಪೇಳುತಿಹರೈ ಶ್ರೀಚನ್ನವೀರೇಶ್ವರಾ || ೩೪ ||

ಹರಶಾಸ್ತ್ರಂಗಳನೆಲ್ಲನೋದಿ ಫಲಮೇಂ ನಾನಾವನೆಂತೆಂಬುವಾ
ಪರಿಯಂ ಕಾಣದ ಜಾಣ್ಮೆ ರಂಡೆಯ ಕೊರಳ್ ತೋರ್ಪಂತೆ ನಾಶೋಭಿತಂ
ಗುರುಸೇವಾ ವರಭಕ್ತಿಯಿಂದೆ ಹರನಂ ತನ್ನಂಗದೊಳ್ ಕಾಣುವಾ
ನರನೇ ಶ್ರೇಷ್ಠನು ದೇವಭಕ್ತನೆನಿಪಂ ಶ್ರೀಚನ್ನವೀರೇಶ್ವರಾ || ೩೫ ||

ವನಿತಾಮಾತೆಪಿತಾಸುತಾದಿಭಗಿನೀಪೌತ್ರಾದಿಯಾಪ್ತರ್ಕಳಿಂ
ಧನದಿಂ ವಾಜಿಗಜಾದಿಗೇಹವಸುಧಾರಾಜ್ಯಾದಿ ಸಂಪತ್ತಿನಿಂ
ಘನಪಾಂಡಿತ್ಯಸುಶಾಸ್ತ್ರಯೋಗತಪದಿಂ ಕೂಡಿರ್ದು ಸೋಮೇಶನಂ
ಮನದೊಳ್ ಕಾಣದ ಜನ್ಮಮಂ ಸುಡು ಸದಾ ಶ್ರೀಚನ್ನವೀರೇಶ್ವರಾ || ೩೬ ||

ಗಿರಿಜಾಧೀಶಗೆಯೊಂದು ಕನ್ಯೆಯರೆದಂ ಭ್ರಷ್ಟತ್ವಮಂ ಪೊರ್ದಿದಂ
ವರದಕ್ಷಂ ಪದಿನಾಲ್ಕು ಕನ್ಯೆಗಳ ನಾನಿತ್ತೇಂ ಮಹಾದೇವನಿಂ
ಪರಮುಕ್ತಾಂಗನೆ ಕೊಂಡೆ ಮತ್ತೆಯುವನೊಳ್ ಸತ್ಕೂಟಮಂ ಮಾಡಿದೆಂ
ಹರ ಬೇಗಂ ವರಕಾಂತನಾದನಳಿಯಂ ಶ್ರೀಚನ್ನವೀರೇಶ್ವರಾ || ೩೭ ||

ಪರರಿಂ ಸಿದ್ಧಿತಮಾದ ಪೂಜೆ ವಿಧದಿಂ ಲಿಂಗಾರ್ಚನಂಗೆಯ್ದು ಮೇಣ್
ಪರರಾಹಾರದಿ ತುಷ್ಟಿಪೊಂದಿ ಮುದದಿಂ ಕಾಲಂಗಳಂ ನೂಂಕಿದಾ
ನರರಂ ಶೂಲಕೆ ಹಾಕದೇಕೆ ಬಿಡುವಂ ಕಾಲಂ ದಯಾಧೀನನೋ
ಅರರೇ ಜಂಗಮರಾಟ ನೋಡು ಧರೆಯೊಳ್ ಶ್ರೀಚನ್ನವೀರೇಶ್ವರಾ || ೩೮ ||

ಕ್ರಯಗೊಂಡಾ ವರಬಿಲ್ವಪತ್ರಿಯಲರಂ ದೇವಾಂಘ್ರಿಗಳ್ಗೇರಿಸಲ್
ಕ್ರಯಪೋದಾ ನರ ಗೆಯ್ದ ಪಾಪ ತನಗಂ ಲೇಸಾಗಿ ತಾಂ ಬರ್ಪುದೈ
ನಯದಿಂದಂ ಭಯದಿಂದೆ ತಂದು ಶಿವಗಂ ತಾನೇರಿಸಲ್ ಶಂಕರಂ
ಭಯಸಂಹಾರವ ಮಾಡಿ ತನ್ನ ಪೊರೆದಂ ಶ್ರೀಚನ್ನವೀರೇಶ್ವರಾ || ೩೯ ||

ವರಲಿಂಗಾರ್ಚನೆ ಶೈವಕಾರ್ಯಯಜನಂ ಪೂಜಾದಿಸಾಮಗ್ರಿಯಂ
ಚರಪೂಜಾವಿಧಿಯಂ ಸುಭೋಜನಗಳಂ ಪಾನಾದಿ ದಾನಂಗಳಂ
ಗುರುಪಾದಾರ್ಚನೆ ಶೌಚಸೇವೆಗಳವಂ ಭೃತ್ಯರ್ಕಳಿಂ ಮಾಡಿಸಲ್
ನರ ತಾಂ ಪೊಂದನೆ ರೌರವಾ ನರಕಮಂ ಶ್ರೀಚನ್ನವೀರೇಶ್ವರಾ || ೪೦ ||

ಚರಗೆಂದುಂ ವರಪುಷ್ಪಪತ್ರಿಜಲಮಂ ಕೆಯ್ಕೊಂಡು ತರ್ಪಾಗಲಾ
ಪರಸೇವಾನರ ಸಾಯೆ ಪಾಪ ಚರಗೋಸ್ವಾಮಿಂಗೊ ದಾಸಂಗೊ ಪೇಳ್
ಪರಸೇವಾದರದಿಂವೆ ಪೂಜೆ ರಚಿಸಲ್ ಪುಣ್ಯಾದಿಗಳ್ ಹಾನಿಯೈ
ಪರಸೇವಾಶಿವಪೂಜೆ ಬಿಟ್ಟುಬಿಡೆಲಾ ಶ್ರೀಚನ್ನವೀರೇಶ್ವರಾ || ೪೧ ||

ಗುರುಕರಜಾತರೆಂದು ನೆರೆ ಪೇಳುತ ಬರ್ಪರು ಮೂಢಭಾವದಿಂ
ಸರಸರ ಸಾರಿಸೆಂದು ಗ್ರಹಪೀಡೆಯು ಮಾಳ್ಪರು ಪತ್ರಪುಷ್ಪಮಂ
ತರಿಸಿರಿ ಲಿಂಗಪೂಜೆಗೆನುತಂ ಬಹುಬಾಧೆಯನೀವರ್ಕೈ ಸದಾ
ಪರಚರಲಿಂಗಪತ್ರಿಗಳ ಕಾಯದಿ ಕಂಡವರಿಂತು ಮಾಡರ್ಕೆ || ೪೨ ||

ವರರುದ್ರಾಕ್ಷವಿಭೂತಿಲಿಂಗಗಳ ತಾವ್ ಪ್ರವ್ಯಂಗಳಿಂ ಕೊಂಡವಂ
ಹರನಂ ಕಾಯದಿ ಕಾಣದಿರ್ಪ ಚರರಿಂ ಮಂತ್ರಂಗಳಿಂ ಶುದ್ಧಗೆ-
ಯ್ಸಿರದೀಯಂಗದಿ ತಾಳ್ದು ಪೂಜೆ ರಚಿಸಲ್ ಜನ್ಮಾಬ್ಧಿಯಂ ದಾಂಟ್ವನೋ
ನರ ಗೆಯ್ದಿರ್ದ ವಿಭೂತಿಲಿಂಗ ನಿಜವೋ ಶ್ರೀಚನ್ನವೀರೇಶ್ವರಾ || ೪೩ ||

ಶಿವಯೋಗಂಗಳ ಮಾಡಿ ಪೊಂದುವಡೆಲಾ ಚಿಲ್ಲಿಂಗರುದ್ರಾಕ್ಷಿಯಂ
ನವಚಿದ್ಭಸ್ಮವ ನಿತ್ಯಶಾಂತಿಜಲಮಂ ಸ್ವೈರ್ಗುಣ್ಯಬಿಲ್ವಂಗಳಂ
ಶಿವಬಿದ್ಬಿಂದುಸುದೀಪಧೂಪಕರಣಾದ್ಯಂಗಳ್ ದಯಾಗಂಧಮಂ
ತವೆ ಶುದ್ಧಾತ್ಮನಿವೇದನಾದಿಗಳಿವಂ ಶ್ರೀಚನ್ನವೀರೇಶ್ವರಾ || ೪೪ ||

ಶಿರದೊಳ್ ಸಜ್ಜಟೆ ಕಂಠಮಾಲೆ ಫಣಿಯೊಳ್ ಭಸ್ಮಂ ಸದಾ ಕಕ್ಷದೋ-
ಳುರುದಂಡಂ ಜಪಮಾಲೆಯಾಂತು ಬರಿದೇ ಮಂತ್ರಾಕ್ಷರ ಧ್ಯಾನಿಸೀ
ನರರಂ ವಂಚಿಸಿ ವಸ್ತ್ರವಿತ್ತವನಿತಾದ್ರವ್ಯೋಪಭೋಗಂಗಳಂ
ಹರಣಂ ಗೆಯ್ಯುವರಲ್ತೆ ಯಾಚಕಚರರ್ ಶ್ರೀಚನ್ನವೀರೇಶ್ವರಾ || ೪೫ ||

ಗುರುಲಿಂಗಾರ್ಯರ ಪೂಜೆಯಿಲ್ಲದಿಳೆಯೊಳ್ ದುಶ್ಶೀಲದುಶ್ಚಾಡಿಯೊಳ್
ಪರನಿಂದಾಪತಿಭಂಗಗರ್ಭವಧೆಯಿಂ ಕಾಮಾದಿ ದುಶ್ಚೇಷ್ಟೆಯಿಂ
ಬೆರೆದಿರ್ದಾ ಬಹುಪಾಪಿನಾರಿಕುಲಮಂ ಸಂತಪ್ತ ದುರ್ಗಂಧ ಭೀ-
ಕರಕೂಪಾಗ್ರದಿ ಮೃತ್ಯು ಶಿಕ್ಷಿಸುತಿಹಂ ಶ್ರೀಚನ್ನವೀರೇಶ್ವರಾ || ೪೬ ||

ಸತ್ಕರ್ಮಂ ಜಗಪಾವನಂ ಸಕಲಕಂ ಸತ್ಸಂಗನೆಂತಿರ್ಪುದೈ
ಸತ್ಕರ್ಮಂ ದುರಿತಾಳಿಯಂ ಹರಿಸಿ ತಾಂ ಚಿದ್ವಸ್ತುವಂ ತೋರ್ಪುದೈ
ಸತ್ಕರ್ಮಂಗಳ ಮಾಡಿ ಸರ್ವಋಷಿಗಳ್ ನಿತ್ಯತ್ವಮಂ ಪೊಂದಿದರ್
ಸತ್ಕರ್ಮಂ ಶಿವಯೋಗಕಾದಿ ತಿಳಿಯಲ್ ಶ್ರೀಚನ್ನವೀರೇಶ್ವರಾ || ೪೭ ||

ಹರ ಸತ್ಪೂಜೆಗೆ ಮೆಚ್ಚನೈ ಮುಸಲದಿಂ ನಿಂಬಕ್ಕ ಗಾಂಡೀವದಿಂ
ಸರಸಾಂಖ್ಯಂ ಮಹಚಾಪ್ಮದಿಂದೆ ಭರದಿಂ ಪೊಯ್ಯಲ್ಕೆ ತಾಂ ಮೆಚ್ಚಿದಂ
ಪರಮಾನಂದದಿ ಸೌಖ್ಯವಿತ್ತು ಪೊರೆದಂ ಸತ್ಪೂಜೆಯಿಂದೇತಕಾ
ಹರನಂ ಮೆಚ್ಚಿಪ ರೀತಿ ಬೇರಿರುವುದೈ ಶ್ರೀಚನ್ನವೀರೇಶ್ವರಾ || ೪೮ ||

ಗುರುಲಿಂಗಾರ್ಪಣಸೌಖ್ಯಮಂ ತಿಳಿಯದೀ ಲಿಂಗಾಂಗವೇಕತ್ವದಾ
ಪರಿಯಂ ಕಾಣದೆ ಸರ್ವಭೋಗಸುಖದೊಳ್ ಸರ್ವೇಂದ್ರಿಯಂ ಬಂಧಿಸೀ
ಮರುಗುತ್ತಿರ್ಪರು ದೀಕ್ಷೆಯಂ ಪಡೆದವರ್ ಭೋಗಂಗಳಾಪೇಕ್ಷೆಯಿಂ
ಧರೆಯೋಳಿಂದ್ರಿಯದಂಡದಿಂದ ಫಲಮೇಂ ಶ್ರೀಚನ್ನವೀರೇಶ್ವರಾ || ೪೯ ||

ಮಮಕಾರಂಗಳ ನೀಗದೇ ವಿಷಯದೊಳ್ ಕಾಮ್ಯಾದಿಕರ್ಮಂಗಳೊಳ್
ಸಮತಾ ಪುಟ್ಟದೆ ಸರ್ವಜೀವಿಯೊಳಗಂ ಸರ್ವೇಂದ್ರಿಯಂ ಕಟ್ಟದಾ
ಯಮನಂ ಗೆಲ್ಲದೆ ಕಾಮನಂ ಜಯಿಸದೇ ಭೂರುದ್ರರೆಂದೆನ್ನುವರ್
ವಿಮಲಜ್ಞಾನವಿಹೀನಯಾಚಕಚರರ್ ಶ್ರೀಚನ್ನವೀರೇಶ್ವರಾ || ೫೦ ||

ಹರಪೂಜಾಸಮಯಂಗಳೋಳಭವನನ್ನಾಹ್ವಾನಿಸುತ್ತಿರ್ಪರಾ-
ದರದಿಂ ಪೂರ್ವದಿ ಪೂಜೆಯಿಂ ದಣಿದು ತಾವ್ ಪೋಗೆನ್ನುತಂ ವರ್ಜಿಪರ್
ನರರಾಧೀನವೆ ಲಿಂಗ ಸಂಚರಿಪುದೇ ಮೂಢತ್ವದಿಂ ಮಾನವರ್
ಶಿರದೋಳಿರ್ಪ ಚಿದಾತ್ಮನಂ ತಿಳಿಯದೇ ಶ್ರೀಚನ್ನವೀರೇಶ್ವರಾ || ೫೧ ||

ಕರೆಯಲ್ಬಂದನೊ ಪೂರ್ವದೊಳ್ ಮರಳಿ ತಾವ್ ಪೋಗೆಂದೆನಲ್ ಪೋದನೋ
ನರರೇಂ ಬಲ್ಲರು ದೇವನಿರ್ಪ ಜಗಮಂ ಸರ್ವಾತ್ಮಕಂ ಶಂಕರಂ
ಪರಿಪೂರ್ಣಾಗಿಹ ಲಿಂಗಯೋಗ ವಿನಹಾ ತಾಂ ಕಾಣ್ಬುದೇ ಜಾಡ್ಯರೊಳ್
ನೆರೆಮಸ್ತಾಗ್ರದಿ ವಾಸಗೊಂಡಿಹನಲಾ ಶ್ರೀಚನ್ನವೀರೇಶ್ವರಾ || ೫೨ ||

ನರಪಾಲಂ ಚರರಾಜ್ಞೆಯಿಂ ಧರಿಪನೋ ರಾಜಾಜ್ಞೆಯಂ ಸೇವಕರ್
ಧರಿಸುತ್ತಿರ್ಪರೊ ಚೋದ್ಯವಲ್ತೆ ನರರಾ ಬ್ರಹ್ಮಾಂಡಪಾಲಂಗೆಯೀ-
ಪರಿಯಾಹ್ವಾನವಿಸರ್ಜನಾದಿ ಕ್ರಿಯೆಯನ್ನೇತಕ್ಕೆ ತಾವ್ ಮಾಳ್ಪರೋ
ಹರಿಬೊಮ್ಮರ್ ಗಡ ಕಾಣಲಿಲ್ಲ ಹರನಂ ಶ್ರೀಚನ್ನವೀರೇಶ್ವರಾ || ೫೩ ||

ಜಡರೊಳ್ಕೂಡದಿರೊಮ್ಮೆ ನೀ ನುಡಿಯದಿರ್ ಸಂಸಾರದಾ ವಾಕ್ಯವ-
ನ್ನೊಡಲಾಶಾದಿಗಳಿಂದೆ ಪೋಗಿಯವರೊಳೂಟಾದಿ ಪಾನಂಗಳಂ
ಭಿಡೆಯಿಂ ಮಾಡಲು ಚಿತ್ತ ಸಿಕ್ಕಬಹುದೋ ನಿಸ್ಸಂಗಸದ್ಭೂಮಿಕಾ
ನಡೆಯನ್ನೇರಲು ವಿಘ್ನವಲ್ತೆ ಸುಗುಣಾ ಶ್ರೀಚನ್ನವೀರೇಶ್ವರಾ || ೫೪ ||

ಬಹುಕಾಲಂಗಳು ಯಾಕೆ ಚಿತ್ತ ಪಿಡಿಯಲ್ ವಿಂಶಭೃತಂ ಸತ್ಫಳಂ
ಮಹತತ್ವಂಗಳ ಬಲ್ಲ ಸದ್ಗುರುವಿನಿಂ ಸಾಧ್ಯಂಗೊಳಲ್ ಸಿಕ್ಕದೈ
ಮಹಚಿತ್ತೇಂದ್ರಿಯಯೋಗಪೀಠಮೆನುತಂ ಕೊಂಡಾಡುವರ್ಯೋಗಿಗಳ್
ಮಹಚಿದ್ವಸ್ತುವೆಯುಕ್ಕು ಚಿತ್ತ ನಿಜದಿಂ ಶ್ರೀಚನ್ನವೀರೇಶ್ವರಾ || ೫೫ ||

ಪರಮೇಕಾಂತದಿ ಕೂತು ನೇತ್ರಕೊನೆಯಿಂ ತತ್ವಕ್ಕವನ್ನಿಕ್ಕದಾ
ನೆರೆ ಕಣ್ಣಾಲಿಯ ನಿಲ್ಲಿಸುತ್ತ ಮುದದಿಂ ಭ್ರೂಮಧ್ಯದೊಳ್ ನೋಡಲಾ
ಪರಮಾತ್ಮಂ ಬಹುತೇಜದಿಂದೆಸೆಯುತಂ ಕಣ್ಗೊಪ್ಪುವಂ ಕೋವಿದರ್
ಶರಣರ್ ಶಾಂಭವಿಮುದ್ರೆಯಿಂದು ನುಡಿವರ್ ಶ್ರೀಚನ್ನವೀರೇಶ್ವರಾ || ೫೬ ||

ಸಲೆ ಪದ್ಮಾಸನವಿಟ್ಟು ವಾಯುವೆಳೆದಾ ಮಧ್ಯಾಂಗುಟಾನಾಮಿಕಾಂ-
ಗುಲದಿಂ ಗಾಂಧರಿಯುಸ್ಥಿ ಜಿಹ್ವೆಯಿಡೆಯುಂ ಪುಂಷಾಪಯುಸ್ವೀನಿ ಪಿಂ-
ಗಳ ಷಡ್ನಾಡಿಯನಿಕ್ಕಿ ರಂಧ್ರದೊಳು ತಾಂ ನೋಡಲ್ಕೆ ಗೌರೀಶನಾ
ದಳಸಾಹಸ್ರದಿ ಕಾಣ್ಬ ಷಣ್ಮುಖಿಯಿದೇ ಶ್ರೀಚನ್ನವೀರೇಶ್ವರಾ || ೫೭ ||

ಮೃಡನಂ ಪೂಜಿಸಬೇಕು ಚೇತನವು ತಾನಿರ್ಪನ್ನೆಗಂ ಭಕ್ತಿಯಿಂ
ನಡೆ ಚೈತನ್ಯವದಿರ್ದು ಪೂಜಿಸದಿರಲ್ ಭೋಗಂಗಳಾಪೇಕ್ಷೆಯುಂ
ಬಿಡಬೇಕೈ ತನುಸೌಖ್ಯದಿಚ್ಛೆಗಳವಂ ಲಿಂಗಾರ್ಪಿತಂ ಬಿಟ್ಟೊಡಾ
ಮೃಡನಂ ಭಾವದಿ ಪೂಜೆಮಾಡುವದಲಾ ಶ್ರೀಚನ್ನವೀರೇಶ್ವರಾ || ೫೮ ||

ಗುರುಲಿಂಗಾಚರದೇವರಂ ಭಜಿಸುತಂ ಬೇಡಿರ್ದ ವಸ್ತುಂಗಳಂ
ಪರಮಾನಂದದಿ ನೀಡಿ ಚಿತ್ತದೊಳಗಂ ವೈಕಲ್ಯಮಂ ತಾಳದಾ
ಹರಭಕ್ತಂ ಶಿವಸಂಗಿಯಾಗಿ ಮೆರೆದಂ ಮೃತ್ಯುಂಜಯಪ್ರೀತನೀ
ಧರೆಯೊಳ್ ಭಕ್ತಿಗೆ ಸಾಟಿಯುಂಟೆ ಪೆರತೇಂ ಶ್ರೀಚನ್ನವೀರೇಶ್ವರಾ || ೫೯ ||

ದಿನನಕ್ಷತ್ರಸುಲಗ್ನಯೋಗತಿಥಿಯುಂ ಪುಷ್ಯಾದಿಮಾಸಂಗಳಂ
ಶನಿಕೇತುಗ್ರಹಚಾರಚಂದ್ರಬಲಮುಂ ಸಂಕ್ರಾಂತಿಮಾಸಾಂತಮುಂ
ದಿನನಾಥಗ್ರಹಣಾದಿ ಮೌಢ್ಯದಿನಮುಂ ದುಸ್ಸನ್ಮುಹೂರ್ತಂಗಳಂ
ಘನಲಿಂಗಾನ್ವಿತ ಭಕ್ತನೇಕೆ ಬಗೆವಂ ಶ್ರೀಚನ್ನವೀರೇಶ್ವರಾ || ೬೦ ||

ಇಲಿಮಾರ್ಜಾಲವಿಹಂಗಗೂಗೆಗರುಡಂ ಕಾಕಾಳಿಕಾಳೋರಗಂ
ಮೊಲಹಂಸಂ ಮೃಗಗಾರ್ದಭಂ ನರಿಹಯಂ ಮಂಡೂಕಭಲ್ಲೂಕಮುಂ-
ಗುಲಿವೇಶ್ಯಾನುಧುಮಾಂಸನಾರಿವಿಧವಾದುಃಖಾತ್ಮಷಂಡಂ ಪೆಣಂ
ಬಲು ದುಃಶ್ಚಿಹ್ನವ ಭಕ್ತನೇಕೆ ಬಗೆವಂ ಶ್ರೀಚನ್ನವೀರೇಶ್ವರಾ || ೬೧ ||

ಮಡದೀಮಕ್ಕಳು ಬಂಧು ಬಿಟ್ಟು ಸರಿಯಲ್ ರೋಗಾದಿಗಳ್ಪೀಡಿಸಲ್
ಪೊಡವೀಪಾಲನು ದೇಶ ಬಿಟ್ಟು ಕಳುಹಲ್ ಸಾಮ್ರಾಜ್ಯ ನಷ್ಟಂಗೊಳಲ್
ಮಿಡುಕಂ ಚಿತ್ತದಿ ಮಾನಹಾನಿಯೊದಗಲ್ ಲೋಕಾಪವಾದಂ ಬರಲ್
ಮೃಡಭಕ್ತಂ ಶಿವಪೂಜೆಗೆಯ್ದು ನಲಿವಂ ಶ್ರೀಚನ್ನವೀರೇಶ್ವರಾ || ೬೨ ||

ಸ್ಥಿರಚಿತ್ತಂ ದೃಢನೇಮಭೂತಸುದಯಂ ವೈರಾಗ್ಯನಿಷ್ಪೀಡನಂ
ವರಸತ್ಯಂ ಬಹುಲಿಂಗ ನಿಷ್ಠೆ ನಿಜದಿಂ ದೇಹೇಂದ್ರಿಶೀಲಂ ಸದಾ
ನರಸೇವಾದಿವಿದೂರಸಜ್ಜನಹಿತಂ ನಿರ್ಮೋಹಸುಜ್ಞಾನಗಳ್
ಪರಮಾಹೇಶ್ವರಗಲ್ಲದುಂಟೆ ಪರರೊಳ್ ಶ್ರೀಚನ್ನವೀರೇಶ್ವರಾ || ೬೩ ||

ರಸಶಬ್ದಾದಿಪದಾರ್ಥಸರ್ವಗಳ ತಾಂ ಸರ್ವೇಂದ್ರಿಹಸ್ತಂಗಳಿಂ-
ದೊಸೆದಿಷ್ಟಕ್ಕೆ ಸುಪಂಚಲಿಂಗಗಳಿಗಂ ಪಂಚೇಂದ್ರಿಯಿಂದಿತ್ತು ಮು-
ತ್ತೆಸೆವಾ ಭಾವಕೆ ಮಾನಸೇಂದ್ರಿಕರದಿಂ ತಂದಿತ್ತು ಸದ್ಭಕ್ತ ಸಂ-
ತಸದಿಂದಿರ್ಪನವಂ ಪ್ರಸಾದಿಯೆನಿಪಂ ಶ್ರೀಚನ್ನವೀರೇಶ್ವರಾ || ೬೪ ||

ಮನವಾಕ್ಕಾಯದಿ ಶೀಲದಿಂದೆ ನಡೆಯಲ್ ಮಸ್ತಾಗ್ರದೊಳಿರ್ಪ ತ-
ದ್ಘನಚಿದ್ವಸ್ತು ಸುತೇಜದಿಂದೆಸೆಯುತಂ ಕಣ್ಗೊಪ್ಪುತಿರ್ಪತ್ತವ-
ನ್ನನುವಿಂ ನೋಡುತೆ ಬಾಹ್ಯಮಂ ಮರೆದವಂ ಸತ್ಪ್ರಾಣಲಿಂಗಾಂಗಿ ಕೇಳ್
ಘನಭಕ್ತಂ ಶಿವಯೋಗಿಯಾಗಿ ಮೆರೆವಂ ಶ್ರೀಚನ್ನವೀರೇಶ್ವರಾ || ೬೫ ||

ಪರಿಪೂರ್ಣತ್ವದಿ ಪಂಚಲಕ್ಷಣದಿ ತಾಂ ಕೂಡಿರ್ಪ ಸತ್ಕಾಂತಿಯಿಂ
ಪರಬೊಮ್ಮಮಿಮ್ಮಗೆ ತೋರುತಿರ್ಪುದನಿಶಂ ತನ್ನಿಂದೆ ತಾನೇ ಮಹಾ-
ಪರಿಶುದ್ಧಾತ್ಮಜಿತಾಕ್ಷಮಾಯವಳಿದಾ ಭಕ್ತಂಗೆ ಬಾಹ್ಯಾಂತರೊಳ್
ಶರಣಸ್ಥಾನಕೆ ಬೊಮ್ಮಸಾಧ್ಯ ನಿಜದಿಂ ಶ್ರೀಚನ್ನವೀರೇಶ್ವರಾ || ೬೬ ||

ಅನುಮಾನಂಗಳ ನೂಂಕಿನಿಂದ ಶರಣಂ ಬಾಹ್ಯಾದಿಕರ್ಮಂಗಳ-
ನ್ನನುವಿಂ ದಾಂಟಿ ಮಹಾಧ್ವಯತ್ನ ಸುಖದೊಳ್ ಸತ್ಕ್ರೀಡಿಪಂ ಶೋಭಿಪಂ
ಘನಲಿಂಗೈಕ್ಯತೆ ಪೊಂದಿ ಸಂಪದವಿಯೊಳ್ ಚಿದ್ಬ್ರಹ್ಮವೇಯಾಗಿ ಚಿ-
ದ್ಘನಲಿಂಗಾದನವಂ ಸುಬೋಧಪರುವಿಂ ಶ್ರೀಚನ್ನವೀರೇಶ್ವರಾ || ೬೭ ||

ಗುರುಭಕ್ತಂ ಗುರುದೇವನನ್ನೊಲಿಸಿದಂ ಸದ್ಭಕ್ತಿಯಿಂ ಸೇವೆಯಿಂ
ವರಚಿಲ್ಲಿಂಗವ ನೀಲಲೋಚನೆಯು ತನ್ನಾಧೀನದೊಳಿಟ್ಟಳೈ
ಚರದೇವಂ ನೆರೆ ಸಾಧ್ಯವಾದ ಬಸವಾಧೀಶಂಗೆ ಪಾದೋದಕಂ
ನೆರೆ ಸಾಧ್ಯಾಯಿತು ವ್ಯೋಮಾರಾಧ್ಯರಿಗೆ ಕೇಳ್ ಶ್ರೀಚನ್ನವೀರೇಶ್ವರಾ || ೬೮ ||

ವಹಿಲಯ್ಯಂ ವಶಮಾಡಿಕೊಂಡ ಸತತಂ ಚಿಜ್ಜ್ಯೋತಿಯುಂ ಯೋಗದಿಂ
ಮಹಿಮಂ ಚೇರಮರಾಯ ಸಾಧಿಸಿದನೀ ರುದ್ರಾಕ್ಷೆಯಿಂ ಮಂತ್ರಮಂ
ಮಹಿಯೊಳ್ ತಾನಜಗಣ್ಣ ಸಾಧಿಸಿದನೈ ಪ್ರಾಸಾದಮಂ ಶಾಂತದಿಂ
ಮಹಭಕ್ತಂ ಪರಬಿಬ್ಬಿಬಾಚ ಸವಿದಂ ಶ್ರೀಚನ್ನವೀರೇಶ್ವರಾ || ೬೯ ||

ಮೃಡಭಕ್ತಿ ಬಸವಣ್ಣಗಾಯಿತು ಮಹಾಮಾಹೇಶ್ವರಸ್ಥಾನ ತಾಂ
ಮಡಿವಾಳಯ್ಯಗೆ ಸತ್ಪ್ರಸಾದತಳ ತಾಂ ಶ್ರೀಚನ್ನದೇವೇಶಗಂ
ಪಿಡಿದಂ ಪ್ರಾಣವ ಸಿದ್ಧರಾಮಶರಣಸ್ಥಾನಪ್ರಭಾರ್ಯಂಗೆ ಮೇಣ್
ಬಿಡದೊಪ್ಪಿತ್ತಜಗಣ್ಣಗೈಕ್ಯತಳ ತಾಂ ಶ್ರೀಚನ್ನವೀರೇಶ್ವರಾ || ೭೦ ||

ಶಿವದೀಕ್ಷಾ ಪಡಕೊಂಡು ಕಾಯದೊಳಗಷ್ಟಾವರ್ಣಮಂ ಸಾಧಿಸೀ
ಭವಸಂಸಾರವ ಪಾಳುಮಾಡಿ ಶಿವನೊಳ್ ಕೂಡಿರ್ದ ಸದ್ಭಕ್ತರೊಳ್
ಭುವಿಯೊಳ್ ಮಾಡಲು ತಕ್ಕುದೈ ಬಳಿಕೆಯಂ ಕಕ್ಕಯ್ಯಚನ್ನಯ್ಯರೊಳ್
ಶಿವ ಸದ್ಭೋಜನ ಮಾಡಲಿಲ್ಲೆ ಮುದದಿಂ ಶ್ರೀಚನ್ನವೀರೇಶ್ವರಾ || ೨೧ ||

ಭವಿಯಾಚಾರವ ಭಕ್ತರಾಚಾರಗಳಂ ಲಿಂಗಾಂಗದೇಕತ್ವದಾ
ಸವಿವಾತಿಂ ನೆರೆ ಶೋಧಮಾಡಬಹುದೈ ಸದ್ದೀಕ್ಷೆಯಂ ತಾಳ್ದವರ್
ಶಿವವಾಕ್ಯಂಗಳು ಬಾರದಿದ್ದರವರೊಳೆಂದೆಂದಿಗೂ ಸಲ್ಲದೈ
ಭವಿಸಂಗಂ ಭವಬೀಜವಾಯ್ತು ತಿಳಿಯಲ್ ಶ್ರೀಚನ್ನವೀರೇಶ್ವರಾ || ೨೨ ||

ಉಡುರಾಜಾಂಹ್ವಯದಿಂದೆ ಶೋಭಿಪ ಮಹಾಮಾಮಾಕ್ಷಿಯಬ್ಜಾಂಡಮಂ
ಪಡೆದಿರ್ದಾ ಬಲನೇತ್ರಮಿತ್ರವೆಸರಂ ತಾಳ್ದಿರ್ದಪಂ ರಕ್ಷಿಕಂ
ಕಿಡಿಗಣ್ಣಾವನಜಾಂಡಮಂ ದಹಿಸುಗುಂ ಕಾಲಾಗ್ನಿರೂಪಂಗಳಿಂ
ಮೃಡ ನೀನಿಂತಿರೆ ನಿರ್ವಿಕಾರನೆನಿಪೈ ಶ್ರೀಚನ್ನವೀರೇಶ್ವರಾ || ೨೩ ||

ತನುಮಧ್ಯಸ್ಥಳದಲ್ಲಿ ವಾಸಿಸಿರುವಾ ನಾಗೇಂದ್ರನಂ ಯೋಗದಿಂ
ಮನದಿಂ ಪ್ರಾಣದಿ ನೇತ್ರಗೂಡಿ ಪಿಡಿಯಲ್ ನಾಸಾಗ್ರದೊಳ್ ಬಂದು ತದ್
ಫಣಿರತ್ನಪ್ರಭೆ ತೋರಿಸುತ್ತಿಹುದಿದೇ ಬಿಂದುಪ್ರಭಾ ನೋಡಲಾ
ಘನವಾದಂತಿದೆ ಪೊಂದಿತೈ ಕಳೆವೆಸರ್ ಶ್ರೀಚನ್ನವೀರೇಶ್ವರಾ || ೨೪ ||

ಹಿತದಿಂ ಬೇಡಿದೆ ನಿಮ್ಮ ಮೂರ್ವರಗಳಂ ಹೇಮಾದ್ರಿಜಾಧೀಶನೇ
ಶ್ರುತಿಯೊಳ್ ಬ್ರಹ್ಮಸುನಾದ ಕೇಳಿಸುವುದಂ ನೇತ್ರಂಗಳಿಂ ಬ್ರಹ್ಮದೀ-
ಧಿತಿಯಂ ನೋಡುವ ಶಕ್ತಿಸಂಪದಗಳಂ ದಿವ್ಯಾಂಘ್ರಿಸಂಪತ್ತಿನೊಳ್
ಸತತಾನಂದಿಪ ಸೌಖ್ಯಮಿತ್ತು ಸಲಹೈ ಶ್ರೀಚನ್ನವೀರೇಶ್ವರಾ || ೨೫ ||

ದಶನಾದಂಗಳ ಸೊಂಪ ಬೀರುತೆ ಮಹಾಬಿಂದುಪ್ರಭಾಪುಂಜದಿಂ
ಶಶಿಯಂ ನಿಂದಿಪ ಚಿತ್ಕಲಾನಿಚಯದಿಂ ಚಿತ್ಸೌಖ್ಯಚಿಹ್ನಂಗಳಿಂ
ಶಶಿಭೂಷಂ ಹೃದಯಾಬ್ಜಹಂಸಮನಿಶಂ ಜ್ಯೋತಿಸ್ಸ್ವರೂಪಂ ಶಿವಂ
ಶಿಶುವಾತ್ಸಲ್ಯದಿ ತಾನೆ ಬಂದು ಪೊರೆದಂ ಶ್ರೀಚನ್ನವೀರೇಶ್ವರಾ || ೨೬ ||

ಜಲದೊಳ್ ಮುಳ್ಗಿಹ ಕುಂಭದಂತೆಸೆಯುತಂ ಶುದ್ಧಾತ್ಮದಾ ಕಾಯದೊಳ್
ವಿಲಸನ್ಮೂರ್ತಿಮನಸ್ಸ್ವರೂಪದೊಳು ತಾಂ ತೋರುತ್ತಿರಲ್ ಶಂಕರಂ
ಸಲೆಯಜ್ಞಾನಿಗಳಂತೆ ಬಾಹ್ಯವಿಧದಿಂ ಸದ್ಭಕ್ತಸತ್ಪೂಜೆಯಂ
ಬಲುಭಾವಂತದಿ ಮಾಡಿ ತಾಂ ನೆನೆವನೋ ಶ್ರೀಚನ್ನವೀರೇಶ್ವರಾ || ೨೭ ||

ಹರನಂ ಭಾವದಿ ಕಂಡ ಭಕ್ತ ಮಹಿಯೊಳ್ ಯಾತ್ರಾವಿಹಾರಂಗಳಂ
ಚರಿಸುತ್ತಿರ್ಪನದೇಕೆ ಮತ್ತೆ ಜಪಮಂ ಲಿಂಗಾರ್ಚನಾಸತ್ಕ್ರಿಯಾ-
ಚರವನ್ನೇತಕೆ ಮಾಳ್ಪ ಬಾಹ್ಯವಿಧದಿಂ ಚಿದ್ರೂಪನಾಗಿರ್ಪ ತಾ-
ನುರುಕರ್ಮಂಗಳ ಮಾಡೆ ಬರ್ಪ ಫಲಮೇಂ ಶ್ರೀಚನ್ನವೀರೇಶ್ವರಾ || ೭೮ ||

ಹರನೇ ನಿಮ್ಮಯ ಪಾದಪೂಜೆ ರಚಿಸಲ್ ಹಸ್ತಾಬ್ಜಯುಗ್ಮಕ್ಕೆ ಮ-
ತ್ತಿರದಾ ರೂಪವ ನೋಡಲಾ ನಯನಕಂ ಜಿಹ್ವಾಗ್ರಕಾ ಮಂತ್ರಮಂ
ನೆರೆಯುಚ್ಚಾರಕೆ ಮತ್ತೆ ಪಾದರಸವನ್ನೀಂಟಲ್ಕೆ ಚಿನ್ನಾದವ-
ನ್ನುರೆ ಕೇಳಲ್ಕೆ ಸುಶಕ್ತಿಯಿತ್ತು ಸಲಹೈ ಶ್ರೀಚನ್ನವೀರೇಶ್ವರಾ || ೭೯ ||

ಮನಮಂ ಮಾರಿಸಿ ಚಿತ್ತಮಂ ಪಿಡಿದ ಸುಜ್ಞಾನಂಗೆ ಚಿದ್ಬ್ರಹ್ಮ ತಾ-
ನನುವಿಂ ಜ್ಯೋತಿಸುರೂಪದಿಂ ಬೆಳಗುತಂ ಸಾಂದ್ರಪ್ರಭಾ ತೋರಲಾ
ಘನಮಾಯಾಗುಣ ನೀಗಿ ಯೋಗಿಯೆನಿಪಂ ಸುಜ್ಞಾನಿ ತದ್ಬ್ರಹ್ಮ ತಾ-
ನೆನಿಸಿರ್ಪಂ ಮಹಚಿತ್ರಭಾಮಯನವಂ ಶ್ರೀಚನ್ನವೀರೇಶ್ವರಾ || ೮೦ ||

ಶಿವತತ್ತ್ವಾರ್ಥವೆ ತಾಯಿಯಾತ್ಮಜನಕಂ ವೈರಾಗ್ಯವೇ ಭ್ರಾತನಾ
ಸುವಿಚಾರಂಗಳೆ ಬಂಧುವರ್ಗ ಗೆಳೆಯಂ ಸದ್ಧೈರ್ಯಸತ್ತ್ವಾಂಗವೇ
ಕುವರಂ ಶಾಂತಿಸುಪತ್ನಿ ದಾಂತಿ ಭಗಿನೀ ಯೋಗಾಮೃತಂ ಭೋಜನಂ
ಶಿವಯೋಗೀಶ್ವರಗಾಪ್ತರಿಲ್ಲಮಿಳೆಯೊಳ್ ಶ್ರೀಚನ್ನವೀರೇಶ್ವರಾ || ೮೧ ||

ಕರದೊಳ್ ಭೋಜನ ಪಾಳ್ ಶಿವಾಲಯ ಗೃಹಂ ಮಾಧೂಕರೀ ಭಿಕ್ಷವೈ
ಪರಮಸ್ನಾನ ನದೀತಟಾಕದಿ ಸದಾ ಚಿದ್ಭಸ್ಮ ಲೇಪಾಂಗದೊಳ್
ಹರಮಂತ್ರೋಚ್ಚರ ಭಾವದಲ್ಲಿ ನಿಜದಿಂ ವೈರಾಗ್ಯದಿಂ ಯೋಗಿ ಸಂ-
ಚರಿಸುತ್ತಿರ್ಪುದೆ ಜಂಗಮಸ್ಥಳವಲಾ ಶ್ರೀಚನ್ನವೀರೇಶ್ವರಾ || ೮೨ ||

ದಳವೊಂದಾಗಿಹ ದಿವ್ಯಹೇಮಗಿರಿಯಂ ಕೈಲಾಸನಾಥಂ ಚಿರಂ
ಕಳೆವೆತ್ತಾ ಪ್ರಮಥಾಳಿಗೂಡಿ ಮುದದಿಂ ತನ್ನಿಂದೆ ತಾ ಬಂದು ಕೇಳ್
ನೆಲಸಿರ್ಪಂ ಘನತೇಜದಿಂದೆಸೆಯುವಾ ಭ್ರೂಮಧ್ಯರಂಧ್ರಾಗ್ರದೊಳ್
ನಲಿದಾಲೋಕಿಸುತಿಪ್ಪುದೇ ಶಿವಸುಖಂ ಶ್ರೀಚನ್ನವೀರೇಶ್ವರಾ || ೮೩ ||

ಹರ ತಾಂ ಶ್ರೀಗುರುರೂಪದಿಂದೆಸೆಯುತಂ ಬಿಂದುಪ್ರಭಾಪುಂಜದಿಂ-
ದುರುಯೋಗಾಪ್ಪನೆ ತಾಣದಲ್ಲಿ ಬರುವಂ ಶಾಂತಸ್ವರೂಪಂಗಳಿಂ
ನೆರೆಪದ್ಮಾಸನದಿಂದೆ ಮಂಡಿಸಿರುವಂ ಮೌನಾಂಕದಿಂ ರಂಧ್ರದೊಳ್
ಗುರುವೇ ಶಂಕರನೆಂಬ ವಾಕ್ಯ ನಿಜವೈ ಶ್ರೀಚನ್ನವೀರೇಶ್ವರಾ || ೮೪ ||

ಹರಸಾಮಾಧಿಯೊಳೆಯ್ದು ಸದ್ಗುರುವಿನಾ ಪಾದಾಂಬುಜಾತಂಗಳಂ
ನೆರೆ ಪಂಚಾಕ್ಷರಮಂತ್ರ ಪಂಜರಸದಿಂ ಸ್ವಾತ್ಮಾನಿವೇದಂಗಳಿಂ
ಹರುಷಾರ್ಘ್ಯಾದಿಗಳಿಂ ಸುಪೂಜೆ ರಚಿಸಲ್ ಪಾದಾಮೃತಂ ಸಿಕ್ಕುದೈ
ಶರಣಂಗೊಪ್ಪಿತು ಮಾನಸಾರ್ಚನೆಯು ದಲ್ ಶ್ರೀಚನ್ನವೀರೇಶ್ವರಾ || ೮೫ ||

ವಿಲಸನ್ಮೂರ್ತಿಯೆನಿಪ್ಪ ಚಿತ್ಕಳೆಯನೀ ಭಾವಕ್ಕೆ ತಂದಂತದ-
ನ್ನೊಲವಿಂ ಮಾನಸದಲ್ಲಿ ತಂದು ಬಳಿಕಾ ನೇತ್ರಂಗಳೊಳ್ ತಂದದಂ
ಸಲೆ ಹಸ್ತಾಬ್ಜದೊಳಲ್ಲಿ ಕೂಡ್ರಿಸಿ ಸದಾ ಬಾಹ್ಯಾಂತರೆಂದೆಂಬುವಾ
ಸ್ಥಳದೊಳ್ ನಿಲ್ಲಿಸಿ ನೋಳ್ಪುದಂ ಕರುಣಿಸೈ ಶ್ರೀಚನ್ನವೀರೇಶ್ವರಾ || ೮೬ ||

ಘನಚಿಜ್ಯೋತಿಯ ರೂಪದಿಂದೆಸೆಯುವಾ ಶ್ರೀಷಟ್‌ಸ್ಥಲಬ್ರಹ್ಮಮಂ
ಮನದಿಂ ಧ್ಯಾನಿಪ ರೀತಿಯಂ ಕ್ರಿಯೆಗಳಿಂ ಸತ್ಪೂಜೆಯಂ ಮಾಳ್ಪುದಂ
ಅನುವಿಂ ನೇತ್ರದಿ ನೋಳ್ಪ ಶಕ್ತಿಯದರೋಳೇಕತ್ವಮಂ ಪೊಂದುವಾ
ಘನಸನ್ಮಾರ್ಗವು ಪೊಂದು ರೀತಿಯರುಹೈ ಶ್ರೀಚನ್ನವೀರೇಶ್ವರಾ || ೮೭ ||

ಮಹಲಿಂಗಾಂಗಿಗೆ ದಿವ್ಯಲಿಂಗವೆ ಮಹಾನೈವೇದ್ಯವಾಗಿರ್ಪುದಾ
ಮಹಲಿಂಗಕ್ಕೆ ಸುಭಾಜನಂ ಸಹಜದಿಂ ಸದ್ಭಕ್ತನೇಯಾಗಿಹಂ
ಮಹಸದ್ಭಕ್ತನಿಗೇಕಭಾಜನವದೇ ಯೋಗ್ಯಂ ವೃಥಾ ಭ್ರಾಂತಿಗಳ್
ಮಹಲಿಂಗಕ್ಕೆ ಸುಪಾತ್ರೆಯೊಳ್ ಗ್ರಹಿಸುವರ್ ಶ್ರೀಚನ್ನವೀರೇಶ್ವರಾ || ೮೮ ||

ಇಳೆಯಾಕಾಶದಿ ಸರ್ವತಾವಿನೊಳಗಂ ತುಂಬಿರ್ದು ಸಜ್ಯೋತಿಯಿಂ
ಪೊಳೆಯುತ್ತಿರ್ಪುರಿಲಿಂಗಮಂ ನಯನದಿಂ ಬಾಹ್ಯಾಂತರೊಳ್ ನೋಡಿದಾ-
ಗಳೆ ಪಾಪಂಗಳ ನೀಗಿ ಶಂಭುಕೃಪೆಯಂ ತಾಂ ಪೊಂದದೇ ಮಾಣ್ಬನೇ
ಸಲೆ ಚಿಲ್ಲಿಂಗವ ತಾಳೆ ನೀನೆ ಶಿವ ದಲ್ ಶ್ರೀಚನ್ನವೀರೇಶ್ವರಾ || ೮೯ ||

ಪಶುಪತ್ಯಾಂಘ್ರಿಯ ದಿವ್ಯತೇಜವೆನಿಪಾ ಚಿದ್ರುಸ್ಮದಾ ದರ್ಶನಂ
ಶಿಶುಹತ್ಯಾದಿ ಮಹಾಘಸಂಕುಲಗಳಂ ಸಂಹಾರಗೆಯ್ದುತ್ತು ಮೇಣ್
ದೃಶದೃಕ್ಕಂಗಳ ಮೀರಿದಾ ಶಿವನ ಸರ್ವೈಶ್ವರ್ಯಮಂ ಕಾಣಿಸೀ
ವಶವಂ ಮಾಳ್ಪುದ ತಾಳ್ದರೆಷ್ಟು ಫಲವೋ ಶ್ರೀಚನ್ನವೀರೇಶ್ವರಾ || ೯೦ ||

ಪರಮಾನಂದವ ಮತ್ತೆ ಪಿಂಗಿ ಶಿರದೊಳ್ ನಿಸ್ಸಂಗಸದ್ವಸ್ತ್ರಮಂ
ವರಸಂಕಲ್ಪವಿಕಲ್ಪದುಂಗುರಗಳಂ ಸತ್‌ಶೀಲನೈರ್ಗುಣ್ಯವೆಂ-
ಬುರುಕಂಠಾಭರಣಂಗಳಂ ಚರಣದೊಳ್ ಪಾಶಾಶೆರಕ್ಷಂಗಳಂ
ಅರುವೆಂಬಾ ವರಗ್ರಂಥವಿತ್ತು ಪೊರೆಯೈ ಶ್ರೀಚನ್ನವೀರೇಶ್ವರಾ || ೯೧ ||

ಗುರುನಾಥಂ ಪರತತ್ವವಾಗಿಹನು ಪೇಳ್ ಚಿದ್ವಸ್ತುವೇಯಾಗಿಹಂ
ಪರಮಾತ್ಮಂ ಕರುಣಾಳು ಮೃತ್ಯುವಿಜಯಂ ಶ್ರೀದಂ ಶಿವಾಂಗಂ ಸದಾ
ಗುರುಪಾದಾಂಬುಜಭಾವದಲ್ಲಿರಿಸಿ ತಾಂ ಸತ್ಪೂಜೆಯಂ ಮಾಡುವಂ
ಹರಭಕ್ತಂ ಶಿವಭಾಗ್ಯಯುಕ್ತನೆನಿಪಂ ಶ್ರೀಚನ್ನವೀರೇಶ್ವರಾ || ೯೨ ||

ನಗಜಾಪಂಗೆ ವಿನೋದವೆಂತುದಿಪುದೋ ಕೈಲಾಸದಾಸ್ಥಾನದೊಳ್
ನಗಜಾತಾಶರಣೇಂದ್ರರಾ ಮರೆಯೊಳಾಂ ಸದ್ದಿಲ್ಲದೇ ನಿಂತಿರಲ್
ನಗೆಯಾಟಾದಿಗಳಿಂದೆ ಹಾಸ್ಯಗೊಳಿಪಾ ಮದ್ಭಾಲನೆಲ್ಲಿರ್ಪನೋ
ಮಿಗೆ ಕೇಳ್ವಾ ಹರ ಭೂಮಿಗಟ್ಟಿ ಮರೆದಂ ಶ್ರೀಚನ್ನವೀರೇಶ್ವರಾ || ೯೩ ||

ಪ್ರಮಥೇಂದ್ರಾ ಬಸವಾಧಿಪಾ ಗುರುತರಾ ಮದ್ಬಾಂಧವಾ ಪೇಳ್ವುದಾ
ಹಿಮಶೈಲೇಂದ್ರಸುತಾವರಂಗೆ ಧರೆಯೊಳಿರ್ಪಾ ಕುಮಾರಂಗೆ ನೀ
ಕ್ಷಮೆಯಂ ನೀಡಿ ಹಿತೋಕ್ತಿಯಾಡಿಯವನಂ ಸಂತೈಸಿ ಪಾದಾಂಬುಜಂ
ವಿಮಲಾಂಗಕ್ಕೆರೆವಾ ಸುಧಾಂಬುವೃಣಿಸೈ ಶ್ರೀಚನ್ನವೀರೇಶ್ವರಾ || ೯೪ ||

ಕಡಲೊಳ್ ಬುದ್ಬುದವೀಚಿ ಮತ್ತೆ ಮುಗಿಲೊಳ್ ಮೇಘಂಗಳಾ ಜ್ವಾಲೆಯೊಳ್
ಕಿಡಿಗಳ್ ಪುಟ್ಟಿ ವಿನಾಶವಾಗುವ ತೆರಂ ನೀಲಪ್ರಭಾಪುಂಜದಿಂ-
ದೊಡಗೂಡಿರ್ದಿನಮಂಡಲಾದಿಗಳ ಮೇಣ್ ಚಂದ್ರಾದಿತಾರಾಳಿಯುಂ
ಮೃಡನಾಟಂಗಳ ನೋಡಿ ಪೊತ್ತುಗಳೆವೆಂ ಶ್ರೀಚನ್ನವೀರೇಶ್ವರಾ || ೯೫ ||

ತರಳಾ ಬಾ ಮಮ ವಾಮಭಾಗ ತೊಡೆಯೊಳ್ ಕೂಡೆಂದು ಕೈನೀಡಿ ತಾ
ಕರೆದಾಲಿಂಗಿಸಿ ಮುದ್ದುಗೊಟ್ಟು ಮುದದೊಳ್ ಈಶಾಂಘ್ರಿಯಂ ತೋರಿಸೀ
ಹರನೊಡ್ಡೋಲಗ ನೋಡು ಷಣ್ಮುಖನೆ ನೀನೆಂದಾಡಿದಳ್ ಗೌರಿಯಾ
ಶರಣೇಂದ್ರಾಳಿಯ ನೋಡಿ ತುಷ್ಟಿಬಡುವೆಂ ಶ್ರೀಚನ್ನವೀರೇಶ್ವರಾ || ೯೬ ||

ಮೃಡ ನೀ ತೋರಿಪ ಬೊಮ್ಮದಾಟವಿರಲೈ ಕಾತ್ಯಾಯಿನೀ ಮಾತೆಯಾ
ಕಡುಪಾಲೀಂಟಿಸಿ ಸುಪ್ರಸಾದವೃಣಿಸೀ ಹೇಮಾದ್ರಿ ಸರ್ವಾಂದಮಂ
ತೊಡೆಯೊಳ್ ಕೂಡಿಸಿಕೊಂಡು ತೋರಿಸೆನಗಂ ಮತ್ತಾಡಿಸೈ ಭಕ್ತರೊಳ್
ಬಿಡದಾಲಿಂಗಿಸಿ ಮುದ್ದುಗೊಟ್ಟು ಸಲಹೈ ಶ್ರೀಚನ್ನವೀರೇಶ್ವರಾ || ೯೭ ||

ಉರುಲಿಂಗಂ ಮಡಿವಾಳನಾ ಮಲುಹಣಂ ಕೆಂಬಾವಿ ಭೋಗಣ್ಣ ಬೇ-
ಡರ ಕಣ್ಣಪ್ಪಜಗಣ್ಣ ಚೋಳನರಪಂ ಸತ್ಯಣ್ಣಸಂಗಯ್ಯ ಸೌಂ-
ದರನೇಣಾಧಿಪ ಮಾನಕಂಜರನೃಪಂ ಗೊಲ್ಲಾಳ ಚಂಡೇಶ್ವರಂ
ಹರನಾಸ್ಥಾನದಿ ಭಕ್ತರೊಪ್ಪುತಿಹರೈ ಶ್ರೀಚನ್ನವೀರೇಶ್ವರಾ || ೯೮ ||

ಅಜವಕ್ತ್ರಂ ಕಪಿವಕ್ತ್ರ ಗೋಪವರವಕ್ತ್ರಂ ವ್ಯಾಘ್ರವಕ್ತ್ರಂ ಮಹಾ-
ಗಜವಕ್ತ್ರಂ ಹರಿವಕ್ತ್ರ ವಾಜಿನರಿವಕ್ತ್ರಂ ಶೇಷವಕ್ತ್ರಂ ಸುಮಾ-
ನುಜವಕ್ತ್ರಂ ಶಿಖಿವಕ್ತ್ರಸೂಕರಸುವಕ್ತ್ರಂ ಋಷಭವಕ್ತ್ರಂಬುವರ್
ತ್ರಿಜಗಾಧೀಶ್ವರ ತಾಣದೊಳೆಸೆಯುಬರ್ ಶ್ರೀಚನ್ನವೀರೇಶ್ವರಾ || ೯೯ ||

ಮರುಳಾರ್ಯರ್ಂ ಮಹಾಪಂಡಿತಂ ನಿಜಗುಣೀ ಶ್ರೀಸೋಮಸದ್ಧೀಮಶಂ-
ಕರಮಲ್ಲಾರ್ಯಸುಕೇಶಿರಾಘವಶಿವಂ ಶ್ರೀಕಾಳಿದಾಸಂ ಹರೀ-
ಶ್ವರ ಜಕ್ಕಾರ್ಯನು ಭೋಜಪದ್ಮಜಗದೀಶಂ ಶಂಭುದೇವಂ ಷಡ-
ಕ್ಷರಿದೇವಂ ಮೃಡತಾಣದೊಳೆಸೆಯುವರ್ ಶ್ರೀಚನ್ನವೀರೇಶ್ವರಾ || ೧೦೦ ||

ಭಕವಾಲ್ಯಂ ಭೃಗುಪುಂಡರೀಕ ಸನಕಂ ಸಾನಂದರೋಮೇಶ ಕೌ-
ಶಿಕಜಾಬಾಲದಧೀತಿಕಣ್ವವಿಮಲಂ ಸೂತಾತ್ರಿ ಭಾರದ್ವಜಂ
ಶುಕಮಾರ್ಕಂಡೆಯುಗಸ್ತ್ಯನಾರದಗುರುಂ ವಾಸಿಷ್ಠ ಮೌನೀಂದ್ರರಾ
ನಿಕರಂ ಮಂಗಲಮಾಗಿ ತೋರುತಿಹುದೈ ಶ್ರೀಚನ್ನವೀರೇಶ್ವರಾ || ೧೦೧ ||

ಹರಿಯೇ ಪ್ಯೈಮಣಿ ಬೊಮ್ಮ ವಂದಿಸೆಲೆ ನೀ ದೇವೇಂದ್ರ ಮಾತಾಡದಿರ್
ಸುರರೇ ಗರ್ಜಿಸದಿರ್ರಿ ಕಿಂಪುರುಷರೇ ಸದ್ಗಾನಮಂ ಮಾಳ್ಪುದೈ
ತರಣೀ ಸಾರ್ಕಡೆ ಚಂದ್ರ ಕೂಡ್ರು ತೊಲಗೆಂದಾಕಾಲನಂ ನಂದಿಕೇ-
ಶ್ವರ ಹಸ್ತಾಗ್ರದ ವೇತ್ರದಿಂದೆ ಜಡಿದಂ ಶ್ರೀಚನ್ನವೀರೇಶ್ವರಾ || ೧೦೨ ||

ಹರನೊಡ್ಡೋಲಗದಲ್ಲಿ ನಾರದ ಮಹಾಸದ್ವೀಣೆಯಂ ಬಾರಿಪಂ
ವರಭೃಂಗೀಶ್ವರ ನಾಟ್ಯವಾಡಿ ನಗಿಪಂ ಸದ್ಗಾನಮಂ ತುಂಬುರರ್
ಪರಮಾನಂದದಿ ಮಾಳ್ಪರೈಯನುದಿನಂ ಹೈಮಾವತೀ ಕಕ್ಷದೊಳ್
ನೆರೆಯಾಂ ಮಂಡಿಸಿ ನೋಡಿ ತುಷ್ಟಿಬಡುವೆಂ ಶ್ರೀಚನ್ನವೀರೇಶ್ವರಾ || ೧೦೩ ||

ಅನಿಲಂ ವೀಜನವಂದಿನಾದಿಪಸುತಂ ಸಚ್ಛತ್ರಮಂ ಪಾವಕಂ
ಮಿನುಗುತ್ತಿರ್ಪ ಸುದೀಪಮಂ ವರುಣ ತಾಂ ಪೊಂಗಿಂಡಿಯಂ ರಾಗದಿಂ-
ದಿನನಾದರ್ಶವ ಚಾಮರದ್ವಿಗಳವಂ ಶ್ರೀವಾಣಿಯರ್ ಶಂಭುವಿಂ-
ಗನುಗಾಲಂ ಪಿಡಿದಿರ್ದರೈ ವಿನಯದಿಂ ಶ್ರೀಚನ್ನವೀರೇಶ್ವರಾ || ೧೦೪ ||

ಇದು ಲಿಂಗಾಂಗರಹಸ್ಯವೇದಗುಪಿತಾರ್ಥಂ ಮೋಕ್ಷಶಾಸ್ತ್ರಾನುಭಾ-
ವಿದು ತನ್ನಂಗದೊಳಿರ್ಪ ಚಿತ್ಕಳೆಯ ತಾನೋದಲ್ಕೆ ಕೈದರ್ಪಣಂ-
ತಿದುಮದ್ವೈತದ ರಾಜಮಾರ್ಗಮಿಳೆಯೊಳ್ ಕೈವಲ್ಯಲಕ್ಷ್ಮೀಪ್ರದಂ
ಮುದದಿಂ ಸಾಧಿಸು ದೇವನಪ್ಪೆ ನಿಜದಿಂ ಶ್ರೀಚನ್ನವೀರೇಶ್ವರಾ || ೧೦೫ ||

ಅತಿಪಾಪಾತ್ಮದುರಾತ್ಮದುಷ್ಟಕುಹಕಂ ದುರ್ಮೋಹಿದುರ್ವ್ಯಾಪಕಂ
ಮತಿಹೀನಂ ಬಹುಮೋಸಗಾರ ಕುಟಿಲಂ ದುಸ್ಸಂಗಿದುಶ್ಚೇಷ್ಟಕಂ
ಸತತಂ ಕಾಪಥಕಾಶ್ರಯಂ ಕುಜನರೊಳ್ ಸೇವತ್ವಮಂ ತಾಳಿದೆಂ
ಗತಿಯಂ ಪಾಲಿಸು ನೋಡದೆನ್ನ ಗುಣಮಂ ಶ್ರೀಚನ್ನವೀರೇಶ್ವರಾ || ೧೦೬ ||

ಗುರುಕಾರುಣ್ಯದಿ ಶಾಲಿವಾಹನ ಶಕಂ ಪೃಥ್ವೀಗಜಂ ವೇದಸಾ-
ಗರಸಂಖ್ಯಾನ್ವಿತ ನಾಮ ದುಂದುಭಿಯೊಳಂ ಪೌರ್ಣಿಮೆಯೊಳ್ಮಾಘದೊಳ್
ಗುರುಧಾರಾಮೃತಸಿದ್ಧಿಯೋಗದೊಳಗೀ ಸತ್ಕಾವ್ಯಮಿಂತುಂ ವಲಂ
ಹರಲಿಂಗಾಂಘ್ರಿಕೃಪಾದಿಯಿಂ ಮುಗಿದುದೈ ಶ್ರೀಚನ್ನವೀರೇಶ್ವರಾ || ೧೦೭ ||

ಮೃಡಪುತ್ರಂ ವರವೀರಭದ್ರ ಮೊದಲೊಳೀಶಾಜ್ಞೆಯಿಂ ಪುಟ್ಟಿದಂ
ಗುಡಿಗೇರೀಪುರದಲ್ಲಿ ವಾಸಿಪೆನಗಂ ಪಾದಾಂಬುವಂ ನೀಡಿದಂ
ಬಿಡದಾಂ ಸೇವಿಸಿ ಧನ್ಯನಾಗಿ ಮಹಿಯೊಳ್ ಭೋಗಾಷ್ಟಮಂ ದಾಟಿದೆಂ
ಪೊಡವೀಮಾನವರೆಂತು ಬಲ್ಲರಿದುವಂ ಶ್ರೀಚನ್ನವೀರೇಶ್ವರಾ || ೧೦೮ ||

ಭುವಿಯೊಳ್ ಶಿವತತ್ವದಿರವ
ಸವಿವಾತಿಂ ಬೋಧಿಸಲುರೆ ಮುನಿಪುರದೊಳಗಂ |
ಶಿವಕಾರುಣ್ಯದಿ ಬಂದಂ
ಶಿವಪುತ್ರ ರಚಿಸಿದನೀ ಶತಕಮಂ ಮುದದೊಳ್ || ೧೦೯ ||

॥ ಶ್ರೀಚನ್ನವೀರೇಶ್ವರಶತಕಂ ಸಮಾಪ್ತಂ ॥

★ ಸಂ.: ಎಂ. ಎಸ್. ಸುಂಕಾಪುರ

ವಡ್ಡಾರಾಧನೆಯ ವಿಚಾರ

ಉಪಲಬ್ಧ ಕನ್ನಡ ಸಾಹಿತ್ಯ ಕೃತಿಗಳಲ್ಲಿ ನೃಪತುಂಗನ ಕವಿರಾಜಮಾರ್ಗವು ಪ್ರಾಚೀನತಮ ಪದ್ಯಗ್ರಂಥವಿದ್ದರೆ ವಡ್ಡಾರಾಧನೆ ತುಸು ಹೆಚ್ಚು ಕಡಿಮೆ ಅದೇ ಕಾಲಖಂಡದಲ್ಲಿ (ಕ್ರಿ. ೯–೧೦ ಶ.) ಹುಟ್ಟಿರಬಹುದಾದ ಗದ್ಯ ಗ್ರಂಥ. ಅನೇಕ ಪ್ರಾಚೀನ ಕೃತಿಗಳಂತೆ ಇದಾದರೂ ಸ್ವರೂಪ, ಕರ್ತೃತ್ವ, ರಚನಾಕಾಲಗಳ ವಿಷಯಗಳಲ್ಲಿ ಸಂಶೋಧಕರ ಕುತೂಹಲವನ್ನು ಕೆರಳಿಸಿದೆ.

ವಡ್ಡಾರಾಧನೆಯೊಂದು ಜೈನ ಧಾರ್ಮಿಕ ಕಥಾಸಂಗ್ರಹವಿದ್ದು ಇದರಲ್ಲಿ ಒಟ್ಟು ೧೯ ಕಥೆಗಳಿವೆ. ಆರಾಧನೆಯೆಂದರೆ ಪೂಜೆ, ಸೇವೆ, ಶ್ರವಣ, ಮನನ, ಇತ್ಯಾದಿ, ರತ್ನತ್ರಯ (ಸಮ್ಯಕ್‌ದರ್ಶನ, ಸಮ್ಯಕ್‌ಜ್ಞಾನ, ಸಮ್ಯಕ್‌ಚಾರಿತ್ರ) ಮತ್ತು ಸಮ್ಯಕ್‌ತಪ—ಇವುಗಳ ತ್ರಿಕರಣಪೂರ್ವಕ ಆರಾಧನೆ, ಕರ್ಮಕ್ಷಯ ಮತ್ತು ಮೋಕ್ಷಪ್ರಾಪ್ತಿಗಾಗಿ ಜೈನರಿಗಿರುವ ಪರಮಸಾಧನ. ಯಾವಜ್ಜೀವ ಈ ಚತುರ್ವಿಧ ಆರಾಧನೆಗಳನ್ನು ಆರಾಧಿಸಿ, ಮರಣಸಮಯದಲ್ಲಿ ಸಲ್ಲೇಖನವ್ರತದಿಂದ ಅಂದರೆ ಅನ್ನಪಾನಾದಿಗಳನ್ನು ತೊರೆದು, ಮರಣಕ್ಕೆ ನಿಮಿತ್ತವಾದ ದೈಹಿಕ ಮಾನಸಿಕ ಕ್ಲೇಶಗಳನ್ನು ಧೃತಿಗೆಡದೆ ಸಹಿಸಿ, ತದೇಕಚಿತ್ತದಿಂದ ದೇಹವನ್ನು ತ್ಯಜಿಸಿ, ಸದ್ಗತಿಯನ್ನು ಪಡೆಯಬೇಕೆಂದು ಪ್ರತಿಯೊಬ್ಬ ಜೈನ ಮುಮುಕ್ಷುವಿನ ಅಂತಿಮ ಧ್ಯೇಯವಿದ್ದು, ವಡ್ಡಾರಾಧನೆಯಲ್ಲಿ ಈ ರೀತಿ ಸದ್ಗತಿಯನ್ನು ಪಡೆದ ೧೯ ಪುರಾಣಪುರುಷರ ಕಥೆಗಳಿವೆ. ಇವರಲ್ಲೊಬ್ಬನಾದ ಕುಮಾರಸ್ವಾಮಿಯು ಸಲ್ಲೇಖನವ್ರತವನ್ನು ಕೈಕೊಂಡು ಸಮಾಧಿಸ್ಥನಿರುವಾಗ, ನರಿಯಾಗಿ ಹುಟ್ಟಿಬಂದ ಪೂರ್ವಜನ್ಮದ ವೈರಿಯು ಮೂರು ದಿನ ಆತನ ದೇಹವನ್ನು ಬಗೆದು ತಿಂದರೂ ಧೃತಿಗೆಡದೆ ಸದ್ಗತಿಯನ್ನು ಪಡೆದನು. ೭೦೦ ವ್ಯಾಧಿಗಳಿಂದ ಪೀಡಿತನಾದ ಸನತ್ಕುಮಾರ ಚಕ್ರವರ್ತಿಯು ೧೦೦ ವರ್ಷಗಳವರೆಗೆ ತಪಸ್ಸುಮಾಡಿ ಸಮಾಧಿಮರಣದಿಂದ ಇಂದ್ರಪದವಿಯನ್ನು ಪಡೆದನು. ಹೀಗೆಯೆ ಇತರರು ಉಪಸರ್ಗ ಅಂದರೆ—ದೇವ, ಮನುಷ್ಯ, ಪಶು, ಪಕ್ಷಿ, ಪ್ರಾಣಿ, ದುರ್ಭಿಕ್ಷೆ, ಮಹಾಪೂರಾದಿಗಳಿಂದ ಒದಗಿದ ವಿಪತ್ತುಗಳನ್ನು, ಪರೀಷಹ ಅಂದರೆ—ಹಸಿವೆ, ನೀರಡಿಕೆ, ರೋಗರುಜಿನಾದಿಗಳಿಂದ ಉಂಟಾಗುವ ಕ್ಲೇಶಗಳನ್ನು ಸಹಿಸಿ, ವ್ರತಚ್ಯುತರಾಗದೆ, ಪರಮಗತಿಯನ್ನು ಪಡೆದರು.

ಅನ್ಯ ಆರಾಧಕರಾದರೂ ಸಮಾಧಿಮರಣದ ಸಮಯದಲ್ಲಿ ತಮಗೊದಗುವ ಈ ಬಗೆಯ ವಿಪತ್ತುಗಳು ಸುಕುಮಾರಸ್ವಾಮಿ ಮೊದಲಾದವರು ಅನುಭವಿಸಿದ ವಿಪತ್ತುಗಳ 'ಶತಸಹಸ್ರ' ಭಾಗ ಸಹ ಅಲ್ಲವೆಂದು ಬಗೆದು, ಸಮಾಧಾನದಿಂದ ಸಹಿಸಿ, ರತ್ನತ್ರಯಗಳನ್ನು ಸಾಧಿಸಿ, ಸದ್ಗತಿಯನ್ನು ಪಡೆಯಬೇಕೆಂಬುದು ಈ ಕಥೆಗಳ ಉಪದೇಶಪರ ಪಲ್ಲವಿ ಇದ್ದು ಪ್ರತಿಯೊಂದು ಕಥೆಯ ಕೊನೆಗೆ ಬರುತ್ತದೆ.

ಹಿನ್ನೆಲೆ— ಪ್ರಾಕೃತದಲ್ಲಿ "ಭಗವತೀ ಆರಾಧನಾ" ಎಂಬುದೊಂದು ಪ್ರಾಚೀನ ಗ್ರಂಥವಿದೆ. ಅದರ ೩೫ನೆಯ "ಕವಚ" ಎಂಬ ಅಧಿಕಾರದಲ್ಲಿ ಮೇಲ್ಕಾಣಿಸಿದ ೧೯ ಕಥೆಗಳ ಸೂಚನಾರೂಪಿ ಗಾಥೆಗಳು ಕವಚದ ಅಂಗವಾಗಿ ಬಂದಿವೆ. ಭಗವತೀ ಆರಾಧನೆಯು ಯತಿಗಳಿಗಾಗಿ ರಚಿಸಿದ ಆಚಾರಗ್ರಂಥ. ೨,೧೭೦ ಗಾಥೆಗಳಿರುವ ಈ ಬೃಹತ್ ಗ್ರಂಥದಲ್ಲಿ ಪ್ರಾಮುಖ್ಯವಾಗಿ ಸಲ್ಲೇಖನ-ವ್ರತ ಅಥವಾ ಸಮಾಧಿಮರಣದ ವಿಧಿ-ವಿಧಾನಗಳ ಸವಿಸ್ತರ ನಿರೂಪಣೆ ಇದೆ. ಗ್ರಂಥದ ಮೂಲ ಹೆಸರು 'ಆರಾಧನಾ'. ಭಗವತೀ ಎಂಬುದು ಹಿಂದಿನಿಂದ ಬಂದ ಗೌರವಾತ್ಮಕ ವಿಶೇಷಣವೆಂದು ವಿದ್ವಾಂಸರ ಅಭಿಪ್ರಾಯವಿದೆ. ಸ್ವಯಂ ಗ್ರಂಥಕಾರನೇ ಒಂದೆಡೆ 'ಆರಾಧನಾಭಗವದೀ' ಎಂದು 'ಭಗವತೀ' ಪದವನ್ನು ವಿಶೇಷಣ ರೂಪದಲ್ಲಿ ಬಳಸಿರುವನು.[೧] ಟೀಕಾಕಾರ ಆಶಾಧರ ಒಂದೆಡೆ ಗ್ರಂಥಕ್ಕೆ 'ಆರಾಧನಾ-ದೇವತಾ' ಎಂದಿರುವದರಿಂದ ಭಾವುಕರು ಗ್ರಂಥಕ್ಕೆ ದೇವತಾಸ್ವರೂಪವನ್ನು ಕೊಟ್ಟು ಪೂಜಿಸುತ್ತಿರಬೇಕು. ಮತ್ತು ಆ ಕಾರಣ ಅದು 'ಭಗವತೀ ಆರಾಧನಾ' ಎಂದು ಪ್ರಸಿದ್ಧವಾಗಿರಬೇಕೆಂಬ ಊಹೆಯೂ ಇದೆ.[೨] ವಡ್ಡಾರಾಧನೆಯಲ್ಲಿ ಸಹ ಈ ಊಹೆಗೆ—

> ಧ್ವಜಂಗಳುಮಂ ಕಟ್ಟಿಸಿ ದೇವತಾಪ್ರತಿಮೆಯುಂ ನಿರಿಸಿ... ...ಮಹಾ-ಮಹಿಮೆಯುಂ ಪೂಜೆಗಳುಮಂ ಪೊಡೆಮಡಿಸುತ್ತಿರೆ ಭಟಾರರುಮಾರಾಧನೆಯು-ನರ್ಚಿಸಿ.... ಆರಾಧನೆಯುಂ ವಕ್ಕಾಣಿಸಲ್ ತಗುಳ್ದರ್... (ಗುರುದತ್ತ ಭಟಾರರ ಕಥೆ, ಪು. ೧೪೨) ಎಂಬ ಪೋಷಕವಿರುವ ಮಾತುಗಳಿವೆ.

ಸಮಾಧಿಮರಣದಿಂದ ಸದ್ಗತಿಯನ್ನು ಪಡೆಯಬೇಕೆಂಬುದು ಅಂತಿಮ ಧ್ಯೇಯವಿದ್ದರೂ ಆದಕ್ಕೆ ಅಗತ್ಯವಿರುವ ಶ್ರದ್ಧೆ, ಸಂಸ್ಕಾರ, ಸಹನಶಕ್ತಿ, ಮೊದಲಾದವು ಎಲ್ಲರಲ್ಲಿ ಒಂದೇ ಸಮನಾಗಿರುವದಿಲ್ಲ. ಇದು ಪ್ರಕೃತಿಧರ್ಮ. ಆದ್ದರಿಂದ ಸಮಾಧಿಮರಣಕ್ಕೆ ಅಣಿಯಾದ ಆರಾಧಕನು ಉಪಸರ್ಗ-ಪರೀಷಹ-ಗಳ ಬಾಧೆಯನ್ನು ಸಹಿಸಲಾಗದೆ ಒಮ್ಮೊಮ್ಮೆ ತಾಳ್ಮೆಗೆಡಬಹುದು. ಸ್ವರ್ಗದಲ್ಲಿ-ರುವದನ್ನು ಕಂಡವರಾರು, ಸದ್ಯ ಬದುಕಿದರೆ ಸಾಕು, ಎನ್ನುವ ಮಟ್ಟಕ್ಕೆ ಆತನ ನೈತಿಕ ಧೈರ್ಯ ಆತ್ಮವಿಶ್ವಾಸಗಳು ಕುಸಿಯಬಹುದು. ಇಂಥ ಸಮ-ಯದಲ್ಲಿ ಬಳಿಯಲ್ಲಿರುವ ಸಹಬಂಧುಯತಿಗಳು ಸಹಾನುಭೂತಿಯಿಂದ ಆವನನ್ನು ಸಂತೈಸಬೇಕು. ಆವನಿಗಿಂತ ಎಷ್ಟೋ ಪಟ್ಟು ಹೆಚ್ಚು ಕಷ್ಟಗಳನ್ನು ಸಹಿಸಿ ಸದ್ಗತಿಯನ್ನು ಪಡೆದ ಉಪರೋಕ್ತ ೧೯ ಪುರಾಣಪುರುಷರ ಕಥಾರೂಪಿ-

---

೧. ಭ.ಆ. ಗಾಥಾ ೨೧೬೪.

೨. ಬೃ.ಕೋ. ಮುನ್ನುಡಿ, ಪು. ೫೨.

ಕವಚವನ್ನು ತೊಡಿಸಬೇಕು. (ಸವ್ವಾಯುರೇಣ ಕವಯುಂ ಪರೀಷಹ ಣಿವಾರಣಂ ಕುಜ್ಜಾ), ಎಂದಿರುವನು ಭಗವತೀ ಆರಾಧನಾಕಾರ.[೩]

ಭಗವತೀ ಆರಾಧನೆಯು ಕವಚಾಧಿಕಾರವು ಗಾಥೆ ೧೫೩೯ ರಿಂದ ಪ್ರಾರಂಭವಾಗಿ ೧೫೩೮ನೆಯ ಗಾಥೆಯುವರೆಗೆ ಪೀಠಿಕಾರೂಪದಲ್ಲಿ ಮುಂದರಿಯುತ್ತದೆ. ಮುಂದಣ ಒಂದೊಂದು ಗಾಥೆಯಲ್ಲಿ ಒಬ್ಬೊಬ್ಬ ಪುರಾಣಪುರುಷನು ಅನುಭವಿಸಿದ ಉಪಸರ್ಗ-ಪರೀಷಹಗಳ ಸೂಚನೆ ಇದೆ. ಒಟ್ಟು ಇಂಥ ೧೯ ಗಾಥೆಗಳಿದ್ದು ಇವು ಇಲ್ಲಿರುವ ಕ್ರಮದಲ್ಲಿಯೆ ವಡ್ಡಾರಾಧನೆಯು ಕಥೆಗಳಿಗೆ ಸೂಚನಾ-ಪದ್ಯವಾಗಿ ಬಂದಿದೆ. ಆರಾಧಕನು ಈ ಗಾಥೆಗಳನ್ನು ಪಠಿಸಿ, ಅವುಗಳಲ್ಲಿ ಉಕ್ತರಾದ ಪುರಾಣಪುರುಷರು ಅನುಭವಿಸಿದ ಯಾತನೆಗಳನ್ನು ನೆನೆದು ಅವುಗಳೆದುರು ತಾನು ಪಡುತ್ತಿರುವ ಯಾತನೆಗಳು ಕ್ಷುಲ್ಲಕವೆಂದು ಬಗೆದು, ತನ್ನಷ್ಟಕ್ಕೆ ತಾನೆ ಸಮಾಧಾನ ತಾಳಬಹುದು ಅಥವಾ ಬಳಿಯಲ್ಲಿಯ ಸಹಬಂಧುಯತಿಗಳು ಅವುಗಳನ್ನು ಪೂರ್ಣ ಕಥೆಗಳ ರೂಪದಲ್ಲಿ ನಿರೂಪಿಸಿ ಅವನ ಸಹನಶಕ್ತಿ ವ್ರತನಿಷ್ಠೆಗಳನ್ನು ಹೆಚ್ಚಿಸಬಹುದು. ಯೋಧನಿಗೆ ಕವಚವು ಹೇಗೊ ಹಾಗೆ ಉಪಸರ್ಗ ಪರೀಷಹಗಳೊಂದಿಗೆ ಹೋರಾಡುತ್ತಿರುವ ಆರಾಧಕನಿಗೆ ಈ ಕಥಾರೂಪಿ-ಕವಚವು ರಕ್ಷಣೆ ನೀಡುವದೆಂಬುದು ಈ ಅಧಿಕಾರದ ಮುಖ್ಯೋದ್ದೇಶವಾಗಿದೆ.

ಭಗವತೀ ಆರಾಧನಾದಲ್ಲಿಯ ಇನ್ನಿತರ ಕಥೆಗಳಾದರೂ ಅದರಲ್ಲಿಯ ಈ ಕವಚ - ಕಥೆಗಳಂತೆಯೇ ಸೂಚನಾರೂದಲ್ಲಿವೆ. ಟೀಕಾಕಾರರು (ಅಪರಾಜಿತಸೂರಿ, ಕ್ರಿ. ೮-೧೦ ಶ.; ಆಶಾಧರ ಕ್ರಿ. ೧೩ ಶ.) ಇವುಗಳನ್ನು ವಿಸ್ತರಿಸಿ ಹೇಳಿಲ್ಲ. ಬಹುಶಃ ಆ ಕಾಲದಲ್ಲಿ ಈ ಕಥೆಗಳು ಸುಪರಿಚಿತವಿರಬಹುದು ಅಥವಾ ಪೂರ್ಣರೂಪದಲ್ಲಿ ಇತರತ್ರ ಲಭ್ಯವಿರಬಹುದು. ಆರಾಧಕರ ಅನುಕೂಲತೆಗಾಗಿ ಎಲ್ಲ ಕಥೆಗಳನ್ನು ಒಂವೆಡೆ ಸಂಗ್ರಹಿಸಿ ನಿರೂಪಿಸಿರುವ ಪೂರಕ ಗ್ರಂಥಗಳೂ ಹುಟ್ಟಿಕೊಂಡಿರಬಹುದು. ಹರಿಷೇಣನ (ಕ್ರಿ. ೯೩೨) ಬೃಹತ್‌ಕಥಾಕೋಶ ಇಂಥದೊಂದು ಗ್ರಂಥ ಸಂಸ್ಕೃತದಲ್ಲಿದೆ. ಭಗವತೀ ಆರಾಧನೆಗೆ ಸಂಬಂಧಿಸಿದ ಉಪಲಬ್ಧ ಕಥಾಕೋಶಗಳಲ್ಲಿ ಇದೇ ಪ್ರಾಚೀನತಮವಿದೆ. ಇದರಲ್ಲಿ ಒಟ್ಟು ೧೫೭ ಕಥೆಗಳಿವೆ. ೧೨೬-೧೪೪ ವರೆಗಿನ ಕಥೆಗಳೂ ವಡ್ಡಾರಾಧನೆಯು ಕಥೆಗಳೂ ಒಂದೇ ಆಗಿವೆ. ಕ್ರಮದಲ್ಲಿಯೂ ವ್ಯತ್ಯಾಸವಿಲ್ಲ. ಹರಿಷೇಣ ತನ್ನ ಕಥೆಗಳನ್ನು ಸಾಧ್ಯವಿದ್ದಷ್ಟು ಸಂಕ್ಷೇಪಿಸಿ ನಿರೂಪಿಸಿರುವನು.

ಶ್ರೀಚಂದ್ರನ (ಕ್ರಿ.೧೧ ಶ. ಕೊನೆ) ಕಥಾಕೋಶ ಭಗವತೀ ಆರಾಧನಾಕಥೆಗಳಿರುವ ಇನ್ನೊಂದು ಗ್ರಂಥ. ಇದು ಅಚ್ಚಾಗಿಲ್ಲ. ಅಪಭ್ರಂಶದಲ್ಲಿದ್ದು ಕಥಾರಂಭದಲ್ಲಿ ವಡ್ಡಾರಾಧನೆಯ ಬಗೆಯಲ್ಲಿ ಇದರಲ್ಲಿಯೂ ಭಗವತೀ ಆರಾಧನಾ ಗಾಥೆಗಳು

---

೩. ಭ.ಆ. ಗಾಥಾ ೧೫೧೩.

ಸೂಚನಾಪದ್ಯಗಳಾಗಿ ಬಂದಿವೆ. ಪೂರ್ವಾಚಾರ್ಯನೊಬ್ಬನ ಗ್ರಂಥವನ್ನಾಧರಿಸಿ ತನ್ನ ಗ್ರಂಥವನ್ನು ರಚಿಸಿರುವೆನೆಂದಿರುವದು ಮತ್ತು ೧೯ ಕವಚ-ಕಥೆಗಳನಂತರ –ಇದಿಷ್ಟು ಕವಚಾಧಿಕಾರ (ಕವಚಾಹಿಯಾರೋಯಂ), ಎಂದಿರುವದು ಈ ಗ್ರಂಥದ ವೈಶಿಷ್ಟ್ಯ.[೪] ಪ್ರಭಾಚಂದ್ರ ನೇಮಿಚಂದ್ರರ ಕಥಾಕೋಶಗಳು ಆರಾ-ಧನಾ ಕಥೆಗಳಿರುವ ಇನ್ನೆರಡು ಗ್ರಂಥಗಳು. ಎರಡೂ ಸಂಸ್ಕೃತದಲ್ಲಿದ್ದು ಒಂದು ಗದ್ಯದಲ್ಲಿ ಇನ್ನೊಂದು ಪದ್ಯದಲ್ಲಿದೆ. ಇವು ಈಚೆಯವು.

ವಡ್ಡಾರಾಧನೆಯ ಸಮಸ್ಯೆಗಳು

ವಡ್ಡಾರಾಧನೆಯ ಸಮಸ್ಯೆಗಳು ಅದರ ಸಮಾಪ್ತಿವಾಕ್ಯದಿಂದಲೆ ತೊಡಗುತ್ತವೆ. ಸಂಸ್ಕೃತದ 'ಬೃಹತ್‌ಕಥೆ' ಪ್ರಾಕೃತದಲ್ಲಿ 'ವಡ್ಡಕಹಾ' ಎಂದು ಪ್ರಸಿದ್ಧವಿದೆ. ಗಂಗರಾಜ ದುರ್ವಿನೀತನ (ಕ್ರಿ. ೬೦೦) ಬೃಹತ್‌ಕಥೆ ಕೆಲವು ಶಾಸನಗಳಲ್ಲಿ 'ವಡ್ಡಕಥೆ' ಎಂದು ಉಕ್ತವಾಗಿದೆ. ವಡ್ಡಾರಾಧನೆಯ ಸಂಪಾದನೆಗಾಗಿ ಇಟ್ಟುಕೊಂಡ ಹಸ್ತಪ್ರತಿಗಳಲ್ಲಿ ವಡ್ಡಾರಾಧನೆ, ವೊಡ್ಡಾರಾಧನೆ, ವೊಡ್ಡಾರಾಧಣ, ಒಡ್ಡಾರಾಧನೆ—ಹೀಗೆ ನಾಲ್ಕು ರೂಪಗಳಿವೆ. ಪ್ರಾಚೀನ ಮತ್ತು ಸಂಸ್ಕೃತಕ್ಕೆ ಸಮೀಪವಾದುದೆಂದು 'ವಡ್ಡಾರಾಧನೆ' ರೂಪವನ್ನು ಸ್ವೀಕರಿಸಲಾಗಿದೆ.[೫] ಆದರೆ 'ಒಡ್ಡಾರಾಧನೆ' ಎಂಬುದೆ ಸರಿಯಾದ ರೂಪವೆನ್ನಬಹುದು—ಒಡ್ಡೋಲಗದಲ್ಲಿಯ 'ಒಡ್ಡ' ಇರುವಂತೆ. ಈ 'ಒಡ್ಡ', ವಡ್ಡಾ-ರಾಧನೆಯ 'ವಡ್ಡ', – ಸಂಸ್ಕೃತ 'ಬೃಹತ್'ಕ್ಕಿರುವ ಸಮಾನಾರ್ಥಕ ಶಬ್ದಗಳು. ಉಚ್ಚಾರವೈಶಿಷ್ಟ್ಯದಿಂದ ಪ್ರಾಕೃತ 'ವಡ್ಡ' ಕನ್ನಡದಲ್ಲಿ 'ಒಡ್ಡ' ಆಗಿದೆ. ವಡ್ಡಾರಾಧನೆಯ ಹಸ್ತಪ್ರತಿಗಳಲ್ಲಿಯ ವೊಡ್ಡಾರಾಧನೆ, ಒಡ್ಡಾರಾಧನೆ ರೂಪಗಳಾದರೂ ಇದನ್ನೇ ಸೂಚಿಸುವವು. ಉಚ್ಚಾರದಲ್ಲಿ 'ಒ' ಇದ್ದರೂ ಬರಹದಲ್ಲಿ 'ವ' ಎಂದು ಬರೆಯುವ ರೂಢಿ ನಮ್ಮಲ್ಲಿ ಎಂದಿನಿಂದಲೂ ಅಸ್ತಿತ್ವದಲ್ಲಿದೆ. ಕ್ರಿ.ಶ. ೧೧೫೮ರದೆಂದು ತಿಳಿಯಲಾದ 'ನಾಚಿರಾಜೀಯ' ಎಂಬ ಅಮರಕೋಶ ಟೀಕೆಯ ಹಸ್ತಪ್ರತಿಯಲ್ಲಿ 'ಒಗ್ಗರಿಸು' ಶಬ್ದವನ್ನು 'ವಗ್ಗರಿಸು' ಎಂದು ಬರೆಯಲಾಗಿದೆಂಬ ಕಿಟೆಲ್ ಕೋಶದಲ್ಲಿಯ ಉಲ್ಲೇಖವನ್ನು ಈ ಸಂದರ್ಭದಲ್ಲಿ ನೋಡಬಹುದು.[೬]

ವಡ್ಡಾರಾಧನೆ, ವೊಡ್ಡಾರಾಧನೆ, ಒಡ್ಡಾರಾಧನೆ,—ಯಾವುದೆ ಆಗಲಿ ಸಮಾಪ್ತಿವಾಕ್ಯದಲ್ಲಿ ಇದಿಷ್ಟನ್ನೆ ಇಟ್ಟುಕೊಂಡರೆ ಅತಿವ್ಯಾಪ್ತಿದೋಷ ತಗಲುವಂತಿದೆ. ಸಮಾಪ್ತಿವಾಕ್ಯದಲ್ಲಿ ವಡ್ಡಾರಾಧಣಸಂಪೂರ್ಣ್ಣಂ, ವೊಡ್ಡಾರಾಧನೆಯ

---

೪. ಬೃ.ಕೋ. ಮುನ್ನುಡಿ, ಪು. ೫೯, ೬೦.

೫. ಕ.ಸಾ.ಪ. ಸಂ. ೨೫/೨, ಪು. V.

೬. ಕಿ.ಕೋ.–'ಒ' ಅಕ್ಷರ.

ಕವಚವು, ವಡ್ಡಾರಾಧನೆಯು ಕವಚವೆಂಬಧಿಕಾರವು—ಪಾಠಾಂತರಗಳಿವೆ. ಇವುಗಳಲ್ಲಿ ಎರಡನೆಯದು ಪ್ರಾಚೀನತಮ (ಕ್ರಿ.೧೪೦೩) ಹಸ್ತಪ್ರತಿಯಲ್ಲಿಯದು.[೭] 'ವಡ್ಡಾರಾಧನೆ' ಎಂಬುದು ಸಮಗ್ರ ಭಗವತೀ ಆರಾಧನೆಗೆ ಅನ್ವಯಿಸುವ ಹೆಸರು. ಮೂಲಾರಾಧನಾ ಎಂಬ ಹೆಸರಿನಿಂದ ಭಗವತೀ ಆರಾಧನಾದ ಇನ್ನೊಂದು ಸಂಸ್ಕರಣ ಪ್ರಸಿದ್ಧವಾಗಿದೆ. ಹರಿಷೇಣನ ಬೃಹತ್‌ಕಥಾಕೋಶಕ್ಕೆ ಆದರ ಒಂದು ಹಸ್ತಪ್ರತಿಯಲ್ಲಿ 'ಬೃಹದಾರಾಧನಾ ಕಥಾಕೋಶ' ಎಂದಿರುವದರಿಂದ[೮], ಸಂಸ್ಕೃತದಲ್ಲಿ 'ಬೃಹದಾರಾಧನಾ', ಪ್ರಾಕೃತಾದಿಗಳಲ್ಲಿ 'ವಡ್ಡಾರಾಧನಾ' ಎಂದು ಸಹ ಅದು ಪ್ರಸಿದ್ಧವಿದ್ದು ಈ ಹೆಸರೇ ಕನ್ನಡದಲ್ಲಿ ಹರಿದುಬಂದಂತಿದೆ. ಕನ್ನಡ ವಡ್ಡಾರಾಧನೆಯು ಭಗವತೀ ಆರಾಧನಾದ ಅನುವಾದವೂ ಅಲ್ಲ, ಸಂಗ್ರಹವೂ ಅಲ್ಲ. ಆದರ ೩೫ನೆಯ ಕವಚಾಧಿಕಾರದಲ್ಲಿಯ ಕವಚ-ಗಾಥೆಗಳಿಗೆ ಸಂಬಂಧಿಸಿದ ೧೯ ಕಥೆಗಳಿಷ್ಟೇ ಇದರಲ್ಲಿವೆ. ಪ್ರಾರಂಭದಲ್ಲಿ ಮಂಗಲಾಚರಣ ಪೀಠಿಕೆ, ಕಥಾರಂಭದಲ್ಲಿ ಮೂಲ ಭಗವತೀ ಆರಾಧನಾದಲ್ಲಿಯ ಸೂಚನಾರೂಪಿ ಗಾಥೆ, ಕಥಾನಿರೂಪಣೆ, ಪ್ರತಿಯೊಂದು ಕಥೆಯ ಕೊನೆಗೆ ಉಪಸಂಹಾರಾತ್ಮಕ ಉಪದೇಶ—ಹೀಗೆ ಪೂರ್ಣಕೃತಿಯ ರೂಪದಲ್ಲಿದೆ, ಇದರ ರಚನೆ. ಭಗವತೀ ಆರಾಧನೆಯ ಕವಚಾಧಿಕಾರದ ರಚನೆ ಹೀಗಿಲ್ಲ. ಅತಏವ ಕನ್ನಡದ ಮಟ್ಟಿಗೆ ಆದರ ಪ್ರಾಚೀನತಮ (ಕ್ರಿ. ೧೪೦೩) ಹಸ್ತಪ್ರತಿಯಲ್ಲಿಯ 'ವೊಡ್ಡಾರಾಧನೆಯ ಕವಚವು' ಪಾಠವೆ ಸಾಧುವಿದ್ದು, ಇದನ್ನು ಕನ್ನಡ ವಿಶಿಷ್ಟ ಉಚ್ಚಾರಕ್ಕನುಸರಿಸಿ 'ಒಡ್ಡಾರಾಧನೆಯ ಕವಚವು' ಎಂದು ಸಮಾಪ್ತಿವಾಕ್ಯವನ್ನು ಮಾರ್ಪಡಿಸುವದು ಸೂಕ್ತವೆನಿಸುವದು. ಈ ಮಾರ್ಪಾಟಿಗೆ ಪೂರಕವಾಗಿ ಒಂದು ಹಸ್ತ-ಪ್ರತಿಯಲ್ಲಿ 'ಒಡ್ಡಾರಾಧನೆ' ಪಾಠ ಸಹ ಇದೆ.

'ವಡ್ಡಾರಾಧನೆಯ ಕವಚವೆಂಬಧಿಕಾರವು' ಪಾಠದಿಂದ ಸಮಗ್ರಭಗವತೀ ಆರಾಧನಾ ಕನ್ನಡದಲ್ಲಿ ಅನುವಾದಿತವಾಗಿದ್ದು ಇದು ಆದರಲ್ಲಿಯ ಕವಚಾಧಿಕಾರ ಮಾತ್ರ ಎಂಬ ಸಂದೇಹ ಮೂಡುವಂತಿದೆ. ವಸ್ತುಸ್ಥಿತಿ ಹೀಗಿಲ್ಲ. ಭಗವತೀ ಆರಾಧನೆಯ ಕವಚಾಧಿಕಾರದಲ್ಲಿ ಒಟ್ಟು ೧೭೩ ಗಾಥೆಗಳಿವೆ. ಹರಿಷೇಣ ಕವಚಕ್ಕೆ ಸಂಬಂಧಿಸಿದ ೧೯ ಕಥೆಗಳನ್ನಲ್ಲದೆ ಇದರಲ್ಲಿಯ ಬೇರೆ ೭ ಕಥೆಗಳನ್ನು ನಿರೂಪಿಸಿರುವನು. ಶ್ರೀಚಂದ್ರ ಹೆಚ್ಚಿಗೆ ೫ ಕಥೆಗಳನ್ನು ಹೇಳಿರುವನು. ಒಂದೊಮ್ಮೆ ವಡ್ಡಾರಾಧನೆಯು ಭಗವತೀ ಆರಾಧನೆಯ ಕವಚಾಧಿಕಾರದ ಅನುವಾದವಿದ್ದರೆ ಮಿಕ್ಕುಳಿದ ಗಾಥೆ ಮತ್ತು ಕಥೆಗಳ ಸಂದರ್ಭಾನುಸಾರ ಅನುವಾದ ಇದರಲ್ಲಿಯೂ ಬರುತ್ತಿತ್ತು. ಈ ಅಂಶ ಮತ್ತು ವಡ್ಡಾರಾಧನೆಯ ರಚನಾಸ್ವರೂಪವನ್ನು ಮನದಂದಾಗ ಈ ಪಾಠ ಗಣನಾರ್ಹವಲ್ಲೆಂಬುದು ಸ್ಪಷ್ಟವಾಗದಿರದು.

೭. ಕ.ಸಾ.ಪ. ಸಂ. ೨೪/೪, ಪು. ii
೮. ಬೃ.ಕೋ. ಮುನ್ನುಡಿ, ಪು. ೨, ಜ-ಪ್ರತಿ.

ಒಟ್ಟಿನಲ್ಲಿ ಸಮಾಪ್ತಿವಾಕ್ಯದಲ್ಲಿ 'ಒಡ್ಡಾರಾಧನೆಯ ಕವಚವು' ಎಂದಿರುವದು ಸೂಕ್ತ ಮತ್ತು ಕ್ರಮಪ್ರಾಪ್ತವಿದ್ದರೂ 'ಕವಚ' ಪದವನ್ನು ತ್ಯಜಿಸಿ, 'ವಡ್ಡಾರಾಧನೆ' ಪಾಠವನ್ನಿಷ್ಟೇ ಸ್ವೀಕರಿಸಿ ಗ್ರಂಥಕ್ಕೆ ಸಹ ಇದೇ ಹೆಸರನ್ನು ಕೊಡಲಾಗಿದೆ. ಜೈನಸಾಹಿತ್ಯದಲ್ಲಿ ಕವಚಗ್ರಂಥಗಳ ಅಸ್ತಿತ್ವ, ಸ್ವರೂಪಾದಿ ವಿವರಗಳು ದೊರೆಯದಿರುವದು 'ಕವಚ' ಪದವನ್ನು ತ್ಯಜಿಸಲು ಕಾರಣವಿರಬೇಕೆಂದು ತೋರುತ್ತದೆ.[೯] ಕವಚ, ಹೃದಯ, ವಜ್ರಪಂಜರ ಮೊದಲಾದವು ವೈದಿಕಧರ್ಮಪರ ತಂತ್ರಶಾಸ್ತ್ರದ ಅಂಗವಾಗಿ ಹುಟ್ಟಿಕೊಂಡ ಗ್ರಂಥಗಳು; ಇವುಗಳಲ್ಲಿ ಉಕ್ತವಾದ ಆರಾಧ್ಯದೇವತೆಯ ವಿಧಾನೋಕ್ತ ಜಪ ಅನುಷ್ಠಾನಾದಿಗಳಿಂದ ಆರಾಧಕನಿಗೆ ಶತ್ರುಭಯ, ರೋಗಾದಿಗಳ ಭಯ, ಇತರ ವಿಪತ್ತುಗಳಿಂದ ರಕ್ಷಣೆ ದೊರೆಯುವದು, ಇಷ್ಟಾರ್ಥ ಸಿದ್ಧಿಸುವದು, ಎಂಬ ನಂಬುಗೆ ಇದೆ ಭಾವುಕರಲ್ಲಿ. ಜೈನರಲ್ಲಿ ಈ ಬಗೆಯ ಸಾಹಿತ್ಯ 'ಅಷ್ಟೊಂದು' ಲೋಕಪ್ರಿಯವಿಲ್ಲ; ಇದ್ದರೂ ಅವು ಜ್ವಾಲಾಮಾಲಿನಿ, ಪದ್ಮಾವತಿ ಮೊದಲಾದ 'ಶಾಸನ' ದೇವತೆಗಳ ಉಪಾಸನೆಗೆ ಸಂಬಂಧಿಸಿವೆ; ವಡ್ಡಾರಾಧನೆ ಇಂಥದಲ್ಲ; ಉಪಸರ್ಗಾದಿಗಳಿಂದಾಗುವ ಯಾತನೆಯನ್ನು ಸಹಿಸಲು ಆರಾಧಕನಿಗೆ 'ಆಧ್ಯಾತ್ಮಿಕಕವಚ'ವನ್ನು ಒದಗಿಸುವದು ಈ ಕಥೆಗಳ ಉದ್ದೇಶವೆಂಬ ಅಭಿಪ್ರಾಯವೂ ಇದೆ.[೧೦]

ವೈದಿಕಧರ್ಮಪರ ಕವಚಗಳಾಗಲಿ ಜೈನಧರ್ಮಪರ ಕವಚಗಳಾಗಲಿ ಆರಾಧಕನಿಗೆ ಇಷ್ಟವಿರುವ ರಕ್ಷಣೆಯನ್ನು ನೀಡುವದು ಅವುಗಳ ಉದ್ದೇಶವೆಂಬುದನ್ನು ನೆನೆದಾಗ ಈ ಭೇದ.–ರಚನೆ ಮತ್ತು ಸಂದರ್ಭದ ಮಟ್ಟಿಗೆ ಎನ್ನಬಹುದು. ವೈದಿಕಧರ್ಮದಲ್ಲಿ ಪ್ರಾಸಾದಿಕವೆಂದು ಪ್ರಸಿದ್ಧಿ ಪಡೆದ ಅನೇಕ ಸ್ತೋತ್ರಗಳು ತಂತ್ರಶಾಸ್ತ್ರ ವಿಧಾನಗಳೊಂದಿಗೆ ಕವಚ ಅಥವಾ ಕವಚಸ್ತೋತ್ರಗಳಾಗಿ ಮಾರ್ಪಟ್ಟಿವೆ. ಕೆಲವು ಕವಚಗಳೆಂದೆ ರಚಿತವಾಗಿವೆ. ಇವು ಮಂತ್ರಗಳಷ್ಟೆ ಪ್ರಭಾವಿ ಎಂಬ ನಂಬುಗೆ ಇರುವದರಿಂದ, ಪ್ರಾರಂಭದಲ್ಲಿ ಮಂತ್ರದ ಉಲ್ಲೇಖ, ಅದರ ದೃಷ್ಟಾರನ (ಋಷಿ) ಹೆಸರು, ಛಂದಸ್ಸು, ಶಕ್ತಿ, ಕೀಲಕ ಅಂದರೆ ಬಲಸಂವರ್ಧಕ ಅಭಿಮಾನಿದೇವತೆಗಳ ಹೆಸರು, ಮಂತ್ರೋಕ್ತದೇವತೆಯ ಧ್ಯಾನ, ಮೊದಲಾದವುಗಳ ನಿರ್ದೇಶವಿರುತ್ತದೆ. ನಂತರ ಆರಾಧಕನ ಅಂಗಾಂಗಗಳಲ್ಲಿ ಮಂತ್ರೋಕ್ತದೇವತೆ ನೆಲೆಸಿ ಅವನನ್ನು ವಿವಿಧ ಆಪತ್ತುಗಳಿಂದ ರಕ್ಷಿಸಲೆಂಬ ಪ್ರಾರ್ಥನೆ ಮತ್ತು ಫಲಶ್ರುತಿಯೊಂದಿಗೆ ಸ್ತೋತ್ರ ಕೊನೆಗೊಳ್ಳುತ್ತದೆ. ಉದಾಹರಣೆಗಾಗಿ ಲಕ್ಷ್ಮೀಹೃದಯ, ನಾರಾಯಣವರ್ಮ (ಕವಚ), ಅತ್ಯಂತ ಲೋಕಪ್ರಿಯವಿರುವ ರಾಮರಕ್ಷಾ (ಇದಕ್ಕೆ ವಜ್ರಪಂಜರ, ಕವಚ ಎಂಬ ಹೆಸರುಗಳೂ ಉಂಟು), ಮೊದಲಾದವನ್ನು ನೋಡಬಹುದು

೯. ಕ.ಸಾ.ಪ. ಸಂ. ೨೪/೪, ಪು. ii.
೧೦. ಬ್ರ.ಕೋ. ಮುನ್ನುಡಿ, ಪು. ೬೮.

ವಡ್ಡಾರಾಧನ–ಕವಚದ ಉದ್ದೇಶವೇ ಬೇರೆ. ಸ್ವಯಂಪ್ರೇರಣೆಯಿಂದ ಸಲ್ಲೇಖನವ್ರತವನ್ನು ತೊಟ್ಟು, ಜಿನಧ್ಯಾನದೊಂದಿಗೆ ಪಾರ್ಥಿವ ದೇಹವನ್ನು ತ್ಯಜಿಸಿ, ಸದ್ಗತಿಯನ್ನು ಪಡೆಯಬೇಕೆಂಬ ಆರಾಧಕನಿಗೆ ವೈಧಿಕಧರ್ಮಪರ ಕವಚಸ್ತೋತ್ರಗಳ ಬಗೆಯ ದೇಹರಕ್ಷಣೆಯು ಆಗತ್ಯವಿಲ್ಲ. ಬದಲಾಗಿ ದೇಹ ತ್ಯಾಗಕ್ಕೆ ನಿಮಿತ್ತವಾಗಿರುವ ಉಪಸರ್ಗ-ಪರೀಷಹಗಳಿಂದ ಉಂಟಾಗುವ ದೈಹಿಕ ಮಾನಸಿಕ ಯಾತನೆಗಳನ್ನು ಸಮಾಧಾನದಿಂದ ಸೈರಿಸುವ ಸಾಮರ್ಥ್ಯ ಆವನಿಗೆ ಬೇಕು. ಜಿನಸ್ಮರಣೆಯೊಂದಿಗೆ ಅನ್ಯಸಹಾಯವಿಲ್ಲದೆ ಈ ಬಗೆಯ ಯಾತನೆಗಳನ್ನು ಸಹಿಸಿ ಸದ್ಗತಿಯನ್ನು ಹೊಂದಿದ ಪುರಾಣಪುರುಷರ ಕಥಾರೂಪಿ ಕವಚವು ಆರಾಧಕನಿಗೆ ತಕ್ಕ ರಕ್ಷಣೆಯನ್ನು ಒದಗಿಸುವದೆಂಬ ಭಾವನೆ ವಿಶ್ವಾಸಗಳು ಈ ಕಥೆಗಳ ಬುಡದಲ್ಲಿವೆ. ಇಲ್ಲವಾದರೆ ಭಗವತೀ ಆರಾಧನಾಕಾರ ಇದಕ್ಕೆ ಕವಚಾಧಿಕಾರ ಎಂದು ಹೆಸರಿತ್ತು ಕವಚದ ಅಂಗವಾಗಿ ಈ ೧೯ ಕಥೆಗಳನ್ನು ಉಲ್ಲೇಖಿಸಿದ ಇಂಗಿತವೇನು ? ಆಗಲೆ ಪ್ರಚಾರದಲ್ಲಿದ್ದ ಈ ಕಥೆಗಳಲ್ಲಿ ಪ್ರಾಸಾದಿಕ ಗುಣವಿದೆಂಬ ಭಾವನೆ ಉಪದೇಶಕ–ಆರಾಧಕ–ಇಬ್ಬರಲ್ಲಿಯೂ ಬೇರೂರಿರಬೇಕು; ಅಂತೆಯೆ ಭಗವತೀ ಆರಾಧನಾಕಾರ ಕವಚವೆಂದು ಗಾಥೆಗಳ ರೂಪದಲ್ಲಿ ಇವುಗಳನ್ನು ತನ್ನ ಗ್ರಂಥದಲ್ಲಿ ಅಳವಡಿಸಿಕೊಂಡಿರಬೇಕು, ಎಂದು ಭಾವಿಸುವದು ಹೆಚ್ಚು ಸೂಕ್ತವಾಗುವದು.

ವಡ್ಡಾರಾಧನಕವಚ-ಕಥೆಗಳನ್ನು ಮಹಾಭಾರತದಲ್ಲಿ ಬೃಹದಶ್ವಮುನಿಯು ಯುಧಿಷ್ಠಿರನಿಗೆ ಹೇಳಿದ 'ನಳ–ದಮಯಂತಿ' ಕಥೆಗೆ ಹೋಲಿಸಬಹುದು. ವನವಾಸದಲ್ಲಿರುವಾಗ ಯುಧಿಷ್ಠಿರ ಬೃಹದಶ್ವನೆದುರು ತನ್ನಷ್ಟು ದುರ್ದೈವಿಗಳು ಅನ್ಯರಾರೂ ಇಲ್ಲವೆಂದು ಗೋಳಿಡುವನು. ಬೃಹದಶ್ವ– "ಹೀಗೆ ತಿಳಿಯಬೇಡ; ಅನೇಕರು ನಿನಗಿಂತ ಹೆಚ್ಚು ವಿಪತ್ತುಗಳನ್ನು ಅನುಭೋಗಿಸಿ ಕೊನೆಗೆ ಸುದಿನಗಳನ್ನು ಕಂಡಿರುವರು; ನೀನಾದರೂ ಕಾಣುವಿ", ಎಂದು ಸಂತೈಸಿ, ಯುಧಿಷ್ಠಿರನಂತೆಯೆ ಜೂಜಿನಲ್ಲಿ ಸರ್ವಸ್ವವನ್ನು ಕಳಕೊಂಡು, ಅರಣ್ಯದಲ್ಲಿ ಹೆಂಡತಿಯಿಂದಗಲಿ, ಅನೇಕ ಬಗೆಯ ಕಷ್ಟಕೋಟಲೆಗಳನ್ನು ಎದುರಿಸಿ, ಕೊನೆಗೆ ಸುದಿನಗಳನ್ನು ಕಂಡ ನಳ ಮತ್ತು ಆತನ ಹೆಂಡತಿ ದಮಯಂತಿಯ ಕಥೆಯನ್ನು ಹೇಳಿ,–'ನೀನಾದರೊ ಹೆಂಡತಿ, ತಮ್ಮಂದಿರೊಡನೆ ಇರುವಿ; ಕರೆದಾಗ ಬರುವ ಶ್ರೀಕೃಷ್ಣ ನಿನ್ನ ನೆರವಿಗಿರುವನು', ಎಂದು ಯುಧಿಷ್ಠಿರನಲ್ಲಿ ಆಶೆವಿಶ್ವಾಸಗಳನ್ನು ಹುಟ್ಟಿಸುವನು. ಜೊತೆಗೆ ತಾನು ವಿವರಿಸಿದ ಕಥೆಯನ್ನು ಭಕ್ತಿವಿಶ್ವಾಸಗಳಿಂದ ಕೇಳಿದವರಿಗೆ ಕಷ್ಟಗಳು ಅಳಿದು ಪುತ್ರ, ಪೌತ್ರ, ಅನೇಕ ಬಗೆಯ ಸುಖಸಂಪತ್ತು ಲಭಿಸುವದೆಂದು ಅದರ ಪ್ರಾಸಾದಿಕ ಗುಣವನ್ನು ನಿರ್ದೇಶಿಸುವನು. ಇದಾದರೂ ಬೃಹದಶ್ವನು ಯುಧಿಷ್ಠಿರನಿಗೆ ತೊಡಿಸಿದ ಒಂದು ಬಗೆಯ ಕವಚವಲ್ಲದೆ ಬೇರೊಂದಾಗದು.

ವಡ್ಡಾರಾಧನೆಯ ಕವಚ ಇಂಥದು. ಕವಚವು ಯೋಧನನ್ನು ಶತ್ರುಗಳಿಂದ ರಕ್ಷಿಸುವಂತೆ, ಕಥಾರೂಪಿ ಕವಚವು ಕರ್ಮರೂಪಿ ಶತ್ರುವಿನೊಡನೆ ಹೋರಾಡುತ್ತಿರುವ ಆರಾಧಕನನ್ನು ರಕ್ಷಿಸುವದೆಂಬ ಪೀಠಿಕೆಯಿಂದ ಪ್ರಾರಂಭವಾಗಿ—'ಪುರಾಣಪ್ರಸಿದ್ಧರಿರುವ ಈ ಕಥಾಪುರುಷರು ಜಿನಧ್ಯಾನಮಗ್ನರಾಗಿ, ಅನ್ಯರ ಸಹಾಯವಿಲ್ಲದೆ, ಉಪಸರ್ಗ ಪರೀಷಹಗಳನ್ನು ಜಯಿಸಿ, ಆತ್ಮಕಲ್ಯಾಣವನ್ನು ಸಾಧಿಸಿದರು; ನಿನಗಾದರೊ ಇಲ್ಲಿ ಜ್ಞಾನಿಗಳಾದ ಆಚಾರ್ಯರು ಧೈರ್ಯಕೊಡುತ್ತಿರುವರು; ಎದೆಗೆಡಬೇಡ; ಆರಾಧನೆಯಿಂದ ಹಿಂಜರಿಯಬೇಡ; ಜಿನಭಗವಾನನ ವಚನಗಳನ್ನು ಧ್ಯಾನಿಸು; ಅವು ಅಮೃತಸಮಾನವಿವೆ; ಮೋಕ್ಷಪ್ರದವಿವೆ', ಎಂಬ ಉಪದೇಶದೊಡನೆ ಕೊನೆಗೊಳ್ಳುತ್ತದೆ, ಭಗವತೀ ಆರಾಧನೆಯಲ್ಲಿಯ ಕವಚನಿರೂಪಣೆ.[೧೧]

ವಡ್ಡಾರಾಧನೆಯ ಈ ಕಥೆಗಳಿಗೆ ಕವಚವೆಂದಿರುವದನ್ನು ಈ ದೃಷ್ಟಿಯಿಂದ ನೋಡಬಹುದಲ್ಲದೆ, ಜೈನಸಾಹಿತ್ಯದಲ್ಲಿಯ ಕವಚಗ್ರಂಥಗಳ ಸ್ವರೂಪ ತಿಳಿಯದು, ಸ್ವರೂಪದಲ್ಲಿ ವಡ್ಡಾರಾಧನೆಯ ಕವಚ ವೈದಿಕಧರ್ಮಪರ ಕವಚಗಳಿಂದ ಭಿನ್ನವಿದೆ, ಇವೇ ಮೊದಲಾದ ಕಾರಣಗಳಿಂದ ಸರಿಯಾಗಿ ಹೊಂದಿಕೊಳ್ಳುವ, ಪ್ರಾಚೀನತಮ ಪ್ರತಿಯಲ್ಲಿರುವ 'ವೊಡ್ಡಾರಾಧನೆಯ ಕವಚವು' ಪಾಠವನ್ನು ತ್ಯಜಿಸುವದು ಯುಕ್ತವಾಗದು.

ಆಕರಗಳ ಸಮಸ್ಯೆ—ವಡ್ಡಾರಾಧನೆಗೆ ಹರಿಷೇಣನ ಬೃಹತ್ ಕಥಾಕೋಶ ಆಕರವಿರಬೇಕೆಂಬ ಅಭಿಪ್ರಾಯವಿದೆ.[೧೨] ಇದು ಸರಿಯೆನಿಸದು. ಕಥಾಶರೀರ, ಕಥಾಪುರುಷರ ಹೆಸರು, ಇತ್ಯಾದಿ ಒಂದೇ ಆಗಿದ್ದರೂ ವಡ್ಡಾರಾಧನೆಯ ಕಥೆಗಳು ಹೆಚ್ಚು ವಿಸ್ತಾರವಾಗಿವೆ. ಎರಡೂ ಗ್ರಂಥಗಳನ್ನು ಎದುರಿಟ್ಟುಕೊಂಡು ನೋಡಿದಾಗ ಇನ್ನೂ ಹಲವು ವ್ಯತ್ಯಾಸಗಳು ಕಂಡುಬರುವವು. ಅಲ್ಲದೆ ಲಭ್ಯವಿರುವ ಅಂಶ-ಆಧಾರಗಳನ್ನು ಗಮನಿಸಿ ಕನ್ನಡ ವಿದ್ವಾಂಸರು ವಡ್ಡಾರಾಧನೆಯ ಕಾಲವನ್ನು ಕ್ರಿ.ಸು. ೯೨೦ ಎಂದು ಊಹಿಸಿರುವರು.[೧೩] ಹರಿಷೇಣನ ಗ್ರಂಥ ಹುಟ್ಟಿರುವದು ೯೩೨ ರಲ್ಲಿ. ಒಂದೊಮ್ಮೆ ವಡ್ಡಾರಾಧನೆಗೆ ಹರಿಷೇಣನ ಈ ಗ್ರಂಥ ಆಕರವಾಗಿದ್ದರೆ ಅದರ ಕಾಲ ಕ್ರಿ. ೯೩೨ ನಂತರ ಎಂದು ಭಾವಿಸಬೇಕಾಗುವದು. ಬಹುಶಃ ಎರಡಕ್ಕೂ ಬೇರೊಂದು ಭಗವತೀ ಆರಾಧನೆಯ ಕಥೆಗಳನ್ನು ಒಳಗೊಂಡಿರುವ ಗ್ರಂಥವು ಆಕರವಿರಬೇಕೆಂಬ ಅಭಿಪ್ರಾಯವು

---

೧೧. ಈ ಉಪದೇಶಕ್ಕೆ ಸಂಬಂಧಿಸಿದ ಭಗವತೀ ಆರಾಧನೆಯಲ್ಲಿಯ ಗಾಥೆಗಳು ವಡ್ಡಾರಾಧನೆಯ 'ಫ' ಪ್ರತಿಯಲ್ಲಿದ್ದು ಗ್ರಂಥದ ಕೊನೆಗೆ ಬಂದಿವೆ. (ವಡ್ಡಾ. ಪು. ೧೯೪).

೧೨. ಸಂ.ಕ.ಸಾ.ಚ. ಪು. ೧೫.

೧೩. ಕ.ಸಾ.ಚ. ಪು. ೬೭.

ಸಮಂಜಸವೆನಿಸುವದು.[೧೪] ಶ್ರೀಚಂದ್ರನ ಕಥಾಕೋಶ ಹರಿಷೇಣನ ಕಥಾಕೋಶ ಮತ್ತು ಇತರ ಕೆಲವು ಆಕರಗ್ರಂಥಗಳನ್ನು ಆಧರಿಸಿದೆಂಬ ಅಭಿಪ್ರಾಯವಿದೆ.[೧೫] ಹೀಗಿದ್ದರೆ ಆತನ ಇತರ ಆಕರಗಳಲ್ಲಿ ಒಂದು ವಡ್ಡಾರಾಧನೆಗೂ ಆಕರವಿರ-ಬೇಕೆಂದು ತೋರುತ್ತದೆ. ವಡ್ಡಾರಾಧನೆಯ ಕಥೆಗಳಿಗೂ ಶ್ರೀಚಂದ್ರನ ಕಥೆಗಳಿಗೂ ಭಗವತೀ ಆರಾಧನೆಯ ಗಾಥೆಗಳು ಸೂಚನಾಪದ್ಯಗಳಾಗಿ ಬಂದಿರುವದು ಈ ಊಹೆಗೆ ಪೋಷಕವಿದೆ. ಇದಿನ್ನೊಂದು ಪೋಷಕ ಅಂಶ— ಚಾಣಕ್ಯಮುನಿಯ ಕಥೆಯಲ್ಲಿ, ನಂದವಂಶದ ನಾಶಕ್ಕಾಗಿ ಪಣತೊಟ್ಟ ಸುಬಂಧು ಅದಕ್ಕೆ ತಕ್ಕ ವ್ಯಕ್ತಿಯನ್ನು ಕಂಡುಹಿಡಿಯಲು ಪಂಡಿತರ ಸಭಾಗೃಹದಲ್ಲಿ ವಡ್ಡಾರಾಧನೆಯ ಮೇರೆಗೆ—

> ಶಕ್ಯಮೇಕಸಹಸ್ರೇಣ ನೀತಿಶಾಸ್ತ್ರವಿಶಾರದಾಃ ।
> ವ್ಯವಸಾಯದ್ವಿತೀಯೇನ ಕೃತ್ಸ್ನಾ ಜೇತುಂ ವಸುಂಧರಾಂ ॥

—ಶ್ಲೋಕವನ್ನು ಬರೆಯಿಸುವನು. ಇದನ್ನೋದಿದ ಚಾಣಕ್ಯ ನೀತಿಶಾಸ್ತ್ರಕ್ಕೆ ಸಮ್ಮತವಿರದ ಈ ಶ್ಲೋಕದಲ್ಲಿಯ 'ಶಕ್ಯಮೇಕಸಹಸ್ರೇಣ' ಪದಗಳನ್ನು ಅಳಿಸಿ ಆ ಸ್ಥಳದಲ್ಲಿ 'ಶಕ್ಯಮೇಕಶರೀರೇಣ' ಪದಗಳನ್ನು ಸೇರಿಸುವನು. ಶ್ರೀಚಂದ್ರನ ಕಥಾಕೋಶದಲ್ಲಿ ಇವೇ ಶ್ಲೋಕಗಳಿವೆ.[೧೬] ಹರಿಷೇಣನ ಗ್ರಂಥದಲ್ಲಿ ಇವುಗಳ ಬದಲು—

> ನರೇಣೈಕಶರೀರೇಣ ನಯಶಾಸ್ತ್ರಯುತೇನ ಚ ।
> ವ್ಯವಸಾಯೇನ ಯುಕ್ತೇನ ಜೇತುಂ ಶಕ್ಯಾ ವಸುಂಧರಾ ॥[೧೭]

—ಶ್ಲೋಕವಿದೆ. ಒಂದೊಮ್ಮೆ ಹರಿಷೇಣನ ಕೃತಿಗೂ ವಡ್ಡಾರಾಧನೆಗೂ ಇದ್ದಿರಬಹುದಾದ ಆಕರ ಒಂದೇ ಆಗಿದ್ದರೆ ವಡ್ಡಾರಾಧನೆಯಲ್ಲೂ ಇದೇ ಶ್ಲೋಕವಿರುತ್ತಿತ್ತು.

ಗ್ರಂಥಕರ್ತೃತ್ವ—ವಡ್ಡಾರಾಧನೆಯ ಕರ್ತ ಶಿವಕೋಟ್ಯಾಚಾರ್ಯನೆಂದು ಭಾವಿಸಲಾಗಿದೆ. ಇವನಾರೆಂ ತಿಳಿಯದು. ಭಗವತೀ ಆರಾಧನೆಯ ಕರ್ತ ಪಾಣಿ-ತಲ-ಭೋಜಿ (ಬೊಗಸೆಯಲ್ಲಿ ಹಾಕಿಸಿಕೊಂಡು ಉಣ್ಣುವವ) ಶಿವಾರ್ಯ-ನೆಂದಿದೆ. ಆದಿಪುರಾಣಕಾರ ಜಿನಸೇನ—

---

೧೪. ಕ.ಸಾ.ಚ. ಪು. ೭೭ ; ಬೃ.ಕೋ. ಮುನ್ನುಡಿ, ಪು. ೬೬.
೧೫. ಬೃ.ಕೋ. ಮುನ್ನುಡಿ, ಪು. ೯೨.
೧೬. ವಡ್ಡಾ., ಪು. ೧೮೪ ; ಬೃ.ಕೋ. ಟಿಪ್ಪಣಿ, ಪು. ೩೯೩.
೧೭. ಬೃ.ಕೋ. ಪು. ೩೩೭.

ಶೀತೀಭೂತಂ ಜಗದ್ಯಸ್ಯ ವಾಚಾಽಽರಾಧ್ಯಚತುಷ್ಟಯಂ ।
ಮೋಕ್ಷಮಾರ್ಗಂ ಸಪಾಯಾನ್ನಃ ಶಿವಕೋಟಿಮುನೀಶ್ವರಃ ॥

—ಮೋಕ್ಷದಾಯಕ ಚತುರ್ವಿಧ (ದರ್ಶನ, ಜ್ಞಾನ, ಚರಿತ್ರ, ತಪ) ಆರಾಧನೆಯಿಂದ ಲೋಕಕ್ಕೆ ತಂಪನ್ನು ತಂದ ಶಿವಕೋಟಿಯು ನಮ್ಮನ್ನು ರಕ್ಷಿಸಲಿ, ಎಂದು ಸ್ತುತಿಸಿರುವದರಿಂದ,[೧೮] ಈತ ಶಿವಕೋಟಿಯೆಂದು ಸಹ ಪ್ರಸಿದ್ಧನಿರುವದು ವ್ಯಕ್ತವಾಗುವದು. ದೇವಚಂದ್ರನ ರಾಜಾವಳಿ ಕಥೆಯಲ್ಲಿ ಮತ್ತು ಇತರತ್ರ ಸಮಂತಭದ್ರನ ಶಿಷ್ಯನೆಂದು ಒಬ್ಬ ಶಿವಕೋಟಿಯು ಉಲ್ಲೇಖವಿದೆ.[೧೯] ಪ್ರಭಾಚಂದ್ರ ತನ್ನ ಕಥಾಕೋಶದಲ್ಲಿ ಈತನೇ ಭಗವತೀ ಆರಾಧನಾಕಾರನೆಂದಿರುವನು.[೨೦] ಇದು ಕೆಲವರಿಗೆ ಒಪ್ಪಿತವಿಲ್ಲ. ಆದರೆ ಭಗವತೀ ಆರಾಧನಾಕಾರ ಶಿವಾರ್ಯ, ಶಿವಕೋಟಿಯೆಂದೂ ಆತ ಪ್ರಸಿದ್ಧನಿದ್ದ; ಜಿನಸೇನ ಆತನನ್ನು ಸ್ತುತಿಸಿರುವದರಿಂದ ಜಿನಸೇನನಿಗಿಂತ ಪೂರ್ವಿಕ ಅಂದರೆ ಕ್ರಿ. ೭೬೩–೮೪೩ಕ್ಕಿಂತ ಮೊದಲಿನವ ಎಂಬಲ್ಲಿ ಭಿನ್ನಾಭಿಪ್ರಾಯವಿಲ್ಲ.

ವಡ್ಡಾರಾಧನೆಯ 'ಈ ಪೇಳ್ದ ಪತ್ತೊಂಬತ್ತು ಕಥೆಗಳಂ ಶಿವಕೋಟ್ಯಾಚಾರರ್ ಪೇಳ್ದ ವಡ್ಡಾರಾಧನೆಯ ಕವಚವು'

—ಸಮಾಪ್ತಿವಾಕ್ಯವನ್ನು 'ಈ ಪೇಳ್ದ ಪತ್ತೊಂಬತ್ತು ಕಥೆಗಳಂ' ಮತ್ತು 'ಶಿವಕೋಟ್ಯಾಚಾರರ್ ಪೇಳ್ದ ವಡ್ಡಾರಾಧನೆಯ ಕವಚವು' ಎಂದು ಎರಡು ವಾಕ್ಯಗಳಲ್ಲಿ ವಿಂಗಡಿಸಿ, ಕಥೆಗಳನ್ನು ಹೇಳಿದವ ಒಬ್ಬ, ಆತನಾರೊ ತಿಳಿಯದು, ವಡ್ಡಾರಾಧನೆಯ (ಭಗವತೀ ಆರಾಧನೆಯ) ಕವಚವನ್ನು ಹೇಳಿದವ ಶಿವಕೋಟಿ; ಇಬ್ಬರೂ ಭಿನ್ನ ವ್ಯಕ್ತಿಗಳು, ಎಂಬ ಅಭಿಪ್ರಾಯವಿದೆ.[೨೧] ವಡ್ಡಾರಾಧನೆಯ ಒಂದು ಹಸ್ತಪ್ರತಿಯಲ್ಲಿ ಶಿವಕೋಟಿ ಎಂಬುದನ್ನು ರೇವಾಕೋಟಿ ಎಂದು ಸಹ ಓದಬಹುದಾಗಿದೆ. ಹೀಗೆ ಓದಿರುವದೂ ಉಂಟು. ಆದರೆ ಇತರ ಹಸ್ತಪ್ರತಿಗಳಲ್ಲಿ ಶಿವಕೋಟಿಯೆಂದು ಸ್ಪಷ್ಟವಾಗಿರುವದರಿಂದ ಈ ಚರ್ಚೆಯನ್ನು ಬೆಳಸುವ ಆಗತ್ಯವಿಲ್ಲ. ಸಮಾಪ್ತಿವಾಕ್ಯವನ್ನು 'ಇಲ್ಲಿ ಹೇಳಿದ ೧೯ ಕಥೆಗಳು ಶಿವಕೋಟ್ಯಾಚಾರ್ಯರು ಹೇಳಿದ ವಡ್ಡಾರಾಧನೆಯ ಕವಚರೂಪವಾಗಿವೆ', ಎಂದು ಅರ್ಥವಿಸಿ, ಭಗವತೀ ಆರಾಧನಾಕಾರ ಶಿವಕೋಟಿ, ಸಮಂತಭದ್ರನ ಶಿಷ್ಯ ಶಿವಕೋಟಿ —ಇವರಿಂದ ಭಿನ್ನನಿರುವ ಮೂರನೆಯ ಶಿವಕೋಟಿಯನ್ನು ಕಲ್ಪಿಸಿ, ಬೇರೆ ಆಧಾರಗಳು ದೊರೆವನಕ ಈ ಮೂರನೆಯವನೇ ವಡ್ಡಾರಾಧನೆಯ ಕರ್ತನೆಂದು

---

೧೮. ಮ. ಪು. ೧–೪೯.

೧೯. ಕ.ಚ. ಸಂ. ೧, ಪು. ೨.

೨೦. ಬೃ.ಕೋ. ಮುನ್ನುಡಿ, ಪು. ೫೩.

೨೧. ಬೃ.ಕೋ. ಮುನ್ನುಡಿ, ಪು. ೬೯.

ಗ್ರಹಿಸಬಹುದೆಂಬ ಸೂಚನೆ ಇದೆ.[೨೧] ಇದಾದರೂ ಸರಿಯೆನಿಸದು. ವಡ್ಡಾರಾಧನೆ ಸಮಗ್ರ ಭಗವತೀ ಆರಾಧನೆಗಿರುವ ಇನ್ನೊಂದು ಹೆಸರು; ಆ ಗ್ರಂಥ ಮತ್ತು ಅದರಲ್ಲಿರುವ ಕವಚಗಾಥೆಗಳ ಕರ್ತ ಶಿವಕೋಟಿ; ಆತ ಸಮಂತಭದ್ರನ ಶಿಷ್ಯ-ನಿರಬಹುದು ಇರಲಿಕ್ಕಿಲ್ಲ; ಸೂಚನಾರೂಪದಲ್ಲಿರುವ ಆತನ ಕವಚಗಾಥೆಗಳನ್ನು ಅನ್ಯನೊಬ್ಬನು ಕನ್ನಡದಲ್ಲಿ ವಿಸ್ತರಿಸಿ, ಹರಿಷೇಣಾದಿಗಳ ಕಥಾಕೋಶಗಳ ಮಾದರಿಯಲ್ಲಿ, ಪೂರ್ಣ ಕಥೆಗಳ ರೂಪದಲ್ಲಿ ನಿರೂಪಿಸಿ ಅದಕ್ಕೆ 'ವಡ್ಡಾರಾಧನೆಯ ಕವಚ' ಎಂದು ಹೆಸರು ಕೊಟ್ಟಿರಬೇಕೆಂಬ ಹಿನ್ನೆಲೆಯೊಂದಿಗೆ ಈ ಸಮಾಪ್ತಿ-ವಾಕ್ಯವನ್ನು ಅರ್ಥವಿಸುವದು ಸೂಕ್ತ ಮತ್ತು ಸಮಂಜಸ ಮಾರ್ಗವೆನಿಸುವದು. ಇಲ್ಲವಾದರೆ ಅದರಲ್ಲಿ 'ಈ ಪೇಳ್ದ ಪತ್ತೊಂಬತ್ತು ಕಥೆಗಳಂ', 'ಶಿವಕೋಟ್ಯಾ-ಚಾರ್ಯರ್ ಪೇಳ್ದ ವಡ್ಡಾರಾಧನೆಯ ಕವಚವು' ಎಂದು ಎರಡು ಸಲ 'ಪೇಳ್ದ' ಪದವನ್ನು ಪ್ರಯೋಗಿಸಿರುವ ಉದ್ದೇಶ ತಿಳಿಯದಾಗುವದು. ಒಂದೊಮ್ಮೆ ಮೇಲ್ಕಾಣಿಸಿದ ಸೂಚನೆಯ ಮೇರೆಗೆ ಮೂರನೆಯ ಶಿವಕೋಟಿಯೆ ವಡ್ಡಾ-ರಾಧನೆಯ ಕರ್ತನಿದ್ದರೆ ಸಮಾಪ್ತಿವಾಕ್ಯ 'ಈ ಪತ್ತೊಂಬತ್ತು ಕಥೆಗಳಂ ಶಿವಕೋಟ್ಯಾಚಾರ್ಯರ್ ಪೇಳ್ದ ವಡ್ಡಾರಾಧನೆಯ ಕವಚವು', ಎಂದಿರುತ್ತಿತ್ತು.

ರಚನಾಕಾಲ— ಶಾಂತಿನಾಥನ ಸುಕುಮಾರಚರಿತ್ರೆಯಲ್ಲಿ (ಕ್ರಿ. ೧೦೭೦) ವಡ್ಡಾರಾಧನೆಯಿಂದ ಎತ್ತಿಕೊಂಡ ಭಾಗಗಳಿರುವದರಿಂದ ವಡ್ಡಾರಾಧನೆಯು ಇದಕ್ಕಿಂತ ಮೊದಲು ರಚಿತವಾಗಿರುವದು ಸ್ಪಷ್ಟವಿದೆ. ಕೆಳಗಿನ ಗಡುವನ್ನು ಕ್ರಿ. ೬ನೆಯ ಶ.ಕ್ಕೆ ಎಳೆದಿರುವದುಂಟು. ಜಿನಸೇನ-ಗುಣಭದ್ರರ ಮಹಾಪುರಾಣ (ಆದಿ, ಉತ್ತರ)ದಲ್ಲಿ ಗುಣಭದ್ರಕೃತವಿರುವ 'ಆದೌ ಜನ್ಮಜರಾರೋಗಾ'–ಶ್ಲೋಕ ವಡ್ಡಾರಾಧನೆಯಲ್ಲಿ ಉದಾಹೃತವಾಗಿದೆ.[೨೨] ಗುಣಭದ್ರನು ಮಹಾಪುರಾಣ-ದಲ್ಲಿಯ ತನ್ನ ಭಾಗವನ್ನು ಕ್ರಿ. ೮೯೮ರಲ್ಲಿ ಮುಗಿಸಿದನು. ಆದ್ದರಿಂದ ವಡ್ಡಾ-ರಾಧನೆಯ ಕೆಳಗಣ ಗಡುವನ್ನು ಇದಕ್ಕೂ ಕೆಳಗೆ ಸರಿಸುವಂತಿಲ್ಲ. ಈ ಅಂಶವನ್ನೂ ವಡ್ಡಾರಾಧನೆಯಲ್ಲಿ ಕಂಡುಬರುವ ಪ್ರಾಚೀನ ಶಬ್ದಗಳನ್ನೂ, ವ್ಯಾಕರಣ ಪ್ರಕ್ರಿಯೆಗಳನ್ನೂ, ಶೈಲಿಯನ್ನೂ ಗಮನಿಸಿ ಇದರ ಕಾಲವನ್ನು ಗುಣಭದ್ರನ ಸಮೀಪ ಅಂದರೆ ಕ್ರಿ. ೯೨೦ ಕ್ಕೆ ತಂದು ನಿಲ್ಲಿಸಲಾಗಿದೆ.[೨೩]

ಗುಣಭದ್ರನ ಉಪರೋಕ್ತಶ್ಲೋಕವಲ್ಲದೆ 'ಭೋಗಸ್ತೃಷ್ಣಾಗ್ನಿಸಂವೃದ್ಧ್ಯೈ' ಎಂಬ ಇನ್ನೂ ಒಂದು ಶ್ಲೋಕ ವಡ್ಡಾರಾಧನೆಯಲ್ಲಿ ಉದಾಹೃತವಾಗಿದೆ.[೨೪]

---

೨೧. ಕ.ಸಾ.ಚ. ಪು. ೭೧.

೨೨. ಮ. ಪು. ೪೬–೧೯೭; ವಡ್ಡಾ. ಪು. ೬೮.

೨೩. ಕ.ಸಾ.ಚ. ಪು. ೬೪–೭೦.

೨೪. ಮ. ಪು. ೪೫–೨೦೩ ; ವಡ್ಡಾ. ಪು. ೧೧೩.

ಆದರೆ ಗುಣಭದ್ರ ಪ್ರಾಚೀನರಿಂದ ಆಗಾಗ ಶ್ಲೋಕಗಳನ್ನು ಅನುವಾದಿಸುತ್ತಿದ್ದ; ಕಥೆಗೆ ನಿಕಟ ಸಂಬಂಧವಿರದ ಶ್ಲೋಕಾದಿಗಳನ್ನು ಅನ್ಯರು ಸಹ ಹಿಂದಿನಿಂದ ಸೇರಿಸಿರಬಹುದಾಗಿದೆ, ಎಂಬ ಆಕ್ಷೇಪಣೆಗಳಿವೆ. ಗುಣಭದ್ರನ ಈ ಶ್ಲೋಕಗಳು ಸ್ವಕೃತವೊ ಅನುವಾದಿತವೊ ಎಂಬುದು ಅವನ ಕೃತಿಯ ವಿಮರ್ಶೆಗೆ ಸಂಬಂಧಿಸಿದೆ. ಇಲ್ಲಿ ಗಮನಿಸಬೇಕಾದುದು ಅವು ವ್ಯತ್ಯಾಸವಿಲ್ಲದೆ ಆತನ ಗ್ರಂಥದಲ್ಲಿರುವಂತೆಯೆ ವಡ್ಡಾರಾಧನೆಯಲ್ಲಿ ಉದಾಹೃತವಾಗಿವೆಂಬುದು. ಯಾವುದೊಂದು ಗ್ರಂಥದಲ್ಲಿ ಅನ್ಯಗ್ರಂಥಗಳಿಂದ ಉದಾಹರಿಸಿದ ಶ್ಲೋಕ ಮೊದಲಾದವು ಕಥಾಸಂದರ್ಭಕ್ಕೆ ಎಷ್ಟರಮಟ್ಟಿಗೆ ಹೊಂದಿಕೊಳ್ಳುವವೆಂಬುದು ಗ್ರಂಥಕಾರನ ವಿವೇಕಕ್ಕೆ ಸೇರಿದೆ. ಇಲ್ಲಿ ಕೆಲವು ಸಲ ಆತ ತಪ್ಪಬಹುದು. ಹಿಂದಿನವರು ಸಹ ಅವುಗಳನ್ನು ಸೇರಿಸಿರಬಹುದು. ವಡ್ಡಾರಾಧನೆಯ ಮಟ್ಟಿಗೆ ಎರಡೂ ಸಂಭವನೀಯ. ಇಂಥ ಸಂದರ್ಭಗಳಲ್ಲಿ ಗ್ರಂಥಕಾರನಿಂದಲೇ ಅವು ಸೇರಿಸಲ್ಪಟ್ಟಿರಬೇಕೆಂದು ಭಾವಿಸಲು ಗ್ರಂಥದ ಬೇರೆಬೇರೆ ಹಸ್ತಪ್ರತಿಗಳಲ್ಲಿ ಅವು ಏಕರೂಪದಲ್ಲಿ, ಅದೇ ಸ್ಥಳದಲ್ಲಿ, ಅದೇ ಸಂದರ್ಭದಲ್ಲಿ ಬಂದಿವೆಂಬುದು ಒಂದು ಸ್ವೀಕಾರಾರ್ಹ ಮಾನದಂಡ.[೨೬] ವಡ್ಡಾರಾಧನೆಯಲ್ಲಿ ಉದಾಹೃತವಾದ ಗುಣಭದ್ರನ ಶ್ಲೋಕಗಳಿಗೆ ಈ ಮಾನದಂಡ ೧೦೦% ಅನ್ವಯಿಸುವದರಿಂದ ಗ್ರಂಥಕಾರನೇ ಅವುಗಳನ್ನು ಸೇರಿಸಿರುವನೆಂದು ಭಾವಿಸಬಹುದಾಗಿದೆ.

ಇನ್ನೊಂದು ವಿಚಾರ. ವಡ್ಡಾರಾಧನೆಯಲ್ಲಿ ಧರ್ಮಘೋಷನ ಕಥೆಯಲ್ಲಿ ಧರ್ಮಘೋಷ ಮತ್ತು ಆತನ ತಮ್ಮ ಧರ್ಮಕೀರ್ತಿ ಗುಣೋತ್ತಮ ಭಟಾರರಲ್ಲಿ 'ಪ್ರಥಮಾನುಯೋಗ, ಚರಣಾನುಯೋಗ, ಕರಣಾನುಯೋಗ, ದ್ರವ್ಯಾನುಯೋಗಂಗಳಂ ಕಲ್ತು' ಶಾಸ್ತ್ರಪಾರಂಗತರಾದರೆಂಬ ಮಾತಿದೆ. ಸುಕುಮಾರ ಸ್ವಾಮಿಯ ಕಥೆಯಲ್ಲಿಯೂ ಇವುಗಳ ಉಲ್ಲೇಖವಿದೆ.[೨೭] ಈ ನಾಲ್ಕು ಅನುಯೋಗಗಳಲ್ಲಿ ಪ್ರಥಮಾನುಯೋಗವು ತ್ರಿಷಷ್ಟಿಶಲಾಕಾಪುರುಷರ ಚರಿತ್ರೆಗಳಿರುವ ರವಿಷೇಣನ ಪದ್ಮಪುರಾಣ (ಕ್ರಿ. ೬೭೮), ಜಿನಸೇನನ ಹರಿವಂಶಪುರಾಣ (ಕ್ರಿ. ೭೮೩), ಜಿನಸೇನ-ಗುಣಭದ್ರರ ಮಹಾಪುರಾಣ (ಕ್ರಿ. ೮೯೮)ಗಳ ಅಧ್ಯಯನಕ್ಕೆ ಸಂಬಂಧಿಸಿದೆ. ದಿಗಂಬರ ಜೈನಸಂಪ್ರದಾಯದ ಆಗಮಗ್ರಂಥಗಳೊಡನೆ ಅನುಯೋಗ ಗ್ರಂಥಗಳನ್ನು ಹಿಂದಿನಿಂದ ಸೇರಿಸಿಕೊಳ್ಳಲಾಗಿದೆಂಬ ಅಭಿಪ್ರಾಯವಿದೆ.[೨೮] ಈ ಅಂಶವಾದರೂ ವಡ್ಡಾರಾಧನೆಯು ಜಿನಸೇನ-ಗುಣಭದ್ರರ ಮಹಾಪುರಾಣಕ್ಕಿಂತ ಮೊದಲಿನದಾಗದು ಎನ್ನಲು ಪೂರಕವಾಗಿದೆ. ಆದ್ದರಿಂದ ವಡ್ಡಾರಾಧನೆಯ ಕಾಲವನ್ನು ಗುಣಭದ್ರನ ನಂತರ, ಶೈಲಿಯ ದೃಷ್ಟಿ

---

೨೬. ಬೃ.ಕೋ. ಮುನ್ನುಡಿ, ಪು. ೭೦.

೨೭. ವಡ್ಡಾ., ಪು. ೧೦೩, ೬.

೨೮. ಹಿ.ಇಂ.ಲಿ., ಪು. ೪೭೪.

ಯಿಂದ ಆವನ ಸಮೀಪವರ್ತಿಯಾಗಿ ಅಂದರೆ ಕ್ರಿ. ೯೨೦ ಎಂದಿರುವದು ಸ್ವೀಕಾರಾರ್ಹ ಊಹೆ ಎನ್ನಬಹುದು.

ಇದಿಷ್ಟು ವಡ್ಡಾರಾಧನೆಯ ವಿಚಾರ. ಕನ್ನಡ ಸಾಹಿತ್ಯಚರಿತ್ರೆಯಲ್ಲಿ ಇದೊಂದು ವೈಶಿಷ್ಟ್ಯಪೂರ್ಣ ಕೃತಿಯೆಂಬುದು ಯಥೋಚಿತವಿದ್ದರೂ ಇದರ ಕರ್ತ ಶಿವಕೋಟಿ ಎಂಬುದರ ಮತ್ತು ಸಮಾಪ್ತಿವಾಕ್ಯದಲ್ಲಿ 'ವಡ್ಡಾರಾಧನೆ' ಎಂದಿಷ್ಟೇ ಇರಿಸಿ ಇದನ್ನೇ ಗ್ರಂಥದ ಹೆಸರಾಗಿ ಸ್ವೀಕರಿಸಿರುವದರ ಸಾಮಂಜಸ್ಯತೆಯ ಪುನರ್ವಿಚಾರ ಆಗತ್ಯವೆನಿಸುವದು.

★ ಭೀಮರಾವ ಚಿಟಗುಪ್ಪಿ

ಸಹಾಯಕ ಸಾಹಿತ್ಯ

	ಸಂಕ್ಷಿಪ್ತ ನಿರ್ದೇಶ
(೧) ವಡ್ಡಾರಾಧನೆ—ಶಿವಕೋಟ್ಯಾಚಾರ್ಯವಿರಚಿತ, ಸಂ. ಡಿ. ಎಲ್. ನರಸಿಂಹಾಚಾರ್, ಶಾರದಾ ಮಂದಿರ, ಮೈಸೂರು, ೧೯೫೫.	ವಡ್ಡಾ.
(೨) ಭಗವತೀ ಆರಾಧನಾ—ಶಿವಾರ್ಯವಿರಚಿತ, —ಮುನಿ ಶ್ರೀ ಅನಂತಕೀರ್ತಿ ದಿಗಂಬರ ಜೈನ ಗ್ರಂಥಮಾಲಾ, ಮುಂಬಯಿ.	ಭ.ಆ.
(೩) ಬೃಹತ್ ಕಥಾಕೋಶ—ಹರಿಷೇಣಾಚಾರ್ಯವಿರಚಿತ, ಸಂ. ಎ. ಎನ್. ಉಪಾಧ್ಯೆ, ಸಿಂಘಿ ಜೈನ ಗ್ರಂಥಮಾಲಾ, ಮುಂಬಯಿ, ೧೯೪೩.	ಬೃ.ಕೋ.
(೪) ಮಹಾಪುರಾಣ, ಭಾಗ-೧, ೨-ಜಿನಸೇನಗುಣಭದ್ರಕೃತ, ಸಂ. ಪನ್ನಾಲಾಲ ಜೈನ, ಭಾರತೀಯ ಜ್ಞಾನಪೀಠ, ಕಾಶೀ, ೧೯೫೧.	ಮ.ಪು.
(೫) ಕರ್ಣಾಟಕ ಕವಿಚರಿತೆ— ಆರ್. ನರಸಿಂಹಚಾರ, ಸಂ. ೧-೨.	ಕ.ಚ.
(೬) ಕನ್ನಡ ಸಾಹಿತ್ಯ ಚರಿತ್ರೆ— ರಂ. ಶ್ರೀ. ಮುಗಳಿ, ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೬೦.	ಕ.ಸಾ.ಚ.

(೭) ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ—
ಎಂ. ಮರಿಯಪ್ಪ ಭಟ್ಟ, ಭಾರತೀ ಪ್ರಕಾಶನ, ಮೈಸೂರು, ೧೯೬೦. ಸಂ.ಕ.ಸಾ.ಚ.

(೮) ಹಿಸ್ಟರಿ ಆಫ್ ಇಂಡಿಯನ್ ಲಿಟರೇಚರ್, ಭಾಗ-೨—
ಎಂ. ವಿಂಟರನಿಟ್ಜ, ಕಲಕತ್ತಾ ವಿಶ್ವವಿದ್ಯಾಲಯ, ೧೯೩೩. ಹಿ.ಇಂ.ಲಿ.

(೯) ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಬೆಂಗಳೂರು—
ಸಂ. ೨೮, ೨೫ (ವಡ್ಡಾರಾಧನೆಯನ್ನು ಕುರಿತಿರುವ ಡಿ. ಎಲ್. ಎನ್. ಅವರ ಪ್ರಾಸ್ತಾವಿಕ ಲೇಖನಗಳು). ಕ.ಸಾ.ಪ.

(೧೦) ಕಿಟೆಲ್-ಕನ್ನಡ-ಇಂಗ್ಲೀಷ ಕೋಶ ಕಿ.ಕೋ.

‘ ಕಾರ ’ ಹಬ್ಬದ ಸಾಮಾಜಿಕ ಹಾಗು ಆರ್ಥಿಕ ಉದ್ದೇಶಗಳು*

ಹಿಂದೂ ಪಂಚಾಂಗದ ಪ್ರಕಾರ ಮಾಸಕ್ಕೆ ಒಂದರಂತೆ ಹಬ್ಬಗಳಿವೆ. ಇವುಗಳನ್ನು ಸಂಸ್ಕೃತ ಗ್ರಂಥ ಹಾಗೂ ಪುರಾಣಗಳ ಆಧಾರದ, ಪ್ರಾದೇಶಿಕ ಸಂಪ್ರದಾಯದ ಮತ್ತು ಇವೆರಡು ಪದ್ಧತಿಗಳು ಮಿಶ್ರಣವಾದ ಹಬ್ಬಗಳೆಂದು ಮೂರು ಗುಂಪುಗಳನ್ನಾಗಿ ಮಾಡಬಹುದು. ಇವುಗಳಲ್ಲಿ ಯುಗಾದಿ, ದೀಪಾವಳಿ ಮುಂತಾದವುಗಳು ಸಂಸ್ಕೃತ ಗ್ರಂಥ ಹಾಗೂ ಪುರಾಣಗಳ ಆಧಾರಗಳನ್ನು ಹೊಂದಿದ್ದು ಇಡೀ ಭರತಖಂಡದಲ್ಲೆಲ್ಲಾ ಆಚರಿಸಲ್ಪಡುತ್ತವೆ. ಉಳಿದ ಹಬ್ಬಗಳಿಗೆ ಗ್ರಂಥಗಳ ಹಾಗು ಪುರಾಣಗಳ ಆಧಾರಗಳಿದ್ದಂತೆ ತೋರುವುದಿಲ್ಲ ಮತ್ತು ಇವು ಪ್ರಾದೇಶಿಕವಾದ ಪದ್ಧತಿಗೆ ಅನುಗುಣವಾಗಿ ಆಚರಿಸಲ್ಪಡುತ್ತವೆ. ಮುಖ್ಯವಾಗಿ ‘ಫಲಶಕ್ತಿ’ಯನ್ನು (Fertility) ಪಡೆಯಲು ಯಾವುದಾದರೊಂದು ಶಕ್ತಿಯನ್ನೊ, ದೈವವನ್ನೊ ಒಲಿಸಿಕೊಳ್ಳಲು ಆಚರಣೆಗೆ ತಂದ ಹಬ್ಬಗಳಿವು. ಇವು ಸರ್ವಸಾಮಾನ್ಯವಾಗಿ ಜನಾಂಗದ ಮುಖ್ಯ ಕಸುಬನ್ನು ಆಚರಣೆಗಳ ಮೂಲಕ ತೋರಿಸುವಂತಹ ಚಟುವಟಿಕೆಗಳಾಗಿರುತ್ತವೆ. ಅನೇಕ ವೇಳೆ ಗ್ರಂಥಗಳ ಹಾಗು ಪುರಾಣಗಳ ಆಧಾರದಿಂದ ಬಂದ ಹಬ್ಬಗಳಲ್ಲಿಯೂ ಪ್ರಾದೇಶಿಕ ಪದ್ಧತಿಗಳ ಮಿಶ್ರಣವನ್ನು ಕಾಣಬಹುದು. ಉದಾಹರಣೆಗೆ, ಕರ್ನಾಟಕದ ಅನೇಕ ಕಡೆಗಳಲ್ಲಿ ದೀಪಾವಳಿಯ ಸಂದರ್ಭದಲ್ಲಿ “ ಹಟ್ಟಿಲಕ್ಕವ್ವ ”ನನ್ನು ಇಡುವುದು, ಹಿರಿಯರನ್ನು ಪೂಜಿಸುವುದು ಮತ್ತು ಯುಗಾದಿ ಹಬ್ಬದ ದಿನ ವರ್ಷದ ಮೊದಲನೆಯ ಬೇಸಾಯಕ್ಕೆಂದು ಹಬ್ಬದ ದಿನವೇ ಬೇಸಾಯ ಹೂಡಲು ಹೊಲಕ್ಕೆ ಹೋಗುವುದು, ಹೀಗೆ ಅನೇಕ ಪ್ರಾದೇಶಿಕ ಪದ್ಧತಿಗಳು ರೂಢಿಯಲ್ಲಿವೆ.

ಹಬ್ಬಗಳಲ್ಲಿ ಅನೇಕ ವಿಧ. ಕೆಲವು ಕೇವಲ ಒಬ್ಬ ವ್ಯಕ್ತಿಗೆ ಅಥವಾ ಒಂದು ಮನೆತನಕ್ಕೆ ಸಂಬಂಧಿಸಿದವುಗಳಾದರೆ ಇನ್ನು ಕೆಲವು ಒಂದು ಕುಲ (Class) ಅಥವಾ ಸಂಬಂಧಿಕರ (Kingroup) ಗುಂಪಿಗೆ ಸೇರಿರಬಹುದು. ಕೆಲವು ಒಂದೇ ಜಾತಿಗೆ ಸಂಬಂಧಿಸಿರಲೂ ಬಹುದು. ಅಥವಾ ಇಡೀ ಗ್ರಾಮಕ್ಕೇ ಸಂಬಂಧಿಸಿರಬಹುದು. ಇಡೀ ಗ್ರಾಮಕ್ಕೇ ಸಂಬಂಧಿಸಿದ ಹಬ್ಬಕ್ಕೆ ಗ್ರಾಮಸ್ಥರೆಲ್ಲ ಒಟ್ಟುಗೂಡುತ್ತಾರೆ. ಸಾಂಪ್ರದಾಯಿಕ ಗ್ರಾಮಾಡಳಿತ ಮಂಡಳಿಯಾದ ‘ ಬಾರಾಬರೂತಿ ’ ಅಥವಾ ‘ ಹನ್ನೆರಡು ಕೈವಾಡದವರು ’, ಸಾಂಪ್ರದಾಯುವಾಗಿ ಬಂದ ತಮ್ಮ ತಮ್ಮ

* ಈ ಲೇಖನವನ್ನು ಸಿದ್ಧಗೊಳಿಸುವಲ್ಲಿ ನೆರವಾದ ಪ್ರೊ. ಎಚ್. ಎಂ. ಮರುಳಸಿದ್ದಯ್ಯ ಮತ್ತು ಶ್ರೀ ಸೋಮಶೇಖರ ಇನ್ನಾಪೂರ ಇವರಿಗೆ ಕೃತಜ್ಞತೆಗಳು.

ಭಾಗದ ಕರ್ತವ್ಯವನ್ನು ಮಾಡಿ, ಇದರಿಂದ ಬರಬಹುದಾದ ಗೌರವ ಮತ್ತು ಮಾಮೂಲು ಉತ್ಪನ್ನವನ್ನೂ ಪಡೆಯುತ್ತಾರೆ. ಇಂತಹ ಅನೇಕ ಹಬ್ಬಗಳಲ್ಲಿ, ನಾವಿಲ್ಲಿ ಚರ್ಚೆಗೆ ತೆಗೆದುಕೊಂಡಿರುವ ‘ ಕಾರ ’ ಹಬ್ಬವೂ ಒಂದು. ಈ ಲೇಖನ ದಲ್ಲಿ ಬರುವ ವಿಷಯಗಳನ್ನು ಮುಖ್ಯವಾಗಿ ನಾನು ಸಂಶೋಧನೆ ನಡೆಸಿರುವ ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಗಳಿಂದ ಪಡೆದಿದ್ದೇನಾದ್ದರಿಂದ ಇವು ಕರ್ನಾಟಕದ ಉಳಿದ ಕಡೆ ಕಂಡುಬರುವ ಆಚಾರ-ಪದ್ಧತಿಗಳಿಂದ ಭಿನ್ನವಾಗಿರ ಬಹುದು.

ಜೇಷ್ಠ ಮಾಸದಲ್ಲಿ (ಮೇ-ಜೂನ್) ಆಚರಿಸಲಾಗುವ ಕಾರ ಹಬ್ಬದ ಉಲ್ಲೇಖ ಕ್ರಿ.ಶ. ೧೦೦೭ ಮತ್ತು ಕ್ರಿ.ಶ. ೧೧೦೪ರ ಶಾಸನಗಳಲ್ಲಿ ಬರುವುದೆಂದು ಡಾ. ಎಂ. ಚಿದಾನಂದಮೂರ್ತಿಯವರು ತಿಳಿಸುತ್ತಾರೆ.[೧] ಬೇರೆ ಬೇರೆ ಪ್ರದೇಶ ಗಳಲ್ಲಿ ಬೇರೆ ಬೇರೆ ಹೆಸರಿನಿಂದ ಕರೆಯಲಾಗಿರುವ ಕಾರಹಬ್ಬವನ್ನು ಉತ್ತರ ಕರ್ನಾಟಕದಲ್ಲಿ ಮುಖ್ಯವಾಗಿ “ ಕಾರಹುಣ್ಣಿಮೆ ” ಎಂದು ಕರೆಯುತ್ತಾರೆ. ಬೆಟಗೇರಿ ಕೃಷ್ಣಶರ್ಮರವರು ಹೇಳುವಂತೆ “ ಕಾರ್ ” ಎಂದರೆ ಮಳೆ. ಮಳೆ-ಗಾಲದ ಆರಂಭದ ಹುಣ್ಣಿಮೆಯೇದೇ ಇದಕ್ಕೆ “ ಕಾರಹುಣ್ಣಿಮೆ ” ಎಂದು ಬಂದಿದೆ.[೨] ಆದರೆ ಅವರು ಹೇಳಿರುವಂತೆ, ಊರ ಸುತ್ತಲೂ ಕಾಮನನ್ನು ಸುಟ್ಟು ಬೂದಿ(ಕರಿ)ಯನ್ನು ಕಟ್ಟುವ ಪದ್ಧತಿಯ ವಿಷಯವು ಇಲ್ಲಿ ಚರ್ಚಾಸ್ಪದ ವಾಗಿದೆ. ಕಾರಣ ಉತ್ತರ ಕರ್ನಾಟಕವನ್ನುಳಿದ ಬೇರೆ ಭಾಗದಲ್ಲಿ ಕಾಮನ ಹಬ್ಬದ ಆಚರಣೆ ಇಲ್ಲ. ಇದು ಉತ್ತರ ಭಾರತದ ಹಬ್ಬವಾದ್ದರಿಂದ ಅಲ್ಲಿಂದ ಪೂರ್ವದಲ್ಲಿ ವಲಸೆಬಂದವರಾದ ಲಂಬಾಣಿ ಜನಾಂಗದವರು ಮಾತ್ರ ಆಚರಿ ಸುತ್ತಾರೆ. ಆದ್ದರಿಂದ ಇದು ಇಡೀ ಗ್ರಾಮದ ಹಬ್ಬವಾಗಿರುವುದಿಲ್ಲ ಮತ್ತು ಕಾಮನ ಬೂದಿಯನ್ನು ಊರ ಸುತ್ತ ಚೆಲ್ಲುವ ಪದ್ಧತಿಯೂ ಕಂಡುಬರುವುದಿಲ್ಲ. ಗ್ರಾಮೀಣವಾಗಿ “ ಕರೆಹಬ್ಬ ಅಥವಾ ಕರೆಹರಿಯುವ ಹಬ್ಬ ” ಎಂದು ಕರೆಯಲ್ಪಡುವ ಈ ಹಬ್ಬದಲ್ಲಿ “ ಕರೆಬಳ್ಳಿ ”ಗಳನ್ನು ಹರಿ ಯುವ ಪದ್ಧತಿಯಿಂದಾಗಿ ಈ ಹೆಸರು ಬಂದಿರಲೂಬಹುದು. ಕೃಷ್ಣಶರ್ಮ ಅವರು ಹೇಳಿರುವಂತೆ ಎಲ್ಲಾ ಭಾಗದಲ್ಲಿಯೂ ಕಾರಹಬ್ಬ ಮುಗಿಯದೆ ಬಿತ್ತ ಬಾರದೆಂದು ನಿರ್ಬಂಧವಿತ್ತು. ಆದರೆ ಇದಕ್ಕೆ ನನ್ನ ಈ ಲೇಖನದಲ್ಲಿ ಮುಂದೆ ಹೇಳಿರುವ ಬೀಜಾರಾಧನೆ ಮತ್ತು ಬಿತ್ತುವ ಕಾರ್ಯಗಳ ಬಗ್ಗೆ ಜನತೆಯಲ್ಲಿದ್ದ

೧. ಡಾ॥ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು (ಪು. ೧೯೩), ೧೯೬೬.

೨. ಶ್ರೀ ಬೆಟಗೇರಿ ಕೃಷ್ಣಶರ್ಮ : ನಮ್ಮ ಸಂಸ್ಕೃತಿಪರಂಪರೆ, ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ-೧ (ಪು. ೨೧), ೧೯೬೯.

ಭಾವನೆ ಮತ್ತು ನಂಬಿಕೆಗಳೇ ಕಾರಣಗಳಿದ್ದು ಕೃಷ್ಣ ಶರ್ಮರವರು ಹೇಳಿರುವಂತೆ ಊರಿಂದ ಹೊರಗೆ ಏನನ್ನೂ ತೆಗೆದುಕೊಂಡು ಹೋಗಬಾರದೆಂಬ ನಿರ್ಬಂಧವಿರಲಿಲ್ಲವೆಂದು ನಾನು ಸಂಗ್ರಹಿಸಿರುವ ಮಾಹಿತಿ ದೃಢಪಡಿಸುತ್ತದೆ. ಮೇಲಾಗಿ ಇಂತಹ ನಿಬಂಧನೆ ಇದ್ದರೆ ಇದು ಒಕ್ಕಲಿಗರು ತಾವು ಬೆಳೆದುದರಲ್ಲಿ ಮಿಕ್ಕಿದ್ದನ್ನು ಮಾರಿ ಜಾತ್ರೆ-ಯಾತ್ರೆಗಳು, ಮದುವೆ ಮುಂತಾದ ಮಂಗಳಕಾರ್ಯಗಳನ್ನು ಮಾಡಲು ತೊಂದರೆಯಾಗುತ್ತಿತ್ತು. ಅದೂ ಅಲ್ಲದೆ ಈ ಎಲ್ಲಾ ಕಾರ್ಯಗಳನ್ನೂ ಕಾರಹಬ್ಬ ಬರುವುದರೊಳಗೆ ಮುಗಿಸಬೇಕೆಂಬ ಪದ್ಧತಿಯೂ ಇದೆ ಎಂದು ಡಾ. ಬಿ. ಎಸ್. ಗದ್ದಗಿಮಠರವರು ತಿಳಿಸಿದ್ದಾರೆ.[೩] ಆದಕಾರಣ, ಊರಿಂದ ಹೊರಗೆ ಏನನ್ನೂ ತೆಗೆದುಕೊಂಡು ಹೋಗಬಾರದೆಂಬ ನಿಬಂಧನೆಯು ಬಿತ್ತನೆಯ ಬೀಜಕ್ಕೆ ಮಾತ್ರ ಅನ್ವಯಿಸುತ್ತದೆಯೇ ಹೊರತು ಎಲ್ಲಾ ಧಾನ್ಯಗಳಿಗಲ್ಲ ಎಂದೂ ತಿಳಿದುಬರುತ್ತದೆ.

ಪೂರ್ಣ ಪ್ರಾದೇಶಿಕವಾಗಿ ಯಾವ ಗ್ರಂಥಗಳ ಮತ್ತು ಪುರಾಣಗಳ ಆಧಾರಗಳಿಲ್ಲದೆ, ಎರಡು ದಿನ ಆಚರಿಸಲಾಗುವ ಕಾರಹಬ್ಬವನ್ನು ಮೂರು ಹಂತಗಳಲ್ಲಿ ಆಚರಿಸಲಾಗುವುದು. ಮೊದಲನೆಯ ದಿನ ಎತ್ತಿನ ಪೂಜೆ. ಉತ್ತರ ಕರ್ನಾಟಕದ ಭಾಗದಲ್ಲಿ ಇದಕ್ಕೆ "ಹೊನ್ನುಗ್ಗಿ" ಎಂದು ಕರೆಯುತ್ತಾರೆ.[೪] ದಾವಣಗೆರೆ ಪ್ರದೇಶದಲ್ಲಿ ಇದಕ್ಕೆ "ಹೊನ್ನುಹಕ್ಕಿ" ಎಂದು ಕರೆಯುತ್ತಾರೆ. ಅಂದು ವ್ಯವಸಾಯದಲ್ಲಿ ನಿರತರಾದ ರೈತರಿಗೆ ಮತ್ತು ಅವರ ಎತ್ತುಗಳಿಗೆ ವಿರಾಮ. ಸಾಂಪ್ರದಾಯಿಕವಾಗಿ ನೀಡಲಾಗಿರುವ ಈ ವಿರಾಮಕ್ಕೆ ವಿಶೇಷವಾದ ಅರ್ಥಗಳಿವೆ. ಇವುಗಳಲ್ಲಿ ಮಾರನೆಯ ದಿನದ ಹಬ್ಬಕ್ಕೆ ತಯಾರಿ ಮಾಡಿಕೊಳ್ಳಲು ನೀಡಿರುವ ಅವಕಾಶವೂ ಒಂದು. ಮೊದಲನೆಯದಾಗಿ, ರೈತರು ತಮ್ಮ ದಿನನಿತ್ಯದ ಕೆಲಸಗಳನ್ನು ಬಿಟ್ಟು ಎತ್ತುಗಳಿಗೆ ವಿಶ್ರಾಂತಿ ನೀಡುತ್ತಾರೆ. ಎರಡನೆಯದಾಗಿ, ಅವುಗಳಿಗೆ ಸ್ನಾನಮಾಡಿಸಿ ವಿಶೇಷವಾದ ರೀತಿಯಲ್ಲಿ ಮನೆಗೆ ಕರೆತಂದು ಪೂಜೆ ಮಾಡುತ್ತಾರೆ. ಪೂಜೆಯಾದನಂತರ ಅವುಗಳ ಮುಂದೆ ಹಾಕಿರುವ ಜೋಳದ ಗುಂಪೆಗಳ ಮೇಲೆ ತಮ್ಮ ಬಲಗಾಲನ್ನು ಇಡುವಂತೆ ಮಾಡುತ್ತಾರೆ. ಇದರಿಂದ ಜೋಳದ ರಾಶಿಯು ಹೊಡೆದು ಜೋಳದ ಕಾಳುಗಳು ಚೆಲ್ಲಾಡುತ್ತವೆ. ಜೋಳಕ್ಕೆ ಹೆಚ್ಚಿನ ಸ್ಥಾನ ಕೊಟ್ಟು "ಹೊನ್ನು" ಎಂದು ಕರೆದಿದ್ದಾರಾದ್ದರಿಂದ ಇದಕ್ಕೆ "ಹೊನ್ನುಹಕ್ಕಿ" ಎಂದು ಹೆಸರು ಬಂದಿದೆ. ಅಂದು ಹಬ್ಬದ ಊಟಕ್ಕೆ ಜೋಳದ ಕಿಚಡಿ ಅಥವಾ ಹುಗ್ಗಿಯನ್ನು

---

೩. ಡಾ॥ ಬಿ. ಎಸ್. ಗದ್ದಗಿಮಠ: ಕನ್ನಡ ಜಾನಪದ ಗೀತಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ (ಪು. ೧೭೯), ೧೯೬೩.

೪. ಶ್ರೀ ಬೆಟಗೇರಿ ಕೃಷ್ಣಶರ್ಮರವರ ಮೇಲೆ ಕೊಟ್ಟಿರುವ ಕೃತಿಯಲ್ಲಿ ಪುಟ ೨೧ ನೋಡಿ.

ಮಾಡುವದು ಪದ್ಧತಿ. ಹೊನ್ನು ಎಂದು ಪರಿಗಣಿಸಿದ ಈ ಜೋಳದ ಹುಗ್ಗಿಗೆ "ಹೊನ್ನುಗ್ಗಿ" ಎಂದು ವಿಶೇಷ ಗೌರವದಿಂದ ಕರೆಯುವರು. ಈ ಹೊನ್ನುಗ್ಗಿಯನ್ನು ತಾವೂ ಊಟಮಾಡುವರಲ್ಲದೆ ಎತ್ತುಗಳಿಗೂ ತಿನ್ನಿಸುವರು.

ಹಬ್ಬದ ಎರಡನೆಯ ದಿನ ಮುಖ್ಯವಾದುದು. ಆ ದಿನ ಪೂರ್ಣಿಮಾ. ಆ ದಿನವೂ ವ್ಯವಸಾಯದ ಕೆಲಸಕ್ಕೆ ವಿರಾಮ. ರೈತರು ತಮ್ಮ ಬಂಡಿ ಮತ್ತು ವ್ಯವಸಾಯದ ಸಲಕರಣೆಗಳನ್ನು ತೊಳೆದು ಅವುಗಳಿಗೆ ಸುಣ್ಣ-ಬಣ್ಣ ಬಳಿದು ಅಲಂಕರಿಸುತ್ತಾರೆ. ಹಬ್ಬದ ಎರಡನೆಯ ಹಂತವಾದ "ಬೀಜಾರಾಧನೆ" ಆ ದಿನ ರಾತ್ರಿಯೇ ನಡೆಯುತ್ತದೆ. ಇದಕ್ಕೆ ಊರ ತಳವಾರನು (Village Watchman) ಕುಂಬಾರನಿಂದ ಒಂದು ಹೊಸ ಮಡಕೆಯನ್ನು ತಂದು ಅದರಲ್ಲಿ ಆ ಗ್ರಾಮದಲ್ಲಿ ಬೆಳೆಯುವ ಎಲ್ಲ ಧಾನ್ಯಗಳ ಬೀಜಗಳನ್ನು ರೈತರಿಂದ ತಂದು ತುಂಬುತ್ತಾನೆ. ಸಂಜೆ ಎಲ್ಲರೂ ಹಬ್ಬದ ಊಟ ಮುಗಿಸಿದನಂತರ ಕರೆ ಹರಿಯಲು ನಿರ್ದಿಷ್ಟಪಡಿಸಿದ ಜಾಗದಲ್ಲಿ ನೆಲವನ್ನು ಸ್ವಚ್ಛಮಾಡಿ ದಕ್ಷಿಣಾಭಿಮುಖವಾಗಿ ನಿಲ್ಲಿಸಿರುವ ಒಂದು ಎಡೆ-ಕುಂಟೆ ಅಥವಾ ಕಳೆ ಕೀಳುವ ಕುಂಟೆಯ ಮುಂದೆ ಇದನ್ನು ಇಡುತ್ತಾನೆ. ಒಬ್ಬ ರೈತಪ್ರತಿನಿಧಿಯು ಈ ಮಡಕೆ ಹಾಗು ಕುಂಟೆಗಳನ್ನು ಪೂಜಿಸಿ, ಕುಂಟೆಯಿಂದ ಮಡಕೆಯನ್ನು, ಹಿಂದಿನಿಂದ, ಬಲವಾಗಿ ಹೊಡೆಯುತ್ತಾನೆ. ಈ ಕುಂಟೆಯ ಪ್ರಘಾತದಿಂದ ಮಡಕೆ ಒಡೆದು ಅದರಲ್ಲಿದ್ದ ಬೀಜಗಳು ಚಲ್ಲಾಪಿಲ್ಲಿಯಾಗುತ್ತವೆ.[೫] ಆಗ ಗ್ರಾಮದ ಹಿರಿಯರು ಪಂಜುಗಳ ಸಹಾಯದಿಂದ ಯಾವ ತರಹದ ಬೀಜಗಳು ಮುಂದೆ ಹೋಗಿವೆ ಎಂಬುದನ್ನು ಹುಡುಕಿ ನೋಡಿ, ಅವುಗಳ ಹೆಸರು ಮತ್ತು ಬಣ್ಣವನ್ನು ಅಲ್ಲಿ ನೆರೆದ ಸಮಸ್ತರಿಗೆ ತಿಳಿಸುತ್ತಾರೆ.

'ಕಾರ' ಹಬ್ಬದ ಮೂರನೆಯ ಹಾಗೂ ಕೊನೆಯ ಹಂತ "ಕರಿ ಹರಿಯುವುದು". ಕರೆ ಅಂದರೆ ಉದ್ದಗೆ ಬೆಳೆದ ಕಾಡುಬಳ್ಳಿಗಳಿಂದ ಮಾಡಿದ ದಪ್ಪನೆಯ ಒಂದು ಹಗ್ಗ.[೬] ಇದನ್ನು ಸಾಂಪ್ರದಾಯಿಕವಾಗಿ ತೋಟಿಗ

೫. ಕೆಲವು ಪ್ರದೇಶಗಳಲ್ಲಿ ಮಡಕೆಯನ್ನು ಒಡೆದನಂತರ ಇದಕ್ಕೊಂದೇ ಪೂಜಿಸಿ ತಂಪ ಕೊಡದಿಂದ ನೀರು ಸುರುವುತ್ತಾರೆ. ನೀರಿನೊಂದಿಗೆ ದೂರ ಹೋಗಿರುವ ಬೀಜ ಉತ್ತಮ ಫಸಲು ಕೊಡುವುದೆಂದು ಚುನಾಯಿಸುತ್ತಾರೆ.

೬. ಕರಿಯನ್ನು ಕಾಡುಬಳ್ಳಿಗಳಾದ ದಗಡಿ, ಕುಕ್ಕಣೆ ಮುಂತಾದ ಬಳ್ಳಿಗಳಿಂದ ಹೆಣೆದು ಮಾಡುತ್ತಾರೆ. ಕರಿಯನ್ನು ಪದ್ಧತಿಪ್ರಕಾರ ಬಂದ ಮಾದರಿಯಲ್ಲೇ ಹೆಣೆಯಬೇಕೆಂಬ ನಿಯಮ ಇದೆಯಾದ್ದರಿಂದ ತೋಟಿಗನ ಕುಲಕ್ಕೆ ಸೇರಿದ ಹಿರಿಯರು ಇಡೀ ದಿನ ಕರಿ ಹೆಣೆಯುವುದರಲ್ಲಿ ತೊಡಗುತ್ತಾರೆ. ಹೆಣೆದನಂತರ ಇದಕ್ಕೆ ಬೇವು ಮತ್ತು ಮಾವಿನ ಸೊಪ್ಪನ್ನು ಜೋಡಿಸುವರೇ ಹೊರತು ಡಾ। ಚಿದಾನಂದಮೂರ್ತಿಯವರು (೧೯೬೬ : ೧೯೩) ಹೇಳುವಂತೆ ಇದು ಮಾವು-ಬೇವಿನ ತೋರಣವಲ್ಲ ಮತ್ತು ಕೃಷ್ಣ ಶರ್ಮರವರು (೧೯೬೯ : ೨೩) ಹೇಳುವಂತೆ ಮೊಸಯ ನುಲಿಗೆ ಕಟ್ಟಿದ ಬೇವಿನ ಚಿಕ್ಕ ಚಿಕ್ಕ ತೊಂಗಲುಗಳೂ ಅಲ್ಲ. ಮೇಲಾಗಿ ಇದು ಪ್ರದೇಶಗಳಿಗೆ ಅನುಗುಣವಾಗಿ ಬದಲಾಗಿರಲೂ ಬಹುದು.

ಮಾಡುತ್ತಾನೆ. ಅವನು ಇದಕ್ಕೆಂದೇ ಉದ್ದನೆಯ ಬಳ್ಳಿಗಳನ್ನು ಮೊದಲೇ ನೋಡಿಟ್ಟಿರುತ್ತಾನೆ. ಹಬ್ಬದ ದಿನ ಬೆಳಗ್ಗೆ ಅವುಗಳನ್ನು ಕಿತ್ತು, ದೊಡ್ಡ ಹಗ್ಗ ಮಾಡಿ ತನ್ನ ಮನೆಗೆ ತರುತ್ತಾನೆ. ಈ ವೇಳೆಗೆ ತಳವಾರನು ಊರ ಅಗಸೆಯಲ್ಲಿನ "ಕರೆಗಲ್ಲು"ಗಳ ಹತ್ತಿರ, ರಸ್ತೆಯ ಎರಡು ಬದಿಯಲ್ಲಿ ಕಂಬಗಳೆರಡನ್ನು ನೆಟ್ಟು ಅವುಗಳಿಗೆ ಸುಣ್ಣ ಮತ್ತು ಕೆಂಪು ಬಣ್ಣ ಬಳೆದಿರುತ್ತಾನೆ.[೭] ಅಂದು ರಾತ್ರಿ ತಮಟೆಗಳನ್ನು ಬಾರಿಸುತ್ತಾ ಗ್ರಾಮದೈವಗಳ ಜೊತೆಗೆ ಮೆರವಣಿಗೆಯಲ್ಲಿ ಕರೆಯನ್ನು ಆ ಸ್ಥಳಕ್ಕೆ ತರುತ್ತಾರೆ. ಆದಕ್ಕೆ ತೋಟಿಗನು ಮಾವು ಮತ್ತು ಬೇವಿನ ಸೊಪ್ಪು ಮುಡಿಸಿ, ಪೂಜಿಸಿ, ರೈತಕುಟುಂಬದಿಂದ ತಂದ ಬಾನದ ಎಡೆ ಹಿಡಿಯುತ್ತಾನೆ. ಬೀಜಾರಾಧನೆಯಾದಕೂಡಲೇ ಕರೆಯನ್ನು ದಾರಿಗೆ ಅಡ್ಡವಾಗಿ ಕಂಬಗಳಿಗೆ ಕಟ್ಟಲಾಗುವುದು. ರೈತಪ್ರತಿನಿಧಿಯು ತನ್ನ ಎತ್ತುಗಳನ್ನು ತಂದು ಕರೆಯ ಹಿಂದೆ ಉತ್ತರಾಭಿಮುಖವಾಗಿ ನಿಲ್ಲಿಸಿ ಕರೆ ಹಾಗು ಎತ್ತುಗಳನ್ನು ಪೂಜೆ ಮಾಡಿ, ಎಡೆ ಹಿಡಿಯುತ್ತಾನೆ. ಈ ಹಂತದಲ್ಲಿ ತಳವಾರನು, ಎಲ್ಲರೂ ಶಾಂತರಾಗಬೇಕೆಂದು ತಿಳಿಸಿ ಎಲ್ಲರೂ ಕರೆಕಲ್ಲುಗಳ ಹಿಂದೆ ಬರಬೇಕೆಂದು, ಯಾರಾದರೂ ಪರಸ್ಥಳದವರಿದ್ದರೆ ಅವರು ಆ ಊರಿನ ಪ್ರಜೆಗಳಿಂದ ದೂರ ನಿಲ್ಲಬೇಕೆಂದು ಪ್ರಕಟಿಸುತ್ತಾನೆ. ಇದರಂತೆ ಪರ ಊರಿನವರು ಯಾರಾದರೂ ಇದ್ದರೆ ದೂರ ಸರಿದು ನಿಲ್ಲುತ್ತಾರೆ.[೮] ನಂತರ ರೈತಪ್ರತಿನಿಧಿಯು ತನ್ನ ಎತ್ತುಗಳ ಹೆಗಲ ಮೇಲೆ ಕರೆಯ ಹಗ್ಗವನ್ನಿಟ್ಟು, ಜಗ್ಗುವಂತೆ ಮಾಡಿ ಕರೆಹರಿಯುತ್ತಾನೆ. ಇದನ್ನೇ ಕಾಯುತ್ತಿದ್ದ ಗ್ರಾಮಸ್ಥರು ನುಗ್ಗಿ, ಕರೆಯ ಕೆಲಭಾಗವನ್ನು ಕಿತ್ತು ಕೊಂಡು ಜೈಕಾರ ಮಾಡುತ್ತಾ, ತಮ್ಮ ತಮ್ಮ ಮನೆಗಳಿಗೆ ಹೋಗಿ ತಾವು ತಂದ ಕರೆಯನ್ನು ಮನೆಯ 'ಬೆಂಕಟ'(Roof)ಯಲ್ಲಿ ಯಾರಿಗೂ ಸಿಗದಂತೆ ಸುರ-

---

೭. ಕೆಲವು ಗ್ರಾಮಗಳಲ್ಲಿ "ಊರ ಮುಂದೆ ಅಥವಾ ಊರ ಬಾಗಿಲಿನ" ಹತ್ತಿರ ರಸ್ತೆಯ ಇಕ್ಕಡೆಗಳಲ್ಲಿ ಎತ್ತರವಾದ ಎರಡು ಕಲ್ಲುಗಳು ಶಾಶ್ವತವಾಗಿ ಇರುತ್ತವೆ. ಇವುಗಳನ್ನು ಮುಖ್ಯವಾಗಿ ಕರೆಯನ್ನು ಕಟ್ಟುವುದಕ್ಕೆ ಮಾತ್ರ ಉಪಯೋಗಿಸುತ್ತಾರೆ. ಆದರೆ ಇಂದು ಇವುಗಳನ್ನು ಕರಿಗಲ್ಲು, ಕರಗಲ್ಲು, ಕರೇಕಲ್ಲು ಎಂದು ಇನ್ನೂ ಅನೇಕ ಹೆಸರುಗಳಿಂದ ಕರೆಯುತ್ತಾರೆ. ಎತ್ತರವಾದ ಇಂತಹ ಕರೇಕಲ್ಲುಗಳಿದ್ದರೆ ಇದಕ್ಕೇ ಸುತ್ತಲೂ ಸುಣ್ಣ–ಬಣ್ಣಗಳ ಪಟ್ಟಿ ಬರೆಯುತ್ತಾರೆ.

೮. ಕೆಲವು ಕಡೆ ಈ ಸಂದರ್ಭದಲ್ಲಿ ಊರ ಬಾಗಿಲಿಗೆ ಅಡ್ಡಲಾಗಿ ದೊಡ್ಡ ಬೆಂಕಿಯನ್ನೇ ಹಚ್ಚುತ್ತಾರೆ. ಇದು ಬಹುಶಃ ಯಾರೂ ದಾಟಿಹೋಗಬಾರದೆಂದು ಅಥವಾ ಕರೆ ಕಡಿಯುವವರು ಕಾಣಲೆಂದು ಹಾಕಿರುವ ಬೆಂಕಿ ಇರಬಹುದು. ಮುಂದೆ ಇದರಲ್ಲೇ ಕರೆಯ ಉಳಿದ ಭಾಗವನ್ನು ಹಾಕಿ ಸುಟ್ಟುಬಿಡುತ್ತಾರೆ.

ಕ್ಷಿತವಾಗಿಡುತ್ತಾರೆ.[೯] ಇತ್ತ ಎಲ್ಲರೂ ಕರೆಯನ್ನು ತೆಗೆದುಕೊಂಡು ಹೋದ ನಂತರ ಉಳಿದ ಭಾಗವನ್ನು ಮತ್ತು ಕರೆಹರಿದ ಜಾಗದಲ್ಲಿ ಬಿದ್ದ ಎಲೆ, ಬಳ್ಳಿ ಮುಂತಾದವುಗಳನ್ನು ಜೋಪಾನವಾಗಿ ಗುಡಿಸಿ, ಪೂರ್ಣವಾಗಿ ಸುಟ್ಟುಬಿಡುತ್ತಾರೆ. ಇದು ‘ ಕಾರಹಬ್ಬ ’ದ ವಿವಿಧ ಚಟುವಟಿಕೆಗಳ ಒಂದು ಚಿತ್ರ.

‘ ಕಾರ ’ ಹಬ್ಬ ಕೇವಲ ನಾಡಪದ್ಧತಿಯ ಮತ್ತು ಸಂಪ್ರದಾಯದ ರೀತಿಯಲ್ಲಿ ಆಚರಿಸಲ್ಪಡುತ್ತಿದೆ. ಈ ಹಬ್ಬದಲ್ಲಿ ನಡೆಯುವ ಪ್ರತಿಯೊಂದು ಚಟುವಟಿಕೆಯನ್ನೂ ಕೂಲಂಕಷವಾಗಿ ಸಂಶೋಧನಾದೃಷ್ಟಿಯಿಂದ ಪರಾಮರ್ಶಿಸಿದಾಗ ನಮಗೆ ಇದರ ನಿಜವಾದ ಅರ್ಥ ತಿಳಿದುಬರುತ್ತದೆ. ‘ ಕಾರ ’ ಹಬ್ಬ ಮುಖ್ಯವಾಗಿ ರೈತರ ಹಬ್ಬ. ಇದನ್ನು ರೈತನ ಕೈದೀವಿಗೆ ಎಂದರೂ ಸರಿಯೆ. ಇದು ರೈತನ ಇಡೀ ವರ್ಷದ ವ್ಯವಸಾಯದ ಚಟುವಟಿಕೆಗಳನ್ನು ಗೂಢವಾಗಿ ಮತ್ತು ಸಾಂಕೇತಿಕವಾಗಿ (Symbolic) ಮೂರು ಹಂತಗಳಲ್ಲಿ ತೋರಿಸುತ್ತದೆ; ಅವನಿಗೆ ಮುಂದಿನ ವರ್ಷದ ಹುಲುಸು ಪೈರಿನ ಉಜ್ವಲ ಭವಿಷ್ಯವನ್ನು ತಿಳಿಸುತ್ತದೆ. ಹಬ್ಬದ ಮೊದಲ ದಿನ ಎತ್ತುಗಳನ್ನು ತೊಳೆಯುವುದು, ಪೂಜಿಸುವುದು ಮತ್ತು ಉತ್ತಮವಾದ ಆಹಾರವನ್ನು ತಿನ್ನಿಸುವುದು ಎಲ್ಲವೂ ರೈತನಿಗೆ ಎತ್ತುಗಳು ಎಷ್ಟು ಆವಶ್ಯಕ ಎಂಬುದಕ್ಕೆ ನಿದರ್ಶನ. ಮೇಲಾಗಿ ರೈತನು ತನ್ನ ಎಲ್ಲ ವ್ಯವಸಾಯದ ಕೆಲಸಗಳನ್ನು ಎತ್ತುಗಳ ಬಲದಿಂದಲೇ ಮಾಡಬೇಕಾದ್ದರಿಂದ, “ ಎತ್ತಿಲ್ಲದವನಿಗೆ ಎದೆ ಇಲ್ಲ ” ಎಂಬ ನಾಡುನುಡಿ ಅನ್ವರ್ಥಕವಲ್ಲವೆ ? ಮಡಕೆಯಲ್ಲಿ ಬೀಜಗಳನ್ನು ಹಾಕಿ ಅದನ್ನು ರೈತಪ್ರತಿನಿಧಿಯಿಂದ ಕುಂಟೆಯೊಂದರಿಂದ ಹೊಡೆಯುವುದು ಮತ್ತು ಬಹಳ ದೂರ ಹೋದ ಬೀಜವನ್ನು ಉತ್ತಮ ಫಸಲನ್ನು ಕೊಡುವುದೆಂದು ಭಾವಿಸುವುದು ವ್ಯವಸಾಯಗಾರ ಉತ್ತಮವಾದ ಬೀಜಗಳನ್ನಾರಿಸುವುದು ಒಂದು ಮುಖ್ಯ ಕ್ರಿಯೆ. ಇಲ್ಲಿ ಮಡಕೆ ಭೂದೇವಿಯ ಸಂಕೇತ. ಅದರಿಂದ ಹೊರಬಿದ್ದ ಧಾನ್ಯಗಳನ್ನು ಉತ್ತಮವಾಗಿ ಬೆಳೆದುನಿಂತ ಪೈರು ಎಂದು ಭಾವಿಸಲಾಗುವುದು. ಹಿಂದೆ ಗ್ರಾಮಸ್ಥರು ಕಾರಹಬ್ಬದಲ್ಲಿ ಉತ್ತಮವಾದುದೆಂದು ತಿಳಿದುಬಂದ ಫಸಲನ್ನು ಹೆಚ್ಚುಹೆಚ್ಚಾಗಿ ಬಿತ್ತುತ್ತಿದ್ದರು. ಕಾರಣ, ಅವುಗಳಲ್ಲಿ ಯಾವುದೋ ಶಕ್ತಿ ಅಡಗಿರಬೇಕೆಂದು ಅವರು ನಂಬಿದ್ದುದು.

---

೯. ಕರೆಯ ಭಾಗವನ್ನು ಮುಂದೆ ಹೇಳಿರುವಂತೆ, ಧಾನ್ಯಗಳೆಂದು ಭಾವಿಸುವ ಕಾರಣ ಇದು ಯಾರಿಗೂ ಸಿಗದಂತೆ ಜೋಪಾನವಾಗಿಡುವುದು ಇಲ್ಲಿ ಮುಖ್ಯ ವಿಷಯ. ಆಯಾ ಪ್ರದೇಶದಲ್ಲಿ ಮನೆಯಲ್ಲಿ ಯಾವುದು ಸುರಕ್ಷಿತವಾದ ಜಾಗವೆಂದು ಪರಿಗಣಿಸಲ್ಪಡುವುದೋ ಅಲ್ಲಿ ಕರೆಯನ್ನು ಇಡುವುದು ಪದ್ಧತಿ. ಕೆಲವು ಪ್ರದೇಶದಲ್ಲಿ ಧಾನ್ಯಗಳನ್ನು ಸಂಗ್ರಹಿಸುವ ಸ್ಥಳವಾದರೆ ಉಳಿದೆಡೆಗೆ ಅಟ್ಟದ ಮೇಲೆ, ಜಂಕಟಿಯಲ್ಲಿ, ಹೀಗೆ.

ಹರಿಯುದ ಕರೆಯು ಊಳದ ಹೊಲದ ಪ್ರತಿರೂಪ. ಕರೆ ಹಗ್ಗದಲ್ಲಿ ಸಿಕ್ಕಿಸಿರುವ ಮಾವು ಮತ್ತು ಬೇವಿನ ಎಲೆಗಳು ಹೊಲದಲ್ಲಿ ಬೆಳೆದುನಿಂತ ಕಳೆಗಳು. ಅದನ್ನು ರೈತನು ತನ್ನ ಎತ್ತುಗಳ ಬಲದಿಂದ ಕಿತ್ತು ತೆಗೆಯುವ ಕೆಲಸದ ಸೂಚಕವಾಗಿ, ಕರೆಯನ್ನು ಎತ್ತುಗಳ ಸಹಾಯದಿಂದ ಹರಿಯುತ್ತಾರೆ. ಹರಿಯದ ಕರೆಯು ಊಳದ ಹೊಲದ ಪ್ರತಿರೂಪವಾದರೆ, ಹರಿದನಂತರ ಇದು ಪೈರು ಬೆಳೆದುನಿಂತ ಹೊಲದ ಪ್ರತೀಕವೆನಿಸುತ್ತದೆ. ಇದು ಇಡೀ ಗ್ರಾಮಕ್ಕೇ ಸೇರಿದ 'ಫಲಶಕ್ತಿ'. ಇದನ್ನು ಪರವೂರಿನವರು ಕದಿಯಬಾರದೆಂದು ಕರೆಹರಿಯುವುದಕ್ಕೆ ಮುಂಚೆ ಅವರನ್ನು ದೂರ ಕಳಿಸಲಾಗುವುದು. ಹಾಗೇನಾದರೂ ಕರೆಯನ್ನು ಕದ್ದರೆ ಆ ಊರು ತನ್ನ 'ಹುಲುಸು' ಅಥವಾ 'ಫಲಶಕ್ತಿ'ಯನ್ನು ಕಳೆದುಕೊಳ್ಳುತ್ತದೆ ಮತ್ತು ಅದು ಕದ್ದವರ ಊರಿಗೆ ಲಭಿಸುತ್ತದೆ ಎಂಬ ನಂಬಿಕೆ. ಅಂತೆಯೇ ಪರ ಊರಿನವರೂ ಈ ಅವಕಾಶದ ಲಾಭವನ್ನು ಪಡೆಯಲು ತವಕಿಸುತ್ತಿರುತ್ತಾರೆ. ಈ ಅನಾಹುತವಾಗಬಾರದೆಂದು ಗ್ರಾಮಸ್ಥರು ಕತ್ತಿ, ಕುಡುಗೋಲು ಮತ್ತು ಕೊಡಲಿಗಳನ್ನು ಹಿಡಿದು 'ಕರೆ'ಯನ್ನು ಕಾಯುವರು. ಇಲ್ಲಿ ಅವರು ಕರೆಯ ರಕ್ಷಣೆಗಾಗಿ ಬಳಸುವ ಆಯುಧ ಸಲಕರಣೆಗಳು ಫಸಲನ್ನು ಕೊಯ್ಯಲು ಬಳಸುವ ಸಲಕರಣೆಗಳೂ ಆಗಿವೆ, ಎಂಬುದನ್ನು ನಾವು ಗಮನಿಸಬೇಕು.

ಕರೆಯನ್ನು ತೆಗೆದುಕೊಂಡು ಹೋಗಿ ಮನೆಯಲ್ಲಿ ಸುರಕ್ಷಿತವಾಗಿಡುವುದು 'ಕಣಸುಗ್ಗಿ' ಮಾಡಿ ಮನೆಗೆ ಧಾನ್ಯ ತರುವ ಕ್ರಿಯೆಯನ್ನು ಸೂಚಿಸುವ ಸಂಕೇತ. ಇದೇ ರೀತಿ ಗ್ರಾಮಸ್ಥರು ನುಗ್ಗಿ ಒಬ್ಬರಮೇಲೊಬ್ಬರು ಬಿದ್ದು, ಮುಖ್ಯವಾಗಿ, ಕರೆಯಲ್ಲಿ ಸಿಕ್ಕಿಸಿರುವ, ಕಾಳು ತುಂಬಿದ ತೆನೆಗಳಿಗೆ ಸಂಕೇತಗಳಾದ ಮಾವು ಮತ್ತು ಬೇವಿನ ಸೊಪ್ಪನ್ನು ತೆಗೆದುಕೊಂಡು ಹೋದನಂತರ ಉಳಿದ ಕರೆಯ ಭಾಗವನ್ನು ಬೇರೆಯವರಿಗೆ ಸಿಗದಿರಲೆಂದು ಗುಡಿಸಿ ಸುಟ್ಟು ಬಿಡುತ್ತಾರೆ. ಕಾರಣ, ತಮ್ಮ ಊರಲ್ಲಿ ಬೆಳೆದುದನ್ನು ತಾವೇ ಉಣಬೇಕು, ಆಪ್ಪಿತಪ್ಪಿಯಾದರೂ ಬೇರೆಯವರಿಗೆ ಸಿಗುವಂತಾಗಬಾರದು, ಮಿಕ್ಕಿದ್ದು ಸುಟ್ಟು ಗೊಬ್ಬರವಾಗಿಯಾದರೂ ತಮ್ಮ ಊರಲ್ಲೇ ಉಳಿಯಬೇಕು ಎಂಬುದು ಇದರ ಇನ್ನೊಂದು ಅರ್ಥ. ರೈತನಿಗೆ ಗೊಬ್ಬರವು ಎಷ್ಟು ಮುಖ್ಯ ಮತ್ತು ಅವಶ್ಯಕ ಎಂಬುದನ್ನು ತೋರಿಸುತ್ತದೆ.

'ಕಾರ' ಹಬ್ಬದಲ್ಲಿ ರೈತನಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟಿರುವುದು ಅರ್ಥಪೂರ್ಣವಾಗಿದೆ. ಒಕ್ಕಲುತನ ರೈತನ ಕುಲಕಸಬು. ಎತ್ತು, ಬೀಜಗಳು ಮತ್ತು ವ್ಯವಸಾಯದ ಸಲಕರಣೆಗಳೇ ಅವನ ಆಪ್ತಸಂಗಾತಿಗಳು. ಮೇಲಾಗಿ 'ಕಾರ' ಹಬ್ಬವು ವ್ಯವಸಾಯಕ್ರೀಡೆಯ ಪ್ರತಿರೂಪವಾದ್ದರಿಂದ ಎಲ್ಲ ಕೆಲಸಕ್ಕೂ ಅವನೇ ಬೇಕಾಗುತ್ತದೆ. ಉಳಿದ ಗ್ರಾಮಸ್ಥರು ಸಹಾಯ ಮಾಡಿ

ಇದರಿಂದ ತಮಗೆ ಬರಬಹುದಾದ ಗೌರವ ಮತ್ತು ಪ್ರತಿಫಲವನ್ನು ಪಡೆದು-ಕೊಳ್ಳುತ್ತಾರೆಯೇ ವಿನಾ ಇದರಲ್ಲಿ ಅವರಿಗೆ ಯಾವ ಹಕ್ಕೂ ಇಲ್ಲ.

' ಕರೆ 'ಯನ್ನು ಕದಿಯುವುದು ಒಂದು ಸಾಹಸದ ಗುರುತು ಮತ್ತು ಇಡೀ ಗ್ರಾಮದ ಗೌರವ, ಅಗೌರವದ ಪ್ರಶ್ನೆ ಅದು. ಒಂದು ಗ್ರಾಮದಲ್ಲಿ ಬಹಿರಂಗವಾಗಿ ಗ್ರಾಮದೈವವನ್ನು ಪೂಜಿಸಿ ತಮ್ಮ ಗ್ರಾಮಕ್ಕೆ ಫಲಶಕ್ತಿಯನ್ನು (Fertility) ನೀಡಬೇಕೆಂದು ಇಡೀ ಗ್ರಾಮವೇ ಮಡಿಯಾಗಿ, ಪೂಜಿಸಿ, ಬೇಡಿ ಪಡೆದುದರ ಫಲ ಈ ' ಕರೆ '. ಇದೇ ರೀತಿ ದಸರಾ ಹಬ್ಬದಲ್ಲಿ ಜೋಳದ ದಂಟು, ಮಾರಿಹಬ್ಬದಲ್ಲಿ ಅನ್ನಕ್ಕೆ ಮಾರಿಗೆ ಬಲಿಯಾದ ಕೋಣನ ರಕ್ತ ಬೆರೆಸಿ ಮಾಡಿದ ' ಚರಗ ', ಇವೆಲ್ಲವೂ ಫಲಶಕ್ತಿಯನ್ನು ಪಡೆದಿರುತ್ತವೆ. ಚರಗವನ್ನು ಗ್ರಾಮದ ಗಡಿಗುಂಟ ಚಲ್ಲುವುದರಿಂದ, ಕರೆಯನ್ನು ತಮ್ಮ ತಮ್ಮ ಮನೆಗಳಲ್ಲಿ ಇಟ್ಟು-ಕೊಳ್ಳುವುದರಿಂದ ಗ್ರಾಮಕ್ಕೇ ಫಲಶಕ್ತಿ ಬರುತ್ತದೆ. ಈ ಫಲಶಕ್ತಿಗೆ ' ಹುಲುಸು ' ಅಥವಾ ' ಹುಲ್ಸು ' ಎಂದೂ ಕರೆಯುತ್ತಾರೆ. ಈ ಫಲಶಕ್ತಿಯನ್ನು ಯಾರಾದರೂ ಹೊರಗಿನವರು ಕದ್ದು ತಮ್ಮ ಗ್ರಾಮಕ್ಕೆ ಒಯ್ದರೆ ಈ ಎಲ್ಲಾ ಹುಲಸೂ ಅವರ ಗ್ರಾಮಕ್ಕೆ ಹೋಗುತ್ತದೆ. ಆದ್ದರಿಂದ ಪರ ಊರಿನವರು ಕದಿಯಲು ಪ್ರಯತ್ನಿಸುತ್ತಾರೆ. ಆದರೆ ಈ ' ಫಲಶಕ್ತಿ ವಸ್ತು 'ವನ್ನು ಕದಿಯುವುದಾದರೂ ಸೂಕ್ತವಾದ ರೀತಿಯಲ್ಲಿ, ಕೆಲವು ನಿಯಮಗಳಿಗೆ ಅನುಸಾರವಾಗಿ ಕದಿಯಬೇಕು. ಮೊದಲನೆಯದಾಗಿ ಕದಿಯುವವನು ಪೂಜೆ ಪುನಸ್ಕಾರಗಳು ಮುಗಿದನಂತರ ಕದಿಯಬೇಕು. ಎರಡನೆಯದಾಗಿ, " ನಾನು ಕದಿಯುತ್ತೇನೆ ಮತ್ತು ಇಂಥಾದ್ದೇ ಊರಿಗೆ ಒಯ್ಯುತ್ತಿದ್ದೇನೆ " ಎಂದು ನೆರೆದ ಜನಸಮೂಹಕ್ಕೆ ಕೂಗಿ ಬಹಿರಂಗಪಡಿಸಬೇಕು. ಮೂರನೆಯದಾಗಿ, ಇದ ರೊಡನೆ ಯಾರಿಗೂ ಸಿಗದಂತೆ ತನ್ನೂರ ಗಡಿಯೊಳಕ್ಕೆ ಬರಬೇಕು. ಗಡಿಯಿಂದ ಹೊರಗೆ ಸಿಕ್ಕರೆ ಅವನನ್ನು ಕಡಿದು, ಅವನ ರಕ್ತವನ್ನು ಆ ಫಲಶಕ್ತಿವಸ್ತುವಿಗೆ ಬೆರೆಸಿ ಹಿಂದಕ್ಕೆ ತರುತ್ತಾರೆ. ಈ ಎಲ್ಲಾ ನಿಯಮಗಳನ್ನು ಸರಿಯಾಗಿ ಪಾಲಿಸಿದರೆ ಮಾತ್ರ ಅವನ ಶ್ರಮ ಫಲಿಸುತ್ತದೆ. ಇಲ್ಲದಿದ್ದರೆ ಅವನ ಶ್ರಮದ ಜೊತೆಗೆ ಅವನ ಜೀವ ಮತ್ತು ಅವನ ಗ್ರಾಮದ ಗೌರವವೂ ವ್ಯರ್ಥವಾಗಿಹೋಗುತ್ತದೆ. ಈ ನಿರ್ಬಂಧಗಳೆಲ್ಲ ಇರುವುದರಿಂದಲೇ ಸಾಮಾನ್ಯವಾಗಿ ಯಾರೂ ಕದಿಯಲು ಮುಂದೆ ಬರುವುದಿಲ್ಲ. ಆದರೆ ಹಿಂದೆ ಚರಗ ಮತ್ತು ಕರೆಗಳನ್ನು ಕದ್ದ ಅನೇಕ ಉದಾಹರಣೆಗಳಿವೆ. ಅವುಗಳಲ್ಲಿ ಇಲ್ಲಿ ಎರಡನ್ನು ಮಾತ್ರ ಚರ್ಚೆಗೆ ತೆಗೆದು-ಕೊಳ್ಳಲಾಗಿದೆ.

ಚಿತ್ರದುರ್ಗ ಜಿಲ್ಲೆಯ ದಾವಣಗೆರೆ ತಾಲೂಕ್ ಮಳಲ್ಕೆರೆ ಗ್ರಾಮದವರು ಗ್ರಾಮದೇವರು ಆಂಜನೇಯನ ರಥೋತ್ಸವ ಮಾಡುವರಾದರೂ ಮೊದಲಿನಂತೆ ಈಗ ಚರಗ ಚಲ್ಲುವುದಿಲ್ಲ. ಯಾಕೆಂದರೆ, ಚರಗವನ್ನು ಹಿಂದಕ್ಕೆ ಪಕ್ಕದ

ಊರಿನವನೊಬ್ಬ ಕದ್ದಿದ್ದನಂತೆ. ಹಬ್ಬಹರಿದಿನಗಳಲ್ಲಿ ನೆಂಟರಿಷ್ಟರನ್ನು ಆಹ್ವಾನಿಸುವ ಪದ್ಧತಿ ಇದ್ದರೂ ಈ ಎರಡು ಗ್ರಾಮಗಳ ನಡುವೆ ಸಾಂಪ್ರದಾಯಿಕವಾಗಿ ಬೆಳೆದು ಬಂದ ವೈರತ್ವವಿರುವುದರಿಂದ ತಮ್ಮ ಗ್ರಾಮದೈವಗಳ ರಥೋತ್ಸವಕ್ಕೆ ಯಾರನ್ನೂ ಆಹ್ವಾನಿಸುವುದಿಲ್ಲ. ಚರಗವನ್ನು ಕಳೆದುಕೊಂಡಿರುವುದರಿಂದ ಮಳಲ್ಕೆರೆಯವರು ಚರಗ ಚಲ್ಲುವ ಪದ್ಧತಿಯನ್ನು ಬಿಟ್ಟಿದ್ದಾರೆ. ಈ ಗ್ರಾಮದ ಹಿರಿಯರು ಹೇಳುವಂತೆ ಮಳಲ್ಕೆರೆ ತನ್ನ ಫಲಶಕ್ತಿಯನ್ನು ಕಳೆದುಕೊಂಡಿದೆಯಂತೆ. ಇಲ್ಲಿಯ ಹೊಲಗಳು ಸರಿಯಾಗಿ ಬೆಳೆಯುವುದಿಲ್ಲವಂತೆ. ಈ ಕಾರಣದಿಂದ ಈ ಊರಲ್ಲಿ ದೊಡ್ಡ ವ್ಯವಸಾಯಗಾರರಾಗಲಿ, ಶ್ರೀಮಂತರಾಗಲಿ ಇಲ್ಲವಂತೆ. ವ್ಯವಸಾಯಗಾರನಿಗೆ ಅತ್ಯಾವಶ್ಯಕವಾಗಿ ಬೇಕಾಗುವ ಬಡಿಗ, ಕಮ್ಮಾರ, ಕುಂಬಾರ ಮುಂತಾದ ಯಾವ ಕೈಕಸುಬಿನವರೂ ಈ ಊರಲ್ಲಿ ವಾಸವಾಗಿಲ್ಲವಂತೆ. ಎರಡನೆಯದಾಗಿ, ಈ ಊರಲ್ಲಿ ಮಕ್ಕಳು ಹುಟ್ಟುವುದು ಮತ್ತು ಹುಟ್ಟಿದ ಮಕ್ಕಳು ಬದುಕುವುದೂ ಕಡಿಮೆಯಂತೆ. ಆದ್ದರಿಂದ ಈ ಊರ ಪ್ರಜಾಸಂಖ್ಯೆ ಹೆಚ್ಚಿಲ್ಲವಂತೆ. ಈ ಊರ ದನಕರುಗಳ ಸಂಖ್ಯೆಯೂ ಕಡಿಮೆಯಾಗಿದೆಯಂತೆ. ಈ ಎಲ್ಲಾ ವಿಷಯಗಳು ನಿಜವಲ್ಲ. ಮೇಲಾಗಿ ಆ ಊರಲ್ಲಿ ಬೆಳೆ ಬೆಳೆಯದ್ದಕ್ಕೆ, ಕೈಕಸುಬಿನವರು ಇರದಿದ್ದುದ್ದಕ್ಕೆ ಕಾರಣಗಳು ಬೇರೆಯೇ ಇವೆ. ಆದರೆ ಜನರು ಇದಕ್ಕೆಲ್ಲಾ ಕಾರಣ ತಾವು ಚರಗ ಕಳೆದುಕೊಂಡಿದ್ದೆಂದು ನಂಬಿದ್ದಾರೆ.

ಇದೇ ರೀತಿ ಶಿವಮೊಗ್ಗಾ ಜಿಲ್ಲೆಯ ಚನ್ನಗಿರಿ ತಾಲೂಕಿನ ಹಿರೇಕೋಗಲೂರು ಗ್ರಾಮದವರು ಎರಡು ಕರೆಹರಿಯುತ್ತಾರೆ. ಒಂದು, ಪದ್ಧತಿ ಪ್ರಕಾರ ಗಂಡಸರಿಂದ; ಇನ್ನೊಂದು, ಪದ್ಧತಿಗೆ ವಿರುದ್ಧವಾಗಿ ಹೆಂಗಸರಿಂದ! ಇದಕ್ಕೆ ಕಾರಣ ಹುಡುಕಿದಾಗ ತಿಳಿದುಬಂದ ವಿಷಯ ಹೀಗಿದೆ:

ಅನೇಕ ವರ್ಷಗಳ ಹಿಂದೆ ಹಿರೇಕೋಗಲೂರಿನವನೊಬ್ಬ ಕರೆಹರಿಯುವ ಹಬ್ಬದ ದಿನ ತನ್ನ ಹೆಂಡತಿಯ ಊರಾದ ಅದೇ ತಾಲೂಕಿನ ತ್ಯಾವಣಿಗೆ ಗ್ರಾಮಕ್ಕೆ ಹೋಗಿದ್ದ. ಸಮಯಸಾಧಿಸಿ ಕರೆಯನ್ನು ಕದ್ದು ತನ್ನ ಊರ ಕಡೆ ಓಡಿದ. ಬೆನ್ನಟ್ಟಬಂದವರಿಗೆ ಅವನನ್ನು ತಮ್ಮ ಊರ ಗಡಿಯೊಳಗೆ ಹಿಡಿಯಲಾಗದ್ದರಿಂದ ಇವನ ಪ್ರಯತ್ನವು ಸಫಲವಾಗಿದ್ದಿತು. ತನ್ನ ಊರ ಗಡಿಯೊಳಗಾದ್ದರಿಂದ ತನ್ನನ್ನೇನೂ ಮಾಡಲಾರರೆಂಬ ಸಾಂಪ್ರದಾಯಿಕವಾದ ನಂಬಿಕೆ ಮತ್ತು ಧೈರ್ಯದಿಂದ ತನ್ನ ಕಾಲಲ್ಲಿ ನೆಟ್ಟ ಮುಳ್ಳುಗಳನ್ನು ಕೀಳುವಲ್ಲಿ ಮಗ್ನನಾಗಿದ್ದನಂತೆ. ಬೆನ್ನಟ್ಟಬಂದವರು ಪದ್ಧತಿಗೆ ವಿರುದ್ಧವಾಗಿ ಇವನನ್ನು ಕೊಂದುಹಾಕಿ ಅವನಲ್ಲಿ ಹುಡುಕಾಡಿದಾಗ ಅವನಲ್ಲಿ ಕರೆ ಇರಲಿಲ್ಲವಾದ್ದರಿಂದ ನಿರಾಶರಾಗಿ, ನಿರಪರಾಧಿಯನ್ನು ಕೊಂದೆವಲ್ಲಾ ಎಂದು ಭಯಗೊಂಡು ತಮ್ಮೂರಿಗೆ ಹಿಂತಿರುಗಿದರು. ಮಾರನೆಯ ದಿನ ಈ ಸುದ್ದಿ ತಿಳಿದ

ಹಿರೇಕೋಗಲೂರಿನವರು, ಶೋಧಿಸಿದಾಗ ಅವನ ಬಾಯಿಯಲ್ಲಿ 'ಕರೆ' ಬಳ್ಳಿಯ ತುಂಡೊಂದು ಸಿಕ್ಕಿತು. ಅಂದೇ ಅವರು ತಮ್ಮ ಈ ವಿಜಯದ ಕುರುಹಾಗಿ ಎರಡನೆಯ ಕರೆಹರಿಯಲು ಶುರುಮಾಡಿದರು. ಪದ್ಧತಿ ಪ್ರಕಾರ ಎರಡನ್ನೂ ಗಂಡಸರೇ ಹರಿಯಬೇಕಿತ್ತು. ಆದರೆ ನಲ್ಕುದರೆಯವರು ಪದ್ಧತಿಗೆ ವಿರುದ್ಧ ವಾಗಿ ತಮ್ಮೂರ ಗಡಿಯ ಹೊರಗಿದ್ದವನನ್ನು ಕೊಂದಿದ್ದರಿಂದ ಆ ಗ್ರಾಮಸ್ಥ ರನ್ನು ಅವಮಾನಿಸಲು ಇವರೂ ಪದ್ಧತಿಗೆ ವಿರುದ್ಧವಾಗಿ ಈ ಎರಡನೆಯ ಕರೆ ಯನ್ನು ತಮ್ಮ ಹೆಂಗಸರಿಂದ ಹರಿಸುತ್ತಾರೆ. ಈ ಅವಮಾನದಿಂದಾಗಿ ಹಿರೇ-ಕೋಗಲೂರಿನಲ್ಲಿ ಕರೆಹರಿಯುವ ದಿನ ತ್ಯಾವಣಿಗೆಯವರು ಇಂದಿಗೂ ಹಾಲು ಉಪಯೋಗಿಸುವುದಿಲ್ಲ ಮತ್ತು ರಾತ್ರಿ ದೀಪ ಹಚ್ಚುವುದಿಲ್ಲ ಮತ್ತು ಕತ್ತ ಲಾಗುವುದರೊಳಗೆ ತಮ್ಮ ದಿನನಿತ್ಯದ ಕೆಲಸಕಾರ್ಯಗಳನ್ನು ಮುಗಿಸಿಕೊಂಡು ಮಲಗಿಬಿಡುತ್ತಾರೆ.

ಹೀಗೆ ಒಂದು ಊರಿನ ಫಲಶಕ್ತಿಯ ಕುರುಹಾದ 'ಕರೆ', 'ಚರಗ' ಮುಂತಾದವುಗಳನ್ನು ಕಳೆದುಕೊಳ್ಳುವುದು ಇಡೀ ಗ್ರಾಮಕ್ಕೇ ಅವಮಾನ ವನ್ನು ತರುತ್ತದೆ. ಇದೇ ರೀತಿ ಇದನ್ನು ಕದಿಯುವುದು ಮತ್ತು ಇದನ್ನು ರಕ್ಷಿಸುವುದೂ ಒಬ್ಬನಿಗೆ ಸೇರಿರದೆ ಇಡೀ ಗ್ರಾಮಕ್ಕೆ ಸೇರಿದ್ದಾಗಿರುತ್ತದೆ. ಹಿಂದೆ ಈ ರಕ್ಷಣೆಯ ಕಾರ್ಯವು ಗ್ರಾಮಸ್ಥರಲ್ಲಿ ಒಗ್ಗಟ್ಟು ಮತ್ತು ಸಹಕಾರ ಮನೋಭಾವನೆಯನ್ನು ತರುತ್ತಿದ್ದವು. ಈ ಒಗ್ಗಟ್ಟು ಬರೀ ಕರೆ ಕದಿಯಲು ಅಥವಾ ಅದನ್ನು ರಕ್ಷಿಸಲು ಮಾತ್ರವಲ್ಲದೆ ಇನ್ನೂ ಅನೇಕ ವಿಷಯಗಳಲ್ಲಿಯೂ ವ್ಯಕ್ತವಾಗುತ್ತಿತ್ತು. ಸುಮಾರು ೨೦–೩೦ ವರ್ಷಗಳ ಹಿಂದೆ ಕಾರಹುಣ್ಣಿಮೆಯ ನಂತರ ಊರಲ್ಲಿ ಯಾವ ಮದುವೆಗಳೂ ನಡೆಯುತ್ತಿರಲಿಲ್ಲ. ಆದರೆ ಕಾರು ಹಬ್ಬ ಬಿತ್ತನೆಯ ಕೆಲಸಕ್ಕೆ ನಾಂದಿಯಾಗುತ್ತಿತ್ತು. ಬಿತ್ತುವುದು ಮತ್ತು ಮದುವೆ ಎರಡೂ ಮುಖ್ಯವಾದ ಕಾರ್ಯಗಳು. ಇದಕ್ಕೆ ಗ್ರಾಮಸ್ಥರ ಸಹ-ಕಾರ ಮತ್ತು ಸಹಾಯ ಅಗತ್ಯವಿದ್ದಿತು. ಮೇಲಾಗಿ ವರ್ಷದಲ್ಲಿ ಕೇವಲ ೧೫–೨೦ ದಿನಗಳು ಮಾತ್ರ ಬರುವ ಈ ಬಿತ್ತುವ "ಜಿದೆ"ಯಲ್ಲಿ ಬಿತ್ತದಿದ್ದರೆ ರೈತನಿಗೆ ಆ ವರ್ಷ ಜೆಳೆಯಿಲ್ಲ. ಇದನ್ನರಿತ ಗ್ರಾಮದ ಹಿರಿಯರು ಮದುವೆ ಮಾಡಲು 'ಕಾರ' ಹಬ್ಬವೇ ಕೊನೆ ಎಂದು ನಿಗದಿಮಾಡಿದ್ದರು. ಮುಂದೆ ಇದು "ಕರೆಹರಿದ ಮೇಲೆ ಕಂಕಣ ಕಟ್ಟಬಾರದು" ಎಂಬ ನಾಣ್ಣುಡಿಯಾಗಿ, ಆಚರಣೆಗೂ ಬಂದಿತ್ತು.[೧೦] ಅಲ್ಲದೆ ಕಾರಹಬ್ಬವಾಗದೆ ಯಾರೂ ಬಿತ್ತುತ್ತಿರಲೂ

---

೧೦. ಡಾ। ಗದ್ದಗಿಮಠ ಇವರೂ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ವಿವರಗಳಿಗೆ ಮೇಲೆ ಕೊಟ್ಟಿರುವ ಅವರ ಕೃತಿಯ ೧೭೫ನೇ ಪುಟವನ್ನು ನೋಡಿ.

ಇಲ್ಲ. ಕಾರಣ ಬೀಜಾರಾಧನೆಯಾಗದೆ ಉತ್ತಮ ಫಸಲು ಕೊಡುವ ಬೀಜ ಯಾವುದೆಂದು ಅವರಿಗೆ ತಿಳಿಯುವುದಾದರೂ ಹೇಗೆ ?

ಆದರೆ ಇಂದು ಮಳೆಗಾಲದಲ್ಲಿ, ಬಿತ್ತನೆಯ ಕಾಲದಲ್ಲಿ, ಬಿತ್ತುವ ಬೀಜಗಳಲ್ಲಿ ಅನೇಕ ಬದಲಾವಣೆಗಳಾಗಿವೆ. ಹಿಂದೆ ಬಿತ್ತುತ್ತಿದ್ದ ಫಸಲುಗಳಿಗೆ ಮೃಗಶಿರ ಮಳೆಯಿಂದ ಬಿತ್ತನೆ ಶುರುವಾಗುತ್ತಿತ್ತು. ಈಗ ಕೆಲವು ಬೀಜಗಳನ್ನು ರೋಹಿಣಿ, ಕೃತಿಕ, ಅನೇಕ ವೇಳೆ, ಭರಣಿ ನಕ್ಷತ್ರಗಳಲ್ಲಿಯೂ ಬಿತ್ತಬೇಕಾಗುವುದರಿಂದ ಕಾರಹಬ್ಬ ಬರುವುದರೊಳಗೆ ಮುಂಗಾರು ಬಿತ್ತನೆಗಳು ಮುಗಿದಿರುತ್ತವೆ. ಈ ಒಂದು ಪದ್ಧತಿ ತಪ್ಪಿಸಿದ್ದರಿಂದ ಎಲ್ಲಾ ಪದ್ಧತಿಗಳೂ ತಾಳ ತಪ್ಪಿದವು. 'ಕಾರ'ಹುಣ್ಣಿಮೆಯಾದಮೇಲೂ ಅನೇಕ ಮದುವೆಗಳು ನಡೆಯುತ್ತಿವೆ. ಆದರೆ ಪದ್ಧತಿ ಪ್ರಕಾರ ಕರೆಹರಿದನಂತರ ಮದುವೆ ಮಾತ್ರ ಮಾಡುವುದಿಲ್ಲ. ಈಗ ಎಲ್ಲಾ ಮದುವೆಗಳು ಮುಗಿಯದೆ ಕರೆಹರಿಯುವುದಿಲ್ಲ! ಅಂದರೆ ಮಿತಿಗೆ ಸರಿಯಾಗಿ 'ಕಾರ'ಹಬ್ಬದ ಮೊದಲ ಹಂತವಾದ ಎತ್ತು ಪೂಜೆ ಮಾಡಿ, ಹಬ್ಬದ ಶಾಸ್ತ್ರ ಮುಗಿಸಿಬಿಡುತ್ತಾರೆ ಮುಂದೆ ಊರಲ್ಲಿ ಎಲ್ಲಾ ಮದುವೆಗಳು ಮುಗಿದನಂತರ ಉಳಿದ ಎರಡು ಹಂತಗಳನ್ನು ಆಚರಿಸುವಷ್ಟು ಬದಲಾವಣೆ ಹೊಂದಿದವು. ಇಂದು ರಾಜಕೀಯ ಗೊಂದಲ, ಪಾರ್ಟಿ-ಪಕ್ಷಗಳ ಬಡಿದಾಟದಿಂದಾಗಿ ಅನೇಕ ಹಬ್ಬಗಳಂತೆ 'ಕಾರ' ಹಬ್ಬವನ್ನೂ ಕೆಲವು ಕಡೆ ಆಚರಿಸುವುದಿಲ್ಲ. ಹೀಗೆ ಗ್ರಾಮದ ಒಗ್ಗಟ್ಟು ಮತ್ತು ಸಹಕಾರಗಳ ಆಧಾರವಾಗಿದ್ದ ಹಬ್ಬಗಳನ್ನು ಕೈಬಿಟ್ಟಿರುವುದರಿಂದ ಗ್ರಾಮಜೀವನದಲ್ಲಿ ಅಶಾಂತಿ ಉಂಟಾಗುತ್ತಾಸಾಗಿದೆ. ಹಿಂದಿನವರು ಬಹುಶಃ ಗ್ರಾಮದ ಒಗ್ಗಟ್ಟಿಗೇ "ಹುಲಸು" ಅಥವಾ "ಫಲಶಕ್ತಿ" ಎಂದು ಕರೆದಿರಬಹುದೆಂದು ಕಾಣುತ್ತದೆ. ಇಂದು ಗ್ರಾಮಗಳಲ್ಲಿ ಸಮರಸ, ಸಹಕಾರ ಮತ್ತು ಅಭಿವೃದ್ಧಿ ಮುಂತಾದವುಗಳನ್ನು ತರಬೇಕೆಂದಿರುವವರು ಹಬ್ಬಗಳನ್ನು ಜೀರ್ಣೋದ್ಧಾರಗೊಳಿಸುವುದರ ಮೂಲಕ ಇಡೀ ಗ್ರಾಮ ಜೀವನದಲ್ಲೇ ಮಹತ್ತರವಾದ ಬದಲಾವಣೆಯನ್ನು ತರಬಹುದು. ಇದಕ್ಕೆ ಮೊದಲು ಇಂಥ ಹಬ್ಬಗಳ ಮತ್ತಿತರ ಹಬ್ಬಗಳ ವೈಜ್ಞಾನಿಕ ಅಭ್ಯಾಸ ಮಾಡುವ ಅಗತ್ಯವೂ ಇದೆ.[೧೧]

★ ಗುರುಮೂರ್ತಿ ಕೆ. ಗೌಡರ್

---

೧೧. ಹೆಚ್ಚಿನ ವಿವರಗಳಿಗೆ ಪ್ರೊ॥ ಕೆ. ಜಿ. ಗುರುಮೂರ್ತಿಯವರ 'ವ್ಯಾವಹಾರಿಕ ಮಾನವಶಾಸ್ತ್ರ' (ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೦) ಎಂಬ ಪುಸ್ತಕವನ್ನು ನೋಡಿರಿ.

ವಾಟಿಯಾವು

ವಚನಸಾಹಿತ್ಯದ ವೈವಿಧ್ಯಪೂರ್ಣ ಉಪಮೆ ಮತ್ತು ರೂಪಕಪ್ರಪಂಚದಲ್ಲಿ ಹಸು ಹಲವು ರೀತಿಯಲ್ಲಿ ಗೋಚರಿಸುತ್ತದೆ. ಅವುಗಳಲ್ಲಿ 'ವಾಟಿಯಾವು' ಒಂದು. ಬಸವಣ್ಣ ಮತ್ತು ಚನ್ನಬಸವಣ್ಣನವರ ವಚನಗಳಲ್ಲಿ ಅನೇಕ ಭಿನ್ನ ಪಾಠಗಳಿಂದ ಕಂಡುಬರುವ ಈ ಪದದ ಅರ್ಥ ಇನ್ನೂ ಸಂದೇಹದಲ್ಲಿ ನಿಂತಿದೆ.

೧. ಬಸವಣ್ಣನವರ ವಚನ :

ಊರ ಮುಂದೆ ಹಾಲಹಳ್ಳ ಹರಿವುತ್ತಿರಲು
ಒಜೆಯಾವಿನ ಬೆನ್ನ ಹರಿಯಲದೇಕಯ್ಯಾ?
ಲಜ್ಜೆಗೆಡಲೇಕೆ? ನಾಣುಗೆಡಲೇಕೆ?
ಕೂಡಲಸಂಗಮದೇವರುಳ್ಳನ್ನಕ್ಕ ಬಿಜ್ಜಳನ ಭಂಡಾರವೇನಿಗೇಕಯ್ಯಾ?[೧]

[ಪಾಠಾಂತರ: ವಾಳಿ, ವಜೆ]

ಈ ವಚನಕ್ಕೆ ಡಾ. ಡಿ.ಎಲ್.ಎನ್. ಅವರು "....ಊರಿನ ಮುಂದೆ ಹಾಲಿನ ಹಳ್ಳವೇ ಹರಿಯುತ್ತಿದ್ದರೆ ತೊಟ್ಟುತೊಟ್ಟಾಗಿ ಹಾಲನ್ನು ಜಿನುಗಿಸುವ ಹಸುವಿನ[೨] ಹಿಂದೆ ಹಾಲಿಗಾಗಿ ಯಾರು ಹೋಗುತ್ತಾರೆ?...." ಎಂದು ವಿವರಣೆ ನೀಡಿರುವರು.[೩] ಇವರ ಪ್ರಕಾರ 'ಒಜೆ' ಶುದ್ಧ ಪಾಠ. ಇದರ ಅರ್ಥ ಜಿನುಗುಹಾಲಿನ ಹಸು, ಅಂದರೆ ನಿಷ್ಪ್ರಯೋಜಕ ಆಕಳು.[೪]

೨. ಚನ್ನಬಸವಣ್ಣನವರ ವಚನ :

....ಹಾಲಸಾಗರದೊಳಗೋಲಾಡುತ್ತಿರ್ದು
ಒಜೆಯಾವಿನ ಬೆನ್ನ ಹರಿವವನಲ್ಲ....[೫]

[ಪಾಠಾಂತರ: ದೊಡ್ಡ, ದೊಡ್ಡಿ, ವಾರಿ, ವಾಳಿ, ವೊದಿ]

ಇಲ್ಲಿಯು ದೊಡ್ಡ, ದೊಡ್ಡಿ ಮತ್ತು ಶ್ರೀ ಡಿ.ಎಲ್.ಎನ್. ಒಪ್ಪಿದ 'ಒಜೆ' ಎಂಬ ಪಾಠಗಳನ್ನು ಬಿಟ್ಟರೂ 'ವೊದಿಯಾವು' ('ಒದೆ' ಶುದ್ಧ ಪಾಠ)

---

೧. ಬಸವಣ್ಣನವರ ವಚನಗಳು (ಡಾ. ಆರ್. ಸಿ. ಹಿರೇಮಠ ಸಂಪಾದಿತ), ೭೫೪.

೨. "ಹಾಲು ಬತ್ತಿದ ಹಸುವಿಂಗೆ ಕಜುನ ಬಿಟ್ಟಡೆ ಒದೆವುದಲ್ಲದೆ ಉಣಿಸಲೀವುದೆ?" (ಅರಿವಿನ ಮಾರಿತಂದೆಯ ವಚನ, ಕ.ಕ.ಚ., ಪು. ೨೧೧), ಹೋಲಿಸಿರಿ.

೩. ಬಸವಣ್ಣನವರ ವಚನಗಳ ಪಾಠ—ಡಿ. ಎಲ್. ಎಸ್. (ಶರಣಸಾಹಿತ್ಯ, ೧೧-೫+೬).

೪. ಬಸವಣ್ಣನವರ ಟೀಕಿನ ವಚನಗಳು ಎಂಬ ಇತ್ತೀಚಿನ ಗ್ರಂಥದಲ್ಲಿ ಈ ವಚನಕ್ಕೆ 'ವಾಟಿಯಾವು' ಎಂಬ ಪಾಠವಿದ್ದು 'ಗೊಡ್ಡಾಕಳು' ಎಂದು ಅರ್ಥ ಹೇಳಲಾಗಿದೆ.

೫. ಚೆನ್ನಬಸವಣ್ಣನವರ ವಚನಗಳು (ಡಾ. ಆರ್. ಸಿ. ಹಿರೇಮಠ ಸಂಪಾದಿತ), ೬೮೩.

ಎಂಬ ಪಾಠ ಸಂದರ್ಭಕ್ಕೆ ಹೊಂದಿಕೊಂಡು 'ನಿಷ್ಪ್ರಯೋಜಕ ಆಕಳು' ಎಂಬ ಅರ್ಥವನ್ನೇ ಕೊಡುತ್ತದೆ.

೩. ಪ್ರಭುದೇವರ ವಚನ :

ದೂರದ ತುದಿಗೊಂಬನಾರಯ್ಯ ಗೆಲುವರು?
ಮೀರಲಿಲ್ಲದ ನಿರಾಳದ ನಿಲುವನು ಮೀಱಿ ಕಾಬ ಘನವನು
ಬೇಱೆ ತೋಱಲಿಲ್ಲ ತೋಱಿ ಕಾಬಡೆ ತನ್ನ ಹಿಡಿಯಲಿಲ್ಲಯ್ಯ.
ಒಱೆಯಾವಿನ ಹಾಲನಾಱಯ್ಯ ಕಱೆವರು ?
ಮೂಱುಲೋಕದೊಳಗೆ ತಾನಿಲ್ಲ ಗುಹೇಶ್ವರ[6]

[ಪಾಠಾಂತರ: ವೊಱೆ, ಒದೆ]

ಅಸಾಧ್ಯ ಕಾರ್ಯಗಳನ್ನು ಹೇಳುವ ಈ ಸಂದರ್ಭಕ್ಕೆ ಶ್ರೀ ಡಿ.ಎಲ್.ಎನ್. ಅರ್ಥದ 'ಒಱೆಯಾವು' ಪಾಠಕ್ಕಿಂತ 'ಒದೆಯಾವು' ಹೆಚ್ಚು ಒಪ್ಪುತ್ತಿದ್ದು 'ನಿಷ್ಪ್ರಯೋಜಕ ಆಕಳು' ಎಂಬ ಅರ್ಥವನ್ನೇ ಕೊಡುತ್ತದೆ.[7]

೪. ಸ್ವತಂತ್ರಸಿದ್ಧಲಿಂಗೇಶ್ವರವಚನ :

ಬರುಕಾಯನಂತೆ ಹಾಲಹಳ್ಳ ಹರಿಯುತ್ತಿರಲು
ಅದಬಿಟ್ಟು ಉರೆನೂಪಿನ ಬೆನ್ನ ಬಳಿ ಹರಿಯಲುಂಟೇ?[8]

೫. ಸಿಂಗಿರಾಜಪುರಾಣ :

ಕಾಮಧೇನುವ ಕಱೆವರಲ್ಲದದಱೊಳು
ಹನಱಿವಾಮಿಷಕೆ ಕಚ್ಚಲಂ ಸೀಳ್ವರೇ[9]

ಈ ಎರಡು ಪಾಠಗಳು ಅಶುದ್ಧವಾಗಿದ್ದು ಸ್ವಲ್ಪ ಹೆಚ್ಚುಕಡಿಮೆ ಮೇಲಿನ ವಚನಗಳ ಅರ್ಥವನ್ನೇ ಒಳಗೊಂಡಿವೆ.

---

೬. ಅಲ್ಲಮನ ವಚನಚಂದ್ರಿಕೆ (ಡಾ. ಎಲ್. ಬಸವರಾಜು), ೩೬೫.

೭. ಪ್ರಭುದೇವರ ಟೀಕಿನ ವಚನಗಳು ಎಂಬ ಗ್ರಂಥದಲ್ಲಿ '...ತನ್ನ ಭಿನ್ನದ ಮಾಡಿ ಆ ವಸ್ತುವ ಅಱಿಸಿಹೆನೆಂದಡೆ ವೊಱೆಯಾಕಳ ಹಾಲ ಕಱೆದುಕೊಂಡು ಸುಱಿಸಿಹೆನೆಂಬಂತೆ ಮನದ ಆಯಾಸವೆ ಮುಟ್ಟೋದಲ್ಲದೆ ಕಾರ್ಯವಿಲ್ಲ..." ಎಂದು ಇದಕ್ಕೆ ಅರ್ಥ ಹೇಳಲಾಗಿದೆ.

"...ಬಲ್ಲದ ಸತಿಗೆ ರತಿಕೂಟವ ಬೆಳಸುವಂತೆ. ಕೊಲ್ಲಿಯಾವಿನಲ್ಲಿ ಸಲ್ಲೀಲೆಯ ನಱಿಸುವಂತೆ—(ಮೋಳಿಗಯ್ಯನ ವಚನ, ಕ. ಕ. ಚ., ಪು. ೧೯೨), ಹೋಲಿಸಿರಿ. "ಕೊಲ್ಲಿಯೆಂದು ವಕ್ರಂ"—ಕರ್ಣಾಟಕ ಶಬ್ದಸಾರಂ, ಪು. ೨೩.

೮. ಮಾಹೇಶ್ವರಸ್ಥಲದ ೩೦ನೆಯ ವಚನ.

೯. ಸಿಂಗಿರಾಜಪುರಾಣ, ೨೦-೧೧.

೬. **ಲೋಕೋಪಕಾರದ ಒಂದು ಪದ್ಯ :**

ರುಚಿ ಮೇಣು ಬಿಳಿಯು ಸಾಸಿವೆ |
ಬಚಿ ಬಿಟಲಿನ ಬೀಜಮೆಂಬಿವಂ ಸರಿಗೊಂಡಂ |
ತಜವಾತ್ರದೊಳರೆವೆಚ್ಚುಗೆ |
ನಿಚ್ಚೆಯಿಂ ಬೋಱೆಯಾವು ಮಟ್ಟಂ ಕಱೆಗುಂ ||೧೦

ಎಂಬ ಕಂದಕ್ಕೆ "ಅಡಗಾಗಿರ್ದ ಆಕಳು ಸಾಧುಗಳಾಗಿ ಕಱೆವುವು...." ಎಂದು ಪ್ರಾಚೀನ ಟೀಕೆಯಿರುವುದರಿಂದ 'ಒಱೆಯಾವು' ಅಂದರೆ ಅಗಡು ಆಕಳು (ತುಂಟ ಆಕಳು)[೧೧] ಎಂದು ಅರ್ಥ ಹೇಳಬೇಕಾಗುತ್ತದೆ.

೭. **ಗುರುಶಂಕರೇಶ್ವರಶತಕ :**

ನೋಡಿರೆ ನೋಡಿರೇ ಮನೆಯು ಮುಂದಣ ಪಾಲ್ಗಡಲಂ ಬಿಸುಟ್ಟು ಜೋ |
ಡಾಡುವ ಬಂಜೆಗೋವ ಕಱೆದುಂಡಪೆನೆಂಬವನಂತೆ ಬಾಸ್ಪನಿ |
ರೂಡನ ಪಾದಪಂಕಜಮನೊಲ್ಲದೆ ನಿಂಬಕಕೋಟಿದೈವಮಂ |
ಮಾಡುವ ಮೂಢರಂ ಪಿರಿಯ ಪೇಸಿಗಳಂ ಗುರುಶಂಕರೇಶ್ವರಾ ||೧೨

ಬಸವಣ್ಣ ಚನ್ನಬಸವಣ್ಣನವರ ವಚನಗಳ ಭಾವವನ್ನೇ ವ್ಯಕ್ತಪಡಿಸುವ ಈ ಪದ್ಯದಿಂದ ಒಱೆಯಾವು ಇಲ್ಲವೆ ಓಱೆಯಾವು ಎಂಬ ಪದಕ್ಕೆ ಬಂಜೆಗೋವು ಎಂದೂ ಒಟ್ಟಿನಲ್ಲಿ ನಿಷ್ಪ್ರಯೋಜಕ ಆಕಳು ಎಂದೂ ಅರ್ಥ ಹೇಳಬೇಕಾಗುತ್ತದೆ.

ಈ ವರೆಗಣ ವಿವೇಚನೆಯಿಂದ ಬಸವಣ್ಣನವರ ವಚನದ ಪಾಠ ಒಱೆಯಾವು ಇಲ್ಲವೆ ಓಱೆಯಾವು ಇರಬಹುದೆಂದೂ, ಅರ್ಥ ಜಿನುಗುಹಾಲಿನ ಆಕಳು, ತುಂಟ ಆಕಳು (ಒದೆವ ಆಕಳು), ಬಂಜೆ ಆಕಳು ಎಂದೂ ಒಟ್ಟಿನಲ್ಲಿ 'ನಿಷ್ಪ್ರಯೋಜಕ ಗೋವು' ಎಂದೂ ಅರ್ಥ ಹೇಳಬೇಕೆನಿಸುತ್ತದೆ. ಆದರೆ ಬಸವಣ್ಣನವರ (ಮತ್ತು ಚೆನ್ನಬಸವಣ್ಣನವರ) ವಚನಕ್ಕೆ ಇರುವ 'ವಾಟಿಯಾವು' ಎಂಬ ಇನ್ನೊಂದು

---

೧೦. ಲೋಕೋಪಕಾರ, ೯–೧೯೬.

೧೧. "ಪಾತ್ರೀವಿದ ಮೊಲೆಯುರೆ ಮುತಿಗೆಟ್ಟಾವಿನ ತುದಿ ಕೋಡ ಸೀಡಿ ಕರೆಯದೆ ಪಾಣಂ" —ಧರ್ಮನಾಥಪುರಾಣ, ೫–೧೧೭.

"ಕಾಮಧೇನುವಂ ಬಿಟ್ಟಟ್ಟಿಯುಗಡಾವಿಗಿರದೆ ಬಿಟ್ಟದಿ ತೃಣವ ಪೊತ್ತಡಕುವಂದಂ"—ರಾಘವಾಂಕಚರಿತ್ರೆ, ೧೩–೪೦, ಹೋಲಿಸಿರಿ.

೧೨. ಕರ್ನಾಟಕ ಭಾರತಿ, ೨–೧.

"ಹಟ್ಟಿಯೊಳು ಸುರಧೇನುವಿಗೆ ಬಂದಳವಟ್ಟಿರಲು ಗೊಡ್ಡಂ ಪಿಡಿದು ಮುತಿಗೆಟ್ಟು ಕಱೆದುಂಡಪೆನೆಂಬವನವೊಲು"—ಬಸವಪುರಾಣ, ೫೯–೪೫.

"ಸುರಧೇನುವಿದ್ದು ಬರಡಾಕಳಿಗೆ ಆಸೆಮಾಡುವಂತೆ"—ಅಖಂಡೇಶ್ವರವಚನ, ೯–೫೬, ಹೋಲಿಸಿರಿ.

ಪಾಠಕ್ಕೆ ಮೇಲೆ ಹೇಳಿದ ಅರ್ಥಗಳನ್ನೊಳಗೊಂಡ 'ನಿಪ್ಪ ಯೋಜಕ ಆಕಳು' ಎಂದು ಅರ್ಥವೆ? ಬೇರೊಂದು ಅರ್ಥವೇ? ಎಂಬ ಪ್ರಶ್ನೆ ಎದುರಾಗುತ್ತದೆ. ಈ ಪ್ರಶ್ನೆಯನ್ನು ಬಿಡಿಸುವಲ್ಲಿ ಶಾಸನಗಳ ಕೊನೆಯಲ್ಲಿ ಬರುವ ಫಲಶ್ರುತಿವಾಕ್ಯಗಳನ್ನು ನೋಡಬಹುದಾಗಿದೆ.

"ಇದ ಸಲಲೀಯದವರು ವಾರನಾಸಿಯುಂ ಕವಿಲೆಯುಮನಟಿದೊ"[೧೩]

"ಇ[ದ]ನಱಿದಾತ ವಾರಣಾಸಿಯುಮ ಕವಿಲೆಯುವನಟಿದ ಪಾತಕನಕ್ಕು"[೧೪]

ಶಾಸನವನ್ನು ಹಾಳುಗೆಯ್ದರೆ ಗೋಹತ್ಯದ ಪಾಪ ಎಂದು ಈ ವಾಕ್ಯಗಳ ಅರ್ಥ. ಇನ್ನು,

"ಆರಾನುಮೀ ದಾಸವನಟಿದೊರುಳ್ಳೊಡೆ ವಾರಣಸಿಯುಂ ಶ್ರೀಪರ್ವತಮುಮಂ ಕವಿಲೆಯುಂ ಕವಿಲೆಯ ಕಱುವುಮನಟಿದೋರ್"[೧೫]

"ಪುರ್ವಸಿ[ದ್ಧಾ]ಯ ಕಟಿದುಕೊ(ಣ್ತ)ರಪ್ಪಡೆ ಕವಿಲೆಯುವ ಕಱುವುವನಟಿದರ ಲೋಕಕೆ ಸಲ್ಗು"[೧೬]

ಶಾಸನವನ್ನು ನಾಶಗೊಳಿಸಿದರೆ ಆಕಳನ್ನೂ ಆಕಳಕರುವನ್ನೂ ಕೊಂದ ಪಾಪ ಎಂದು ಈ ವಾಕ್ಯಗಳ ಅಭಿಪ್ರಾಯ. ಇನ್ನು 'ಬ್ರಾಹ್ಮರ ಕೊಂದ ಪಾಪ ಕಂದಳು ಕಪಿಲೆಯ ಕೊಂದ ಪಾಪ'[೧೭] ಎನ್ನುವ ಬೂದಿಕೋಟೆ ಗ್ರಾಮದ ಶಾಸನವು ಕರುವಿದ್ದ (?) ಆಕಳನ್ನು[೧೮] ಕೊಂದ ಪಾಪವನ್ನು ಉಲ್ಲೇಖಿಸುತ್ತದೆ. ಇಷ್ಟು ಹಿನ್ನೆಲೆಯಲ್ಲಿ ಗಟ್ಟುಕಾಮದೇವನಹಳ್ಳಿ ಶಾಸನದ ಕೊನೆಯ 'ಇದನಟಿದವ ಬರನಸಿಯು ವಾಟಿಕವಿಲೆಯುವನ[ಟಿ]ದ ಪತಕನಕ್ಕು"[೧೯] ಎಂಬ ವಾಕ್ಯವನ್ನು ಗಮನಿಸಿದರೆ 'ವಾಟಿಯಾವು' ಅಂದರೆ ಕರುವುಳ್ಳ ಹಸು (ಸವತ್ಸಗೋವು) ಎಂಬ ಅರ್ಥ ಹೊರಡಲು ಅವಕಾಶವಿದೆ. ಮರಾಠಿಯಲ್ಲಿ ಆಕಳು ಈಯಿತು ಎನ್ನುವುದಕ್ಕೆ 'ಗಾಯ ವ್ಯಾಲೀ' ಎಂದು ಹೇಳುವುದರಿಂದ ವಾಟಿಯಾವು ಅಂದರೆ ಕರುವುಳ್ಳ ಹಸು ಎನ್ನಲು ಇನ್ನೂ ಧೈರ್ಯಬರುತ್ತದೆ.

---

೧೩. S.I.I., IX–i, 26.

೧೪. S.I.I., IX–i, 54.

೧೫. S.I.I., IX-i, 59.

೧೬. S.I.I., XI–i, 35.

೧೭. Ec. XVII, ಬಂಗಾರಪೇಟೆ, ೧೧೨, ಕ್ರಿ.ಶ. ೧೪೬೭.

೧೮. ಕೆಲವು ಶಾಸನಗಳು ಉಭಯಮುಖದಾನ(ಇಕ್ಕತ್ತಿಗೆಯ ಕವಿಲೆಯ ದಾನ)ವನ್ನು ಹೇಳುತ್ತವೆ. ಈಯುತ್ತಿರುವ ಅಂದರೆ ಕರುವಿನ ಮುಖ ಹೊರಗೆ ಬಂದ ಆಕಳನ್ನು ದಾನವಾಗಿ ಕೊಡುವುದು ಇದರ ಅರ್ಥ. ಯಾಜ್ಞವಲ್ಕ್ಯಸ್ಮೃತಿ, ವರಾಹಪುರಾಣಗಳು ಈ ಉಭಯಮುಖಿ ದಾನವನ್ನು ಉಲ್ಲೇಖಿಸುತ್ತವೆ.

೧೯. EC. XVII, 1–2.

ಬಸವಣ್ಣನವರು ಕರುಣೆಯ ಕಡಲ. ಅವರ ಮನದಲ್ಲಿ ಮರುಕ ಹೆಚ್ಚು. ದಯಾಶೀಲರಾದ ಅವರು ಇಲ್ಲಿ ಜಿನುಗುಹಾಲಿನ, ಒದೆಯುವ, ಬಂಜೆ ಎಂಬ ಅರ್ಥದ ಒಜಿಯಾವು ಓಜಿಯಾವು ಒದೆಯಾವು ಬಳಸದೆ ಕರುವುಳ್ಳ ಆಕಳು ಎಂಬ ಅರ್ಥದ ವಾಟಿಯಾವು[೨೦] ಪದವನ್ನು ಬಳಸಿರುವ ಸಂಭವ ಹೆಚ್ಚು.

ಕರುವನಗಲಿಸಿ ತಾಯ ಮರುಗಿಸಿ
ಮೊಲೆವಾಲ ಕರೆದುಣಬೇಡೆಲವೋ...

ಮೊದಲಾದ ವಚನಗಳಲ್ಲಿ ವ್ಯಕ್ತವಾದ ಅವರ ಇಂಥ ಅನುಕಂಪ, ಪ್ರಾಣಿದಯೆಗಳನ್ನು ಗಮನಿಸಬೇಕು. ಅದಕ್ಕಾಗಿ ಬಸವಣ್ಣ ಚನ್ನಬಸವಣ್ಣನವರ ವಚನಗಳ ಮೂಲಪಾಠ 'ವಾಟಿಯಾವು' ಇದರ ಅರ್ಥ ಕರುವುಳ್ಳ ಆಕಳು ಎಂದು ಭಾವಿಸುವುದು ಹೆಚ್ಚು ಸಂಗತ.

ಬಸವಣ್ಣನವರ ವಚನದ 'ವಾಟಿ' ಎಂಬ ಈ ಅಪರಿಚಿತ ಪದ, ಅರ್ಥಸೌಲಭ್ಯ ಇಲ್ಲವೆ ಲೇಖನಸ್ಖಾಲಿತ್ಯದಿಂದಾಗಿ ಒಜಿ ಒದೆ ಇತ್ಯಾದಿ ಪರಿಚಿತ ಪದಗಳ ರೂಪವನ್ನು ಕೆಳಗಿನಂತೆ ಪಡೆದಿರಬೇಕು.

ವಾಟಿ(೪)—ವಾಜಿ(೧)—ವೊಜಿ
- —ವೊಜಿ-ಒಜಿ (ವಜಿ)-ಒರೆ
- —ವೋಜಿ-ಓಜಿ-ಒಜಿ
- —ವೊದೆ (ವೊದಿ)-ಒದೆ-ಒದಿ

ಹೀಗೆ ಬಸವಣ್ಣ ಚನ್ನಬಸವಣ್ಣನವರ ವಚನಗಳಲ್ಲಿ ಬಳಕೆಯಾದ 'ವಾಟಿಯಾವು' ಪದಕ್ಕೆ ಅರ್ಥ ಮತ್ತು ರೂಪವ್ಯತ್ಯಾಸಗಳನ್ನು ಮಾತ್ರ ಹೇಳಬಹುದು. ಆದರೆ 'ವಾಟಿ' ಮತ್ತು 'ವಾಳಿ' ಎಂದು ಎರಡು ಬಗೆಯಲ್ಲಿ ಕಂಡುಬರುವ ಈ ಪದ ನಿಷ್ಪತ್ತಿದೃಷ್ಟಿಯಿಂದ ಅಭ್ಯಾಸಯೋಗ್ಯವಾಗಿದೆ.

★ ಎಂ. ಎಂ. ಕಲಬುರ್ಗಿ

---

೨೦. ವಾಟಿಯೆಂದಾಕ್ಷಣ 'ನಿವಾಳಿ' (ನಿರುಪಯೋಗಿ, ತುಂಟ) ಎಂಬ ಜನಬಳಕೆಯ ಪದ, ವ್ಯಾಲ>ವ್ಯಾಳ>ವ್ಯಾಳಿ>ವಾಳಿ (?) ಎಂಬ ತದ್ಭವ ಪದ ನೆನಪಾಗಿ ಬಂಜೆಯಾವು, ಒದೆಯಾವು ಎಂದು ಅರ್ಥ ಹೇಳಲು ಮನಸ್ಸು ಹರಿಯುತ್ತದೆ. ಆದರೆ ಇದಕ್ಕೆ ಆಧಾರವಿಲ್ಲ. ಮೇಲಾಗಿ ವಾರಣಾಸಿಯಲ್ಲಿ ಬಂಜೆಗೋವು, ಇಲ್ಲವೆ ಒದೆಯಾವು ಕೊಂದ ಪಾಪವೆಂದು ಅರ್ಥ ಹೇಳುವುದೂ ತೀರ ವಿಪರೀತ.

ಎರಡು ದಡ

(ಒಂದು ಸಮಾಲೋಚನೆ)

ಇದು ಕವಿ ಕಣವಿಯವರ ಎಂಟನೆಯ ಕವನಸಂಕಲನ. ಬೆಳೆದುನಿಂತ ಮರದಿಂದ ಯಾವ ಹಾರೈಕೆ ? ಪ್ರತಿ ಹಂಗಾಮಿಗೂ ತನ್ನ ಸತ್ವಕ್ಕೆ, ಕೃಷಿಗೆ ಸರಿಯಾಗಿ, ತಕ್ಕದಾದ ಫಲಭಾರವನ್ನು ನೀಡುವದು ; ನೀಡಿದ ಫಲದ ರಸರುಚಿಗಳು ತಮ್ಮ ಮಟ್ಟವನ್ನೂ ಹದವನ್ನೂ ಕೆಡಿಸಿಕೊಳ್ಳದಿರುವದು, ಕಳೆದುಕೊಳ್ಳದಿರುವದು. ಶ್ರೀ ಕಣವಿಯವರ ಪರಿಪಕ್ವ ಪ್ರತಿಭೆ ಈ ಭರವಸೆಗೆ ಎಂದೂ ಕೈಕೊಡುವುದಿಲ್ಲ.

ಎಂದಿಗಿಂತ ಹೆಚ್ಚಾಗಿಯೇ (ಸಂಖ್ಯೆಯಲ್ಲಿ ಅಲ್ಲ, ಗುಣದಲ್ಲಿ) ಈ ಸಂಕಲನದ ಒಂದೊಂದು ಕವನವೂ ಉಕ್ತಿಯ ಒನಪು, ಉಕ್ಕಂದದ ಓಘ, ಮತ್ತು ಶೈಲಿಯ ಸಿದ್ಧಿಗಳಿಂದ ನಮ್ಮನ್ನು – ಸಹೃದಯ ಓದುಗರನ್ನು – ಆನಂದಚಕಿತರನ್ನಾಗಿ ಮಾಡುತ್ತದೆ. ಕಣವಿಯವರ ಕಾವ್ಯವನ್ನು ಓದುವುದೆಂದರೆ ಪಂಡಿತ ರವಿಶಂಕರರ ಸಿತಾರಿಗೆ ಕಿವಿಗೊಟ್ಟಂತೆ ; ಕಲೆಯ ಪ್ರೌಢಿಮೆಯನ್ನು ಅದರ ಪ್ರಸನ್ನಲಾಲಿತ್ಯ-ದಲ್ಲಿ ಅಡಗಿಸುವ ಕುಶಲಕರ್ಮದ ಅನುಭವವಾಗುತ್ತದೆ.

ಉತ್ತಮ ಕಾವ್ಯದ ಮುಖ್ಯ ಲಕ್ಷಣಗಳು ನನ್ನ ದೃಷ್ಟಿಯಲ್ಲಿ ನಾಲ್ಕು : wit (ಮಾತಿನ ಜಾಣತನದೊಂದಿಗೆ ಎರಕಗೊಂಡ ಜಾಣತನದ ಮಾತು), lyrical grace (ಪದಲಾಲಿತ್ಯ), irony (ವ್ಯಂಗ್ಯಧ್ವನಿ) ಮತ್ತು tension (ಬಿಗುಪು). ಈ ಕೊನೆಯ ಗುಣ ಕವಿತೆಯಲ್ಲಿಯ ಆವಿಷ್ಕರಣ ಮತ್ತು ಅಲಂಕರಣ, ಅಭಿವ್ಯಕ್ತಿ ಮತ್ತು ಆಶಯ, ಉಪಪತ್ತಿ ಮತ್ತು ಉತ್ಪ್ರೇಕ್ಷೆ, ವಸ್ತು ವಿಕಾಸ ಮತ್ತು ಭಾವವಿಲಾಸ — ಇವುಗಳ ನಡುವಿನ ಅನ್ಯೋನ್ಯ ಕರ್ಷಣೆ ; ಕವಿತೆಯ texture (ಶಯ್ಯೆ-ಜಾಡು) ಮತ್ತು structure (ಆಕಾರರಚನೆ, ಶಿಲ್ಪ) ಇವುಗಳ ನಡುವಿನ ಬಿಗಿತ. ಈ ಚತುರಂಗಸನ್ನಾಹದಿಂದ 'ಎರಡು ದಡ'ದಲ್ಲಿಯ ಕವಿತೆಗಳು ಸೌಷ್ಠವಗೊಂಡು ಸುಶ್ಲಿಷ್ಟವಾಗಿವೆ

ಕಣವಿಯವರನ್ನು 'ಸಮನ್ವಯ'ದ ಕವಿಯೆಂದು 'ಮಾದರಿಸ'ಲಾಗು-ತ್ತದೆ. ಇದರ ಹೊಸ ಸಮರ್ಥನೆ ಈ ಕೃತಿಯಲ್ಲಿ ಇನ್ನೊಮ್ಮೆ ದಾಖಲೆಯಾಗಿದೆ. ಇವರ ಪ್ರತಿಭೆ physical (ಭೌತಿಕ-ಲೌಕಿಕ) ಮತ್ತು platonic (ಆದರ್ಶ ರಮ್ಯ) ಎಂಬ ಕಾವ್ಯಪ್ರಕಾರಗಳ ಎರಡೂ ದಡಗಳನ್ನು ಸಲೀಸಾಗಿ ಬಾಚಿ ಎಡ ಬಲದ ತೋಟಪಟ್ಟಿಗೆ ನೀರು ಮೊಗೆದು ಇವರ ಕಾವ್ಯವಾಹಿನಿಯು ಸಾಗಿದೆ. Metaphysical (ಅತಿಭೌತಿಕ) ಮಾದರಿಯ ತೀವ್ರಭೌದ್ಧಿಕ ಪಾತಳಿಯಲ್ಲಿ ಅದರ ನಿಲುವು ಇಲ್ಲದಿದ್ದರೂ, ಅಲ್ಲಲ್ಲಿ ನಿಲುಕು ನಿರಾಯಾಸವಾಗಿಯೇ ಇದೆ. ಈ

ನಿಲುವಿನ ಕವಿಗೆ ವಿಚಾರವೇ ಒಂದು ಅನುಭವ, ತತ್ವವೆಲ್ಲ ಕಾವ್ಯ. ಅಲ್ಲಿಂದ ಈಚೆಗೆ ಸಂವೇದನೆಯ ವಿಘಟನೆ, ಅನುಭವ ಮತ್ತು ವಿಚಾರ ಇವುಗಳ ನೆಲ-ಮುಗಿಲ ನಡುವೆ ಕಲ್ಪನೆಯ ಕಾಮನಬಿಲ್ಲು ಸೇತುವೆ ಕಟ್ಟುತ್ತದೆ. ಆ ಸೇತುವೆಯ ಹೆಸರೇ ಸಮನ್ವಯ ಕಾವ್ಯ. ನೀಲಾಂಬಿಕೆಯನ್ನು ಬಣ್ಣಿಸುವ ಈ ಮಾತು ಕವಿಯ ಕೃತಿಶಕ್ತಿಗೂ ಅನ್ವಯಿಸುವಂತಿದೆ : " ಹಾದಾಡುವ ಹೊಸತಿಲಲ್ಲಿ ಹೊಯ್ದಾಡದ ದೀಪವು."

ಮಲ್ಲಿಗೆಯ ಮೊಗ್ಗೆಯನ್ನು ಪರಿಮಳದ ಗೆಜ್ಜೆಯೆಂದು ಚಿತ್ರಮಯವಾಗಿ ಕರೆಯುವ ಈ ಕವಿಗೆ ಸಂಜೆ ಉದುರಿದ ಮಳೆಗೆ ಮಣ್ಣಿನವಾಸನೆ ಬೇರೆ ಸೊಗಯಿಸುತ್ತದೆ. ಆದರೆ "ಕೆಟ್ಟ ಬಿಸಿಲಿಗೆ ಭೂಮಿ ಕಾದಿರುವಾಗ ಅರಗಚ್ಚಾಗದೇ ಮಳೆ ಹೊಡೆದು ಮಣ್ಣವಾಸನೆಯೆಲ್ಲ ಹರಿದು ಹಿಂಗಿ ಕಣ್ತುಂಬ ನಿದ್ದೆ"ಯೂ ಅಹುದು ಕವಿಗೆ. ಈ ಭಾವ (mood) ನವ್ಯಕಾವ್ಯವೆಂಬ ಹೊಸ ಚಾಳಿಯ ಕುರಿತು ಮೋಹನಿರಸನ (disenchantment) ಸೂಚಿಸುವಂತಿದೆ.

'ಸಂಕ್ರಮಣ'ದ ೨೩ನೆಯ ಸಂಚಿಕೆಯಲ್ಲಿ ನವ್ಯಕವಿ ಸಿದ್ದಲಿಂಗ ಪಟ್ಟಣಸೆಟ್ಟಿಯವರ ಕಾವ್ಯವನ್ನು ವಿಮರ್ಶಿಸುತ್ತ ಕಣವಿಯವರು ಪರ್ಯಾಯವಾಗಿ ಇಂಥ ಕಾವ್ಯದ ಬಗೆಗೆ ತಮ್ಮ ನಿಲುಮೆಯನ್ನು ನಿವೇದಿಸಿಕೊಂಡಿದ್ದಾರೆ: " ಶುದ್ಧ ಕಾವ್ಯವನ್ನು ಕಾಪಾಡಿಕೊಳ್ಳುವದರಿಂದಲ್ಲದೆ ಬರಿಯ ತಂತ್ರಗಳ ತೊಡಕಿನಲ್ಲಿ ಕನ್ನಡ ಕಾವ್ಯ ಬದುಕೀತು ಎಂದು ಯಾರಾದರೂ ಭಾವಿಸಿದರೆ ಅದೊಂದು ಭ್ರಮೆಯೆಂದೇ ಹೇಳಬಹುದು." ಅಂಥ ಭ್ರಮೆ ಕಣವಿಯವರಿಗೆ ಬಾಧಿಸಿಲ್ಲ. ಇದಕ್ಕೆ ಈ ಸಂಕಲನವೇ ಸಾಕ್ಷಿ. ಪ್ರಕೃತಿ ಮತ್ತು ಜೀವನಗಳ ಕುರಿತು ಸೊರೆ ಅರದ ಆಶ್ಚರ್ಯ (wonder) ಮತ್ತು ಉತ್ಪ್ರೇಕ್ಷೆ (imaginativeness) ಇವು ರಸಸಂಪ್ರದಾಯದ ಮುಖ್ಯ ಪ್ರಾಣಗಳಾಗಿದ್ದರೆ ಕಣವಿ ಆ ಸಂಪ್ರದಾಯದ ಸಮೃದ್ಧ ಕವಿಯೇ. ಆದರೆ ಇವೆರಡರ ಜತೆಗೆ ಆಧುನಿಕ ಪ್ರಜ್ಞೆ, ಸಾಮಾಜಿಕ ಪ್ರಜ್ಞೆ, ಅದರಿಂದ ಮೂಡುವ ಆತ್ಮವಿಶ್ಲೇಷಣೆ, ಮತ್ತು ಬಂಡುಗಾರಿಕೆಯ ಪ್ರವೃತ್ತಿ ಇವೂ ಕಾವ್ಯದಲ್ಲಿಯ ನವ್ಯತೆಯ ಆವಾಹನಕ್ಕೆ ಮಂತ್ರಬೀಜಗಳು. ಇವುಗಳಲ್ಲಿ ಕೊನೆಯದು ಈ ಕವಿಯ ಮನೋಧರ್ಮಕ್ಕೆ ಒಗ್ಗದ ಸಂಗತಿ. ಅದ್ದರಿಂದ ಇವರನ್ನು ' ಸಮನ್ವಯ ' ಕವಿಯೆನ್ನುವದರ ಬದಲು ಹೆಚ್ಚು ಶಾಸ್ತ್ರೀಯವಾಗಿ neo-Romantic ಎಂದು ಹೆಸರಿಸಬಹುದು. ಆದರೆ ಹೆಸರಿನಲ್ಲೇನಿದೆ?

" ತನ್ನ ಅಭಿವ್ಯಕ್ತಿಗೆ ಅನಿವಾರ್ಯವಾದ ರೀತಿಯ ಶೋಧನೆ–ಸಾಧನೆ" ಈ ಕವಿಯದು. ಇಲ್ಲಿ ನವ್ಯಧ್ವನಿಯಿದೆ, ತಂತ್ರಪ್ರಜ್ಞೆಯಿದೆ; ಆದರೆ ಅವುಗಳ ತೊಡಕು–ತಳಕು–ತೀಟೆ ಇಲ್ಲ. ಇಲ್ಲಿ ಯಾವ ಕಾವ್ಯಗುಣವಿಶೇಷದ್ದೂ ಅತಿರೇಕವಿಲ್ಲ; ಉದ್ರೇಕವಿಲ್ಲ; ಆಕ್ರೋಶವಿಲ್ಲ. ಕಣ್ಣು ಕುಕ್ಕಿ. ಎದೆತಿವಿದು ಮಾತನಾಡುವ ಹಟವಿಲ್ಲ. ಕವಿಯ 'ನಂಬಿಕೆ'ಯಂತೆಯೇ ಅವರ ಕಾವ್ಯಗುಣ:

"……ಜೇಂಗೊಡವ ಕಂಡು ಅಚ್ಚರಿಗೊಂಡರೂ
ಅವಸರಪಡುವ ಹಾಗಿಲ್ಲ; ದಾಹ ತೀರಿಸಲು ನೀರಲ್ಲ,
ಮತ್ತು ಬರಿಸುವ ಮದ್ಯವಲ್ಲ. ಅಂಗೈಯಲ್ಲಿ ಹನಿ ಹನಿ
ಹಾಕಿ, ನೆಕ್ಕಿ ನಾಲಗೆ ತುಂಬ ಸವಿದು, ಕಣ್ಮುಚ್ಚಿ
ತೆರೆಯಬೇಕು."

ಈ ಕವಿಯದೂ ಕೆಲವು ಕೈಯುಂಡುಹೋದ ಲಕ್ಷಣಗಳಿವೆ. ಪದಲಾಲಿತ್ಯ (lyrical grace) ಇವರ ಕೈಯಿಂದ ಎಂದಿಗೂ ತಪ್ಪುವದಿಲ್ಲ. ವ್ಯಂಗ್ಯ, ವಿನೋದ, ಗಾಂಭೀರ್ಯ, ನೀತಿಬೋಧೆ, ಆತ್ಮನಿವೇದನೆ, ವ್ಯಕ್ತಿಚಿತ್ರಣ, ಪ್ರಕೃತಿವರ್ಣನೆ—ಯಾವುದಕ್ಕೂ ಅದು ಅವಿಭಾಜ್ಯ ಒಳಮೈ ಆಗಿದೆ. ಅನೇಕ ನವ್ಯವಿಮರ್ಶಕರಿಗೆ ಈ ನಯವೇ ಅಸಹ್ಯವೆನಿಸಬಹುದು. 'ಬೇನೆ ಇರದಿದ್ದರೂ ನರಳುವ, ಹೊಸ ರುಚಿ ಬೆಳೆಯಿಸಿಕೊಂಡು, ಸದಾ ಅಸ್ವಸ್ಥರಾಗಿರುವ ವಿನೂತನ ಕವಿಗಳ' ಆಸ್ಪತ್ರೆಯಲ್ಲಿ ಈ ಕವಿ ಹೆಚ್ಚೆಂದರೆ out patient ಅಸ್ಟೆ!

ರಸಸಂಪ್ರದಾಯದ ಆಳವಾದ ಸಂಸ್ಕಾರವಿದು — ಈ ನಯ, ಲಾಲಿತ್ಯ. ಕಣವಿ, ಕೆ. ಎಸ್. ಎನ್., ಗಂಗಾಧರ ಚಿತ್ತಾಲ, ಗೋಪಾಲಕೃಷ್ಣ ಅಡಿಗರಿಗೂ ಇದನ್ನು ತಪ್ಪಿಸಿಕೊಳ್ಳಲು ಆಗಿಲ್ಲ. "ಆಡುನುಡಿಯ ಅಚ್ಚುಮೆಚ್ಚನ್ನುಳಿಸಿಕೊಂಡು ಆದರ ಕಾವು ಆರಗೊಡದೆ ಬಳಸಿ ಭಾವಾಭಿವ್ಯಕ್ತಿಗೆ ಒಂದು ಕೆಚ್ಚು ತರುವ," "ಪದಗಳನ್ನು ವ್ಯರ್ಥಗೊಳಿಸದೆ ನಾನಾಭಾವಾರ್ಥಗಳಿಗೆಡೆಗೊಡುವ", "ಶಬ್ದಸಾಹಚರ್ಯದಿಂದ ಭಾವಕ್ಕೆ ತಟ್ಟನೆ ತಿರುವು, ಹರವು" ಕೊಡುವ ಒಂದು ಎರಕ, ಹದ ಕಣವಿಯವರಿಗೆ ಎಂದೋ ಕರಗತವಾದುದರ ಪುನಃ ಪ್ರತ್ಯಯವನ್ನು ಈ ಸಂಕಲನವೂ ವಿಶದವಾಗಿ ತಂದುಕೊಡುತ್ತದೆ. ಈ ಪದಮೈತ್ರಿ, ವಾಗರ್ಥಪ್ರತಿಪತ್ತಿಯ ನೂರಾರು ಉದಾಹರಣೆಗಳನ್ನು ಇಲ್ಲಿ ಎತ್ತಿಕೊಡಬಲ್ಲೆ. ಆದರೆ ಕೊಡಲಾರೆ. ಜನತೆಯ ಸಹಜವಾದ ಅನುಭೂತಿಯೊಂದಿಗೆ ಸಮರಸರಾದ ಈ ಕವಿಗೆ ತೀರ ಪರಿಮಿತ ಖಾಸಗೀ ಭಾಷೆಯೊಂದನ್ನು ಹೊಸದಾಗಿ ನಿರ್ಮಿಸಿಕೊಳ್ಳುವ ಪರಿಸ್ಥಿತಿ ಒದಗಿಬಂದಿಲ್ಲ—ಇದು ಕಾವ್ಯಪ್ರೇಮಿಗಳ ಸುದೈವ.

ಆದ್ದರಿಂದಲೂ ಇರಬಹುದು, ಉಲ್ಲೇಖನೀಯವಾದ ಸೂಕ್ತಿಪಂಕ್ತಿಗಳು ಸಾಕಷ್ಟು ದೊರೆತರೂ "ಹೊಸ ಉದ್ದೀಪ ಅನುಭವಗಳತ್ತ ಕಣ್ಣು ತೆರೆಯ ಹಚ್ಚುವ, ಬೆಚ್ಚಿಬೀಳುವಂತೆ ಮಾಡುವ" ಭಾಷೆ ಇವರ ಕಾವ್ಯದಲ್ಲಿ ಅಷ್ಟೊಂದು ಬಳಸಿದ್ದು ಕಂಡುಬರುವುದಿಲ್ಲ. ಅಂಥ ಭಾವದ ಉಲ್ಬಣ ನಿರ್ಭರವೂ ಈ ಕವಿಯ ಸ್ವತ್ತು ಅಲ್ಲ. ಹಾಗೆಯೇ ಇತರ ಅತ್ಯಾಧುನಿಕ ಕವಿಗಳಂತೆ ಈ ಕವಿ ತನ್ನ ಕವಿತೆಗೆ ತಾನೇ ನೇರವಾಗಿ ನಾಯಕನಾಗುವದು ಕಡಮೆ. ಉತ್ತಮವಾದ

ನಾಟಕೀಯತೆಯನ್ನು ಸಾಧಿಸಿದ ಕವನಸರಣಿಯಲ್ಲಿಯೂ ಕವಿಯು ತನ್ನ ವೈಯಕ್ತಿಕ ಅನುಭವ-ಅನುಮಾನ–ಆಶಯಗಳನ್ನು ಆದಷ್ಟು ಸಾಮಾಜಿಕ ಸ್ವರೂಪವನ್ನೇ ಕೊಟ್ಟು ನಮ್ಮದಾಗಿಸುತ್ತಾನೆ.

'ಎರಡು ದಡ'ದಲ್ಲಿ ಹಾಗೆ "ಆತ್ಮನೇ ಪದ"ವೇರಿದ ಕವನಗಳು ಬರೇ ಎರಡು : 'ನಂಬಿಕೆ' ಮತ್ತು ಸಂಕಲನಕ್ಕೆ ಹೆಸರು ಕೊಟ್ಟ 'ಎರಡು ದಡ'.

"ನನ್ನ ನಂಬಿಕೆಯೊಂದು ಆಕಾಶ"ವೆನ್ನುತ್ತಾರೆ ಕವಿ. ಆದರೆ 'ಅನಂತ-ವೆಂದರೂ ಆಕಾಶಕೊಂದು ಆಕೃತಿಯುಂಟು' ಎಂದೂ ಹೇಳುತ್ತಾರೆ ಆರಂಭ-ದಲ್ಲಿಯೇ. ಇವರ ಈ ನಂಬಿಕೆಗೆ ಅಂಥ ಆಕೃತಿ ಯಾವದು ? ಅದಕ್ಕೆ ಯಾರ ಅವಲಂಬಿಕೆ ?

> "ಚಳಿಗಾಲದಲ್ಲಿ ಒಂದೊಂದೆ ಎಲೆಯುದುರಿ ನೆನಪು ಕಳಚು-
> ತ್ತಿರುವಾಗ ಯಾರಿಗೂ ಕಾಣದ ಹಾಗೆ ಬೇರಿಂದ ರಸ ಹೀರಿ
> ಚಿಗುರಿ ನಿಂತವರಾರು? ....
> ....
> "(ಮಳೆ ಬಿದ್ದ) ಮರುದಿನ ಬೇಲಿಗುಂಟ ಹೂವರಳಿದಾಗ ಯಾರು
> ಕಿಲಕಿಲ ನಕ್ಕು ಹೋದವರು?"
>
> —"ನಾನೆಷ್ಟು ಬೆಳೆದರೂ
> ನನಗೆ ನಿಲುಕುವುದಿಲ್ಲ, ದೂರದಿಂದಲ್ಲದೆ ನಾನದನು
> ಮುಟ್ಟಿ ಅನುಭವಿಸಿಲ್ಲ. ಮೇಲೆ ನೋಡದೆ ಸೆಟೆದುಕೊಂಡೇ
> ನಡೆದರೂ ಅದು ಸದಾ ನನ್ನ ತಲೆಯ ಮೇಲೆ."

ತನ್ನ ಈ ಬಾಳಿನ ನಂಬಿಕೆಯ ಸ್ವರೂಪವನ್ನು ಕವಿ ಒಂದು ಪ್ರತಿಮೆ ಯಲ್ಲಿಯೇ ಬಣ್ಣಿಸುತ್ತಾನೆ:

> "ರಾತ್ರಿ ವಿದ್ಯುದ್ದೀಪ ಕೈಕೊಟ್ಟು, ಮಿಣಿಮಿಣಿ ಮೇಣ-
> ಬತ್ತಿಯು ಹಚ್ಚಿ, ಅಂಜಿ ಆಕಳಿಸುತ್ತ ಕುಳಿತಾಗಲೂ
> ಆಕಾಶದಲ್ಲಿ ಹೊಳೆವ ನಕ್ಷತ್ರಕ್ಕೆ ಲೆಕ್ಕವಿಲ್ಲ."

"ಎರಡು ದಡ"ಗಳ ನಡುವೆ ಸೊಕ್ಕಿ ಉಕ್ಕಿ ಹರಿಯುವ ಹೊಳೆ ಯಾವದು ? 'ಹೊಸನೀರು ಹಳೆನೀರ ಕೊಚ್ಚಿ ಹುಚ್ಚೆದ್ದು, ತಟಸ್ಥ ತರು–ಮರದ ಬೇರಿಗೂ ಕೈಚಾಚಿ ಮೈತುಂಬ ರಾಡಿ ಬಡಿದುಕೊಂಡ' ಈ ಪ್ರವಾಹ ಯಾವದು ? ಇದು ಜೀವನದಂತೆ ಕಾವ್ಯವಾಹಿನಿಯೂ ಅಹುದು. "....ಈಗೀಗ ಶರತ್ಕಾಲದ ನಿದಿ-ಧ್ಯಾಸದಲಿ ಮೆಲ್ಲ ತಿಳಿಗೊಂಡಿಹುದು."

"ನಿಂತಿರುವ ದಂಡೆ ವಾಸ್ತವವೆನಲು ಆಚೆ ದಡ ಕಲ್ಪನೆಯೆ?" ಈ ಪ್ರಶ್ನೆಗೆ ಅಂಬಿಕಾತನಯದತ್ತರು ಹಿಂದೆಯೇ ಪ್ರತಿ ಆಡಿದ್ದುಂಟು: "ನಾ ಬಲ್ಲೆ ನನಗೆ ಗೊತ್ತಿಲ್ಲವಾದರೂ ಎಲ್ಲೆ ಆಚೆಯಾ ದಂಡಿ." ಇಲ್ಲಿ ಓದುಗನಿಗೆ ಒಂದು ಒಗಟು. ಕವಿಯ ನಿಲುಮೆ ನೀರಿನಲ್ಲಿ—ಹೊಳೆಯೊಂದಿಗೆ ಸಾಗುವಲ್ಲಿಯೋ? ಅಥವಾ ಈ ದಡದಿಂದ ಆ ದಡಕ್ಕೆ ಸಲೀಸಾಗಿ ಈಸಬಲ್ಲೆನೆಂಬ ಭರವಸೆಯಲ್ಲಿಯೋ? ಇದು ಕೆಲಮಟ್ಟಿಗೆ ಸಂದಿಗ್ಧ. ಆದರೆ ಈ ಸಂದಿಗ್ಧತೆ ಈ ರೂಪಕದ ಬಗೆಗೇ ಹೊರತು ಆದರ ದಾರ್ಶನಿಕತೆಯದಲ್ಲ:

> "ಮಳಲ ದಂಡೆಯಲಿ ಕುಸಿದಿವೆ ಕಾಲು. ಆಚೆ ತೋಪಿನಲಿ
> ಕೋಗಿಲೆಯು ಜೋಗುಳಲಾಲಿ. ಎದುರಿಗೆ ನೀರ
> ಭೋರ್ಗರೆತ, ಎಳೆತ–ಸೆಳೆತ: ಸ್ವಚ್ಛಂದ ಛಂದೋಬಂಧ.
> ಕ್ಷಿತಿಜದಂಚಿಗೆ ತನ್ನ ಉದ್ಬಾಹುಗಳ ಚಾಚಿ ಒಡಲ
> ತೆರೆದಿದೆ ಕಡಲ ಕುಡಿವೆನೆಂದು, ಹಿಡಿದು ಕಡೆವೆ
> ನೆಂದು, ತಳ ಸೋಸಿ ಮುತ್ತುಗಳ ಪಡೆವೆನೆಂದು"

(ಇಲ್ಲಿ ಕವಿ ಸ್ವಚ್ಛಂದ ಛಂದೋಬಂಧದ ತೆರೆದ ಒಡಲಿನೊಂದಿಗೆ ಒಂದಾಗಿಬಿಟ್ಟಂತಿದೆ!)

ನಿಸರ್ಗದ ನಿಃಸೀಮತೆಯ, ಪ್ರಕೃತಿಯ 'ಋತು ಕೊಟ್ಟ ಭಾಷೆ'ಯನ್ನು ಇವರಷ್ಟು ನಿಕಟಪರಿಚಯದಿಂದ ಪರಿಪರಿಯ ಸೊಬಗಿನಲ್ಲಿ ಆಡುವ ಇನ್ನೊಬ್ಬ ಕವಿಯನ್ನು ನಾನು ಕಂಡಿಲ್ಲ. ಪ್ರಕೃತಿಯನ್ನು ರಾಕ್ಷಸಿಯಾಗಿಯೂ, ರೂಪಸಿಯಾಗಿಯೂ ಕಂಡು ಮೃಣ್ಮಯವನ್ನು ಚಿನ್ಮಯವಾಗಿ ಕೊಂಡಾಡಿದ ಕುವೆಂಪು ಇದ್ದಾರೆ. ಬರೆ ಹೂತ ಹುಣಿಸೆಯಲ್ಲಿ ಬದುಕಿನ ಸಾಫಲ್ಯವನ್ನು ಅನುಭವಿಸಿದ ಬೇಂದ್ರೆ ಇದ್ದಾರೆ. ಮಲ್ಲಿಕಾ–ಬಕುಲ–ಚಂಪಕ—ಇವಿಷ್ಟನ್ನೇ ತಮ್ಮ ಸುಖವಾಗಿ ಭಾವಿಸಿದ ರಸಿಕರಂಗರಿದ್ದಾರೆ. ಆದರೆ ಪ್ರಕೃತಿಯ, ಋತುಪರಿವರ್ತನೆಯ, ಹೊಲ–ಗದ್ದೆ–ಬೇಲಿ–ಹತ್ತಿ–ಕುಸುಬೆ–ಜಾಲಿಗಳಲ್ಲಿ ಸೌಂದರ್ಯದ ಛವಿ–ಛಾಯೆಗಳನ್ನು ಕಂಡುಂಡು, ಶಬ್ದಚಿತ್ರಗಳಲ್ಲಿ, ಉಪಮೆಯಾಗಿ, ಪ್ರತಿಮೆಯಾಗಿ, ರೂಪಕವಾಗಿ, ವಸ್ತುವಾಗಿ ಆತ್ಮೀಯ ಅನುರಾಗದಿಂದ ಬರೆಯುವ ಒರೆಯುವ ವಿಶಿಷ್ಟತೆ ಕಣವಿಯವರದೇ. ಪ್ರಕೃತಿಯೂ ಆದರ ಮಡಿಲಲ್ಲಿಯ ಒಕ್ಕಲ ಬದುಕಿನ ಪ್ರಾಕೃತ ಸಂಸ್ಕೃತಿಯೂ ನವನವೋನ್ಮೇಷಗಳಲ್ಲಿ ಕಣವಿಯವರ ಕಾವ್ಯದಲ್ಲಿ ಆಕೃತಿಗೊಂಡಿದೆ. ವರ್ಡ್ಸ್‌ವರ್ಥನಂತೆ ನಿಸರ್ಗದಿಂದ ನೀತಿಬೋಧವನ್ನು ಹಿಂಡಿ ತೆಗೆಯುವ ಚಾಪಲ್ಯ ಈ ಕವಿಗೆ ಇಲ್ಲ. ಇವರು ಪ್ರಕೃತಿಯ ಉಪಾಸಕರೂ ಅಲ್ಲ, ಆರಾಧಕರೂ ಅಲ್ಲ. ಕೇವಲ ನಿಕಟನಿರಂತರ ಪರಿಚಯದ ರಸಿಕರು; ಭಕ್ತರಲ್ಲ, ಭೋಕ್ತರು. ಇಷ್ಟೊಂದು ಸೂಕ್ಷ್ಮವಾಗಿ, ಸ್ಪಷ್ಟವಾಗಿ

ಪ್ರಕೃತಿಯನ್ನು ಶಬ್ದದಲ್ಲಿ ಸೆರೆಹಿಡಿಯುವ ನಿಸರ್ಗಕವಿ ಕನ್ನಡದ ಈ ಜಾಯಮಾನಕ್ಕೆ ಇವರೊಬ್ಬರೇ—ಎಂದು ನನ್ನ ಅಭಿಪ್ರಾಯ. "ಸಂಕ್ರಮಣ", "ನೆಲದ ಮಕ್ಕಳಿಗೆ ನಲ್ವಾಡು" ಇವೆರಡು ರೂಪಕಗಳೇ ಸಾಕು ನನ್ನ ಅಭಿಪ್ರಾಯದ ಸಮರ್ಥನೆಗೆ. [ಆದರೆ ಪಶ್ಚಾತ್ತಾಪ ಪಡೆದ ರಾಜಕಾರಣಿಯ ಪ್ರವೇಶ 'ನಲ್ವಾಡಿ'ನಲ್ಲಿ ಅಪ್ರಸ್ತುತವೆನಿಸುತ್ತದೆ. ಅದು ಒಂದು ಪಶ್ಚಾತ್ ಪ್ರವೇಶ] ಇವರ ನಿಸರ್ಗ ಕಾವ್ಯ ಪ್ರಕೃತಿಚೇತನದೊಂದಿಗೆ ಹೆಚ್ಚು ತಾದಾತ್ಮ್ಯ ಹೊಂದಿದ ಸಹಜ ನಿಃಶ್ವಸನ. ವರ್ಡ್ಸ್‌ವರ್ಥನ spirit ಇಲ್ಲಿಯೇ ಹೆಚ್ಚು ವೇಧಕವಾಗಿ ವೇದ್ಯವಾಗಿದೆ.

ಕವಿಯ wit ಮತ್ತು irony 'ಹೊಸ ವರುಷದ ಸ್ವಾ(ಸ್ವ)ಗತ ಭಾಷಣ', 'ದಾಸರ ದರ್ಶನ', 'ವಿನೂತನ ಕವಿಯ ಕೈಫಿಯತ್ತು', 'ನಾಂದಿ' ಇವುಗಳಲ್ಲಿ ಓದಿ ಸವಿಯಬೇಕು,—ವಿಶೇಷತಃ 'ಕೈಫಿಯತ್ತಿ'ನಲ್ಲಿ. ಗಾಂಧೀ ಕವನದಲ್ಲಿಯೂ ಕೆಲವೆಡೆ ಈ ಚತುರೋಕ್ತಿಯ ವ್ಯಂಗ್ಯ ವಿನ್ಯಾಸ ಮಿಂಚಿದೆ. ಕಣವಿಯವರ ವ್ಯಂಗ್ಯದಲ್ಲಿಯ ವಿನೋದ sarcastic ಹೊರತು sardonic ಅಲ್ಲ. ಇಲ್ಲಿ ವ್ಯಂಗ್ಯವೆಂದರೆ ಬರೇ ಉಪರೋಧವೂ ಅಲ್ಲ—ಚುಚ್ಚು ಮಾತೇ ಅಲ್ಲ. ಶ್ಲೇಷೆಯಲ್ಲಿ ರೂಪಕಧ್ವನಿಯಲ್ಲಿ ಮೊನಚಾಗಿ ಮೂಡುವ ಜೀವನ ವಿಮರ್ಶೆ :

'ಉಂಡು ಉಪವಾಸಿಗಳು ನಾವು
ಬಳಸಿದ ಬ್ರಹ್ಮಚಾರಿಗಳು'

• • •

'ಪೇಟೆಯಲಿ ಸಿಗದ ಸಕ್ಕರೆಯನೆಲ್ಲ ಮಾತಿನಲಿ
ತಂದು ಸುರಿವವರು'

• • •

'ದಾಸ್ಯದ ನೊಗವ ಕಿತ್ತೊಗೆದರೂ ಯಾರೊ ಮೂಗುದಾಣವ ಹಾಕಿ
ಜಗ್ಗಿದಂತೆ, ಮತ್ತಾರೊ ಬಾಲವಿಡಿದು ತಿರುವಿದಂತೆ
ನಮ್ಮ ಅನುಭವ ನಮಗೆ ತಪ್ಪಿಲ್ಲ'

• • •

'ಭಾವಕೋಶದ ಮಾತೇಕೆ?
ಅದಕೆ ಟಾಚಣಿ ಚುಚ್ಚಿ ಚುಚ್ಚಿ ಪಿನ್‌ಕುಶನ್ ಮಾಡಿ
ಎದೆಯ ಮೇಜಿನ ಮೂಲೆಯಲ್ಲಿ ಇಟ್ಟಿದ್ದೇವೆ'

• • •

ದಿ. ಲಾಲಬಹಾದ್ದೂರಶಾಸ್ತ್ರಿಗಳ ಈ ವರ್ಣನೆಯು ಬೆಲೆ ಕಟ್ಟಿದಷ್ಟೂ ಕಡಿಮೆ:

'... ಬಡತನದ
ಪಲ್ಲಕ್ಕಿ ಹೊತ್ತು ಮೆರೆಸಿದ ಪ್ರಾಮಾಣಿಕತೆಯು.
ಹೆಂಡತಿಮಕ್ಕಳಿಗೆ ಆಸ್ತಿ ಸಂಪಾದಿಸದ
ಮನೆಯಿರದ ಪ್ರಧಾನಿ : ಇವನೆಂಥ ಭಾರತೀಯ ? '

* * *

' ತ್ಯಾಗ-ಭೋಗದ ಕೈಯು ಚಾಣಕೆಮ್ಮದೆ ಬಂಡೆ
ಪೆಣಿಕೆ ಹಾರಿದೆ; ಚಿತ್ತದಿ ಭಗ್ನ ಮೂರ್ತಿ ಕಂಡೆ.'

* * *

' ವಿರಾಮವಾಗಿ ಗಾಳಿಯು ಕುಡಿದು ಹೆಜ್ಜೆಯೆಣಿಸುತ್ತ
ಹೊರಟ ಪಿಂಚಣಿದಾರ—ಹಿಡಿದು ಪ್ರಶ್ನೆಯು ಬಡಿಗೆ.' ('ಮಂದಿ')

* * *

' ಇರುಳು ಬಾನಿನ ತುಂಬ ನೀನೊಬ್ಬನೇ
ಕೋಲೂರಿ ನಡೆದಂತೆ
ಚಿಕ್ಕೆಗಳ ಗುರುತುಂಟು. ('ಗಾಂಧಿ')

* * *

' ಸತ್ಯಕ್ಕೆ ತಲೆತೆಗೆದು ನಿಂತವ ನೀನು
ನಿನಗೆ ಟೊಪ್ಪಿಗೆ ಹಾಕುವ ಧೈರ್ಯ ಯಾರಿಗಿತ್ತು?' ('ಗಾಂಧಿ')

ವ್ಯಕ್ತಿಚಿತ್ರಣದಲ್ಲಿ ಅರ್ಥಪೂರ್ಣವಾದ ವಿವರಗಳನ್ನೆತ್ತಿ ರೂಪಕಾತ್ಮಕವಾಗಿ, ಪತೀಕಾತ್ಮಕವಾಗಿ ಹೆಣೆದು ರೂಹು ಅರಳಿಸುವ ಕೌಶಲ್ಯ ಕಣವಿಯವರದೇ ಕೈಗುಣ.

ಇನ್ನು ಚಿತ್ರಮಯತೆಯ ಚಿತ್ತಾಕರ್ಷಣೆಗೆ ಈ ಕೆಲವು ಪಂಕ್ತಿಗಳು ಮಾದರಿ :

ಕಪ್ಪು ನೆಲದಲ್ಲಿ ನಿಂತಿರುವ ತೆನೆಯ ಧ್ವಜ

* * *

ಲಾಸ್ಯಕ್ಕು ತಾಂಡವಕು ಶಿವನೆ ಅಧಿದೈವತ

* * *

ನಾಡಿನ ತುಂಬಾ ನೂರು ಜಗದ್ಗುರು
ಇರುವದು ಜಗ ಒಂದೇ

* * *

ಭಾಷಣದ ಸುರಿಮಳೆಗೆ ತಕ್ಷಣ
ಮುರುಕು ಮನೆಗಳು ಬಿದ್ದವು;
ಮರುದಿನವೆ ಎಲ್ಲೆಲ್ಲು ತಣ್ಣಗೆ-
ನಾಯಿಕೊಡೆಗಳು ಎದ್ದವು.

* * *

ಹುಣ್ಣಿಮೆ ಇಟ್ಟಿತಗೊ ಬಾನಂಚಿಗೆ ಬಂಗಾರದ ತತ್ತಿ.

* * *

ಕಟ್ಟುಕಟ್ಟುವ ಚಿತ್ರಕಶಕ್ತಿಗೆ ಇನ್ನು ಕೆಲವು ಉದಾಹರಣೆಗಳಿಲ್ಲಿವೆ :

ಪ್ರಾಣದೂದಿನಕಡ್ಡಿ ಪರಿಮಳದ ಸ್ಮಾರಕ

* * *

ಯಾರಿಗೂ ಸಿಗದ ಬಿಳಿ ಪಾರಿವಾಳವ ಹಿಡಿವ

* * *

ಮಂಜಿನಾಚೆಗೆ ಜಡೆಕಟ್ಟಿ ಕುಳಿತ ಬೆಟ್ಟ

* * *

ನಾವೆ ಹುಟ್ಟಿಸಿಕೊಂಡ ಚಿಂತೆಗಳ
ಕಂತೆ ಬಿಚ್ಚಿ ಹಾಯಾಗಿ ಮಲಗುತ್ತೇವೆ.

* * *

ಇಳೆಯು ತಲೆಯು ಬಾಗಿಸುತ್ತ ಬಂತು ರವಿಯು ಕೆಲವಲಿ
—ರುಚಿನೋಡಲು ಇಷ್ಟು ಸಾಕು.

೨

'ಎಡದಂಡೆ'ಯಲ್ಲಿಯ ಕವನಗಳಲ್ಲಿ ಕವಿಯು ಒಂಬತ್ತು ಸಾನೆಟ್ಟುಗಳೇ ಒಂದು ಮರೆಯಲಾಗದ ಕಾಣಿಕೆ. ಆಧುನಿಕ ಕನ್ನಡ ಕಾವ್ಯಕ್ಕೆ ಆಂಗ್ಲಕಾವ್ಯದಿಂದ ಸರಳರಗಳೆ (Blank verse) 'ಕನ್ನಡ ಬಾವುಟ'ದಲ್ಲಿ ಬಿ. ಎಂ. ಶ್ರೀ. ಅವರಿಂದ Spenserian Stanza ಧಾಟಿ ಹಿಡಿದ ಸ್ತುತಿಗೀತ(Ode)ಗಳು

ಮತ್ತು ಅಷ್ಟಷಟ್ಪದಿ(Sonnet)ಗಳು ಬಂದು ಪಳಗಿ ನಮ್ಮದಾಗಿಯೇ ನಿಂತಿವೆ. (ಇತ್ತೀಚೆಗೆ ಸ್ವಚ್ಛಂದಛಂದ ಮತ್ತು ಜಪಾನೀ ಹೈಕುಗಳ ಆಯಾತವೂ ಆಗಿದೆ.) ವಿಶೇಷವಾಗಿ ಕಳೆದ ಅರ್ಧಶತಮಾನದಲ್ಲಿ ನಾವು ಪಳಗಿಸಿಕೊಂಡ ಸರಳ ರಗಳೆ ಮತ್ತು ಅಷ್ಟಷಟ್ಪದಿಗಳ ವಿಶೇಷ ಪರಿಶೀಲನೆ ಮತ್ತು ಸಮಾಲೋಚನೆಯನ್ನು ಅವುಗಳ ಭಾಷೆ, ಶೈಲಿ, ಶಯ್ಯೆ ಮತ್ತು ಶುದ್ಧಿ, ಸ್ವಾದಗಳ ದೃಷ್ಟಿಯಿಂದ ಸಮರ್ಥ ವಿಮರ್ಶಕರೊಬ್ಬರು ಮಾಡಿಕೊಡಬೇಕಾದದ್ದು ಇಂದು ಕಾಲ ಮೀರಿದ ಕರ್ತವ್ಯವಾಗಿದೆ. ಅದೊಂದು ಪ್ರತ್ಯೇಕ ವ್ಯಾಸಂಗ.

ಕಣವಿಯವರು ತಮ್ಮ ಅಷ್ಟಷಟ್ಪದಿಗಳನ್ನು ಸಾನೆಟ್ ಎಂತಲೇ ಕರೆದಿದ್ದಾರೆ. ಇದು ಒಂದು ರೀತಿ ಸೂಚಕ. ೧೪ ಸಾಲುಗಳ ಈ ಪದ್ಯಬಂಧದಲ್ಲಿ ಅಷ್ಟಪದಿ (Octave) ಮತ್ತು ಷಟ್ಪದಿ (Sestet) ಹೀಗೆ ಭಾಗವಾಗುವದು ಮಿಲ್ಟನ್ ಕವಿಯ ಸಾನೆಟ್ಟಿನ ಮಾದರಿ. ಆದರೆ ಶೇಕ್ಸಪಿಯರನ ಮಾದರಿಯ ಸಾನೆಟ್ಟಿನಲ್ಲಿ ೪ ಸಾಲುಗಳ ೩ ಚರಣಗಳ ಕೊನೆಗೆ ಒಂದು ದ್ವಿಪದಿ ಸೇರಿ ೧೪ ಸಾಲು ಸಿದ್ಧವಾಗುತ್ತವೆ. ಇದು ಯಾವ ಆಂಗ್ಲಕಾವ್ಯಾಭ್ಯಾಸಿಗೂ ಗೊತ್ತು. ಕಣವಿಯವರು ಇಲ್ಲಿ ಸಂಕಲಿಸಿದ ಸಾನೆಟ್ಟುಗಳೆಲ್ಲ ಪರ್ಯಾಯವಾಗಿ ಶೇಕ್ಸಪಿರಿಯನ್ ಮಾದರಿಯವು. ಅಂತೆಯೆ ಅಷ್ಟ-ಷಟ್-ಪದಿಗಳಲ್ಲ.

ಕಣವಿಯವರು ಆರಂಭದಿಂದಲೂ ನೂರಾರು ಸಾನೆಟ್ಟು ರಚಿಸಿ ಈ ಕ್ಷೇತ್ರದಲ್ಲಿ ಹುಲುಸಾದ ಸಾಂದ್ರಕೃಷಿಗೈದವರು. ಆಕೃತಿನಿರ್ಮಿತಿಯ ಆಸಕ್ತಿ ವಿಶೇಷವಾಗಿ ಉಳ್ಳ ಈ ಕವಿಗೆ ಸಾನೆಟ್ಟಿನ "ಕೆತ್ತನೆಯ ಕೆಲಸ" ಹೊಸ ಹೊಸ ಕವನಶಿಲ್ಪಕ್ಕೆ ಆಹ್ವಾನ. ಈ ಸಂಕಲನದಲ್ಲಿಯ ಸಾನೆಟ್ಟುಗಳು ಒಂದೊಂದೂ ವೈಲಕ್ಷಣ್ಯಪೂರ್ಣವಾಗಿವೆ. ಮೇಲೆ ಹೇಳಿದಂತೆ ಇವೆಲ್ಲ ಶೇಕ್ಸಪಿಯರನ ಮಾದರಿ. ಏಕೆಂದರೆ ಪ್ರತಿಯೊಂದೂ ಪಂಕ್ತಿ, ಚರಣಪ್ರಾಸಗಳಲ್ಲಿ ಎಂಥ ವ್ಯತ್ಯಾಸವಿದ್ದರೂ, ಕೊನೆಯ ದ್ವಿಪದಿಯಲ್ಲಿಯೆ ತಮ್ಮ ಜೀವಾಳದ ಚುರುಕು ತುಂಬಿಕೊಂಡಿರುತ್ತವೆ. ಇವುಗಳ ರಚನೆಯಲ್ಲಿ ಕವಿ ಅಪೂರ್ವ ಬೆಡಗನ್ನೂ ಕಲಾಚಾತುರ್ಯವನ್ನೂ ವ್ಯಕ್ತಮಾಡಿದ್ದಾರೆ. ೧೪ ಸಾಲಿನ ಅಲ್ಲ, ೧೨ ಸಾಲಿನ ಪರಿಮಿತಿಯಲ್ಲಿ ಕವಿಯು ತನ್ನ ಪ್ರತಿಭೆಯ ಪರಿಣತಿಯನ್ನು ಭಾವ–ಭಾಷೆ–ಬಂಧ–ಸೌಂದರ್ಯಶಿಲ್ಪದಲ್ಲಿ ಧನ್ಯವಾಗಿ, ಅನುಕರಣೀಯವಾಗಿ ಪ್ರಕಟಿಸಿದ್ದಾರೆ.

ಮೊದಲಿನ ಎರಡು—'ಗಡಿಯಲ್ಲಿ ಮಡಿದ ಯೋಧರು' ಮತ್ತು 'ರಸಿಕರಂಗ'—ಶುದ್ಧ ಶೇಕ್ಸಪಿರಿಯನ್ ಮಾದರಿ. 'ಎಪ್ಪತ್ತರ ಬೇಂದ್ರೆ'ಯೂ ಹಾಗೆಯೇ. ಆದರೆ ಮಾಸ್ತಿಯವರಿಂದ ಮೊದಲುಮಾಡಿ ಈವರೆಗೆ ಬೇಂದ್ರೆಯವರ ಕುರಿತು ರಚಿತವಾದ ಸಾನೆಟ್ಟುಗಳಲ್ಲಿಯೇ ಕಣವಿಯವರ ಈ ಕೃತಿ ಉತ್ಕೃಷ್ಟವೆಂದು ನನ್ನ ಮತ. ವರ್ಣ್ಯವ್ಯಕ್ತಿಯ ವ್ಯಕ್ತಿತ್ವದ ಮಾರ್ಮಿಕವಾದ, ಸೂಚಕವಾದ ಸಾರ್ಥಕ (significant) ವಿವರಗಳನ್ನು, ಲಕ್ಷಣಗಳನ್ನು ಎತ್ತಿ

ಅವನ್ನು ಉತ್ಪ್ರೇಕ್ಷಿಸಿ ಕೃತಿಗೆ ಜೀವಕಳೆ ತುಂಬುವ ಕಣವಿಯವರ ಅನನ್ಯಸಿದ್ಧಿ ಈ ಕವನ ಹಾಗೂ ತೀ. ನಂ. ಶ್ರೀ., ಶಾಸ್ತ್ರೀಯವರ ಕುರಿತ ಸಾನೆಟ್ಟುಗಳಲ್ಲಿ ಹೆಡಸಾಗಿ ಹೆರೆಕಟ್ಟಿದೆ.

ಶಾಸ್ತ್ರೀಜಿಯವರ ಕುರಿತ ಸಾನೆಟ್ಟು ಈ ರೂಹುಗಾರಿಕೆಯೊಂದಿಗೆ ಶಿಲ್ಪ-ಚಾತುರಿಯಲ್ಲಿಯೂ ಒಂದು ಹೊಸ ಕೌತುಕ. ಇಲ್ಲಿಯ ಚರಣಗಳು ೩ ಸಾಲಿನವು. ಇಂಥ ೪ ಚರಣಗಳ ಬಿಲ್ವಗುಚ್ಛವನ್ನು ಕೊನೆಯ ಜರದ ಎಳೆಯಂಥ ದ್ವಿಪದಿ ಗಂಟುಕಟ್ಟಿದೆ. 'ಕಲಾಕೃತಿ' ಇಂತಹದೇ ಇನ್ನೊಂದು ಕೌತುಕದ ಕೃತಿ; ಇಲ್ಲಿ ಇಡಿಯ ಸಾನೆಟ್ಟು ೭ ದ್ವಿಪದಿಗಳ ಪುಂಜ! ಇನ್ನು 'ಸುಗ್ಗಿ'ಯು ಸ್ವಲ್ಪ ವ್ಯತ್ಯಾಸಗೊಂಡ ಶೇಕ್ಸಪಿಯರಿಯನ್ ಸಾನೆಟ್. ಆ ವ್ಯತ್ಯಾಸವೆಂದರೆ ೩ನೆಯ ಚರಣದ ನಾಲ್ಕು ಸಾಲುಗಳ ಅಂತ್ಯಪ್ರಾಸ ಒಂದೇ. 'ತೀ.ನಂ.ಶ್ರೀ.' ಈ ಸಾನೆಟ್ಟಿನ ಜಾಡೇ ಬೇರೆ: ೪ ಸಾಲಿನ ಒಂದು ಚರಣ + ೧ ದ್ವಿಪದಿ + ೬ ಸರಳರಗಳೆಯಂಥ ಅಂತ್ಯಪ್ರಾಸವಿಲ್ಲದ ಸಾಲು + ಕೊನೆಯ ದ್ವಿಪದಿ. 'ಗೋಮಟೇಶ್ವರ'ನ ನಿಲವು ಹೇಗೆ? ೪ ಸಾಲಿನ ಚರಣ ಒಂದೇ ಅಂತ್ಯಪ್ರಾಸದ್ದು, ಮುಂದೆ ೨ ಚರಣಗಳ ಅಷ್ಟಪದಿ, ಕೊನೆಗೆ ದ್ವಿಪದಿ; ಇದು ಪ್ರಾಸದ ಪರಿವಿಡಿಯಿಂದ. ಆದರೆ ಪ್ರತ್ಯಕ್ಷ ಪಂಕ್ತಿಗಳ ಪವಣಿಕೆ ೩ + ೫ + ೩ + ೩ ಈ ರೀತಿ. ಇದಕ್ಕೂ ಹಿಂದಿನ 'ದಾಸೋಹದೀಪ'ದ ಪರಿ ಇನ್ನೊಂದೇ. ಅಷ್ಟಪದಿ ಸರಳರಗಳೆಯಂತೆ. ಷಟ್ಪದಿಯಲ್ಲಿ ೪ ಸಾಲಿನ ಚರಣ + ಕೊನೆಯ ದ್ವಿಪದಿ.

ಹರಿಯುವ ಪಾರಜ ಹಿರಿ-ಕಿರಿ ಗುಳ್ಳೆಕಟ್ಟಿ ಸರಿಯುವಂತೆ ಕಣವಿಯವರ ಸಾನೆಟ್ಟಿನ ಸಾಲಿನ ಸರಣಿ. ಇಲ್ಲಿ ೪ ಸಾಲಿನ ಚರಣಗಳೆಲ್ಲ (ಒಂದು ಬಿಟ್ಟು) ಪ್ರಾಸ ಕ್ರಮದಲ್ಲಿ ಸಾಂಪ್ರದಾಯಿಕ: abba. ಆದರೆ ನಿಜವಾದ ಭಾವದ ತಿರುವು ದ್ವಿಪದಿಯೊಂದಿಗೇ. ಈ ದ್ವಿಪದಿ ಎಲ್ಲ ಸಾನೆಟ್ಟುಗಳ ಬಣ್ಣದ ಬೀಸಣಿಕೆಯ ಹಸ್ತಿದಂತದ ಹಿಡಿಕೆ.

ಕವಿಯ ಶ್ಲೇಷೆ ನಿಬಿಡ ನಿರೂಪಣೆಯಲ್ಲಿ ವ್ಯಕ್ತವಾದದ್ದು 'ಸುಗ್ಗಿ', 'ಕಲಾಕೃತಿ' ಮತ್ತು 'ಬೆಡಗು' ಈ ಕವನಗಳಲ್ಲಿ. 'ಸುಗ್ಗಿ'ಯಲ್ಲಿ ಋತು ಕೊಟ್ಟ ಭಾಷೆಯನ್ನು ಕವಿ ಪೂರೈಸಿದ್ದಾರೆ. ಸುಭಗವಾಗಿ ಮುರುಳಿಸ ಪಂತಿ ಕಟ್ಟಿ—ಅಂಗಾಂಗದಲ್ಲಿ ಸುಗ್ಗಿ ಹಿಗ್ಗಿ ನಿಂತಂತೆ. ಒಕ್ಕಲಬದುಕಿನಲ್ಲಿ ಕವಿ ಕಾಣುವ ಸಜೀವ ಸಾಮರಸ್ಯ ಸುಶ್ಲಿಷ್ಟವಾಗಿ ಮಾತಾಡುತ್ತದೆ 'ಋತು'ವಿನ ಶ್ಲೇಷೆಯಲ್ಲಿ. 'ಕಲಾಕೃತಿ'ಯೇ ಒಂದು ದೂರೂಹ್ಯವಾದ ಕೃತಿ. ಕಲೆಯ ಥಳಕಿನಲ್ಲಿ ಇದರ ಆಕೃತಿ ಸ್ಪಷ್ಟವಾಗುವದಿಲ್ಲ. ಈ ಕೃತಿಗೆ ಕವಿಯು ಸೂಕ್ತ ಹಿನ್ನೆಲೆಯನ್ನು ಸೂಚಿಸಿದ್ದರೆ ಚೆನ್ನಾಗಿತ್ತು. ಹಿನ್ನೆಲೆ ಬೇಕು ಎಂದಾಗ ಅದನ್ನು ಒದಗಿಸಬೇಕೆಂದು ಅಲ್ಲ. ಅದು ಹಿನ್ನೆಲೆ ಅಥವಾ Guide lines ಅಪೇಕ್ಷಿಸುತ್ತದೆ; ಇಷ್ಟೆ. 'ಬೆಡಗು' ಕವಿತೆಯಲ್ಲಿ ಬೆಡಗಿನ ವಚನಗಳ ಒಗಟಾದ ಒನಪು ಒಡಪಾಗಿ ಶೋಭಿಸುವದು.

ಹೆಣ್ಣಿನ ಮೈಸಿರಿಯನ್ನು ಒಂದು ದೇಗುಲದ ಶಿಲ್ಪವಾಗಿ ಕಂಡು ಅದರ ದೀಪ್ತಿಯಲ್ಲಿ ಉದ್ದೀಪನಗೊಂಡು ಪೂಜೆಯ ವಿಧಿವಿಧಾನವೆಲ್ಲ ಪೂರ್ತಿ ಸುರತದಲ್ಲಿ ಸಮಾಪ್ತಿ ಪಡೆದಿದೆ— "ಕಾಯೊಡೆದು ಹಾಲು ಚಿಲ್ಲನೆ ಸಿಡಿದು ಎರಡು ಹೋಳಾದದ್ದು ಕಂಡೆ." ಇಂಥ ಮಾಂಸಲ ವಸ್ತುವನ್ನು ಇಷ್ಟು ಮಂಗಲಮಯವಾಗಿ ಈ ಕವಿ ಪೂರ್ಣರೂಪದಲ್ಲಿ ರೂಪಿಸಿದ್ದು ಯಾವ ಕವಿಯೂ ಹೇವಪಡುವಂತಿದೆ— ಅವರ ರುಚಿ ನಿರಾಮಯವಾಗಿದ್ದರೆ.

"ಮಂದಿ" ಕವಿತೆ ಅರ್ಥಪೂರ್ಣ ಶಬ್ದಚಿತ್ರಣಕ್ಕೆ ಒಳ್ಳೆಯ ನಿದರ್ಶನ. "ಒಂಟಿಗೈಯೆತ್ತಿ ಪರಿಚಯದ ಬಿಟ್ಟಿಭಾಷಣ ಕುಟ್ಟಿ, ನುಚ್ಚು-ತವುಡಿನ ಚೀಲ ಹೊತ್ತು ಹೊರಡುವ ಮಂದಿ;—ಹಿಗ್ಗಿ ನುಗ್ಗಿ ಬಗ್ಗಿ ಎದ್ದು ಇಳಿಯುವ ಮಂದಿ; ಕೆಂಪು ಧೂಳಿನ ಬೆವರಲ್ಲಿ ಪೌಡರಿನ ವಾಸನೆ; 'ನಾಯಿ ಬೆನ್ನಟ್ಟಿದಂತೆ ಓಡಾಟ— ಓಡುವದೆ ರೂಢಿ; ಕತ್ತೆತ್ತಿ ಹೊಗೆಯಾಡಿಸುವ ಬೀಡಿ, ಸಿಗರೇಟು; ಕಾಜಿನ ಕಪಾಟಿನಲ್ಲಿ ಗೋಣಾಡಿಸುವ ಗೊಂಬೆ; ಬೆಳಗಿನಲಿ ಎದ್ದು ಬ್ಲೇಡಿಗೆ ಮುಖವ ನೊಡ್ಡಿ ಕನ್ನಡಿ ಹಿಡಿದು, ಇಸ್ತ್ರಿಬಟ್ಟೆಯ ತೊಟ್ಟು ಹೊರಡುವ ಮಂದಿ"—ಇವೆಲ್ಲ ರೇಖಾಚಿತ್ರಗಳಂತೆ ವ್ಯಂಜನೆಗೊಂಡಿವೆ. ಆದರೆ ಈ ಮಂದಿಯ ಈ ಓಡಾಟ, ನೂಕುನುಗ್ಗಲು, ಚಕಚಕ ಚಿಲಿಪಿಲಿ, ಹಗಲು ಕಾಣದ ಬಾವಿಯಲ್ಲಿ ಮುಳುಗಿ ಎಚ್ಚರತಪ್ಪುವ ಸಂಭ್ರಮ, ದಿಗ್ಭ್ರಮೆ ಇವುಗಳ ಆಳದ ತವಕ-ತಲ್ಲಣ ಏನು? ಎಲ್ಲಿಂದ? ಇದು Metaphysical ಪ್ರಶ್ನೆ. ಅದಕ್ಕೆ ಈ ಕವಿ ಹಾಯುವದಿಲ್ಲ. "ನನಗೆಲ್ಲಿ ಬೇರೆ ಹಾದಿ?"

ಇಲ್ಲಿ ಸಹಜತೆಗೆ ಅಭಿವ್ಯಂಜನೆ ಇದೆ. ಆದರೆ ಅಭಿವ್ಯಕ್ತವಾಗುವ ಅನುಭವ ಅಷ್ಟೊಂದು ಸಂಕೀರ್ಣವಲ್ಲ. ಚಿಂತನೆಗಿಂತ ಭಾವನೆ, ಆತ್ಮವಿಮರ್ಶೆಗಿಂತ ಆಕಾಂಕ್ಷೆ ಈ ಕೃತಿಗಳಲ್ಲಿ ಹೆಚ್ಚಾಗಿ ಆಕೃತಿ ಪಡೆದಿರುತ್ತದೆ.

ಕಣವಿಯವರ ಛಂದೋವೃತ್ತಗಳ ವಿನ್ಯಾಸವೇನೇ ಇರಲಿ; ಇವರು ಹೆಚ್ಚಾಗಿ ಬಳಸುವ ಪಂಕ್ತಿ ೫ ಮಾತ್ರೆಗಳ ೪ ಗಣವುಳ್ಳದ್ದು. ರೂಪಕಗಳಲ್ಲಿ, ಪದಪವಣಿಕೆಯಲ್ಲಿ ತುಂಬ ಲಾಲಿತ್ಯ, ಜೀಕು, ನಾದಪ್ರಜ್ಞೆ ಸ್ಫುಟವಾಗಿವೆ; ಅದು ಯೋಗ್ಯವೇ. ಕವಿಯ ಪ್ರತಿಮೆಗಳಲ್ಲಿ ಪದೇ ಪದೇ ಕಾಣಿಸಿಕೊಳ್ಳುವ ಉಪಮಾನಗಳು—ತೇರು, ತುತ್ತೂರಿ, ನಗಾರಿ, ಶಿಲ್ಪ, ಆರತಿ, ಧೂಪ, ದೀಪ, ಭಕ್ಷ್ಯಭೋಜ್ಯಗಳು. ಒಕ್ಕಲಬದುಕಿನ ಪರಿಕರಗಳು. ಒಂದು ಮರ್ಮಸ್ಪರ್ಶಿಯಾದ ಹೊಸ ಪ್ರತೀಕ 'ಗಾಂಧಿ' ಕವಿತೆಯಲ್ಲಿ ಬಂದಿದೆ :

'ಕಾಡಿಗೆ ಬಳಿದ ಕಾಜಿನಲ್ಲಿ ಮಾತ್ರ ಕಾಣುವದು
ನಮಗೀಗ ಹಿಡಿದ ಗ್ರಹಣ'

ಎಂಥ ಅರ್ಥಪೂರ್ಣ ಪ್ರತೀಕ!

ಈ ಕವಿತೆಗಳ ವಾಗ್ಮಿತೆ ಓದುಗನೊಂದಿಗೆ ವಾಗ್ವಾದ ಹೂಡುವದಿಲ್ಲ, ಸಲಿಗೆಯ ಸಲ್ಲಾಪ ನಡೆಯಿಸುತ್ತದೆ. ಇದು ಮಿತ್ರಸಂಮಿತಿ. ಇಲ್ಲಿಯ ಕೆಲವು ಕವನಗಳು ನೈಮಿತ್ತಿಕ ಕೃತಿಗಳು. ವಿಶ್ವಾವಸು ವರ್ಷಪ್ರತಿಪದೆ, ಪುರಂದರದಾಸರ ದಿನ, ಪಾಕಯುದ್ಧಪ್ರಸಂಗ, ರಾಜ್ಯೋದಯ ಉತ್ಸವ, ಮಕರಸಂಕ್ರಾಂತಿ, ಭದ್ರವಾಸ ಇಂಥ ಪ್ರಸಂಗಗಳು, ಅಥವಾ ಹಿರಿಯ ಸಾಹಿತಿಗಳ, ವಿಭೂತಿಗಳ ಸಂಸ್ಮರಣೆ — ಇಂಥ ನಿಮಿತ್ತಗಳಿಂದ ಹೊರಟ ಪ್ರಾಸಂಗಿಕ ಉದ್ಗಾರಗಳು. ಆದರೂ ಈ ಉದ್ಗಾರಗಳ – ಉದ್ಗಾನಗಳಲ್ಲಿ ಹೊಮ್ಮಿದ ವಾಣಿ ಅನಿಮಿತ್ತ ಸ್ಫುರಣದ್ದು. ಅದರ ಸೆಲೆ " ಪಾತಾಳದಿಂದ ಪುಟಿದು ನೆಲದ ವಾಸನೆ ಹಿಡಿದು ಮುಗಿಲ ಕೆಚ್ಚಲ ಗುಮ್ಮಿ ಹಗಲ ಬೆಳಕನು ನೆಕ್ಕಿ ಚಿಮ್ಮಿ ಹರಿಯುವ " ಒರತೆ.

ಕೊನೆಯ ಎರಡು ಗೀತರೂಪಕಗಳ ಶೈಲಿ ಲಾಲಿತ್ಯಪೂರ್ಣವಾಗಿದೆ. ಒಕ್ಕಲ ಹೆಂಡಂದಿರ ನುಡಿಗಳು ಮುಗ್ಧಮಾರ್ದವದಿಂದ ಕೂಡಿವೆ. ಸಹಜಪ್ರಾಸಗಳ ನಾದ–ಲಯ–ಜೀಕು ಕಳಕಳಿಸುತ್ತದೆ. ಆದರೆ ದನಿಗಳ ಪಲ್ಲಟನೆ ಬಿಟ್ಟರೆ ಈ ರೂಪಕಗಳಲ್ಲಿ ಬೇರೆ ನಾಟಕೀಯತೆ ಇಲ್ಲ—ಕಾವ್ಯವೇ ಹೆಚ್ಚು. ಆದರೂ ತುಂಬ ಶ್ರುತಿಸುಭಗವಾಗಿವೆ.

ಒಂದು ವಸ್ತು, ವ್ಯಕ್ತಿ, ವಿಷಯವನ್ನು ಆಯ್ದುಕೊಂಡರೆ ಅದಕ್ಕೆ ಹೊಂದಿಕೊಂಡ ಮುಖ್ಯ ಲಕ್ಷಣಗಳನ್ನು, ಅವುಗಳ ಒಳದನಿಯನ್ನು ಜಾಗೃತ ಕಲಾಪ್ರಜ್ಞೆಯಿಂದ ಕಣವಿ ಆ ಕುರಿತ ಕವನದಲ್ಲಿ ಸೆರೆಹಿಡಿಯುತ್ತಾರೆ. ' ರಸಿಕ ರಂಗ', ' ಬೇಂದ್ರೆ', ' ತೀ.ನಂ.ಶ್ರೀ.' ಇವರ ನಡೆನುಡಿಯ mannerisms ಆಯಾ ಸಾನೆಟ್‌ಗಳಲ್ಲಿ ಅಡಕವಾಗಿ ಬಂದಿವೆ. ಹಾಗೆಯೇ ' ವಿಶ್ವಭಾರತಿಗೆ ಕನ್ನಡದಾರತಿ'ಯಲ್ಲಿ ಕರ್ನಾಟಕ ಸಂಸ್ಕೃತಿಯ ತುಂಗ-ಭದ್ರ ಲಕ್ಷಣಗಳೆಲ್ಲ ಸೇರಿವೆ. 'ಭದ್ರವಾಸ', 'ಸಂಕ್ರಮಣ'ಗಳಲ್ಲಿಯೂ ಈ ಪ್ರಾದೇಶಿಕ ಪ್ರಾಸಂಗಿಕ ವರ್ಣರಂಜನೆ ಒಡಗೂಡಿದೆ. ಬಸವಣ್ಣ, ಅಕ್ಕಮಹಾದೇವಿ ಇವರ ಬಗೆಗಿನ ಕವನಗಳಲ್ಲಿ ಅವರ ವಚನವೈಖರಿ ಒಟ್ಟಂದದಲ್ಲಿ ಬೆಳಗಿದೆ. ಈ ತಂತ್ರ ಇಂಥ ಕಾವ್ಯಶಿಲ್ಪಕ್ಕೆ ನೈಜತೆಯೊಂದಿಗೆ ಋಜುತೆಯನ್ನೂ ತರುತ್ತದೆ.

ಬೇಂದ್ರೆಯವರು ಬಹಳ ಪ್ರಚಾರದಲ್ಲಿ ತಂದ ಅವರ ' ಮೇಘದೂತ'ದ ವೃತ್ತದಲ್ಲಿ ಅವರಂತೆ ಅನೇಕರು ಬರೆದಿದ್ದಾರೆ. ಆದರೆ ಅವರೂ ಆ ಅನೇಕರೂ (ಇವರಲ್ಲಿ ಈ ಕವಿಯೂ ಬಂದರು) ಒಂದು ಗೊಂದಲವನ್ನು ಮಾಡುತ್ತ ಬಂದಿದ್ದಾರೆ—ವೃತ್ತದ ಶುದ್ಧತೆಯ ದೃಷ್ಟಿಯಿಂದ. ಆದಕ್ಕೆ ಈ ಎರಡು ಪಂಕ್ತಿಗಳನ್ನು ಹೋಲಿಸಿ ನೋಡಬೇಕು :

(a) U U U – U U U – U – U – U U U – U – U
ನೆಲದ ಮೈಯ ತೊಳೆದಂತೆ ಮಿಂಚಿ ಮೈಗರೆದ ಬಾನಿನಲ್ಲಿ

(b) – – ᴗ ᴗ ᴗ ᴗ – – ᴗ – ᴗ ᴗ ᴗ ᴗ ᴗ ᴗ – ᴗ – ᴗ
ನೀರಾಗಿ ಹರಿಮ ಪಾರಾಗಿ ಬಂದೆ ಝರಿ–ತೊರೆಯ ತೋಳಿನಲ್ಲಿ.

ಈ ಪಂಕ್ತಿಗಳ ಪೂರ್ವಾರ್ಧಗಳಲ್ಲಿ ಒಟ್ಟು ಮಾತ್ರೆಗಳ ಲೆಕ್ಕ ಸರಿ ಆದರೂ (a)ದಲ್ಲಿಯ ಗಣಕ್ರಮ : ᴗᴗᴗ | ᴗᴗᴗ | ᴗᴗ | ಈ ಬಗೆಯಿದ್ದರೆ, (b)ದಲ್ಲಿಯ ಕ್ರಮ : ᴗᴗ ᴗᴗᴗ | ᴗᴗᴗ | ᴗᴗ ᴗᴗᴗ | ᴗᴗᴗ | ಈ ರೀತಿ ಬಂದು ಅವುಗಳ ಉಚ್ಚಾರದಲ್ಲಿ ಆರಂಭದ ನಿಪಾತ (accent) ಬೇರೆ ಆಗುತ್ತದೆ. ಇವೆರಡು ನಿಪಾತಭೇದದ ಗಣಗಳಿಂದ ಯುಕ್ತವಾದ ಪಂಕ್ತಿಗಳ ಕಲಬೆರಕೆ ಈ ವೃತ್ತದಲ್ಲಿ ಪದೇ ಪದೇ ಕಂಡುಬರುತ್ತದೆ. ಇದನ್ನು ಬಳಸುವ ಎಲ್ಲ ಕವಿಗಳಲ್ಲಿ ಅಂಥ ಬೆರಕೆ ಆಗದೆ ಬಳಸಿದರೆ ನಿಜವಾಗಿಯೂ ಎರಡು ಬೇರೆ ಬೇರೆ ನಡಿಗೆಯ ಮಾಟದ ವೃತ್ತಗಳು ಉಂಟಾಗುವಂತಿದೆ. ಇಂಥ ಕಲಬೆರಕೆ 'ನೆಲದ ಮಕ್ಕಳಿಗೆ ನಲ್ವಾಡಿ'ನ ತುಂಗಭದ್ರೆಯ ನುಡಿಗಳಲ್ಲಿ ಕಂಡುಬರುತ್ತದೆ. ಆದರೆ ಈ ಪ್ರಯೋಗ-ಪ್ರಮಾದದಲ್ಲಿ ಕಣವಿಯವರು ಒಂಟಿಯಲ್ಲ. ಅವರಿಗೆ ಒಳ್ಳೆ ಸಂಗಾತಿಗಳು ಸಾಕಷ್ಟಿದ್ದಾರೆ.

"ಆಗೀಗ ನಾಲ್ಕು ಸಾಲು"ಗಳ ೩೧ ಚುಟುಕಗಳಲ್ಲಿ 'ಉಕ್ತಿಯ ಅಡಕ' ಸಾಧಿಸಿದೆ. ಆದರೆ 'ಅನಿರೀಕ್ಷಿತ ಅಚ್ಚರಿ'ಯ ಚೆಲುವು ಚಕಮಕಿಯ ಕಿಡಿಯಂತೆ ಕಂಡುಬಂದದ್ದು ೧೦–೧೨ ಪದ್ಯಗಳಲ್ಲಿ. ಇಲ್ಲಿ ವಿಡಂಬನೆಯ ಚುಚ್ಚಿಗಿಂತ ಮೆಚ್ಚೇ ಹೆಚ್ಚು. ಆದರೂ, ಶ್ರೀ ದಿನಕರ ದೇಸಾಯರು ರೂಢಗೊಳಿಸಿದ ಚುಟುಕದ ಒಂದೇ ಮಾದರಿಗೆ ಕಣವಿಯವರು ರೋಚಕವಾದ ಪರ್ಯಾಯ ಮತ್ತು ವೈವಿಧ್ಯ ಒದಗಿಸುವುದರಲ್ಲಿ ಯಶಸ್ವಿಯಾಗಿದ್ದಾರೆ.

'ಎಡದಂಡೆ' ವಾಸ್ತವ 'ಬಲದಂಡೆ' ಆದರ್ಶ ಸೂಚಿಸುವಂತೆ ಕವನಗಳು ಸಂಕಲಿತವಾಗಿವೆ. ದಂಡೆ ಎರಡಾದರೂ ಹೊಳೆಯೊಂದೇ,—ಹೊಳೆಗೆ ಎರಡೂ ದಂಡೆ ಬೇಕು. ಅವುಗಳಿಂದಲೇ ಅದು ಒಂದು ಹೊಳೆ—ಇಲ್ಲವಾದರೆ ಹುಚ್ಚುಹಳ್ಳ. ಹೊಳೆಯೇ ತನ್ನ ದಂಡೆಗಳನ್ನು ತನಗೆ ಬೇಕಾದಂತೆ ಮಾಡಿಕೊಳ್ಳುತ್ತದೆ. ಅಲ್ಲಿಯ ನೀರು ಜೀವನ. "ನೀರಮುಡಿ, ಜೇನಸವಿ, ಗೀತಸುಧೆ" —ಎಲ್ಲ ಕೂಡಿ ಹರಿದಿದೆ ಈ "ಎರಡು ದಡ"ಗಳ ನಡುವೆ. ಈ ಕಾವ್ಯ ಕೊನೆಯ ರೂಪಕದಲ್ಲಿ ಕವಿಯೇ ಹಾಡಿದಂತೆ :

"ನಿಮ್ಮ ನುಡಿಯನೆ ಹಿಡಿದು, ಮಿಡಿದು, ಕೇಕೆಯ ಹೊಡೆದು
ಪಡೆದ ಹಾಡಿದು; ಅಲ್ಲ ಬೇರೆ ಸರಕು."

ಈ ಹಿನ್ನೆಲೆಯಲ್ಲಿ 'ಎರಡು ದಡ' ವೈಶಿಷ್ಟ್ಯಪೂರ್ಣವಾದ ಒಂದು ಮಹತ್ವದ ಕೃತಿ.

★ **ಗೌರೀಶ ಕಾಯ್ಕಿಣಿ**

ಕಾಮಿಮಗಳು

ಚೈತ್ರಮಾಸದ ಹರುಷ-ಮೈತ್ರಿಕೆಯು ಮೈಮಲರಿ
ಸುತ್ತುವಾಸನೆ—ಮೈಮನಕೆ ರೋಮಾಂಚನ.
ಹೂಧೂಳಿ ತುಂಬಿದಾ ಮದಗಾಳಿ ಮನಮೋಹನ
ಮಕರಂದ ರಾಗರಸ ಮಧುಪ ಮೋಹನಗಾನ
ಪ್ರಕೃತಿಯಲಿ ನವಚೇತನ.

ಮಣ್ಣ ಕಣಕಣದಲ್ಲು ಸೂಸುನಗೆ ವಾಸನೆಯು,
ಹಸಿಹಸಿರು ಅಂಟಂಟು ಆಕರ್ಷಣೆಯ ಜಿಗುಟು.
ಹೆಜ್ಜೆಹೆಜ್ಜೆಗು ಜುಮ್ಮು ಮಧುವರ್ಷ ಅನುಲೇಪನ,
ಸುಮಧೂಳಿ ತಂಗಾಳಿ ಭೂಧೂಳಿ ರಸಮಿಲನ
ಪ್ರಕೃತಿಯಲಿ ರಸಸೇಚನ.

ಬೆಳಗುಜಾವದ ಏಳು ಗಂಟೆಯ ವೇಳೆ ಚೆಲುವು,
ಉಷೆಯ ಮೋರೆಗೆ ಕೆಂಪು ರಾಗರತಿಯಾ ಪೆಂಪು,
ಮಿಂದು ಹೊರಟಳು ಗುಡಿಗೆ ಅಂಬಿಗರ ಕಾಮಿಮಗಳು,
ಕೈಯಲ್ಲಿ ವಾಸನೆಯ ಅರಳುಮಲ್ಲಿಗೆ, ಮುಡಿಗೆ
ಬಿರಿಮುಗುಳು ಹೊಸಯೌವನ.

ಹೂ ಹಣ್ಣು ತೆಂಗಾಯಿ ಪರಿಮಳದ ಊದಬತ್ತಿ,
ಹಿಡಿದು ಹೊರಟಳು ಚೆಲುವೆ, ಹದಿನಾರು ಹರೆಯದಾ
ತುಂಬುಜವ್ವನೆಯಿವಳು, ಕಪ್ಪು ಕಣ್ಣಿಗೆ ಹಚ್ಚಿ
ಚಂದ್ರಹಾಸವ ಬೀರಿ, ಚಿಕ್ಕೆಗಂಗಳ ತೆರೆದು;
ತಲೆಯಲ್ಲಿ ನವಯೋಜನಾ.

ಮತ್ಸ್ಯಗಂಧಿಯು ಇವಳು ಹೆಸರು ಮೀನಾಕ್ಷಿ;
ರಕ್ತಮುಖಿ ಚಂದ್ರನಖಿ, ಮೀನ ತಿನ್ನುವ ಇವಳ
ಮೈಯ ಮಾಂಸದ ಕೊಬ್ಬು ಹಬ್ಬದೂಟವು ಕಣ್ಗೆ,
ಮೈಮನಕೆ ಗಜಬಿಜಿಯು, ಉತ್ತುಂಗಸ್ತನೆಯಿವಳ
ಕಣ್ಣೋಟ ಹೃತ್ಸ್ಪಂದನಾ.

ಮೂರು ಹರದಾರಿಯನು ಮುಂದೆ ನಡೆಯಲು ಬೇಕು,
ಆಮೇಲೆ ಶಿವಲಿಂಗದರುಶನವ ಪಡೆಯಬೇಕು.

ಮಣ್ಣವಾಸನೆ ಮೂಸಿ ಮುನ್ನೀರ ಮಗಳಿವಳು
ಮಣ್ಣೆನೆದೆಯನು ಮೆಟ್ಟಿ ಮುಂದೆ ನಡೆದಳು ಗುಡಿಗೆ,
ಮಧುವಾಸ ಹೂವಾಸನೆ !

ಹೂವಾಸ ಹಾಸಿತ್ತು ಹೂವ ಹಾಸಿಗೆಯನ್ನು,
ಹೂಹಣ್ಣ ಹೇಮಮಯ ಮಿನುಮಿನುಗು ಪಾತ್ರೆಯಲಿ,
ತುಂಬಿತ್ತು ಮಕರಂದ ಅಮೃತರಸ ಪಾಯಸವು.
ಕುಸುಮಕೇಸರ ಕೆಂಪು ಬಳಿದಿತ್ತು ಒಳಹೊರಗೆ
ರಕ್ತಚಂದನಲೇಪನ !

ಗುರಿಬಾಣ ಹಕ್ಕಿಗಳ, ಅಲ್ಲವೈ ಸುಮಬಾಣ
ಪಕ್ಕಗಳ, ಮದ ಮುದಿತ ರಾಗರಿಂಗಣ ಕುಣಿತ,
ಬಿರಿಮುಗುಳ ಸನಿಹದಲ್ಲಿ ಬಣ್ಣಪಕ್ಕವ ಚಾಚಿ,
ಮಾಯೆ ಸೆರಗನು ಬೀಸಿ, ಬಿಗಿದಪ್ಪಿ ಮಧುಪಾನ
ಹೂಗಳಿಗೆ ಗರ್ಭದಾನ !

* * *

ಹನ್ನೆರಡು ಗಂಟೆಯಾ ಸುಡುಸುಡುವ ಸುಡುಹಗಲು
ಮಣ್ಣೆನೆದೆ ಕಾದಿತ್ತು, ಬಯಸಿತ್ತು ನೀರ ಹನಿಯ.
ಉರಿಬಿಸಿಲ ಕಾಮಜ್ವರ, ಪ್ರಕೃತಿಯೇ ಕೆರಳಿತ್ತು
ಮಲಗಿ ಕನವರಿಸಿತ್ತು ರಸದ ಓಕುಳಿಯೆಂದು ?
ಸುಡುವಿಗನು ಮೇಲೆ ಮೌನ.

ತುಂಟಗೂಳಿಗಳೆಂಟು ಒಂಟಿ ಮಣಕದ ಮೇಲೆ
ಹಾಣಾಹಣಿಯು ಡಿಕ್ಕಿ, ಕಾದಾಟ ರಸ್ತೆಯಲಿ,
ಗೆದ್ದ ಗೂಳಿಯೆ ಮೇಲೆ, ಉಳಿದುವೆಲ್ಲವು ಹಿಂದೆ,
ಮಣಕ ಹಾಕಿತು ಕಂದ, ಉರಿಬಿಸಿಲು ಮೈಕಾವು
ಇಲ್ಲೆಲ್ಲ ಸ್ವಚ್ಛಂದ !

ಗುಡಿಗೆ ಇನ್ನೂ ಕಾಲು ಮೈಲಿಯ ದೂರ ದಾರಿ
ಜಾರಿ ನಡೆಯಲು ಬೇಕು, ಸುತ್ತೆಲ್ಲ ದಾರಿಯಲಿ
ಮುತ್ತುಗದ ಮರಮಲರಿ ರಕ್ತದೋಕುಳಿ ಸುಳಿಯು,
ಭೀಕರತೆ, ನೆಲ ತಪ್ತ ತಾಮ್ರದ ತಗಡು, ದೇಹ
ಬಯಸಿತ್ತು ನೆಳಲಾಶ್ರಯ.

* * *

ಓ ಅಲ್ಲಿ ಸನಿಹದಲಿ ಗುಡಿಯು ಗೋಪುರ ಬಂತು,
ಅಮಿತಹರುಷವ ತಂತು.   ಅಂಬಿಗಿತಿ ಸಂತೋಷ
ಚಿಗಿತು, ಹೂಮಿಡಿ ಮಾಗಿ ಹಣ್ಣಾಗಿ, ರಸ ಒಸರಿ
ಹೊನಲಾಗಿ ಬಿದ್ದೆದ್ದು, ಪುಟನೆಗೆದು ಶಿವಲಿಂಗ
ದರುಶನಕೆ ಕಾತರಿಸಿತು.

ದೇವಾಲಯದ ತಂಪು, ಕುಸುಮಕರ್ಪೂರ ಕಂಪು
‘ ಓಂ ನಮಃ ಶಿವಾಯ ’ ಎಂಬ ಭಟ್ಟರುಲಿಯಿಂಪು
ಧೂಪದಾರತಿ ದೀಪದಾರತಿ ಗಂಟೆವಾದನ
ಎಲ್ಲವೂ ಒಂದೊಂದು ಸರತಿಯಲಿ ಮಾಡಿತ್ತು
ಅಂಬಿಗಿತಿ ಮನರಂಜನ.

ಭಟ್ಟರಾ ಶಿವಮಂತ್ರ ಗುಡಿಮಣ್ಣಕಣದಲ್ಲು
ಚೈತನ್ಯ ತುಂಬಿತ್ತು ! ನೀರ್ಗಣ್ಣು, ಕೈಯ ಹೂ
ಹಣ್ಕಾಯಿ ಕೆಳಗಿಟ್ಟು, ದೇವರಿಗೆ ತಲೆವಾಗಿ
ನಿಂತಿಹಳು— ಗುಡಿಯಲ್ಲಿ ಯಾರಿಲ್ಲ ಇಬ್ಬರೇ,
ಪೂಜಾರಿ ಕೂಡಲ ಕನ್ನೆ !

ಕಣ್ಮುಚ್ಚಿ ಕೈಮುಗಿದ ಮುಗುದೆ ಕಾಮಿನಿ ಮೌನಿ
ಮುಂದುಗಡೆ ಶಿವಲಿಂಗ—ಭಟ್ಟರಾ ಜುಟ್ಟದಾ
ಅರಳುಮಲ್ಲಿಗೆ ಹೂವು ಸುತ್ತು ವಾಸನೆ ಬೀಸಿ
ನಕ್ಕಿತ್ತು. ಮಂಗನಿಗೆ ಮದ್ಯವನು ಕೊಟ್ಟಂತೆ
ಭಟ್ಟರಿಗೆ ಸಮ್ಮೋಹನ !

ಗುಡಿಯ ತೂಗುದೀಪವು ಚಲಿಸಿ ಹೊಯ್ದಾಡಿತ್ತು
ತೈಲವಿಂಗಿದ ದೀಪ ಮಿಣುಕಿ ಕೊರುತಿತ್ತು
ಗರ್ಭಗುಡಿಯಲಿ ಮಬ್ಬುಗತ್ತಲು ಕವಿದಿತ್ತು
ಭಟ್ಟರಿಗೆ ಮೈಮೇಲೆ ಭಾರ ಹೆಚ್ಚಾಗಿತ್ತು
ದೇಹ ಕಂಪಿಸುತ ಇತ್ತು.

ನಿಮಿಷ ಕಳೆಯಿತೆ ಇಲ್ಲ,—
ಗಂಟೆವಾದನ ನಿಂತು, ದೀಪದಾರತಿ ಪಿಂತು,
ಶಿವಲಿಂಗ ಕಡೆಯಿಂದ ಜಲಸುತೆಯು ಇದ್ದೆಡೆಗೆ
ಮುಖತಿರುವಿ ಭಟ್ಟರೆಂದರು,— “ದೇವಿ ಮಹಾಮಾಯೆ
ಆದಿಶಕ್ತಿಯು ನೀನು, ಸಕಲಮಾಯೆಗು ಮೂಲ,
ಸೋತೆ ನಾ ನಿನಗೆ ಚೆನ್ನೆ !

ಗಂಟೆಯನು ದೂರೆಸೆದು ದೀಪಾದಾರತಿ ಬಿಟ್ಟು
'ಬಾ ರತಿಯೆ' ಎಂದೆನುತ, ತುಟಿಗೆ ಮುದ್ದನು ಕೊಟ್ಟು
ಕಟಿಗೆ ಕೈತಳೆ ಸುತ್ತಿ, ಎದೆಗೆ ಎದೆಯನು ಒತ್ತಿ,
ವಿದ್ಯುದಾಲಿಂಗನದಿ ಮೈಮರೆತು ನಿಂತಾಗ,
ಗುಡಿಯ ದೀಪವು ಆರಿತು!

ಭಟ್ಟರಾಟವ ಕಂಡು ಕಾಮಿಮಗು ಮೀನಾಕ್ಷಿ
ಕೈಕಾಲು ನಡುಗಿದವು—ಎದೆಯಲ್ಲಿ ಗಾಬರಿಯು,
ಮುಖ ಬಿಳಚಿ ಬೆಮರಹನಿ ಮುತ್ತಮಣಿ ಮುಖದ ಮೇಲೆ
ಮೀನವಾಸನೆ ಸುತ್ತುಮುತ್ತೆಲ್ಲ. ಕಾಮಿನಿಯ
ಮೈಪೂರ್ತಿ ರೋಮಾಂಚನ.

ಚಕಿತ ಕನ್ನೆಯು ಹೆದರಿ ಹಿಂದಕೆ ಸರಿದು ನಿಂತು,
ಬೆಳ್ಳಿಳಿಸಿ ಏದುಸ್ವಾಸವ ತೆಗೆದು ತಡವರಿಸಿ,
"ಭಟ್ಟರೇ ನೀವು ಮಾಡುವುದೇನು? ಮೈಲಿಗೆಯು
ನನ್ನ ಮುಟ್ಟಲು ನಿಮಗೆ, ಹಿಂದೆ ಸರಿಯಿರಿ ಸ್ವಾಮಿ,
ಹರಿಕಾಂತ ಕಾಮಿಮಗಳು.

ಮೀನ ಮುಟ್ಟಿದ ಕೈಯು, ಮಾಂಸ ಮುಕ್ಕಿದ ಬಾಯು
ಹೊಲಸು ನಾತದ ಮೈಯು—ಶೂದ್ರಕನ್ನೆಯು ನಾನು
ಪೂಜಾರಿಗಳು ತಾವು, ಎಲ್ಲಾದರೂ ಉಂಟೆ?
ಕೈಮುಗಿವೆ ದೂರ ಸರಿಯಿರಿ ಸ್ವಾಮಿ ನೋಡೀತು
ಲೋಕದಾ ಕೆಟ್ಟ ಕಣ್ಣು.

ಭಟ್ಟರಾ ಕುಡಿಮೀಸೆ ಚಿಗುರಿತ್ತು, ನಗೆಯ ಹೂ
ಅರಳಿತ್ತು. ತೊಂಡೆತುಟಿ ಕೊನೆಗೆ ಬಂದು ತುಂಬಿತ್ತು
ಜೊಲ್ಲು ಸುರಿಸುತ ತೊದಲಿ ಭಟ್ಟರೆಂದರು—"ಇದುವೆ
ದೇವ ಮೆಚ್ಚುವ ಕಾರ್ಯ—ಒಲಿದ ಮೈಮನಗಳಿಗೆ
ಕುಲಪದವಿ ಪಂಥವೆಲ್ಲಿ?

ಮತ್ಸ್ಯಗಂಧಿಯೆ ನೀನು? ಪರಾಶರನ ಸುಗಂಧಿ
ಅಲ್ಲ ಮೇನಕೆ, ದೇವಪ್ರೇರಣೆಯಿಂದ ನಿಂದೆ,
ನಾಗನಾ ನಾಗಿಣಿಯೆ ನಾಗನೃತ್ಯಕೆ ಸಿದ್ಧ,
ಫಣೆಫಣೆಯ ಮುಂಡಾಡಿ, ಮೂರು ದಿನ ಬಾಳಿನಲಿ
ಹೆಚ್ಚೇನು ಸವಿಯುವಾ.

ಅಲ್ಲಿ ದೃಷ್ಟಿಸಿ ನೋಡು, ಯೋನಿಪೀಠದ ಮೇಲೆ
ಲಿಂಗದೇವನ ನಾಟ್ಯ, ಶಿವನ ಶಕ್ತಿಯು ಕೂಟ
ಶಿವ ನಾನೆ ಆದಿಶಕ್ತಿಯು ನೀನು, ಸಮ್ಮಿಲನ
ಇವೆ ಮುಕ್ತಿ—ಅಹ ಸುಖ ರಸವರ್ಷ" ಅಪ್ಪರಲಿ
ಗುಡಿಗಂಟೆ ಡಣಡಣಾ.

* * *

ಗಂಟೆವಾದನ ಕೇಳಿ, ಸೊಂಟ ಝಾಡಿಸಿ ಎದ್ದು
ಗಡಬಡಿಸಿ ಗಾಬರಿಸಿ ಬಂದ ಭಕ್ತನ ಕಾಯಿ
ಒಡಕೊಟ್ಟು, ಶಿವಲಿಂಗ ತಲೆಗೆ ಏರಿಸಿ ಹೂವ,
ದೀಪ ಹೊತ್ತಿಸಿ, ಕಳಿಸಿ ಭಕ್ತನನು ಹೂ ಕೊಟ್ಟು,
ಬೆಳಕಿನಲಿ ಕಣ್ಣುಬಿಟ್ಟ.

ಎಚ್ಚತ್ತ ಪೂಜಾರಿ ಮೈಕೊಡವಿ ಮನೆಯ ಕಡೆ
ನಡೆಯೆ ಕನ್ನೆ ಕೇಳಿದಳು, "ನನ್ನ ಗತಿಯೇನು?" ಎಂದು
"ಬೆದರದಿರು ಓ ಚೆನ್ನೆ, ನಿನಗಾಗಿ ತೆರೆದಿಹುದು
ಗುಡಿಯು ಪಕ್ಕದ ಮನೆಯು, ನೀನಿನ್ನು ದೇವದಾಸಿ,
ನನಗೆ ನಿನ್ನೆದೆಯ ಸರಸಿ.

ಮತ್ಸ್ಯಗಂಧಿಯು ಅಲ್ಲ, ನೀನು ಯೋಜನಗಂಧಿ
ಸೆಳೆದೀತು ವಾಸನೆಯು ಹರದಾರಿ ದೂರಿರುವ
ರಸಿಕರನು, ನೀನಿನ್ನು ಸ್ವತಂತ್ರೆ, ನಾ ಬರುವೆ
ದೇವಕರುಣೆಯು ಉಂಟು ನಿನ್ನ ಮೇಲೆ. ಭಟ್ಟ
ಮುಟ್ಟಿದಮೇಲೆ ಕೇಳಬೇಕೆ?"

ನೆರೆಬಂದ ತೊರೆಯಿಳಿದ ಪರಿಯಾಯ್ತು ಕನ್ನಿಕೆಗೆ,
ನೋವು ಯಾತನೆ ಲಜ್ಜೆಯಲಿ ತಲೆಯು ಬಾಗಿತ್ತು.
ಅರಳುಕುಸುಮದ ಮೇಲೆ ತುಂಬಿ ಗಾನವ ಮಾಡಿ
ಕುಳಿತು ಮಧುವನು ಹೀರಿ, ಹಾರಿತೆಲ್ಲೋ ದೂರ
ಹೂನೋವ ಕೇಳುವರು ಯಾರು?

★ ಎನ್. ಆರ್. ನಾಯಕ

---

(೧) ಮೀಯು-ಸ್ನಾನಮಾಡು, (೨) ಕಪ್ಪು-ಕಾಡಿಗೆ, (೩) ಗುರಿಬಾಣ ಹಕ್ಕಿ-ಪಾತರಗಿತ್ತಿ, (೪) ಮಣಕ-ಹಯನಾಗದ ಆಕಳು, ಇಲ್ಲವೇ ಎಮ್ಮೆ, (೫) ಕಂದ-ಭ್ರೂಣ, ಪೂರ್ಣ ಬೆಳವಣಿಗೆಯಾಗದೇ ಸತ್ತು ಹುಟ್ಟಿದ ಕರು, (೬) ಕೂರು-ತೂಕಡಿಸು, ದೀಪ ನಂದಿಹೋಗುವ ಸ್ಥಿತಿಯಲ್ಲಿರು, (೭) ಭಾರ-ದೇವರು ಮೈಮೇಲೆ ಬರುವದು, ಆಗ ದೇಹ ಕಂಪಿಸುತ್ತದೆ.

ಐತಿಹಾಸಿಕ ನಗರ ಹೊದಿಗೆರೆ

ಶಿವಮೊಗ್ಗ ಜಿಲ್ಲೆಯ ಚನ್ನಗಿರಿ ತಾಲೂಕಿನಲ್ಲಿ ಸುಮಾರು ೪೨೫ ಕುಟುಂಬಗಳಿರುವ ಗ್ರಾಮವಾದ ಹೊದಿಗೆರೆಯನ್ನು ಮಾನವಶಾಸ್ತ್ರ – ಸಂಶೋಧನಾ ವಿಧಾನಗಳಿಂದ ಸಂಶೋಧಕರು ಪರೀಕ್ಷಿಸಿದಾಗ ಅದರ ಐತಿಹಾಸಿಕ ಮಹತ್ವದ ಬಗ್ಗೆ ಹೊಸ ಬೆಳಕು ಬೀಳುತ್ತದೆ. ಈ ಊರ ಹೆಸರು ಅನೇಕ ಶತಮಾನಗಳಿಂದ ಮಾರ್ಪಾಡಾಗುತ್ತಾ ಈಗಿರುವ ರೂಪವನ್ನು ತಾಳಿದಂತೆ ಕಾಣುತ್ತದೆ. ಮೂಲ ಹೆಸರಿನ ಬಗ್ಗೆ ಅನೇಕ ವಾದವಿವಾದಗಳಿವೆ. ಜನರು ತಮ್ಮ ಊರಿನ ಬಗ್ಗೆ ಅನೇಕ ಐತಿಹ್ಯಗಳನ್ನು ಹೇಳುತ್ತಾರೆ. ಕೆಲವುಗಳನ್ನು ಇಲ್ಲಿ ಉದಾಹರಿಸಬಹುದು.

ಒಂದು ಹೇಳಿಕೆಯ ಪ್ರಕಾರ ಹೊದಿಗೆರೆಯಲ್ಲಿ ಮೊದಲು ವಿಪುಲವಾಗಿ ಕೇದಿಗೆ ಪೊದೆಗಳು ಬೆಳೆಯುತ್ತಿದ್ದವಂತೆ. ಅದಕ್ಕಾಗಿ ಈ ಊರಿಗೆ "ಪೊದೆಗಳ ಕೆರೆ"–ಪೊದಗೆರೆ–ಹೊದೆಗೆರೆ ಎಂದು ಹೆಸರು ಬಂದಿತೆಂದು ಹೇಳುತ್ತಾರೆ.

ಮತ್ತೊಂದು ಹೇಳಿಕೆಯ ಪ್ರಕಾರ ಹೊದಿಗೆರೆಯಲ್ಲಿ ಮೊದಲು ಒಂದು ಪಾಠಶಾಲೆ ಇತ್ತಂತೆ. ಇಲ್ಲಿಗೆ ಸುತ್ತುಮುತ್ತಲಿನ ಊರಿನವರು ಓದುವದಕ್ಕೆ ಬರುತ್ತಿದ್ದರಂತೆ. ಆದ್ದರಿಂದ ಈ ಊರು "ಓದಿನಕೆರೆ" ಎಂದು ಹೆಸರಾಗಿತ್ತು. ಮುಂದೆ ಉಚ್ಚಾರಣೆಯಲ್ಲಿ ಬದಲಾವಣೆ ಹೊಂದುತ್ತ ಈ ಊರ ಹೆಸರು ಹೊದಿಗೆರೆಯಾಯ್ತು. ಈ ವಾದವನ್ನು ಎತ್ತಿಹಿಡಿಯಲಿಕ್ಕೆ ಸಾಕ್ಷಿಯಾಗಿ ಈ ಊರಿನಲ್ಲಿಯ ವಿರಕ್ತಮಠದಲ್ಲಿ ಪಾಠಶಾಲೆ ಇತ್ತೆಂದು ಬಲ್ಲವರು ಹೇಳುತ್ತಾರೆ. ಈಗ ೫೦-೬೦ ವರ್ಷಗಳ ಹಿಂದಿನ ಅಂಚೆ ಇಲಾಖೆ ಮುದ್ರೆಯಲ್ಲಿ "ಹೊದೆಕೆರೆ" ಎಂದು ಮುದ್ರಿತವಾಗುತ್ತಿತ್ತು. ಮತ್ತು ಹಳೆಯ ಪತ್ರಗಳನ್ನು ಪರಿಶೀಲಿಸಿದಲ್ಲಿ "ವಾದಿಗ್ಗರೆ" ಎಂದೇ ಜನರು ವಿಳಾಸವನ್ನು: ಬರೆಯುತ್ತಿದ್ದರು. ಆದ್ದರಿಂದ ಬಹುಶಃ "ಓದಿನಕೆರೆ"ಯೇ ಓದಿಗ್ಗರೆ–ಹೊದೆಗೆರೆ–ಹೊದಿಗೆರೆ ಎಂದು ಮಾರ್ಪಾಡಾಗಿರಲಿಕ್ಕೆ ಸಾಕು.

ಇನ್ನು ಕೆಲವರ ವಾದದ ಪ್ರಕಾರ ಇದು "ಹೋತಿನ ಕೆರೆ" (ಮೇಕೆಗಳ ಕೆರೆ) ಎಂದು ಹಿಂದೆ ಪ್ರಸಿದ್ಧವಾದ ಕಾರಣ, ಮುಂದೆ ಬದಲಾವಣೆಯಾಗುತ್ತ ಹೊದಿಗೆರೆಯಾಯ್ತು. ಈ ವಾದವನ್ನು ಎತ್ತಿಹಿಡಿಯಲಿಕ್ಕೆ ಇಲ್ಲಿ ಕುರುಬರು ಸಾಕಷ್ಟು ಸಂಖ್ಯೆಯಲ್ಲಿ ವಾಸವಾಗಿದ್ದರೂ ಅವರಲ್ಲಿ ಈ ವಿಷಯವಾಗಿ ಯಾವದೇ ತರಹದ ಕಥೆಗಳು ಕಂಡುಬರುವದಿಲ್ಲ. ಅಥವಾ ಇಲ್ಲಿ ಸಾಕಷ್ಟು ಇರುತ್ತಿದ್ದ ಬಗ್ಗೆಯೂ ತಿಳಿಯುವದಿಲ್ಲ.

೧. **ಶಹಾಜಿಯು ಗೋರಿ:** ಈ ಊರಿನ ಐತಿಹಾಸಿಕ ಮಹತ್ವವನ್ನು ಸಾರಿಹೇಳಲಿಕ್ಕೆ ಅನೇಕ ಕುರುಹುಗಳಿವೆ. ಈಶಾನ್ಯ ದಿಕ್ಕಿನಲ್ಲಿ ಊರಿಗೆ ಅತ್ಯಂತ ಸಮೀಪದ ಹೊಲದಲ್ಲಿ ಶಹಾಜಿಯದೆಂದು ಹೇಳುವ ಗೋರಿ ಇದೆ. ಇದನ್ನು ಇತ್ತಿತ್ತಲಾಗಿ ಸರಕಾರದವರು ಜೀರ್ಣೋದ್ಧಾರ ಮಾಡಿಸಿದ್ದಾರೆ. ಶಹಾಜಿಯ ನಂತರದ ವಿಜಾಪುರ ಆದಿಲಶಾಹಿ ಅರಸರ ಸರದಾರನೆಂದು ಹೇಳಲಾದ ಲಚ್ಚಾರಾಮ ಎಂಬ ಸರದಾರನ ಹೆಸರಿನ ಒಂದು ಹಾಳು ಬಾವಿಯು ಊರಿನ ಹೊರಗೆ ಉತ್ತರಕ್ಕೆ ಇದೆ. ಇದು ಹೊಕ್ಕು ತುಂಬುವ ಬಾವಿಯಾಗಿದ್ದು, ಜನರು ಈಗ ಈ ಬಾವಿಯ ನೀರನ್ನು ತಮ್ಮ ಹೊಲಗಳಲ್ಲಿ ಕಣಗಳನ್ನು ಮಾಡುವಾಗ ಉಪಯೋಗಿಸುತ್ತಾರೆ. ಒಂದು ಹೇಳಿಕೆಯ ಪ್ರಕಾರ ಶಹಾಜಿಯು "ದಿನಕರ್ಮ"ಕ್ಕೆ ಈ ಬಾವಿಯ ನೀರನ್ನೇ ಉಪಯೋಗಿಸುತ್ತಿದ್ದರೆಂದೂ ಮತ್ತು ಶಹಾಜಿಯ ಮೊದಲನೆಯ ದಿನಕರ್ಮವನ್ನು ನೆರವೇರಿಸುವದಕ್ಕೋಸುಗವೇ ಅವರನಂತರದ ಸರದಾರ ಲಚ್ಚಾರಾಮನು ಈ ಬಾವಿಯನ್ನು ತೆಗೆಯಿಸಿದ ನೆಂದೂ ಹೇಳುತ್ತಾರೆ.

ಲಚ್ಚಾರಾಮನು ಮರಾಠಿಗನೇ ಅಥವಾ ಹೊದಿಗೆರೆ ಗ್ರಾಮದ ಪಾಳೆಗಾರರ ವಂಶಕ್ಕೆ ಸೇರಿದವನೇ ಎಂಬುದು ಇನ್ನೂ ಬಗೆಹರಿಯದ ವಿಷಯ. ಲಚ್ಚಾರಾಮ ಮತ್ತು ಮುಹ್ಯರಾಮ ಎಂಬುವವರು ಅಣ್ಣತಮ್ಮಂದಿರೆಂದೂ ಹೊದಿಗೆರೆ ಪಾಳೆಗಾರರೆಂದೂ ನಂಬಿಕೆ. ಇಂದಿಗೂ ನಾಯಕ ಮತಕ್ಕೆ ಸೇರಿದ "ಪಾಳೆಗಾರರು" ಎಂಬ ಹೆಸರಿನ ಅನೇಕ ಮನೆತನಗಳು ಹೊದಿಗೆರೆಯಲ್ಲಿವೆ.

ಶಹಾಜಿಯ ಗೋರಿಯ ಸಮೀಪದಲ್ಲಿಯೇ ಸುಮಾರು ೧೦೦ ಗಜ ಅಂತರದಲ್ಲಿ ಒಂದು ಶಿಲಾಶಾಸನ ನಿಂತಿದೆ. ಇದರಲ್ಲಿ "ರಾಯಸದ ರಾಮ ರಾಯನು ಮಡಿದ ಸಮಾಧಿ" ಎಂದು ಕೆತ್ತಲಾಗಿದೆ. ಈ ಪ್ರಕಾರವಾಗಿ ಇಲ್ಲಿ ಮೂರು ಜನ ರಾಜಕೀಯ ಮುಂದಾಳುಗಳು ಇದ್ದ ಕುರುಹಿನ ಸ್ಥಾನಗಳಿವೆ. ಈ ಗ್ರಾಮದಲ್ಲಿ "ಲಾಯದ ಹೊಲ"ಗಳೆಂದು ಕರೆಯುವ ಸುಮಾರು ೮೦ ಎಕರೆ ಪ್ರದೇಶವಿದೆ. ಈ ಸ್ಥಳವನ್ನು ಶಹಾಜಿಯ ಕಾಲದಲ್ಲಿ ಕುದುರೆಗಳ ಲಾಯವೆಂದು ಉಪಯೋಗಿಸುತ್ತಿದ್ದರೆಂದು ನಂಬಿಗೆ. ಈ ಊರಿನ ಸಾಹುಕಾರರ ಮನೆಯಲ್ಲಿ ಶಹಾಜಿಯು ವಸತಿಹಾಕುತ್ತಿದ್ದನೆಂದೂ ಅವನು ಸತ್ತನಂತರ ವಿಪುಲವಾದ ಸಂಪತ್ತು ಈ ಸಾಹುಕಾರ ಮನೆತನದವರಿಗೆ ಸಿಕ್ಕಿತೆಂದೂ ಜನರು ಆಡಿಕೊಳ್ಳುತ್ತಾರೆ. ಮರಾಠಾ ಸರದಾರರು ಇಲ್ಲಿ ರಾಜ್ಯಕಾರಭಾರ ನಡೆಸುತ್ತಿದ್ದರೆಂದು ಹೇಳಲಿಕ್ಕೆ ಇಲ್ಲಿಯ ನಾಗರಿಕರನೇಕರ ಮನೆಗಳಲ್ಲಿ ಮರಾಠಿ ಭಾಷೆಯಲ್ಲಿ ಬರೆದ ಅನೇಕ ಹೊತ್ತಗೆಗಳಿವೆ.

ಈ ಮೂವರು ಸರದಾರರಲ್ಲಿ ಯಾರು ಮೊದಲಿಗರೆಂಬುದು ತಿಳಿದು ಬಂದಿಲ್ಲ. ಮುಖ್ಯವಾಗಿ ರಾಯಸದ ರಾಮರಾಯನು ಶಹಾಜಿಗಿಂತ ಮೊದಲಿ

ನವನೋ ಅಥವಾ ಲಚ್ಮಾರಾಮನ ನಂತರ ಬಂದವನೋ ಎಂಬುದು ಖಚಿತವಾಗಿ ತಿಳಿಯುವದಿಲ್ಲ. ಇಷ್ಟೇ ಅಲ್ಲ, ಶಹಾಜಿ ಎಂಬವನು ಶಿವಾಜಿಯ ತಂದೆಯಾದ ಶಹಾಜಿಯೋ ಅಥವಾ ಅದೇ ಹೆಸರಿನ ಬೇರೆ ಮರಾಠಾ ಸರದಾರನೋ ಎಂಬ ಬಗ್ಗೆ ಊಹಾಪೋಹಗಳಿವೆ.

೨. **ಶಹಾಜಿಯ ಮರಣ :** ಒಂದು ಹೇಳಿಕೆಯ ಪ್ರಕಾರ ಸರದಾರ ಶಹಾಜಿಯು ಬಿಜಾಪುರ ಕಡೆಯಿಂದ ಬೆಂಗಳೂರ ಕಡೆ ಪ್ರವಾಸ ಮಾಡುತ್ತಿದ್ದಾಗ ಹೊದಿಗೆರೆ ಸಮೀಪಕ್ಕೆ ಬಂದಾಗ ಅವನು ಹತ್ತಿದ್ದ ಕುದುರೆಯ ಕಾಲು ಹೊಲದ ಬೀಡಿನಲ್ಲಿ ಸಿಕ್ಕಿಕೊಂಡು ಕುದುರೆಯು ಮುಗ್ಗರಿಸಿದ್ದರಿಂದ ಕುದುರೆಯ ಮೇಲಿಂದ ಬಿದ್ದನೆಂದು ಮತ್ತು ನಂತರ ಮೃತಪಟ್ಟನೆಂದು ತಿಳಿಯುತ್ತದೆ. ಮತ್ತೊಂದು ಹೇಳಿಕೆಯ ಪ್ರಕಾರ ಶಹಾಜಿಯು ಹೊದಿಗೆರೆಗೆ ಸಮೀಪದ ಕಾಡಿನಲ್ಲಿ ಬೇಟೆಯಾಡುತ್ತಿದ್ದಾಗ ಹುಲಿಗೆ ಹೆದರಿ ಕುದುರೆಯು ಹಾದಿ ತಪ್ಪಿ ಓಡಿದ್ದರಿಂದ ಬಿದ್ದು ಮಡಿದನೆಂದು ತಿಳಿಯುತ್ತದೆ. ಆಗ ಅವನ ಕಾಲು ಕುದು-ರೆಯ ಬೆನ್ನು ಮೇಲೆ ಹಾಕಿದ ಲಾಯದಲ್ಲಿ ಗಟ್ಟಿಯಾಗಿ ಕಟ್ಟಲ್ಪಟ್ಟಿದ್ದರಿಂದ ಕುದುರೆಯು ಅವನನ್ನು ಬಹುದೂರದವರೆಗೆ ಎಳೆಯುತ್ತಲೇ ಹೋಯಿತೆಂದೂ ಮತ್ತು ಹೊದಿಗೆರೆಯ ಕೆರೆಯ ಹತ್ತಿರ ಈಗ ಅವನ ಸಮಾಧಿ ಇರುವ ಸ್ಥಾನದ ವರೆಗೆ ಎಳೆಯುತ್ತಲೇ ಬಂತೆಂದೂ ಆದ್ದರಿಂದ ಅವನಿಗೆ ಅಲ್ಲಿಯೇ ಅಂತ್ಯಕ್ರಿಯೆ ನೆರವೇರಿಸಲ್ಪಟ್ಟಿತೆಂದೂ ತಿಳಿದುಬರುತ್ತದೆ.

ಹೊದಿಗೆರೆ ಗ್ರಾಮಕ್ಕೆ ಸ್ವಲ್ಪ ದೂರದಲ್ಲಿ ಯರ್ಕಾಟನ ಹಳ್ಳಿ ಒಂದು ಗ್ರಾಮವಿದೆ. ಇದರ ಮೊದಲಿನ ಹೆಸರು “ಯರ–ಕಾಟರ” ಹಳ್ಳಿ. ಯರ ಮತ್ತು ಕಾಟ ಎಂಬ ಇಬ್ಬರು ಗೊಲ್ಲರು ಶಹಾಜಿಯ ಶವಕ್ಕೆ ಸಮಾಧಿ ಮಾಡಿದ ರೆಂದು ತಿಳಿಯುತ್ತದೆ. ಅವರ ಈ ಸೇವೆಗೆ ವಿಜಾಪುರದ ಸರದಾರರು ಇವರಿಬ್ಬ ರಿಗೆ ಈ ಹಳ್ಳಿಯನ್ನು ಉಂಬಳಿಯಾಗಿ ಕೊಟ್ಟು ಸಮಾಧಿಗೆ ಪೂಜೆಪುರಸ್ಕಾರ ಗಳನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ನಿಯಮಿಸಿದ್ದರಂತೆ. ಮುಂದೆ ವಿಜಾಪುರದ ರಾಜ್ಯದ ಪತನದನಂತರ ಈ ಗೋರಿಯು ನಿರ್ಲಕ್ಷಿಸಲ್ಪಟ್ಟಿರುವಂತೆ ತೋರುತ್ತದೆ.

೩. **ಹೊದಿಗೆರೆಗೆ ಮರಾಠರ ಸಂಪರ್ಕ :** ರಾಯಸದ ರಾಮರಾಯನು ಮರಾಠಿಗನಾಗಿದ್ದನೋ ಇಲ್ಲವೋ ಎಂಬುದು ಗೊತ್ತಿಲ್ಲ. ಆದರೆ ಶಹಾಜಿಯು ಮರಾಠಿಗನಾಗಿದ್ದನೆಂಬುದರಲ್ಲಿ ಯಾವ ಶಂಕೆಯೂ ಇಲ್ಲ. ಈ ಊರಿನಲ್ಲಿ ಕೊಲ್ಲಾಪುರದಮ್ಮನ (ಅಂಬಾಭವಾನಿ) ದೇವಸ್ಥಾನವಿದೆ. ಮರಾಠಿಗರೇ ಇದನ್ನು ಸ್ಥಾಪಿಸಿರಬೇಕೆಂದು ವಾದಿಸುತ್ತಾರೆ. ಇದರ ಪೂಜಾರಿಯು ವಿಶ್ವಕರ್ಮ ಜಾತಿ ಯವನಾಗಿದ್ದು ಕನ್ನಡಿಗರಾದ ಇವರು ಪೂಜಾರಿಕೆಯನ್ನು ವಂಶಪರಂಪರವಾಗಿ

ಮಾಡುತ್ತ ಬಂದಿರುತ್ತಾರೆ. ಊರಿನ ಎಲ್ಲ ಮುಖ್ಯ ದೇವಸ್ಥಾನಗಳ ವ್ಯವಸ್ಥೆ ನೋಡಿಕೊಳ್ಳುವವರು ಈ ಊರಿನ ಪಟೇಲ ಮನೆತನದವರು ಆದ್ದರಿಂದ ಇವರಿಗೆ "ಗುಡಿಗೌಡ" ಎಂಬ ಹೆಸರೂ ಬಂದಿದೆ.

ಸಮೀಪದ ಹಳ್ಳಿಯೊಂದರಲ್ಲಿ ಒಂದು ಗುಡಿಯಿದೆ. ಮದುವೆಯಲ್ಲಿ ಗುಗ್ಗುಳ ವಿಧಿಯನ್ನು ಆಚರಿಸುವಾಗ "ಖಡ್ಗ" ಹೇಳುವವರು ಅಂಬಾಭವಾನಿಯ ಮಹತ್ತ್ವವನ್ನು ವಿವರಿಸುವ 'ಖಡ್ಗ'ಗಳನ್ನು ಹೇಳುತ್ತಾರೆ. ಆದ್ದರಿಂದ ಈ ಗುಡಿಯನ್ನು ಮರಾಠಿಗರೇ ಸ್ಥಾಪಿಸಿದರೆಂಬುದಕ್ಕೆ ಶಂಕೆಯುಂಟಾಗುತ್ತದೆ. ಇನ್ನುಳಿದ ಗ್ರಾಮದೇವತೆಗಳಾದ ಕೆಂಚಮ್ಮ ಮತ್ತು ಮಾರೆಮ್ಮ ಇವರುಗಳನ್ನು ಜಾತ್ರೆಗಳಲ್ಲಿ ಅಂಬಾಭವಾನಿಯ ದೇವಸ್ಥಾನದ ಎದುರಿನಲ್ಲಿಯೇ ಸ್ಥಾಪಿಸುವದರಿಂದ ಅಂಬಾಭವಾನಿಯು ಮರಾಠಿಗರ ಪೂಜೆಗಾಗಿ ಸ್ಥಾಪಿತವಾದುದೆಂದು ಹೇಳಲಿಕ್ಕೆ ಆಗದು.

೪. **ಕೆರೆ, ಬಾವಿಗಳು :** ಈ ಊರಿನ ಪೂರ್ವದಿಕ್ಕಿನಲ್ಲಿ ಒಂದು ಪುರಾತನವಾದ ದೊಡ್ಡ ಕೆರೆ ಇತ್ತೆಂಬುದಕ್ಕೆ ಅಲ್ಲಿ ಈಗಲೂ ಕೆಲವು ಕುರುಹುಗಳಿವೆ. ಈ ಕೆರೆಯಿಂದ ವ್ಯವಸಾಯಕ್ಕೆ ನೀರಿನ ಪೂರೈಕೆಯಾಗುತ್ತಿತ್ತು. ಕೋಟೆಯ ಹೊರಗಿನ ಕಂದಕಗಳಿಗೆ ಈ ಕೆರೆಯಿಂದ ನೀರನ್ನು ತುಂಬಲಾಗುತ್ತಿತ್ತೆಂಬುದಕ್ಕೆ ಕಾಲುವೆಗಳ ಕುರುಹುಗಳಿವೆ. ಈ ಕೆರೆಯ ಪಕ್ಕದಲ್ಲಿಯೇ ಊರಿನಿಂದ ೨ ಫರ್ಲಾಂಗು ದೂರದಲ್ಲಿ ಗ್ರಾಮದೇವತೆಯಾದ ಕೆರೆಕೋಡಿ ಕೆಂಚಮ್ಮನ ದೇವಸ್ಥಾನವಿದೆ. ಈಗ ಈ ಕೆರೆಯು ಪೂರ್ತಿ ಹೂತುಹೋಗಿ ಇಲ್ಲಿ ಹೊಲಗಳ ಸಾಗುವಳಿಯಾಗುತ್ತಿದೆ.

ಊರ ಪಶ್ಚಿಮದಲ್ಲಿರುವ ಕೆರೆಯನ್ನು 'ದೊಡ್ಡ ಕೆರೆ' ಎಂದು ಕರೆಯಲಾಗುತ್ತಿದ್ದು ಈಗಲೂ ಇದರಿಂದ ಹೊಲಗಳಿಗೆ ನೀರಾವರಿ ಉಪಯೋಗವನ್ನು ಮಾಡಿಕೊಳ್ಳಲಾಗುತ್ತಿದೆ. ಊರಿನ ಪಶ್ಚಿಮ ದಿಕ್ಕಿನಲ್ಲಿ ೪–೫ ಫರ್ಲಾಂಗು ದೂರದಲ್ಲಿ "ಬೈಲ ಬಸಪ್ಪನ" ದೇವಸ್ಥಾನವಿದೆ. ಇದರ ಎದುರಿನಲ್ಲಿ ದಕ್ಷಿಣಕ್ಕೆ ಒಂದು ಸಣ್ಣ ಕೆರೆ ಇದ್ದು ಇದನ್ನು ದನಕರುಗಳಿಗೆ ನೀರು ಕುಡಿಸಲಿಕ್ಕೆ ಮೊದಲಿನಿಂದಲೂ ಉಪಯೋಗಿಸುತ್ತ ಬಂದಿದ್ದಾರೆ. ಅಲ್ಲಿಯ ಕೆರೆ, ಆಲದ ಮರಗಳು ಮತ್ತು ಬಸವನ ಸಣ್ಣ ಗುಡಿಯನ್ನು ನೋಡಿದರೆ ಇವು ಬಹು ಪುರಾತನ ಕಾಲದವೆಂದು ಗೊತ್ತಾಗುತ್ತದೆ.

ಊರಲ್ಲಿ ಮತ್ತು ಹೊಲಗಳಲ್ಲಿ ಕಾಣುವ ಒಂದು ವೈಶಿಷ್ಟ್ಯವೆಂದರೆ ನೂರಾರು ಬಾವಿಗಳು–ಹಳೆಯವು, ಹೊಸವು. ಅನೇಕ ತೆರನಾದವು. ಇವುಗಳಲ್ಲಿ ಕೆಲವು ಅತಿ ಹಳೆಯ ಕಾಲದ ಬಾವಿಗಳಾಗಿವೆ ಕೆಲವಕ್ಕೆ ಯಾವ ತರಹದ ಕಟ್ಟಡಗಳಿಲ್ಲ. ಕೆಲವಕ್ಕೆ ಕಲ್ಲಿನ ಗೋಡೆಗಳನ್ನು ಕಟ್ಟಿದ್ದಾರೆ. ಇನ್ನು ಕೆಲವಕ್ಕೆ ಮಣ್ಣಿನ ಕಟ್ಟಡವಿದೆ. ಇವಕ್ಕೆ ಅವರು "ಕುಂದರಿಕೆ ಬಾವಿ"ಗಳೆಂದು ಕರೆ-

ಯುತ್ತಾರೆ. ಗಣೇಶನ ಬಾವಿ, ಸಾಹುಕಾರ ಬಾವಿ, ಲಚ್ಚಾರಾಮನ ಬಾವಿಗಳಿಗೆ ತಮ್ಮವೇ ಆದ ದಂತಕತೆಗಳೂ ಐತಿಹ್ಯಗಳೂ ಇವೆ. ನೀರಿನ ಸಲುವಾಗಿ ವೈಮನಸ್ಸು ತಿಕ್ಕಾಟಗಳು ಬಹಳ ಆದ ಬಗ್ಗೆ ವರದಿಗಳಿವೆ. ಇಲ್ಲಿ ಸ್ವಲ್ಪ ಖರ್ಚಿನಲ್ಲಿಯೇ ಬಾವಿಗಳನ್ನು ತೆಗೆಯಿಸಲು ಶಕ್ಯವಿದ್ದುದರಿಂದ ಬಹುಮಟ್ಟಿಗೆ ಜನರು ತಮ್ಮ ತಮ್ಮ ಮನೆಗಳಿಗೆ, ಹೊಲಗಳಿಗೆ ಪ್ರತ್ಯೇಕ ಬಾವಿಗಳನ್ನು ಮಾಡಿಸಿಕೊಂಡಿರುವದು ಕಂಡುಬರುತ್ತದೆ.

೫. ಶಿಲಾಪೂಜೆ :

(ಅ) **ಲಿಪಿಗಲ್ಲು :** ಊರಿನ ಪಶ್ಚಿಮ ದಿಕ್ಕಿನ ಈಗಿನ ಹೊರಕೇರಿಯಲ್ಲಿ ಒಂದು ಶಿಲಾಶಾಸನವಿದೆ. ಇದನ್ನು ಜನರು ಇಟಿಗಲ್ಲು, ಹಿಪ್ಪಿಗಲ್ಲು ಮತ್ತು ಲಿಪಿಗಲ್ಲು ಎಂದು ಕರೆಯುತ್ತಾರೆ. ಮತ್ತು ಇದನ್ನು ಪೂಜಿಸುತ್ತಾರೆ. ಇದರ ಪಶ್ಚಿಮಕ್ಕೆ ೫೦ ಗಜಗಳ ಅಂತರದಲ್ಲಿ ಸ್ತ್ರೀಯ ವಿಗ್ರಹವಿರುವ ಒಂದು ಕಲ್ಲು ಇದೆ. ಈಗ ಇದರ ಸುತ್ತಲೂ ತಿಪ್ಪಿ ಮತ್ತು ಬಣಿವೆಗಳಿರುವ ಹಿತ್ತಲವಿದೆ. ಇದಕ್ಕೆ "ಗೋಕಲ್ಲು" ಎನ್ನುತ್ತಾರೆ. ದನಕರುಗಳಿಗೆ ಬೇನೆ ಬಂದಾಗ ಇಲ್ಲಿ ೧೦೧ ಪೂಜೆಗಳನ್ನು ಮಾಡುತ್ತಾರೆ. ಮತ್ತೆ ಕೆಲವು ಜನರು "ಲಿಪಿಗಲ್ಲು", "ಗೋಕಲ್ಲು" ಗಳೆರಡನ್ನೂ ಒಂದೇ ಗುಂಪಿಗೆ ಸೇರಿಸುತ್ತಾರೆ. ದನಕರುಗಳ ಪೂಜೆ, ಅವುಗಳ ರಕ್ಷಣೆ ಹಾಗೂ ರೋಗನಿವಾರಣೆ ಇವೆರಡು ಕಲ್ಲುಗಳಿಗೆ ಸೇರಿದ್ದಾಗಿವೆ. ಈ ಲಿಪಿ-ಗಲ್ಲಿನಲ್ಲಿ ಹಳಗನ್ನಡ ಅಕ್ಷರಗಳಂತೆ ಕಾಣುವ ಕೆಲವು ಅಕ್ಷರಗಳು ಕಂಡುಬರುತ್ತವೆ. ಗೋಕಲ್ಲಿನಲ್ಲಿಯ ಸ್ತ್ರೀಯ ವಿಗ್ರಹವನ್ನು ಮಾತ್ರ ಬಹಳ ಅಂದವಾಗಿ ಕೊರೆಯಲಾಗಿದೆ. ಇವೆರಡೂ ಕಲ್ಲುಗಳನ್ನು ಒಳ್ಳೇ ನುಣುಪಾದ ಮತ್ತು ನಾಜೂಕಾದ ಬಂಡೆಗಳಿಂದ ಸಿದ್ಧಪಡಿಸಲಾಗಿದೆ.

ಮೊದಲು, ಹೊಲಗಳಿಂದ ಮನೆಗಳಿಗೆ ಬರುವಾಗ, ಗೋವುಗಳನ್ನು ಗೋಕಲ್ಲಿನ ಹತ್ತಿರ ನಿಲ್ಲಿಸಿ ಪೂಜಿಸಿ, ಊರಿನ ಒಳಗೆ ತರುತ್ತಿದ್ದರಂತೆ. ಈಗ ಈ ರೂಢಿ ಇರುವದಿಲ್ಲ.

(ಆ) **ಕರಿಗಲ್ಲುಗಳು :** ಊರಿನಲ್ಲಿ ದನಗಳ ಸಲುವಾಗಿ ಆಚರಿಸುವ ಕರಿ-ಹರಿಯುವ ಹಬ್ಬದಲ್ಲಿ ಪೂಜಿಸುವ ಕರಿಗಲ್ಲು ಊರಿನ ಪಶ್ಚಿಮ ದಿಕ್ಕಿನಲ್ಲಿ ಮಧು-ಕೇಶ್ವರ ದೇವಾಲಯದ ಮುಂಭಾಗದಲ್ಲಿ ೫೦ ಗಜಗಳ ದೂರದಲ್ಲಿದೆ. ಈಗ ಇಲ್ಲಿ ಕರಿಹರಿಯುವ ವಿಧಿಯನ್ನು ಆಚರಿಸುವದಿಲ್ಲ. ಈಗ ಬೇರೆ ಎರಡು ಕಲ್ಲುಗಳನ್ನು ಊರಿನ ಉತ್ತರ ದಿಕ್ಕಿನಲ್ಲಿ ಜನರು ಸ್ಥಾಪಿಸಿಕೊಂಡಿದ್ದಾರೆ. ಒಂದು ಅಂಬಾ-ಭವಾನಿಯ ದೇವಸ್ಥಾನದ ಪೌಳಿಯ ಮುಂದೆ ಇದೆ. ಇನ್ನೊಂದು ಅದರ ದಕ್ಷಿಣಕ್ಕೆ ೩೦ ಗಜಗಳ ಹಿಂದೆ ಇದೆ. ಈಗ ಅಂಬಾಭವಾನಿಯ ದೇವಸ್ಥಾನದ ಎದುರಿನಲ್ಲಿಯೇ ಕರಿಹರಿಯುವ ಹಬ್ಬವನ್ನು ಹಳ್ಳಿಗರು ಆಚರಿಸುತ್ತಾರೆ.

ನಾಗರಪಂಚಮಿ ಹಬ್ಬದಲ್ಲಿ ಈ ಊರಿನ ಜನರು ಹೊಲಗಳಲ್ಲಿ ಹುತ್ತುಗಳಿಗೆ ಹಾಲು ಹೊಯ್ದು, ಚರಗ ಚೆಲ್ಲಿ ಮನೆಗೆ ಹಿಂದಿರುವಾಗ ಒಂದು ತಂಬಿಗೆ ನೀರು ಮತ್ತು ಹೊಲಗಳಲ್ಲಿ ಬೆಳೆದ ಬೆಳೆಗಳ ಎಲೆಗಳನ್ನು ತಂದು ಈ ಮೂರು ಕರಿಗಲ್ಲುಗಳಲ್ಲಿ ಯಾವದಾದರೂ ಒಂದರ ಮೇಲೆ ಈ ಎಲೆಗಳನ್ನು ಚೆಲ್ಲಿ, ನೀರು ಹೊಯ್ದು ಮನೆಗಳಿಗೆ ಹಿಂದಿರುಗುತ್ತಾರೆ.

(ಇ) **ಮಹಾಸತಿಗಲ್ಲು:** ಮಹಾಸತಿಗಲ್ಲು ಕೋಟೆಯಲ್ಲಿ ಅಂದರೆ ಈಗ ಊರ ಮಧ್ಯದಲ್ಲಿ ಇದೆ. ಸ್ತ್ರೀಯ ವಿಗ್ರಹವಿರುವ ಈ ಕಲ್ಲು ಮನುಷ್ಯನಷ್ಟು ಎತ್ತರ ಇದೆ. ಟೊಂಕದ ಭಾಗವು ಬಹಳ ಚಿಕ್ಕದಾಗಿದ್ದು ಸುಂದರವಾಗಿ ಕೊರೆಯಲಾಗಿದೆ. ಇದನ್ನು ಈ ಊರಿನ ಪಟೇಲ ಮನೆತನದವರು ಮನೆದೇವತೆಯಂತೆ ಪೂಜಿಸುತ್ತಾರೆ. ಮತ್ತು ಇದೇ ಮನೆತನಕ್ಕೆ ಸೇರಿದ ಗುಡಿಗೌಡರು ಇದಕ್ಕೊಬ್ಬ ಅರ್ಚಕನನ್ನು ನೇಮಿಸಿದ್ದಾರೆ. ಈ ಗುಡಿಯ ಪೌಳಿಯನ್ನು ಎತ್ತರವಾದ ಕಲ್ಲುಗಳನ್ನು ನಿಲ್ಲಿಸಿ ನಿರ್ಮಿಸಲಾಗಿದೆ. ಗುಡಿಯ ಮುಂಭಾಗವು ಮಾತ್ರ ಬಹಳ ಹಳೆಯದಾಗಿದೆ ಈ ಮಾಸ್ತಿಗಲ್ಲಿನ ನಿರ್ಮಾಣವಾದುದಕ್ಕೆ ಒಂದು ಕತೆ ಇದೆ. ಆ ಊರಿನ ಗೌಡರ ಮನೆತನಕ್ಕೆ ಸಂಬಂಧಿಸಿದ ಕತೆ ಇದು. ಹಿರಿಗೌಡಾ, ಕಿರಿಗೌಡಾ ಎಂಬ ಇಬ್ಬರು ಸಹೋದರರು ಮನೆತನದ ಆಸ್ತಿಯನ್ನು ಹಂಚಿಕೊಂಡರು ಹಿರಿಗೌಡನ ಮನೆಯ ಹಿಂಭಾಗದಲ್ಲಿ ಮಾತ್ರ ಬಾವಿ ಇದ್ದುದರಿಂದ ಕಿರಿಗೌಡನ ಮನೆಯವರು ನೀರನ್ನು ಅಲ್ಲಿಂದಲೇ ತರಬೇಕಾಗುತ್ತಿತ್ತು. ಒಮ್ಮೆ ಹಿರಿಗೌಡನು ಊರಲ್ಲಿ ಇರಲಿಲ್ಲ. ಅಂದು ಕಿರಿಗೌಡನು ಜಳಕಕ್ಕೆ ಇಳಿದಾಗ ತಣ್ಣೀರು ಕಡಿಮೆಯಾದವು. ನೀರನ್ನು ಬೇಗ ತರಬೇಕೆಂದು ಕಿರಿಗೌಡನ ಮಡದಿಯು ಹಿರಿಗೌಡನ ಮನೆಗೆ ಹೋದಾಗ ಹಿರಿಗೌಡನ ಹೆಂಡತಿಯು ಅವಳಿಗೆ ನೀರು ಕೊಂಡೊಯ್ಯಲಿಕ್ಕೆ ಆತಂಕ ಒಡ್ಡಿದಳು. ಅದನ್ನರಿತ ಕಿರಿಗೌಡನು ಹಾಗೇ ಬಚ್ಚಲಿನಿಂದ ಹೊರಬಂದು ಜನರನ್ನು ಕೂಡಿಸಿ ಬಾವಿ ತೆಗೆಯಿಸಿ ಸ್ನಾನ ಮಾಡಿದನಂತೆ. ಅದನ್ನೇ ಜನರು ಈಗ ಗಣೇಶನ ಬಾವಿ ಎಂದು ಕರೆಯುತ್ತಾರೆ. ಪರ ಊರಿನಿಂದ ಹಿಂದಿರುಗಿದ ಹಿರಿಗೌಡನು ಇದನ್ನರಿತು ಕೂಡಲೇ ಹೆಂಡತಿಯನ್ನು ಕೊಂದುಹಾಕಿದನಂತೆ. ಆದರೆ ಅವಳು ಸಾಯುವಾಗ ತನ್ನನ್ನು ಮಹಾಸತಿ ಎಂದು ಪೂಜಿಸಬೇಕೆಂದೂ ಇಲ್ಲದಿದ್ದರೆ ಅವರಿಗೆ ಕಾಡುವದಾಗಿಯೂ ಹೇಳಿ ಪ್ರಾಣಬಿಟ್ಟಳಂತೆ. ಅಂದಿನಿಂದ ಊರ ಜನರು ಮತ್ತು ಮುಖ್ಯವಾಗಿ ಗೌಡರ ಮನೆತನದವರು ಈ ಮಹಾಸತಿಯನ್ನು ಪೂಜಿಸುತ್ತಾರೆ.

ಕೋಟೆಯ ಬಹುಭಾಗವು ನಾಶವಾಗಿರುವದರಿಂದ ಮತ್ತು ರಸ್ತೆ ಮಾಡುವಾಗ ಅಗಸೆಬಾಗಿಲನ್ನು ಕೆಡವಿರುವದರಿಂದ ಈ ಊರಲ್ಲಿ ಬೋರ್ಗಲ್ಲು ಮಾತ್ರ ಕಾಣಿಸುವದಿಲ್ಲ. ಬೈಲಬಸವನ ದೇವಸ್ಥಾನದ ಪೌಳಿಯಲ್ಲಿ ಒಂದು

ಶಿಲಾಶಾಸನವು ಭೂಮಿಯಲ್ಲಿ ಹುಗಿದುಹೋಗಿದೆ. "ಶಹಾಜಿ" ಎಂದು ಬರೆದಿರುವ ಒಂದು ಬಂಡೆಗಲ್ಲು ಸಿಕ್ಕಿದ್ದು ಅದು ಈಗ ಗ್ರಾಮಪಂಚಾಯತಿ ಆಫೀಸಿನಲ್ಲಿದೆ. ಈ ಕಲ್ಲು ದೊಡ್ಡಕೆರೆಯ ಹತ್ತಿರ ಶಹಾಜಿ ಗೋರಿಗೆ ಸಮೀಪದಲ್ಲಿ ಸಿಕ್ಕಿದ್ದು ಕೆರೆಯ ಹತ್ತಿರ ಈ ಮೂರಕ್ಷರಗಳನ್ನು ಕೊರೆದಿರುವ ಕಲ್ಲು ಹೇಗೆ ಬಂದಿತೆಂಬುದು ತಿಳಿಯುವದಿಲ್ಲ. ಅಕ್ಷರಗಳು ಮಾತ್ರ ಹೊಸಗನ್ನಡ ಲಿಪಿಯಲ್ಲಿ ಸುಂದರವಾಗಿವೆ.

೬. ದೇವಸ್ಥಾನಗಳು : ಈ ಊರಿನ ದೇವಸ್ಥಾನಗಳಲ್ಲಿ ಮಧುಕೇಶ್ವರ, ರಂಗನಾಥ, ಬೈಲುಬಸವೇಶ್ವರ ಮತ್ತು ಕೆರಿಕೋಡಿ ಕೆಂಚಮ್ಮನ ದೇವಸ್ಥಾನಗಳು ಬಹಳ ಪುರಾತನವಾದುವೆಂದು ಹೇಳಬಹುದು. ಇವಲ್ಲದೆ ಇನ್ನೂ ಅನೇಕ ಗಂಡು-ಹೆಣ್ಣು ದೇವತೆಗಳು ಗುಡಿಗಳೊಳಗೆ, ಗಿಡಗಳ ಕೆಳಗೆ ಮತ್ತು ಬಯಲುಗಳಲ್ಲಿ ಕಂಡುಬರುತ್ತವೆ. ಮಧ್ಯಕಾಲದ ದೇವಸ್ಥಾನಗಳಲ್ಲಿ ಆಂಜನೇಯ, ಅಂಬಾಭವಾನಿ, ಸವಾರಮ್ಮ ಮತ್ತು ಬನ್ನಿ ಮಹಾಂಕಾಳಿ ಮುಖ್ಯವಾದವುಗಳು. ಇತ್ತೀಚೆಗೆ ಬೇರೆ ಬೇರೆ ಜಾತಿಗಳ ಜನರು ತಮ್ಮ ಓಣಿಗಳಲ್ಲಿ ತಮ್ಮವೇ ಆದ ದೇವತೆಗಳನ್ನು ಸ್ಥಾಪಿಸಿಕೊಂಡಿದ್ದಾರೆ. ಹೀಗಾಗಿ ಈ ಊರಿನಲ್ಲಿ ದೇವತೆಗಳ ಸಂಖ್ಯೆ ಬಹುಸಂಖ್ಯೆಯಲ್ಲಿದೆ. ಇನ್ನೂ ಕೆಲವರು ಮನೆಗಳಲ್ಲಿ ಗುಡಿಗಳಂತೆ ದೇವರುಗಳ ದೊಡ್ಡ ವಿಗ್ರಹಗಳನ್ನು ಸ್ಥಾಪಿಸಿಕೊಂಡದ್ದೂ ಉಂಟು. ಇವುಗಳಲ್ಲಿ ಕೆಲವು ಮುಖ್ಯವಾದ ದೇವಸ್ಥಾನಗಳ ವರ್ಣನೆಯನ್ನು ಕೊಡುವದು ಅವಶ್ಯ.

(ಅ) ಮಧುಕೇಶ್ವರ : ಈ ದೇವಾಲಯವು ಊರಿನ ಪಶ್ಚಿಮ-ದಕ್ಷಿಣ ಮೂಲೆಯಲ್ಲಿದ್ದು ಅತಿ ಪುರಾತನವಾದದ್ದೆಂದು ಕಂಡುಬರುತ್ತದೆ. ಈ ದೇವಸ್ಥಾನದ ಹೆಸರಿನಿಂದಲೇ ಈಗ ಈ ಊರಿನಲ್ಲಿ ಒಂದು ಮಾಧ್ಯಮಿಕ ಶಾಲೆಯನ್ನು ಸ್ಥಾಪಿಸಲಾಗಿದೆ. ಊರಿನ ಅನೇಕ ಹಬ್ಬಹುಣ್ಣಿಮೆಗಳಲ್ಲಿ ಈ ದೇವಾಲಯವು ಕೇಂದ್ರಸ್ಥಾನವಾಗಿದೆ. ಗೌರೀ ಪೂಜೆ, ಗಣೇಶನ ಪೂಜೆ ಮತ್ತು ಶಿವನಿಗೆ ಸಂಬಂಧಿಸಿದ ಹಬ್ಬಗಳಲ್ಲಿ, ಬಸವನಿಗೆ ಸಂಬಂಧಿಸಿದ ಹಬ್ಬಗಳಲ್ಲಿ ಈ ದೇವಸ್ಥಾನದಲ್ಲಿ ಸಾರ್ವತ್ರಿಕ ಪೂಜೆಗಳು ನಡೆಯುತ್ತವೆ. ಮೊದಲು ಕರಿಹರಿಯುವ ವಿಧಿಯು ಈ ದೇವಸ್ಥಾನದ ಮುಂದೆಯೇ ನಡೆಯುತ್ತಿತ್ತೆಂದೂ, ಊರಿನ ಅನೇಕ ಚಟುವಟಿಕೆಗಳ ಮೋಜು, ಮಜಲುಗಳ ಕೇಂದ್ರಸ್ಥಾನವಾಗಿತ್ತೆಂದೂ ಆದರೆ ಈಗ ಈ ಕೇಂದ್ರಬಿಂದುವು ಅಂಬಾಭವಾನಿಯ ಗುಡಿಯ ಕಡೆಗೆ ಸರಿದಿದೆ.

(ಆ) ಬೈಲುಬಸವೇಶ್ವರ : ಶ್ರಾವಣಮಾಸದಲ್ಲಿ, ಅದರಲ್ಲಿಯೂ ಕೊನೆಯ ಸೋಮವಾರ, ಇಲ್ಲಿ ಜನರು ಊಟಕ್ಕೆ ಸೇರುತ್ತಾರೆ. ತಮ್ಮ ಎತ್ತು, ಬಂಡಿ, ಬಂಧುಬಳಗದವರೊಡನೆ ಬಂದು ಸೇರಿ, ಪೂಜಿಸಿ, ಊಟಮಾಡುತ್ತಾರೆ. ಇಲ್ಲಿಯ

ಸೃಷ್ಟಿಸೌಂದರ್ಯವನ್ನು ನೋಡಿ ಮತ್ತು ಗುಡಿಯನ್ನು ನಿರ್ಮಿಸುವಲ್ಲಿ ತೋರಿಸಿರುವ ಕಲಾನೈಪುಣ್ಯವನ್ನು ಕಂಡು ನನ್ನ ಆಂಗ್ಲ ಮಿತ್ರರೊಬ್ಬರು ಬೆರಳುಕಚ್ಚಿದರು. ಈ ದೇವಸ್ಥಾನವು ಈ ಊರಿನವರಿಗೆ ಅಷ್ಟೇ ಅಲ್ಲದೆ ಸುತ್ತು ಮುತ್ತಲಿನ ಊರಿನ ಜನರಿಗೂ ಯಾತ್ರಾಸ್ಥಳವಾಗಿದೆ.

(ಇ) ಕೆರಿಕೋಡಿ ಕೆಂಚಮ್ಮ: ಈ ದೇವಾಲಯವನ್ನು ನೋಡಿದ ಕೂಡಲೇ ಈ ಸ್ಥಳವು ಬಹಳ ಪುರಾತನವಾದುದೆಂದು ಕಂಡುಬರುತ್ತದೆ. ಕೆರೆ ಮತ್ತು ಕೆರೆಕೋಡಿ ಹೂತುಹೋಗಿದ್ದರೂ ದೇವಾಲಯದ ಮುಂದೆ ದೇವತೆಗಳ ಸಂಖ್ಯೆ ಬೆಳೆಯುತ್ತಲೇ ನಡೆದಿದೆ. ದೇವಸ್ಥಾನದ ಎದುರಿಗೆ ಸ್ಮಶಾನವೂ ಬೆಳೆಯುತ್ತಲೇ ಇದೆ. ಈ ದೇವತೆಯ ಎದುರಿನಲ್ಲಿ ಮಾತಂಗೆಮ್ಮ, ಗುಳ್ಳೆಮ್ಮ, ಕುಕ್ಕಾಡದಮ್ಮ, ಚೌಡೆಮ್ಮ ಎಂಬ ನಾಲ್ಕು ದೇವತೆಗಳ ಸಣ್ಣ ಗುಡಿಗಳೂ ಇವೆ. ಈ ದೇವತೆಯ ಹೆಸರಿನಲ್ಲಿ 'ಸಿಡೆ' ಆಡುತ್ತಾರೆ; ಓಕಳಿ ಆಡುತ್ತಾರೆ; ಪೂಜಿಸುತ್ತಾರೆ; ಜಾತ್ರೆ ಮಾಡುತ್ತಾರೆ; ಮಾಂತ್ರಿಕತೆಯ ವಿಧಿಗಳನ್ನು ಆಚರಿಸುತ್ತಾರೆ; ಮತ್ತು ಗುಡಿಯ ಸುತ್ತಲೂ ಅನೇಕ ವಿಧವಾದ ನಮಸ್ಕಾರಗಳನ್ನು ಹಾಕುತ್ತಾರೆ. (ದೀಡ-ನಮಸ್ಕಾರ, ದೀರ್ಘದಂಡನಮಸ್ಕಾರ, ನಿಂತು ನಮಸ್ಕಾರ, ನಿಂತು ನಡೆದ ನಮಸ್ಕಾರ, ಮುಂತಾದವು) ಕೆರಿಕೋಡಿ ಕೆಂಚಮ್ಮನು ಅಂಬಾಭವಾನಿ ಮತ್ತು ರಂಗನಾಥನ ದೇವಾಲಯಗಳಿಗೆ ಹೋಗುತ್ತಾಳೆ. ಅಂಬಾಭವಾನಿ ಅವಳ ಅಕ್ಕ, ರಂಗನಾಥ ಅವಳ ಅಣ್ಣ, ಊರ ಬಸವಿಯ ಮನೆ ಅವಳ ತವರುಮನೆ, ಅವಳ ಪೂಜಾರಿಯ ಮನೆ ಅವಳ ಗಂಡನ ಮನೆ. ಕೆಂಚಮ್ಮನ ವಿವಾಹಸಮಾರಂಭವೂ ನಡೆಯುತ್ತದೆ, ತುಳಸೀಪೂಜೆಯ ಹಾಗೆ. ಕೆರಿಕೋಡಿ ಕೆಂಚಮ್ಮನು ಗ್ರಾಮ ದೇವತೆಯಾದುದರಿಂದ ಅವಳನ್ನು ಬ್ರಾಹ್ಮಣರಿಂದ ಮೊದಲುಮಾಡಿ ಅಂತ್ಯಜರಿಗೆ ಪೂಜೆಗಳಲ್ಲಿ ಕೆಲವು ವಿಶೇಷ ಸಾಮಾಜಿಕ ಹಕ್ಕುಬಾಧ್ಯತೆಗಳನ್ನು ಕೊಡಲಾಗಿದೆ. ಉಪ್ಪಾರ ಜಾತಿಯವನು ಈ ದೇವಾಲಯದ ಅರ್ಚಕನು. ಈ ಪೂಜಾರಿಕೆ ವಂಶಪಾರಂಪರ್ಯವಾಗಿ ನಡೆದುಕೊಂಡುಬಂದಿದೆ.

(ಈ) ರಂಗನಾಥ : ವೈಷ್ಣವರು ಪ್ರಭಾವಿಯಾದ ಕಾಲದಲ್ಲಿ ಕಟ್ಟಿಸಿದ ದೇವಾಲಯವಿದೆಂದು ತಿಳಿಯುತ್ತದೆ. ಊರಿನಲ್ಲಿ ಅತ್ಯಧಿಕ ಕಲಾನಿಪುಣತೆ ಕಂಡುಬರುತ್ತಿರುವದು ಈ ದೇವಸ್ಥಾನದಲ್ಲಿ ಮಾತ್ರ. ಈಗ ಶೈವರು, ವೈಷ್ಣವರು, ಶಾಕ್ತರು ಎಲ್ಲರೂ ಈ ದೇವಾಲಯಕ್ಕೆ ನಡೆದುಕೊಳ್ಳುತ್ತಾರೆ. ಅನೇಕ ಪುರಾಣ ಪುಣ್ಯಕತೆಗಳ ಶ್ರವಣವು ಈ ದೇವಸ್ಥಾನದಲ್ಲಿ ನಡೆಯುತ್ತದೆ. ಗುಡಿಯ ಪೂಜಾರಿಗಳು ವೈಷ್ಣವರು. ಇವನು ಮಾಟ, ಮಂತ್ರ, ಪೂಜಾ, ಮದುವೆ ಮುಂತಾದ ಕರ್ಮಗಳನ್ನು ನೆರವೇರಿಸುತ್ತಾರೆ. ದೈವವಶಾತ್ ಈ ಗುಡಿಯ ಹಿಂಭಾಗದಲ್ಲಿಯೇ ಮಸೀದೆ ಸ್ಥಾಪಿತವಾಗಿದೆ. ಇದರ ಬಗ್ಗೆ ಈ ಊರಿನ ಖಾಜಿ

ಹೀಗೆ ಹೇಳುತ್ತಾರೆ: "ಮುಸ್ಲಿಮರು, ಹಿಂದುಗಳು, ಬಂಧುಬಾಂಧವರಂತೆ ನಡೆದುಕೊಳ್ಳಲಿಕ್ಕೆ ಶಕ್ಯವಿದೆ ಎಂದು ತೋರಿಸಲಿಕ್ಕೆ ಈ ಗುಡಿ, ಮಸ್‌ಜಿದ್‌ಗಳೇ ಸಾಕ್ಷ್ಯ." ಶತಮಾನಗಳಿಂದ ಅವು ಅಲ್ಲಿದ್ದರೂ ಪೂಜೆ, ನಮಾಜುಗಳು ಒಮ್ಮೆಯೂ ಜಗಳ ಬರದ ಹಾಗೆ ನಡೆಯುತ್ತವೆ. ರಂಗನಾಥನ ಮುಂದೆ ಭೂತಪ್ಪನ ಮೂರ್ತಿ ಇದೆ. ಇದನ್ನು ಹಿಡಿದವರು ಮೈಯಲ್ಲಿ ಭೂತ ಬಂದು ಕುಣಿದಾಡಿ ಹೇಳಿಕೆಗಳನ್ನು ಕೊಡುತ್ತಾರೆ. ಆದ್ದರಿಂದ ಹಳ್ಳಿಗರು ಭೂತಪ್ಪನ ಪೂಜೆ ನಡೆಯಿಸುವದಕ್ಕೆ ಅವನನ್ನು ತಮ್ಮ ಮನೆಗೆ ಕರೆಯಿಸುತ್ತಾರೆ.

ಈ ಊರಿನಲ್ಲಿ ಮಂತ್ರಮಾಟವಿದ್ಯೆಗಳು ಅತಿ ವಿಪುಲವಾಗಿವೆ. ಯಂತ್ರ, ತಂತ್ರ, ಮಂತ್ರಗಳಲ್ಲಿ ಪಳಗಿದ ಮಾಟಗಾರರು (೫-೬ ಜನರು) ಮಾಂತ್ರಿಕರಂತೆ ವರ್ತಿಸುತ್ತಾರೆ. ದೇವರುಗಳ ಪೂಜೆ ಮತ್ತು ಮಾಂತ್ರಿಕತೆಯನ್ನು ಒಟ್ಟಾಗಿಸಿ (Magico-religious) ಕೆಲವು ವಿಧಿಗಳನ್ನು ಆಚರಿಸುತ್ತಾರೆ. ಪೂಜೆ ಮತ್ತು ಮಾಟವಿದ್ಯೆಗಳಲ್ಲಿ ಕೋಳಿ, ಕುರಿ, ಕೋಣಗಳ ಬಲಿಗಳನ್ನು ಕೊಡುತ್ತಾರೆ.

೭. ನಗರ ರಚನೆ: ಈಗಿನ ಊರಿನ ದಕ್ಷಿಣ ದಿಕ್ಕಿನ ೧ ಫರ್ಲಾಂಗು ದೂರದ ಹೊಲದಲ್ಲಿ ಹೊಸ ಬಾವಿಯೊಂದನ್ನು ಅಗಿಯುವಾಗ ಹಳೆ ಬಾವಿಯೊಂದು ಹೊರಬಂದಿತು. ಅದೇ ಕಡೆಗೆ ಅನೇಕ ಇಮಾರತುಗಳ ಕುರುಹುಗಳು ದೊರೆತಿವೆ. ಅಲ್ಲಿ ಒಂದು ಬನಶಂಕರಿ ದೇವಾಲಯವೂ ಇದೆ. ಈ ದೇವತೆಯು ಹುಗ್ಗಿಮನೆತನದವರ ಮನೆದೇವತೆ. ಬಹುಶಃ ಮೊದಲು ಊರು ಇಲ್ಲಿಯೇ ಇದ್ದಿರಬೇಕೆಂದೂ ಕಾರಣಾಂತರಗಳಿಂದ ಊರು ಸದ್ಯದ ಗಾಂವಠಾಣೆಗೆ ಸರಿದಿರಬೇಕೆಂದೂ ಅನುಮಾನಿಸಲಾಗಿದೆ. ಈ ವಿಷಯವಾಗಿ ಪುರಾತತ್ವವನ್ನು (Archaeologists) ಅಭ್ಯಾಸಮಾಡಿದವರು ವಿವರವಾದ ಸಂಗತಿಗಳ ಸಂಶೋಧನೆ ನಡೆಸಲು ಇಲ್ಲಿ ಸಾಕಷ್ಟು ಅವಕಾಶವಿದೆ.

ಮಧ್ಯಯುಗದಲ್ಲಿ ಊರು ಈಗಿನ ಸ್ಥಾನದಲ್ಲಿ ಸರಿದಿರಬೇಕು. ಆಗ ಕೋಟೆ, ಕೊತ್ತಳ, ಕಂದಕ, ಕೆರೆ, ಅಗಸೆಬಾಗಿಲುಗಳ ರಚನೆಯಾಗಿರಬೇಕು. ಕೋಟೆಯನ್ನು ಕಟ್ಟುವಾಗ ಆತ್ಮಹತ್ಯೆಯಿಂದ ಭದ್ರವಾಯಿತೆಂದು ಕತೆ ಇದೆ ಈಗ ಕೋಟೆಯ ಒಳಭಾಗದಲ್ಲಿ ಉಚ್ಚಕುಲದವರು ಮತ್ತು ಜಮೀನುದಾರರು ವಾಸಿಸುತ್ತಾರೆ. ಕೋಟೆಯ ಹೊರಗೆ—ಹೊರಹಟ್ಟಿಯಲ್ಲಿ ಕೂಲಿಕಾರರು, ಕಸುಬುದಾರರು, ಕಡಿಮೆ ಕುಲದವರು ಮತ್ತು ಅಂತ್ಯಜರು ವಾಸಿಸುತ್ತಾರೆ. ಬೇರೆ ಬೇರೆ ಕುಲದವರ ಓಣಿಗಳು ಬೇರೆಬೇರೆಯಾಗಿವೆ. ಬ್ರಾಹ್ಮಣ, ಲಿಂಗಾಯತ, ಕುರುಬ, ತಳವಾರ, ಉಪ್ಪಾರ, ಮೇದಾರ, ಗಂಗಮತ, ಮಾದಿಗ ಮತ್ತು ಹೊಲೆಯರು ಬೇರೆ ಬೇರೆ ಓಣಿಗಳಲ್ಲಿ ವಾಸಿಸುತ್ತಾರೆ.

ನವೀನತೆಯು ಮಧ್ಯಯುಗದ ಈ ರಚನೆಯನ್ನು ಸ್ವಲ್ಪಮಟ್ಟಿಗೆ ಭಂಗಗೊಳಿಸಿದೆ. ಪ್ರಾಥಮಿಕ ಶಾಲೆ, ಮಿಡ್ಲಸ್ಕೂಲ, ಹೆಣ್ಣುಮಕ್ಕಳ ಶಾಲೆ, ಉರ್ದು ಶಾಲೆ, ಮಾಧ್ಯಮಿಕ ಶಾಲೆಗಳ ನಿರ್ಮಾಣದಿಂದ; ಹಾಸ್ಪಿಟಲ್ಲು, ಪೋಸ್ಟ ಆಫೀಸು, ಗ್ರಾಮಪಂಚಾಯತಿ ಭವನ, ದನಗಳ ಆಸ್ಪತ್ರೆ, ಕುಟುಂಬ ಯೋಜನಾ ಕೇಂದ್ರಗಳ ಪ್ರಾರಂಭದಿಂದಾಗಿ; ಇಲೆಕ್ಟ್ರಿಸಿಟಿ, ರೇಡಿಯೋ, ಶಿವಮೊಗ್ಗೆ–ಚಿತ್ರದುರ್ಗ ರೋಡಿನ ಸಂಪರ್ಕಗಳಿಂದಾಗಿ ಜನರು ನವ್ಯತೆಯ ಮಾರ್ಗಕ್ಕೆ ಎಳೆಯಲ್ಪಟ್ಟಿದ್ದಾರೆ. ಜನರು ಉತ್ತಮವಾದ ಬಂಗ್ಲೆಗಳನ್ನು ಕಟ್ಟಿಸಿಕೊಂಡು ನಗರಜೀವನವನ್ನು ನಡೆಯಿಸುವ ಕಾತರದಲ್ಲಿದ್ದಾರೆ. ಕೆಲವರು ಬೇಸಾಯವನ್ನು ಯಾಂತ್ರೀಕರಣಗೊಳಿಸುವಲ್ಲಿಯೂ ಆಣಿಯಾಗಿದ್ದಾರೆ. ಕೆಲವರು ಯಂತ್ರಗಳಿಂದ ಎಣ್ಣೆ ತೆಗೆಯುವದನ್ನು, ಗೋವಿನಜೋಳದ ತೆನೆಗಳನ್ನು ಸುಲಿಯುವದನ್ನು ಈಗಾಗಲೇ ಪ್ರಾರಂಭಿಸಿದ್ದಾರೆ ಈ ರೀತಿಯಾಗಿ ಐತಿಹಾಸಿಕ ಮಹತ್ವದ ಸ್ಥಾನ ಪಡೆದ ಹೊದಿಗೆರೆಯು ಇನ್ನು ಕೆಲವು ದಿವಸಗಳಲ್ಲಿ ನವ್ಯ ನಾಗರಿಕತೆಯ ತವರುಮನೆಯಾದರೂ ಆಗಬಹುದು.

ಹಳೆಯ ಕೆಲವು ಸಂಸ್ಥೆಗಳು ಅಳಿದು ಹೊಸ ಸಂಸ್ಥೆಗಳ ನಿರ್ಮಾಣವೂ ಆಗುತ್ತಿದೆ. ಗೌಡನ ಪ್ರಭಾವ ಕಡಿಮೆಯಾಗಿ ಗ್ರಾಮಪಂಚಾಯತಿ ಚೇರ್‌ಮನ್‌ರ ಅಧಿಕಾರವು ಹೆಚ್ಚುತ್ತಿದೆ. ಶಾನುಭೋಗರ ಹಿಡಿತ ಕಡಿಮೆಯಾಗಿ ಪಂಚಾಯತಿ ಸೆಕ್ರೆಟರಿ ಹೆಚ್ಚು ಕೆಲಸ ನೋಡಿಕೊಳ್ಳಬೇಕಾಗುತ್ತಿದೆ. ಆದರೆ ಗುಡಿ ಗೌಡನ ಮೇಲೆ ಯಾರ ದೃಷ್ಟಿಯೂ ಬಿದ್ದಂತೆ ಕಾಣುವದಿಲ್ಲ. ಪೂಜಾರಿಗಳು, ತಳವಾರರು, ಹೊಲೆಯರು ಮತ್ತು ಮಾದಿಗರಿಗೂ ಅವರವರ ಕರ್ತವ್ಯಗಳಿಗಾಗಿ ಸರಕಾರವು ಕೊಟ್ಟ ಜಮೀನು ಈಗಲೂ ಉಪಯೋಗಿಸಲ್ಪಡುತ್ತಿದೆ.

ಈ ಊರಿಗೆ ಚನ್ನಗಿರಿಯು ತಾಲೂಕಾ ಸ್ಥಳವಾಗಿದ್ದರೂ ಚನ್ನಗಿರಿಗಿಂತ ಹೊದಿಗೆರೆ ತೀವ್ರಗತಿಯಿಂದ ಮುಂದುವರಿಯುತ್ತಿದೆ. ಇಲ್ಲಿಗೆ ಪ್ರಯಾಣ ಸೌಕರ್ಯಗಳು ಇನ್ನಷ್ಟು ಬೆಳೆದರೆ ಈ ಊರು ಶಿವಮೊಗ್ಗ ಜಿಲ್ಲೆಯಲ್ಲಿ ಪ್ರಾಮುಖ್ಯತೆಯನ್ನು ಪಡೆಯಬಲ್ಲದು. ತೆಂಗು, ಅಡಿಕೆ, ಜೋಳ, ಹತ್ತಿಗಳನ್ನು ಬೆಳೆಯುವ ಈ ಊರು ನೀರಾವರಿ ಸೌಕರ್ಯಗಳನ್ನು ಪಡೆದಲ್ಲಿ ನವ್ಯನಾಗರಿಕತೆಯ ಮಹತ್ವವನ್ನು ಪಡೆಯುವಲ್ಲಿ ಯಾವ ಸಂಶಯವೂ ಇಲ್ಲ.

★ ಎನ್. ಕೆ. ಕಡೆತೋಟದ

ಸ್ವಾದಿ ಅರಸುಮನೆತನದ ಆರಂಭಕಾಲ

ಕ್ರಿ.ಶ. ೧೫೬೫ರಲ್ಲಿ ವಿಜಯನಗರಸಾಮ್ರಾಜ್ಯ ಪತನಗೊಂಡ ತರುವಾಯ, ಆದರ ಅಂಕಿತಕ್ಕೊಳಗಾದ ಆನೇಕ ಸಾಮಂತ ಆರಸರು ಅಲ್ಲಲ್ಲಿ ತಮ್ಮ ಪ್ರಭುತ್ವವನ್ನು ಪ್ರತಿಷ್ಠಾಪಿಸಿದರು. ಇಂತಹ ಸಾಮಂತ ಆರಸುಮನೆತನಗಳಲ್ಲಿ ಕೆಳದಿ, ಸ್ವಾದಿ ಹಾಗೂ ಬೀಳಗಿ ಮನೆತನಗಳು ಪ್ರಮುಖವಾದವುಗಳು.

ಡಾ. ಫ. ಗು. ಹಳಕಟ್ಟಿಯವರು ಸ್ವಾದಿ ಅರಸುಮನೆತನದ ಇತಿಹಾಸದ ವಿಷಯವಾಗಿಯೂ ಆಸ್ಥಾನವಿದ್ವಾನ ಬಿ. ಶಿವಮೂರ್ತಿಶಾಸ್ತ್ರಿಯವರು ಸ್ವಾದಿಯಲ್ಲಿನ ಮಠ, ಮಂದಿರಗಳು ಮತ್ತು ಕಲಾಕೌಶಲಗಳ ಕುರಿತಾಗಿಯೂ 'ಶಿವಾನುಭವ' ಪತ್ರಿಕೆಗಳಲ್ಲಿ ಲೇಖನ ಬರೆದಿದ್ದಾರೆ. ಪ್ರೊ. ಎಸ್. ಎಸ್. ವಾಳವಾಡ ಅವರಿಂದ 'ಸ್ವಾದಿ ಅರಸುಮನೆತನ' ಎಂಬ ಪುಸ್ತಿಕೆ ಬೆಳಕು ಕಂಡಿದೆ. ಈ ಪುಸ್ತಿಕೆ ಹಾಗೂ ಲೇಖನಗಳಲ್ಲಿ ಮತ್ತು ಶಿಲಾಶಾಸನಗಳಲ್ಲಿ ದೊರೆಯುವ ವಿಷಯದ ಬೆಳಕಿನಲ್ಲಿ ಈ ಆರಸುಮನೆತನದ ಆರಂಭದ ಕುರಿತು ಕೆಲ ಹೊಸ ವಿಷಯಗಳನ್ನು ಪ್ರತಿಪಾದಿಸುವ ಪ್ರಯತ್ನ ಈ ಲೇಖನ.

ಈ ಆರಸುಮನೆತನದ ಮೂಲದ ವಿಷಯವಾಗಿ ಬೇರೆ ಬೇರೆ ಮಾತೃಕೆಗಳಲ್ಲಿ ಬೇರೆ ಬೇರೆ ವಿಚಾರಗಳಿವೆ. ಈಗ ಗೋವೆಯಲ್ಲಿ ವಾಸವಾಗಿರುವ, ಈ ಮನೆತನದ ವಂಶಜರಲ್ಲಿ ದೊರೆತಿರುವ ಐತಿಹಾಸಿಕ ಸಾಮಗ್ರಿಯನ್ನು ಅನುಸರಿಸಿ ಡಾ. ಹಳಕಟ್ಟಿ ಹಾಗೂ ಪ್ರಾ. ವಾಳವಾಡ[೧] ಅವರು ಸ್ವಾದಿ ಆರಸುಮನೆತನದ ಆರಂಭ ಹಾಗೂ ವಂಶಾವಳಿಯನ್ನು ಬರೆದಿದ್ದಾರೆ. ಈ ಆಕರದ ಅಭಿಪ್ರಾಯದಲ್ಲಿ ವಿಜಯನಗರದ ಕೃಷ್ಣದೇವರಾಯನು ತಂದೆಗೆ ಗಂಡುಮಕ್ಕಳಿಲ್ಲದ ಕಾರಣ, ಆತನು ತನ್ನ ತಂಗಿಯ ಮಗನಾದ ಅರಸಪ್ಪನಾಯಕನನ್ನು ಯುವರಾಜನನ್ನಾಗಿ ಮಾಡಿದ್ದನು. ಆದರೆ, ಮುಂದೆ ತನಗೆ ಗಂಡುಮಗುವಾದ ಕಾರಣ ಅರಸಪ್ಪನಾಯಕನನ್ನು ಸ್ವಾದಿಯ ನಾಯಕನನ್ನಾಗಿ ನಿಯಮಿಸಿದನು.[೨] ಮರಾಠಾ ಬಖೈರ ಖಂದರ ಅಭಿಪ್ರಾಯದಲ್ಲಿ ವಿಜಯನಗರದ ಸದಾಶಿವರಾಯನು ತನ್ನ ಸೋದರಳಿಯನಾದ ವೆಂಕಟಪತಿಗೆ, ಯುದ್ಧಸಮಯದಲ್ಲಿ ಆತನ ಸೇವೆಗಾಗಿ ಮೆಚ್ಚಿ ಸ್ವಾದಿ ನಾಯಕಪಟ್ಟವನ್ನು ದಯಪಾಲಿಸಿದನು. ಅರಸಪ್ಪನಾಯಕನು ಈ ವೆಂಕಟಪತಿಯ ಮನೆತನಕ್ಕೆ ಸಂಬಂಧಿಸಿದ ಒಬ್ಬ ಪ್ರಸಿದ್ಧ

---

೧. ಅರಸಪ್ಪನಾಯಕನಿಗಿಂತಲೂ ಮುಂಚೆ ಆತನ ವಂಶಜರು ಅಧಿಕಾರದಲ್ಲಿ ಇದ್ದ ವಿಷಯವನ್ನು ಪ್ರಾ. ವಾಳವಾಡ ಅವರು ಸೂಚಿಸಿರುವರಾದರೂ ಹೆಚ್ಚಿನ ವಿವರಣೆಯನ್ನಿತ್ತಿಲ್ಲ.

೨. ಶಿವಾನುಭವ, ಸಂಪುಟ ೧೩, ಸಂಚಿಕೆ ೨, ಪುಟ ೭೪.

ವ್ಯಕ್ತಿಯಾಗಿದ್ದನು.[೧] ಹೈಗ ಮಠದ ಸ್ವಾಮಿಗಳ ವೃತ್ತಾಂತವನ್ನಾಧರಿಸಿ ಬುಖಾನನ್[೨] ಹೇಳಿರುವಂತೆ, ಅರಸಪ್ಪನಾಯಕನು ವಿಜಯನಗರ ಅರಸರಿಂದ ಸ್ವಾದಿಯ ನಾಯಕಪಟ್ಟವನ್ನು ಪಡೆದನು. ವಿಜಯನಗರದ ಪ್ರಸಿದ್ಧ ದಳ-ವಾಯಿಯಾದ ವೆಂಕಟಪತಿಯು ಅರಸಪ್ಪನಾಯಕನಿಗೆ ಸ್ವಾದಿ ಪ್ರದೇಶವನ್ನು ಕ್ರಿ.ಶ. ೧೫೫೬ರಲ್ಲಿ ವಹಿಸಿಕೊಟ್ಟನೆಂದು ಬಾಂಬೆ ಕರ್ನಾಟಕ ಗೆಝೆಟೀಯರ್‌ದಿಂದ ತಿಳಿದುಬರುತ್ತದೆ.[೩] ಈ ಎಲ್ಲ ಆಕರಗಳಿಂದ ತಿಳಿದುಬರುವ ಸಾಮಾನ್ಯ ಸಂಗತಿಯೆಂದರೆ, ಅರಸಪ್ಪನಾಯಕನು ವಿಜಯನಗರದ ಅರಸುಮನೆತನದ ಸಮೀಪದ ಸಂಬಂಧಿಯಾಗಿದ್ದು ಕ್ರಿ.ಶ. ಸುಮಾರು ೧೫೫೫ರಲ್ಲಿ ಸ್ವಾದಿ ರಾಜ್ಯವನ್ನು ಸ್ಥಾಪಿಸಿದನೆಂಬುದು.

ಆದರೆ, ಈ ಸಂಬಂಧದಲ್ಲಿ ತೀರ ವ್ಯತಿರಿಕ್ತವಲ್ಲವಾದರೂ ಭಿನ್ನ ರೀತಿಯ ಸಂಗತಿಗಳನ್ನು ಕೊಡುವ ಕೆಲವು ಆಕರಗಳೂ ಉಂಟು. ಮೊದಲನೆಯದಾಗಿ, ಸ್ವಾದಿರಾಜ್ಯಸಂಸ್ಥಾಪಕನಾದ ಅರಸಪ್ಪನಾಯಕನನ್ನು ಶಿಲಾಶಾಸನಗಳಲ್ಲಿ[೪] ಇಮ್ಮಡಿ ಅರಸಪ್ಪನಾಯಕನೆಂದು ಕರೆಯಲಾಗಿದೆ. ಅದಕ್ಕಾಗಿ, ಈ ಹಿಂದೆ ಇರಬಹುದಾದ ಒಂದನೆಯ ಅರಸಪ್ಪನಾಯಕನ ಕಡೆಗೆ ನಮ್ಮ ಕುತೂಹಲ ಕೆರಳುವದು ಸ್ವಾಭಾವಿಕ. ಎರಡನೆಯದಾಗಿ, 'ಪೋರ್ತುಗೀಜ್ ಇನ್ ಇಂಡಿಯಾ' ಎಂಬ ಪುಸ್ತಕದಲ್ಲಿ ಡಾನ್ವರ್ಸನು ಅರಸಪ್ಪನಾಯಕನಿಗಿಂತಲೂ ಮುಂಚೆ ಸ್ವಾದಿ ಪೋರ್ತುಗೀಜರ ನಡುವೆ ಆದ ವ್ಯಾಪಾರೀ ಒಪ್ಪಂದಗಳನ್ನು ವಿವರಿಸಿದ್ದಾನೆ.[೫] ಮೂರನೆಯದಾಗಿ, ಸುಮಾರು ೧೬ನೆಯ ಶತಮಾನದ ಶಿಲಾಶಾಸನವೊಂದರಲ್ಲಿ ಇಮ್ಮಡಿ ಅರಸಪ್ಪನಾಯಕನ ಪೂರ್ವಜರ ಹೆಸರುಗಳು ಉಲ್ಲೇಖಗೊಂಡಿರು-ವಂತಿದೆ.[೬]

ಈ ಎರಡು ವಿಧದ ಆಕರಗಳ ಕೂಲಂಕಷ ವಿಮರ್ಶೆಯಿಂದ ಸ್ವಾದಿ ಅರಸುಮನೆತನದ ಆರಂಭದ ಚರಿತ್ರೆಯ ಮೇಲೆ ಹೊಸ ಬೆಳಕು ಚೆಲ್ಲುವ ಅನೇಕ ಅಂಶಗಳು ಹೊರಬರುತ್ತವೆ. ಮೊದಲನೆಯದಾಗಿ, ಅರಸಪ್ಪನಾಯಕ (೧೫೫೫–೧೫೯೮) ಹಾಗೂ ಕೃಷ್ಣದೇವರಾಯರ ಕಾಲ (೧೫೦೯–೧೫೩೦) ಗಳಲ್ಲಿ ಸಂಬಂಧ ಕಲ್ಪಿಸುವದು ಸಾಧ್ಯವಿಲ್ಲ. ಆದುದರಿಂದ ಅರಸಪ್ಪನಾಯಕ-

---

೧. ಸ್ವಾದಿ ಅರಸುಮನೆತನ (೧೯೬೯), ಪುಟ ೭.

೨. ಅದೇ.

೩. ಮುಂಬಯಿ ಇಲಾಖೆಗೆ ಸೇರಿದ ಕರ್ನಾಟಕ ಭಾಗದ ಗ್ಯಾಝೆಟೀಯರು. ವೆಂಕಟ ರಂಗೋ ಕಟ್ಟೀಯವರಿಂದ ಭಾಷಾಂತರಿಸಲ್ಪಟ್ಟುದು (೧೮೯೩), ಪು. ೩೫೧.

೪. South Indian Inscriptions, XX, No. 241.

೫. ಸ್ವಾದಿ ಅರಸುಮನೆತನ (೧೯೬೯), ಪುಟಗಳು ೩೨–೩೩.

೬. South Indian Inscriptions, XX, No.392.

ನಿಗೂ ವಿಜಯನಗರದ ಅರಸರಿಗೂ ರಕ್ತಸಂಬಂಧ ಕಲ್ಪಿಸಿರುವದು ಕೇವಲ ಮನೆತನದ ಪ್ರತಿಷ್ಠೆಯನ್ನು ಹೆಚ್ಚಿಸುವ ಪ್ರಯತ್ನವಾಗಿರಬೇಕಲ್ಲದೆ, ಐತಿಹಾಸಿಕ ಸತ್ಯವಾಗಿರುವಂತೆ ತೋರುವುದಿಲ್ಲ. ಎರಡನೆಯದಾಗಿ, ಸ್ವಾದಿ ಅರಸುಮನೆತನವು ಇಮ್ಮಡಿ ಅರಸಪ್ಪನಾಯಕನಿಗಿಂತಲೂ ಮುಂಚೆಯೇ ಅಸ್ತಿತ್ವದಲ್ಲಿದ್ದಿತೆಂದು ಕೆಳಗಿನ ವಿವೇಚನೆಯಿಂದ ಸ್ಪಷ್ಟವಾಗುತ್ತದೆ.

ಡಾನ್ವರ್ಸನ್ ತನ್ನ ಪೋರ್ತುಗೀಜ್ ಇನ್ ಇಂಡಿಯಾ ಎಂಬ ಪುಸ್ತಕದಲ್ಲಿ ಸ್ವಾದಿ ಹಾಗೂ ಪೋರ್ತುಗೀಜರ ನಡುವೆ ಆದ ವ್ಯಾಪಾರೀ ಒಪ್ಪಂದಗಳನ್ನು ಉಲ್ಲೇಖಿಸಿದ್ದಾನೆ. ಈ ಒಪ್ಪಂದಗಳು ಕ್ರಿ.ಶ. ೧೮೨೮ ಹಾಗೂ ೧೫೩೨ರಲ್ಲಿ ಆಗಿವೆ. ಇದರಿಂದ, ಇಮ್ಮಡಿ ಅರಸಪ್ಪನಾಯಕ(ಕ್ರಿ.ಶ ೧೫೫೫-೧೫೯೮) ನಿಗಿಂತಲೂ ಮುಂಚೆ ಸ್ವಾದಿ ಅರಸುಮನೆತನವು ವಿದೇಶೀ ವ್ಯಾಪಾರಸ್ಥರೊಡನೆ ವ್ಯಾಪಾರೀ ಒಪ್ಪಂದ ಮಾಡಿಕೊಳ್ಳುವಂತಹ ಸ್ವತಂತ್ರ ಅಧಿಕಾರಯುಕ್ತ ಅರಸುಮನೆತನವಾಗಿದ್ದಿತೆಂದು ವ್ಯಕ್ತವಾಗುತ್ತದೆ.

ಸ್ವಾದಿಯ ಹೊಸಕೋಟೆಯಲ್ಲಿನ ಮಹಾಸತಿ ಕಲ್ಲಿನ ಮೇಲಿನ ಶಿಲಾ-ಶಾಸನವು ಈ ಸಂಬಂಧದಲ್ಲಿ ಪುಷ್ಟಿಯನ್ನು ಒದಗಿಸುತ್ತದೆ. ಶಕವರ್ಷ ೧೩೫೪ರ ಈ ಶಿಲಾಶಾಸನವು[೧೦] ಸೋವದೆಯ ಸಂಕಣ್ಣನಾಯಕನ ಮಗನಾದ ಅರಸಪ್ಪ-ನಾಯಕನು ತನ್ನ ಒಂಬತ್ತು ಜನ ಸತಿಯರೊಡನೆ ಪ್ರಾಣ ನೀಗಿದ ವಿಷಯವನ್ನು ಉಲ್ಲೇಖಿಸುತ್ತದೆ. ಅರಸಪ್ಪನಾಯಕನು ಈ ರೀತಿ ಪ್ರಾಣನೀಗಿದ ದಿನ ಕ್ರಿ.ಶ. ೧೪೩೧ನೆಯ ಮಾರ್ಚ ತಿಂಗಳ ೩೦ನೆಯ ತಾರೀಖಿಗೆ ಸರಿಹೋಗುತ್ತದೆ. ಒಂದು ತಲೆಮಾರಿಗೆ ಸುಮಾರು ೨೫ ವರ್ಷಗಳಂತೆ ಅರಸಪ್ಪನಾಯಕ ಹಾಗೂ ಅವನ ತಂದೆ ಸಂಕಣ್ಣನಾಯಕರು ಪ್ರತಿನಿಧಿಸುವ ಎರಡು ತಲೆಮಾರುಗಳ

---

೯. ಸ್ವಾದಿ ಅರಸುಮನೆತನ (೧೯೬೯), ಪುಟಗಳು ೩೨-೩೩.

ಸ್ವಾದಿಯು ಒಂದು ದ್ವೀಪವಾಗಿದೆಯೆಂಬ ಡಾನ್ವರ್ಸನ ಹೇಳಿಕೆಯೂ ಗಮನಾರ್ಹವಾದುದಾಗಿದೆ. ಸ್ವಾದಿ ರಾಜ್ಯವು ಆರಂಭದಿಂದಲೂ, ಪಶ್ಚಿಮದಲ್ಲಿ ಅರಬೀ ಸಮುದ್ರದವರೆಗೆ ವಿಸ್ತಾರವಾಗಿದ್ದಿತು. ಕಾರವಾರ ಬಂದರವು ಸ್ವಾದಿ ಅರಸರ ಆಧೀನದಲ್ಲಿದ್ದಿತು. ಕಾರವಾರದಿಂದ ತೀರ ಸಮೀಪದಲ್ಲಿ, ಅರಬೀ ಸಮುದ್ರದಲ್ಲಿ ಅಂಜದೀವ ಎಂಬ ಹೆಸರಿನ ನಡುಗಡ್ಡೆಯಿದ್ದು, ವಾಸ್ಕೋ-ಡಾ-ಗಾಮಾ ಮೊದಲುಮಾಡಿ ಅನೇಕ ಪೋರ್ತುಗೀಜರು ಭಾರತದ ಭೂಪ್ರದೇಶವನ್ನು ಪ್ರವೇಶಿಸುವ ಮುನ್ನ ಅಂಜದೀವ ನಡುಗಡ್ಡೆಯಲ್ಲಿಯೇ ನೆಲೆನಿಲ್ಲುತ್ತಿದ್ದರೆಂದು ತಿಳಿದುಬರುತ್ತದೆ. ಆಗ, ಬಹುತರವಾಗಿ ಈ ನಡುಗಡ್ಡೆಯ ಮೇಲೆಯೂ ಸ್ವಾದೀ ಅರಸರ ಪ್ರಭುತ್ವ ಇದ್ದಿರಬಹುದು. ಮತ್ತು ಆ ಕಾರಣಕ್ಕಾಗಿಯೇ ಪೋರ್ತುಗೀಜ ಪ್ರವಾಸಿಕರು ಸ್ವಾದಿಯು ನಡುಗಡ್ಡೆಯಾಗಿದ್ದಿತೆಂದು ಹೇಳಿರಬಹುದಾಗಿ ತೋರುತ್ತದೆ.

೧೦. Annual Reports of South Indian Epigraphy, Bombay Karnatak Inscriptions, No. 71 of 1939-40.

ಹಿಂದೆ ಅಂದರೆ, ಅರಸಪ್ಪನಾಯಕನು ಪ್ರಾಣನೀಗಿದ ವರ್ಷದಿಂದ ಸುಮಾರು ಐವತ್ತು ವರ್ಷಗಳ ಹಿಂದೆ, ನಮಗೆ ಸಂಕಣ್ಣನಾಯಕನ ಆರಂಭದ ಕಾಲ ಸಿಕ್ಕುತ್ತದೆ. ಹೀಗೆ (೧೪೩೮–೫೦) ಸುಮಾರು ಕ್ರಿ.ಶ. ೧೩೭೫, ಸಂಕಣ್ಣ-ನಾಯಕನ ಆರಂಭದ ಕಾಲವೆಂದು ತಾತ್ಪೂರ್ತಿಕವಾಗಿ ನಿರ್ಧರಿಸಬಹುದು.

ಈಗ ಸ್ವಾದಿ ಮಹಾಸತಿಕಲ್ಲಿನ ಶಿಲಾಶಾಸನದ ಅರಸಪ್ಪನಾಯಕ (ಕ್ರಿ.ಶ. ಸು. ೧೪೦೦-೧೪೩೧) ಹಾಗೂ ಇಮ್ಮಡಿ ಅರಸಪ್ಪನಾಯಕ (೧೫೫೫-೯೮) ನಡುವೆ ಸಂಬಂಧಕಲ್ಪಿಸುವದು ಅಗತ್ಯ. ಬಹುತರವಾಗಿ ಸ್ವಾದಿಶಾಸನೋಕ್ತ ಅರಸಪ್ಪನಾಯಕ ಹಾಗೂ ಇಮ್ಮಡಿ ಅರಸಪ್ಪನಾಯಕರು ಒಂದೇ ವಂಶಜರಾಗಿದ್ದುದರಿಂದ ಎರಡನೆಯವನು 'ಇಮ್ಮಡಿ' ಎಂಬ ವಿಶೇಷ ಅಭಿಧಾನವನ್ನು ಹೊಂದಿರಬೇಕು. ಸ್ವಾದಿಯಲ್ಲಿ ದೊರೆತ ಈ ಶಿಲಾಶಾಸನದಲ್ಲಿ ಸಂಕಣ್ಣನಾಯಕನನ್ನು 'ಸೋವದೆಯ ಸಂಕಣ್ಣ' ಎಂದು ಕರೆದಿರುವ ವಿಷಯವೂ, ಅರಸಪ್ಪನಾಯಕನೆಂಬ ಈ ಮನೆತನದ ವಿಶಿಷ್ಟ ಹೆಸರೂ ಈ ಉಭಯ ಅರಸಪ್ಪನಾಯಕರ ನಡುವಿನ ಸುಮಾರು ೧೨೫ ವರ್ಷಗಳ ಅಂತರದ ನಡುವೆ ಸಂಬಂಧದ ಸೇತುವೆ ಕಟ್ಟುವಲ್ಲಿ ಆಧಾರಸ್ತಂಭಗಳಾಗಿವೆ. ೧೨೫ ವರ್ಷಗಳ ಈ ಅವಧಿಯಲ್ಲಿ ಈ ವಂಶದಲ್ಲಿ ಸುಮಾರು ೫ ರಿಂದ ೬ ಜನ ಅರಸರು ಆಗಿಹೋಗಿರಬಹುದು. ಅವರು ಯಾರು ನಿರ್ಣಾಯಕವಾಗಿ ಹೇಳಲು ಆಧಾರಗಳಿಲ್ಲ. ಆದರೆ ಬನವಾಸಿಯ ೧೬ನೆಯ ಶತಮಾನದ ಶಿಲಾಶಾಸನವೊಂದರಲ್ಲಿ[೧೧] ಈ ಮನೆತನದ ೬ ಜನರ ಹೆಸರು 'ಸಾಕ್ಷಿ'ಯ ರೂಪದಲ್ಲಿ ಉಲ್ಲೇಖಿಸಲಾಗಿದೆ. ಇಮ್ಮಡಿ ಅರಸಪ್ಪನಾಯಕನ ಕಾಲದ್ದಿರಬಹುದಾದ ಈ ಶಾಸನದಲ್ಲಿ ಇಮ್ಮಡಿ ಅರಸಪ್ಪನಾಯಕನ ಹೆಸರು ಅಂತ್ಯದಲ್ಲಿ ಉಲ್ಲಿಖಿತವಾಗಿದ್ದು, ಆರಂಭದಲ್ಲಿ ಮಧುಲಿಂಗ, ರಾಮ-ಚಂದ್ರನಾಯಕ, ಅರಸಪ್ಪನಾಯಕ, ಮಧುಲಿಂಗನಾಯಕ, ಸದಾಶಿವನಾಯಕ ಮತ್ತು ಮಧುಲಿಂಗನಾಯಕ ಎಂಬ ಹೆಸರುಗಳಿವೆ. ಇಮ್ಮಡಿ ಅರಸಪ್ಪನಾಯಕನಾಗಲಿ ಅಥವಾ ಆ ಮನೆತನದ ಬೇರೆ ವ್ಯಕ್ತಿ ಯಾರೇ ಇರಲಿ, ಅವರು ತಮ್ಮ ಪೂರ್ವಜರ ಹೆಸರುಗಳನ್ನು ಸಾಕ್ಷಿಗಳ ರೂಪದಲ್ಲಿ ಇಲ್ಲಿ ಸಂಸ್ಮರಿಸಿಕೊಂಡಂತಿದೆ. ಹೆಚ್ಚಿನ ಆಧಾರಗಳು ಸಿಕ್ಕುವವರೆಗೆ ಮೇಲೆ ಹೇಳಿದವರು ಇಮ್ಮಡಿ ಅರಸಪ್ಪನಾಯಕನಿಗಿಂತಲೂ ಮುಂಚೆ ಸ್ವಾದಿ ರಾಜ್ಯದ ಆಧಿಪತ್ಯವನ್ನು ಹೊಂದಿದ್ದರೆಂದು ಹೇಳಬಹುದು.

★ ಎಸ್. ಜಿ. ಘಟಪಣದಿ

---

೧೧. South Indian Inscriptions, XX No. 392.

ಪಾಚಿಗಳಲ್ಲಿ ಲಿಂಗಭೇದದ ಉಗಮ ಮತ್ತು ವಿಕಾಸ

[Origin and Evolution of Sex in Algae]

ಲಿಂಗಭೇದದ ಉಗಮ (Origin) :

ಗಂಡು ಮತ್ತು ಹೆಣ್ಣು ಜೀವಿಗಳ ನಡುವೆ ಇರುವ ವ್ಯತ್ಯಾಸಗಳಿಗೆ ಲಿಂಗಭೇದ ಎನ್ನುವುದುಂಟು. ಈ ಲಿಂಗಭೇದವು ಕೆಳಮಟ್ಟದ ಸಸ್ಯ ಮತ್ತು ಪ್ರಾಣಿಗಳಲ್ಲಿ ಅಷ್ಟಾಗಿ ವ್ಯಕ್ತವಾಗುವುದಿಲ್ಲ. ಆದರೆ ಮೇಲ್ಮಟ್ಟದ ಸಸ್ಯ–ಪ್ರಾಣಿ ಜೀವಿಗಳಲ್ಲಿ ಈ ಲಿಂಗಭೇದವು ಒಡೆದುಕಾಣುತ್ತದೆ. ಜಲಚರ ಸಸ್ಯಗಳೆನಿಸಿದ ಪಾಚಿಗಳ ಮಟ್ಟಿಗೆ ವಿಚಾರ ಮಾಡಿದಾಗ ಲಿಂಗಭೇದದ ಉಗಮವೆಂದರೆ, ಲಿಂಗಾಣುಗಳ (Gametes) ಉದ್ಭವದ ಇತಿಹಾಸ ಅಥವಾ ಪರಿಶೀಲನೆಯೆನ್ನಬಹುದು. ಸ್ಥೂಲವಾಗಿ ಹೇಳುವುದಾದರೆ, ಪಾಚಿಗಳೆಲ್ಲ ನಿರ್ಲಿಂಗರೀತಿ (unsexual) ಮತ್ತು ಲೈಂಗಿಕ ರೀತಿ (Sexual) ಎಂದು ೨ ವಿಧದಲ್ಲಿ ಪ್ರುತ್ಯುತ್ಪತ್ತಿಗೈಯುತ್ತವೆ. ಮೊದಲನೆಯದು, ಪರಿಸರದ ಆವಶ್ಯಕತೆಗಳೆಲ್ಲ ಅನುಕೂಲವಾಗಿದ್ದಾಗ ಮತ್ತು ಎರಡನೆಯದು, ಸನ್ನಿವೇಶಗಳು ಪ್ರತಿಕೂಲವಾಗತೊಡಗಿದಾಗ ಸಾಗುತ್ತವೆ ಎಂದು ಹೇಳಬಹುದು. ಪಾಚಿಗಳು ಯಾವಾಗ ಮತ್ತು ಯಾವ ಪರಿಸ್ಥಿತಿಯಲ್ಲೇ ಆಗಲಿ ಅಸ್ತಿತ್ವಕ್ಕೆ ಬಂದುದು, ಪರಿಸರದ ಪರಿಸ್ಥಿತಿಗಳು ಅನುಕೂಲವಾಗಿದ್ದಾಗಲೇ ಎಂದು ಭಾವಿಸಬಹುದು. ಸಹಜವಾಗಿಯೇ ಇದರಿಂದ ಪಾಚಿಗಳು ನಿರ್ಲಿಂಗರೀತಿ ಪುನರುತ್ಪತ್ತಿಗೊಂಡಿವೆಯೆಂದು ತರ್ಕಿಸಬಹುದು. ಆದ್ದರಿಂದ ನಾವು ಮೊದಲು ನಿರ್ಲಿಂಗ ರೀತಿಗೆ ಕಾರಣವಾಗುವ ರಚನೆ ಮತ್ತು ವೈವಿಧ್ಯಗಳನ್ನು ಗುರುತಿಸಬೇಕು ಪ್ರಾರಂಭಕ್ಕೆ 'ಕ್ಲಾಮಿಡೊಮೊನಾಸ್' (Chlamydomonas) ಎಂಬ ಅತ್ಯಂತ ಕೆಳವರ್ಗದ ಏಕಕೋಶದ ಪಾಚಿ(unicellular)ಯೊಂದನ್ನು ಪರಿಶೀಲಿಸಬಹುದು. ಇದರ ಸಾಮಾನ್ಯ ಪೋಷಕ ಅಥವಾ ವೃದ್ಧಿಶೀಲ ಕೋಶಗಳಲ್ಲಿ (Vegetative cell) ಒಳಗಿನ ಜೈವಿಕ ವಸ್ತುಗಳೆಲ್ಲ ಕೂಡಿಯೇ ವಿಭಾಗ ಹೊಂದುವುದರಿಂದ ಏಕಕೋಶ ಕೇಂದ್ರ (uni–nucleate) ಮತ್ತು ಎರಡೆರಡು ಕಶಾಂಗಗಳುಳ್ಳ (biflagellate) ಹಲವಾರು ಜಲಚರ ಬೀಜಾಣುಗಳು (Zoospores) ಉತ್ಪಾದನೆಗೊಳ್ಳುತ್ತವೆ. ಅವು ಹೊರಬಂದಮೇಲೆ, ಕೆಲಕಾಲ ಚಲಿಸಿ, ನಂತರ ಹೊಸ ಸಸ್ಯವಾಗಿ ಮಾರ್ಪಾಟಾಗುತ್ತವೆ. ಇದು ಪರಿಸರದ ಸನ್ನಿವೇಶ ಸಂದರ್ಭಗಳು ಅನುಕೂಲವಾಗಿರುವವರೆಗೆ ಸಾಗುತ್ತಲೇ ಇರುತ್ತದೆ. ಇದನ್ನು ಉದ್ದನೆಯ ಎಳೆಗಳಂತಿರುವ ಅನೇಕ ಪಾಚಿಗಳಲ್ಲಿಯೂ (Filamentous algae) ಕಾಣಬಹುದು.

ಕೆಲಕಾಲದ ನಂತರ ಸುತ್ತಲಿನ ಪರಿಸ್ಥಿತಿಯು ಅನಾನುಕೂಲವಾಗಿ ಪರಿಣಮಿಸಿದ ಕೂಡಲೇ ಅದುವರೆಗೆ ಜಲಚರ ಬೀಜಾಣುಗಳನ್ನು (Zoospore) ಉತ್ಪಾದಿಸುತ್ತಿದ್ದ ಪೋಷಕ ಅಥವಾ ವೃದ್ಧಿಶೀಲಕೋಶವೇ ಮುಂದೆ ಲಿಂಗಾಣುಗಳೆಂಬ (Gametes) ಹೊಸ ರಚನೆಗಳನ್ನು ಉತ್ಪಾದಿಸಲು ಆರಂಭಿಸುತ್ತದೆ. ಈ ಲಿಂಗಾಣುಗಳೂ (Gametes) ಜಲಚರ ಬೀಜಾಣುಗಳಿಗೆ (Zoospores) ಗಾತ್ರ ಮತ್ತು ವರ್ತನೆ (ಚರ್ಯೆ) ಇವೆರಡನ್ನು ಬಿಟ್ಟು, ಉಳಿದೆಲ್ಲ ರೀತಿಯಲ್ಲಿಯೂ ಸರಿಸಮವಾಗಿಯೇ ಇರುತ್ತವೆ. ಇಲ್ಲಿ ಜಲಚರ ಬೀಜಾಣುಗಳ ಮುಂದಿನ ಸಂತತಿಯ ಜೀವಿಗಳನ್ನು ನೇರವಾಗಿ ರೂಪಿಸುತ್ತವೆ. ಆದರೆ ಲಿಂಗಾಣುಗಳು ಪರಸ್ಪರ ಸಂಯೋಗಹೊಂದಿದಮೇಲೆ ಹೊಸ ಜೀವಿಗಳನ್ನು ರೂಪಿಸುವುದು ಸಾಧ್ಯ ಎಂಬುದು ಗಮನಾರ್ಹ. ಹೀಗೆ ಜಲಚರ ಜೀವಾಣುಗಳು (Zoospores) ಮತ್ತು ಲಿಂಗಾಣುಗಳು (Gametes) ಇವೆರಡರ ನಡುವೆ ಇರುವ ಅನೇಕ ಹೋಲಿಕೆಗಳಿಂದ ಲಿಂಗಾಣುಗಳು ಕ್ರಮೇಣ ಪ್ರಾಯಶಃ ಜಲಚರ ಬೀಜಾಣುಗಳಿಂದಲೇ ಬಂದಿರಬೇಕೆಂದು ಅರ್ಥವಾಗುತ್ತದೆ. ಇದನ್ನು ನಾವು ಇನ್ನೂ ಹಲವಾರು ನಿದರ್ಶನಗಳಲ್ಲಿ ಪರಿಶೀಲಿಸಿ ನಂತರ ಮೇಲಿನಂತೆ ಒಂದು ನಿರ್ಧಾರಕ್ಕೆ ಬರಬೇಕಾಗುತ್ತದೆ.

ಈಗ 'ಯುಲೋತ್ರಿಕ್ಸ್' (Ulothrix) ಎಂಬ ಪಾಚಿಯನ್ನೇ ತೆಗೆದುಕೊಳ್ಳಬಹುದು. ಅದರಲ್ಲಿ ಸಸ್ಯದೇಹವು ಉದ್ದನೆಯ ಪಟ್ಟಿ ಅಥವಾ ಎಳೆಯಂತಿದ್ದು, ಅದು ಒಂದರಮೇಲೊಂದು ಇರಿಸಿದ ಅನೇಕ ಕೋಶಗಳಿಂದ ಆಗಿರುತ್ತದೆ. ಆ ಸಾಮಾನ್ಯ ಪೋಷಕ ಅಥವಾ ವೃದ್ಧಿಶೀಲ ಕೋಶಗಳೇ (Vegetative Cells) ಜಲಚರ ಬೀಜಾಣುಗಳನ್ನು (Zoospores) ಉತ್ಪಾದಿಸುತ್ತವೆ. ಈ ರೀತಿಯ ಸಸ್ಯವೃದ್ಧಿಯ ಕಡೆಕಡೆಗೆ ಆಹಾರಸಂಗ್ರಹವು ಹೆಚ್ಚು ಕಡಿಮೆ ಮುಗಿದುಹೋಗುತ್ತದೆ. ಆಗ ಪರಿಸ್ಥಿತಿಯು ಹದಗೆಟ್ಟು ಅನಾನುಕೂಲವಾಗಿ ಪರಿಣಮಿಸುತ್ತ ಬಂದು, ಜೀವಕೋಶಗಳು ಲಿಂಗಾಣುಗಳನ್ನು ಉತ್ಪಾದಿಸಲೆತ್ನಿಸುತ್ತವೆ. 'ಯುಲೋತ್ರಿಕ್ಸ್ ವೇರಿಯಬಿಲಿಸ್' (Ulothrix Variabilis) ಎಂಬ ಪಾಚಿಯಲ್ಲಿ ಲಿಂಗಾಣುಗಳು, 'ಅಂತಸ್ಥ ಜಲಚರ ಬೀಜಾಣು'ಗಳಿಂದಲೇ (Potential Zoospores) ಉಂಟಾಗುವುವು ಎಂತಲೂ, ಆ ಜಲಚರ ಬೀಜಾಣುಗಳು ಹೊರಗೆ ಬರುವಲ್ಲಿ ಅಸಮರ್ಥವಾಗಿ, ಒಳಗೇ ಇದ್ದು, ಇನ್ನೂ ಹಲವಾರು ವಿಭಜನೆಗಳನ್ನು ಹೊಂದಿ, ಕಡೆಗೆ ಲೈಂಗಿಕ ಸಾಮರ್ಥ್ಯವುಳ್ಳ ಜೀವಾಣು ಅಥವಾ ಲಿಂಗಾಣುಗಳಾಗಿ ಹೊರಬರುತ್ತವೆಯೆಂಬುದು 'ಚೋಲ್ನೋಕಿ' (Cholnoky) ಎಂಬ ಒಬ್ಬ ಪಾಚಿಶಾಸ್ತ್ರಜ್ಞನ ಅಭಿಪ್ರಾಯ. 'ಯುಲೋತ್ರಿಕ್ಸ್ ಝೊನೇಟಾ' (Ulothrix Zonata) ಎಂಬ ಪಾಚಿಯಲ್ಲಿಯೂ ಲಿಂಗಾಣುಗಳು ಮೇಲಿನಂತೆಯೇ ಉತ್ಪಾದನೆಯಾಗುತ್ತವೆ. ಇದರಿಂದ 'ಯುಲೋತ್ರಿಕ್ಸ್'

ಪಾಚಿಯಲ್ಲಿ ಜಲಚರಬೀಜಾಣುಗಳೆರಡೂ ಅನೇಕ ರೀತಿಯಲ್ಲಿ ಒಂದೇ ತೆರನಾಗಿರುತ್ತವೆ. ಆದರೆ ಅವು ಉತ್ಪಾದನೆಯಾಗುವಾಗ ಅವುಗಳ ಸಂಖ್ಯಾಪ್ರಮಾಣ ಮತ್ತು ಗಾತ್ರ, ಹಾಗೂ ಕಶಾಂಗಗಳ ಸಂಖ್ಯೆ ಇವುಗಳಲ್ಲಿ ಮಾತ್ರ ನಿರ್ದಿಷ್ಟ ವ್ಯತ್ಯಾಸಗಳು ತಲೆದೋರುತ್ತವೆ. ಸಾಮಾನ್ಯವಾಗಿ ಜಲಚರ ಬೀಜಾಣುಗಳಲ್ಲಿ ೨ ಅಥವಾ ೪ ಕಶಾಂಗಗಳೂ, ಲಿಂಗಾಣುಗಳಲ್ಲಿ ಯಾವಾಗಲೂ ಎರಡೇ ಕಶಾಂಗಗಳೂ ಇರುತ್ತವೆ.

'ಈಡೊಗೋನಿಯಂ' (Oedogonium) ಎಂಬ ಪಾಚಿಯಲ್ಲಿಯಾದರೋ ಜಲಚರ ಬೀಜಾಣುಗಳು ಮತ್ತು ಲಿಂಗಾಣುಗಳು ಗಾತ್ರವೊಂದನ್ನು ಬಿಟ್ಟು, ಉಳಿದೆಲ್ಲ ವಿವರಗಳಲ್ಲಿಯೂ ಒಂದೇ ತೆರನಾಗಿರುತ್ತವೆ. ಅದು ಕೂಡ ಅಷ್ಟು ನಿರ್ದಿಷ್ಟವಾಗಿರುವುದಿಲ್ಲ. ಏಕೆಂದರೆ ಅದು ಕೋಶದೊಳಗಿನ ಜೈವಿಕ ವಸ್ತುಗಳು ಎಷ್ಟು ಸಾರೆ ವಿಭಜನೆ ಹೊಂದುತ್ತದೆಯೆಂಬುದನ್ನಷ್ಟೇ ಅವಲಂಬಿಸಿರುತ್ತದೆ. 'ಈಡೊಗೋನಿಯಂ'ನಲ್ಲಾದಂತೆ ಕೋಶದೊಳಗಿನ ವಸ್ತುಗಳು ವಿಭಜನೆಯನ್ನೇ ಹೊಂದದಿದ್ದರೆ, ಅಥವಾ 'ಕ್ಲಾಮಿಡೊಮೊನಾಸ'ನಲ್ಲಿ ಆದಂತೆ ಕೆಲವೇ ಸಲ ವಿಭಜನೆಹೊಂದಿದರೆ ಅದರ ಪರಿಣಾಮವಾಗಿ ದೊಡ್ಡ ದೊಡ್ಡ ಜೀವಾಣುಗಳು ಉಂಟಾಗುತ್ತವೆ. ಅವುಗಳಿಗೆ 'ಜಲಚರ ಜೀವಾಣುಗಳು' (Zoospores) ಎನ್ನಲಾಗುತ್ತದೆ ಆದರೆ ವಿಭಜನೆಯು ಅನೇಕ ಸಾರೆ ಉಂಟಾದರೆ, 'ಕ್ಲಾಮಿಡೊಮೊನಾಸ್' ಮತ್ತು 'ಯುಲೋತ್ರಿಕ್ಸ್' ನಲ್ಲಾದಂತೆ, ಅತಿ ಸಣ್ಣ ಸಣ್ಣ ಜೀವಾಣುಗಳು ಉಂಟಾಗುತ್ತವೆ. ಅವುಗಳಿಗೆ 'ಲಿಂಗಾಣುಗಳು' (Gametes) ಎನ್ನಲಾಗುತ್ತದೆ.

ಇದರಿಂದ ಕೋಶಗಳ ಕಾಲ ಅಥವಾ ಅವಧಿ ಪೂರ್ಣವಾಗಿ ಮುಗಿದನಂತರವೇ (aging of cells) ಲಿಂಗಾಣುಗಳು ನಿರ್ಮಾಣಗೊಳ್ಳುವುವು ಎಂಬ ಒಂದು ಅಂತಿಮ ನಿರ್ಧಾರಕ್ಕೆ ಬರಬಹುದು. ಹೀಗಾಗಿ ಕ್ಷೀಣಿಸಿದ ಜಲಚರ ಬೀಜಾಣುಗಳೇ (Zoospores) ಲಿಂಗಾಣುಗಳೆನಿಸಿಕೊಳ್ಳುತ್ತವೆ ಎಂತಲೂ, ಅವುಗಳ ಕಿರಿಗಾತ್ರ ಮತ್ತು ಕೋಶದೊಳಗಿನ ಆಹಾರಸಂಗ್ರಹ ಇತ್ಯಾದಿಗಳು ಮುಗಿದು ಹೋದುದರ ಪರಿಣಾಮವಾಗಿ, ಅವುಗಳ ಸತ್ವ ಅಥವಾ ಕಸುವು ಕ್ಷೀಣವಾಗಿ, ಅವು ನೇರ ಹಾಗೂ ಸ್ವತಂತ್ರವಾಗಿ ಹೊಸ ಜೀವಿಗಳನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಕಳೆದುಕೊಂಡಿರುತ್ತವೆಯೆಂತಲೂ ಹೇಳಬಹುದು. ಇಂತಹ ಸೂಕ್ಷ್ಮ ಲಿಂಗಾಣುಗಳು ಪರಸ್ಪರ ಸಂಯೋಗ ಹೊಂದುವುದರ ಮೂಲಕವೇ ತಮ್ಮಲ್ಲಿ ಕಳೆದುಹೋಗಿದ್ದ ಕಸುವು ಅಥವಾ ಸತ್ವವನ್ನು ಮತ್ತೊಮ್ಮೆ ಗಳಿಸಿಕೊಂಡು ಅಥವಾ ಪುನರುಜ್ಜೀವನಗೊಳಿಸಿಕೊಂಡು, ಮುಂದೆ ಯುಗ್ಮಜಗಳ (Zygote) ಮೂಲಕ ಹೊಸ ಜೀವಿಗಳನ್ನು ಉತ್ಪಾದಿಸಬಲ್ಲವು ಎಂದು ತಿಳಿದು ಬರುತ್ತದೆ. ಇದರಿಂದ ಇಂತಹ ಇನ್ನೂ ಅನೇಕ ನಿದರ್ಶನಗಳಿಂದ ಲಿಂಗಾಣುಗಳು

ಕ್ರಮೇಣ ಜಲಚರ ಬೀಜಾಣುಗಳಿಂದಲೇ (Zoospores) ರೂಪುಗೊಂಡಿವೆಯೆಂಬ ನಿರ್ಧಾರಕ್ಕೆ ಬರಲು ಯಾವ ಸಂಕೋಚವೂ, ಅಡೆತಡೆಯೂ ಇರಲಾರದು.

ಲಿಂಗಭೇದದ ವಿಕಾಸ (Evolution) :

ಇದನ್ನು ಪರಿಶೀಲಿಸುವಾಗ ನಾವು ಮೊದಲ 'ಮಿಕ್ಸೊಫೈಸಿ' (Myxophyceae) ಎಂಬ ಗುಂಪಿನ ಪಾಚಿಗಳಿಂದ ಆರಂಭಮಾಡಬಹುದು. ಅದರಲ್ಲಿ ಲಿಂಗಭೇದದ ಸುಳಿವೇ ಇರುವುದಿಲ್ಲ. ಪಾಚಿಗಳ ಇತರ ಗುಂಪುಗಳಲ್ಲಿ ಲಿಂಗಭೇದ ಒಮ್ಮೆ ಪ್ರತಿಷ್ಠಾಪನೆಯಾದಮೇಲೆ, ಮೊಟ್ಟಮೊದಲಿಗೆ ಲಿಂಗಾಣುಗಳು ಯಾವ ರೂಪರಚನೆಗಳನ್ನು ಹೊಂದಿದ್ದವು ಎಂಬ ಪ್ರಶ್ನೆಯೇಳುತ್ತದೆ. ಇದಕ್ಕೆ ಉತ್ತರ ಇಷ್ಟೆ. ಆರಂಭಕ್ಕೆ ಲಿಂಗಾಣುಗಳು ಒಂದೇ ರೀತಿಯ ಆಕಾರಗಾತ್ರಗಳನ್ನು ಹೊಂದಿದ್ದವು. ಬಾಹ್ಯರೂಪಕ್ಕೆ ಆ ಲಿಂಗಾಣುಗಳು ಒಂದೇ ಎಂದು ತೋರಿದರೂ ಜೈವಿಕ ಕ್ರಿಯೆಯ ದೃಷ್ಟಿಯಿಂದ ಅವು ಭಿನ್ನವಾಗಿರಲೇಬೇಕು. ಇದನ್ನು ನಾವು 'ಕ್ಲಾಮಿಡೊಮೊನಾಸ್ ಸ್ನೋವೇ' (Chlamydomonas Snowiae) ಮತ್ತು 'ಯುಲೊತ್ರಿಕ್ಸ್' ಎಂಬ ಪಾಚಿಗಳಲ್ಲಿ ಕಾಣಬಹುದು. ಅಲ್ಲಿ ಲಿಂಗಾಣುಗಳು ೨ ಭಿನ್ನಜಾತಿಗೆ, ಅಂದರೆ + ಮತ್ತು – ಗುಂಪಿಗೆ ಸೇರಿದವಾಗಿರುತ್ತವೆಯೆಂದು ಭಾವಿಸಬಹುದು. ಇಂತಹ ೨ ಲಿಂಗಾಣುಗಳು ಸಂಯೋಗಹೊಂದುವ ವಿಧಿ ಅಥವಾ ವಿಧಾನಕ್ಕೆ 'ಸಮರೂಪ (ಸಾದೃಶ) ಸಂಯೋಗ' (Isogamy) ಎಂದು ಹೇಳಬಹುದು. ಮುಂದೆ ಗಾತ್ರ ಅಥವಾ ಚಟುವಟಿಕೆಯಲ್ಲಿ ಸ್ವಲ್ಪ ವ್ಯತ್ಯಾಸವಿರುವ ೨ ಲಿಂಗಾಣುಗಳು ಸಂಯೋಗಹೊಂದಿದಾಗ 'ಅಸಮರೂಪ (ಅಸಾದೃಶ) ಸಂಯೋಗ' (Anisogamy) ಆರಂಭವಾಯಿತೆಂದು ಹೇಳಬಹುದು. ಇದನ್ನು 'ಕ್ಲಾಮಿಡೊಮೊನಾಸ್ ಬ್ರಾನಿಯೆಯ್' (Chlamydomonas braunii) ಮತ್ತು 'ಪ್ಯಾಂಡೊರೈನಾ' (Pandorina) ಎಂಬ ಪಾಚಿಗಳಲ್ಲಿ ಕಾಣಬಹುದು. ಈ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವುದು ಸುಲಭ. ಒಂದು ಕೋಶದಲ್ಲಿ ಉಂಟಾಗುವ ಕೋಶದೊಳಗಿನ ವಸ್ತುಗಳ ವಿಭಜನೆ ಮತ್ತೊಂದಕ್ಕಿಂತ ಸ್ವಲ್ಪ ಹೆಚ್ಚೇ ಇರಬಹುದು. ಇಲ್ಲವೇ ಕಡಿಮೆಯೇ ಇರಬಹುದು. ಅದರಿಂದ ಉಂಟಾಗುವ ಲಿಂಗಾಣುಗಳು ಸಹಜವಾಗಿಯೇ ಗಾತ್ರದಲ್ಲಿ ಸ್ವಲ್ಪ ಹೆಚ್ಚುಕಡಿಮೆಯಾಗುವವು. ಹೀಗಾಗಿ ಅಸಮರೂಪದ ಸಂಯೋಗದಲ್ಲಿ ಸಂಯೋಗಹೊಂದುವ ಲಿಂಗಾಣುಗಳು ಯಾವಾಗಲೂ ಗಾತ್ರದಲ್ಲಿ (ಮತ್ತು ಕೆಲಮಟ್ಟಿಗೆ ಚಟುವಟಿಕೆಯಲ್ಲಿ) ಭಿನ್ನರೀತಿಯವಾಗಿರುತ್ತವೆ.

ಇದಕ್ಕೂ ಮುಂದೆ ಹೋದರೆ 'ಭಿನ್ನ ಜಾತಿಯ ಲಿಂಗಾಣುಗಳ ಸಂಯೋಗ' (Heterogamy) ಎಂಬುದನ್ನು ಕಾಣಬಹುದು. ಇದು ಲಿಂಗ

ಭೇದದ ವಿಕಾಸದಲ್ಲಿ ಪರಾಕಾಷ್ಠತೆಯನ್ನು ಮುಟ್ಟಿದೆಯೆನ್ನಬಹುದು. ಅದಕ್ಕೆ 'ಭಿನ್ನರೂಪಸಂಯೋಗ' ಅಥವಾ 'ವಿಷಮಲಿಂಗತೆ' (Oogamy) ಎಂತಲೂ ಹೇಳಬಹುದು. ಈ ಸ್ಥಿತಿಯು ಸಮರೂಪ (Isogamy) ಅಸಮರೂಪ (Anisogamy) ಸಂಯೋಗಗಳ ಹಂತಗಳನ್ನು ದಾಟಬಂದಿದೆಯೆಂತಲೂ ಭಾವಿಸಬಹುದು. ಈ ಭಿನ್ನರೂಪಸಂಯೋಗ ಅಥವಾ ವಿಷಮಲಿಂಗತೆಯಲ್ಲಿ ಒಂದು ಕೋಶವು ವಿಭಜನೆಯನ್ನೇ ಹೊಂದದೆ ಬರೀ ಗಾತ್ರದಲ್ಲಿ ಹಿಗ್ಗಿ, ಸಾಕಷ್ಟು ಆಹಾರ ಸಂಗ್ರಹಿಸಿಟ್ಟುಕೊಳ್ಳುತ್ತದೆ. ಆದರೆ ಇನ್ನೊಂದು ಕೋಶವು ಮೇಲಿಂದ ಮೇಲೆ ಸತತವಾಗಿ ವಿಭಜನೆಹೊಂದಿ, ಅನೇಕ ಸೂಕ್ಷ್ಮ ಹಾಗೂ ಕಿರಿದಾದ ಮತ್ತು ಸೂಕ್ಷ್ಮ ಚಲನಾಂಗಗಳಿಂದ ಅತ್ಯಂತ ಚಟುವಟಿಕೆಯಾಗಿ ಚಲಿಸಬಲ್ಲ ಕೋಶಗಳನ್ನು ಉತ್ಪಾದಿಸುತ್ತದೆ. [ಪಾಲಿಸೈಫೋನಿಯ (Polysiphonia) ಎಂಬ ಒಂದು ಪಾಚಿಯಲ್ಲಿ ಮಾತ್ರ ಅದು ಚಲಿಸುವುದಿಲ್ಲ.] ವಿಭಜನೆಯೇ ಹೊಂದದ ಮತ್ತು ಇದ್ದಲ್ಲೇ ಇರುವ ಮೊದಲಿನ ಕೋಶಕ್ಕೆ 'ಸ್ತ್ರೀಧಾನಿ' ಅಥವಾ 'ಊಗೋನಿಯಂ' (Oogonium) ಎಂತಲೂ, ತೀವ್ರವಿಭಜನೆಯಿಂದ ಅಸಂಖ್ಯ ಕಿರಿಗಾತ್ರದವೂ ಮತ್ತು ಕ್ರಿಯಾಶೀಲವೂ ಆದ ಕೋಶಗಳನ್ನು 'ಪುಂಧಾನಿ' ಅಥವಾ 'ಅಂತರಿಡಿಯಂ' ಎಂತಲೂ ಕರೆಯಲಾಗುತ್ತದೆ. ಅವುಗಳಿಗೆ ಅನುಕ್ರಮವಾಗಿ ಗಂಡು ಮತ್ತು ಹೆಣ್ಣು ಪ್ರತ್ಯುತ್ಪತ್ತಿಕಾರಕಗಳೆಂತಲೂ ಹೇಳಬಹುದು. 'ಕ್ಲಾಮಿಡೊಮೊನಾಸ ಕಾಕ್ಸಿಫೆರ' (Chlamydomonas Coccifera) 'ವಾಲ್ವಾಕ್ಸ್' (Volvox) ಮತ್ತು 'ಈಡೊಗೋನಿಯಂ' (Oedogonium) ಎಂಬ ಪಾಚಿಗಳಲ್ಲಿ ಸರಳರೂಪದ ಅಥವಾ ಅಷ್ಟು ವಿಕಾಸ ಹೊಂದದ ವಿಷಮಲಿಂಗತೆಯ ಅಥವಾ ಭಿನ್ನರೂಪಸಂಯೋಗವು (Oogamy) ಸ್ಥಿತಿ ಕಂಡುಬರುತ್ತದೆ. 'ಕ್ಲಾಮಿಡೊಮೊನಾಸ್'ನಲ್ಲಿ ಯಾವ ಪೋಷಕ ಜೀವಕೋಶ ಅಥವಾ ವೃದ್ಧಿಶೀಲಕೋಶವೇ ಆದರೂ ಗಂಡು ಇಲ್ಲವೆ ಹೆಣ್ಣು ಲಿಂಗಾಣುವಾಗಿ ವರ್ತಿಸಬಹುದು. ಆದರೆ 'ವಾಲ್ವಾಕ್ಸ್' (Volvox) ಮತ್ತು 'ಈಡೊಗೋನಿಯಂ' ಎಂಬ ಪಾಚಿಗಳಲ್ಲಿ ಎಲ್ಲ ಪೋಷಕ ಜೀವಕೋಶಗಳೂ (Vegetative Cells) ಲೈಂಗಿಕ ಪುನರುತ್ಪತ್ತಿಕೋಶಗಳನ್ನು ಉತ್ಪಾದಿಸುವ ಸಾಮರ್ಥ್ಯಪಡೆದಿರುತ್ತವೆ. 'ಈಡೊಗೋನಿಯಂ' ಎಳೆಯಲ್ಲಿ ಪಾದದಂತಿರುವ (Basal holdfast) ಅತ್ಯಂತ ಕೆಳಗಿನ ಕೋಶವೊಂದು ಮಾತ್ರ ಇದಕ್ಕೆ ಅಪವಾದ. ಆದರೂ ಸಾಮಾನ್ಯವಾಗಿ ಕೆಲವೇ ಕೋಶಗಳಿಗೆ ಈ ವಿಶೇಷ ಸಾಮರ್ಥ್ಯವಿರುತ್ತದೆ. ಈ ದೃಷ್ಟಿಯಿಂದ ಇಂತಹ ಪರಿಸ್ಥಿತಿಯು 'ಕ್ಲಾಮಿಡೊಮೊನಾಸ್'ಗಿಂತ ಒಂದು ಹೆಜ್ಜೆ ಮುಂದೆ ಹೋಗಿದೆಯೆಂದು ಭಾವಿಸಬಹುದು.

'ಸ್ಪೈರೊಗೈರಾ' (Spirogyra) ಎಂಬ ಪಾಚಿಯಲ್ಲಿ ಇದಕ್ಕೂ ಸ್ವಲ್ಪ ಮುಂದೆ ಹೋದ ಪರಿಸ್ಥಿತಿಯನ್ನು ಕಾಣಬಹುದು. 'ಲಿಂಗಾಣುಕೋಶ'

(Gametangium) ಎಂದು ಕರೆಸಿಕೊಳ್ಳುವ ಸಾಮಾನ್ಯ ಪೋಷಕ ಅಥವಾ ವೃದ್ಧಿಶೀಲ ಕೋಶಗಳಲ್ಲಿಯೇ ಸಂಯೋಗಹೊಂದಬಲ್ಲ ೨ ಬಗೆಯ ಲಿಂಗಾಣುಗಳು ರೂಪುಗೊಳ್ಳುತ್ತವೆ. ಮುಂದೆ ಒಂದು ಲಿಂಗಾಣುಕೋಶದ ಒಳಗಿನ ಜೈವಿಕ ವಸ್ತುಗಳೆಲ್ಲ ಮತ್ತೊಂದು ಲಿಂಗಾಣುಕೋಶದೊಳಗೆ ಹೋಗಿ ಸೇರಿಕೊಳ್ಳುತ್ತವೆ. ಮೊದಲುಮೊದಲಿಗೆ ಲಿಂಗಾಣುಕೋಶಗಳಲ್ಲಿ ಬಾಹ್ಯರೂಪದ ವ್ಯತ್ಯಾಸಗಳೇನೂ ಇರುವುದೇ ಇಲ್ಲ. ಆದರೆ ಒಂದು ಕೋಶದಿಂದ ಇನ್ನೊಂದು ಕೋಶಕ್ಕೆ ಜೈವಿಕ ವಸ್ತುಗಳು ಸರಿದಮೇಲೆ ಸಂಯೋಗಹೊಂದಿದ ೨ ಕೋಶ ಅಥವಾ ೨ ಎಳೆಗಳ ಪೈಕಿ ಸ್ವಲ್ಪ ವ್ಯತ್ಯಾಸಗಳನ್ನು ಕಾಣಬಹುದು. ಸ್ಪೈರೊಗೈರಾ ಪಾಚಿಯ ಕೆಲವು ಪ್ರಭೇದಗಳಲ್ಲಿ ಮಾತ್ರ ಬಾಹ್ಯರೂಪದ ಅಸಮತೆಯನ್ನು ನೋಡಬಹುದು. ಜೈವಿಕ ವಸ್ತುಗಳನ್ನು ಸ್ವೀಕರಿಸುವ ಒಂದು ಲಿಂಗಾಣುಕೋಶವನ್ನು ಹೆಣ್ಣು ಎಂತಲೂ, ಆ ವಸ್ತುಗಳು ಹೊರಹೋಗಿ ಖಾಲಿಯಾಗುವ ಮತ್ತೊಂದು ಲಿಂಗಾಣುಕೋಶವನ್ನು ಗಂಡು ಎಂತಲೂ ಪರಿಗಣಿಸಬಹುದು. ಇದಕ್ಕಿಂತಲೂ ಮುಂದೆ ಹೋದರೆ 'ವೋಚೇರಿಯ' (Vaucheria) ಎಂಬ ಪಾಚಿಗಳಲ್ಲಿ ಇನ್ನೂ ಹೆಚ್ಚಿನ ಅಥವಾ ಸುಧಾರಿಸಿದ (ಮಾರ್ಪಾಟಾದ) ಪರಿಸ್ಥಿತಿಯನ್ನು ಕಾಣಬಹುದು. ಇಲ್ಲಿ ಲಿಂಗಾಣುಕೋಶಗಳು 'ಪುಂಕೋಶ' ಅಥವಾ 'ಪುಂಧಾನಿ' (Antheridium) ಮತ್ತು ಸ್ತ್ರೀಕೋಶ ಅಥವಾ ಸ್ತ್ರೀಧಾನಿ (Archegonium) ಎಂದು ನಿರ್ದಿಷ್ಟವಾಗಿ ೨ ಭಿನ್ನ ರೀತಿಯದಾಗಿ ಮಾರ್ಪಾಟು ಹೊಂದಿರುತ್ತವೆ. ಮೊದಲನೆಯದು ರೇತ್ರಾಣು ಅಥವಾ ಪುರುಷಾಣುಗಳನ್ನೂ (Antherozoids or Sperms) ಎರಡನೆಯದು ಡಿಂಬಾಣು ಅಥವಾ ಅಂಡಾಣುಗಳನ್ನೂ (Ovum or Egg) ಉತ್ಪತ್ತಿಮಾಡುತ್ತವೆ.

ಇನ್ನೂ ಒಂದು ಹೆಜ್ಜೆ ಮುಂದೆ ಹೋದರೆ, 'ಚಾರಾ' (Chara) ಎಂಬ ಪಾಚಿಯಲ್ಲಿ ಮತ್ತಷ್ಟು ಸುಧಾರಣೆಗಳು ಕಂಡುಬರುತ್ತವೆ. ಇಲ್ಲಿ ಲಿಂಗಾಂಗಗಳು ಅಥವಾ ಜನನೇಂದ್ರಿಯಗಳು ಸಸ್ಯದ ಎಲ್ಲ ಭಾಗದಲ್ಲಿಯೂ ಉತ್ಪತ್ತಿಯಾಗುವುದಿಲ್ಲ. ಅವು ನಿರ್ಬಂಧಿತ ಬೆಳವಣಿಗೆಯುಳ್ಳ ಕೆಲವು ಶಾಖೆಗಳ (branches of limited growth) ಗಿಣ್ಣುಗಳ ಮೇಲಷ್ಟೇ ಬೆಳೆಯುತ್ತವೆ. ಗಂಡು ಮತ್ತು ಹೆಣ್ಣು ಪ್ರತ್ಯುತ್ಪತ್ತಿಜನನಾಂಗ (ಜನನೇಂದ್ರಿಯ)ಗಳು ಬಹಳಷ್ಟು ಬೆಳವಣಿಗೆ ಹೊಂದಿ, ರಚನಾಮಾರ್ಪಾಟುಗಳಲ್ಲಿ ಸಾಕಷ್ಟು ಸಂಕೀರ್ಣತೆಯನ್ನು ಹೊಂದಿರುತ್ತವೆ. 'ಗ್ಲಾಬ್ಯುಲ್' (Globule) ಅಥವಾ 'ಗೋಲಿಕಾ' ಎಂದು ಕರೆಯಲ್ಪಡುವ ಗಂಡುಪ್ರತ್ಯುತ್ಪತ್ತಿಜನನಾಂಗವು, ರೇತ್ರಾಣು ಅಥವಾ ವೀರ್ಯಾಣುಗಳನ್ನು (Spermatozoids) ಉತ್ಪಾದಿಸುವ ಒಂದು ಎಳೆ ಅಥವಾ ಸರಮಾಲೆಯನ್ನೇ ಉತ್ಪಾದಿಸಿ ಅದರ ಒಂದೊಂದು ಕೋಶದಲ್ಲಿಯೂ ಒಂದೊಂದು ರೇತ್ರಾಣು ಅಥವಾ ವೀರ್ಯಾಣು ಉತ್ಪತ್ತಿಯಾಗುತ್ತದೆ. 'ನ್ಯೂಕ್ಯೂಲ್'

(Nucule) ಎಂದು ಕರೆಯಲ್ಪಡುವ ಹೆಣ್ಣು ಪುನರುತ್ಪತ್ತಿ ಜನನಾಂಗವು ಒಂದೇ ಡಿಂಬಾಣು ಅಥವಾ ಅಂಡಾಣುವನ್ನೂ (Egg) ಉತ್ಪಾದಿಸುತ್ತದೆ. ಇವೆಲ್ಲ 'ಕ್ಲೋರೊಫೈಸಿ' (Chlorophyceae) ಎಂಬ ಗುಂಪಿನ ಹಸಿರು ಪಾಚಿಗಳಿಗೆ (Green Algae) ಸಂಭವಿಸಿದುದಾಯಿತು.

ಆದರೆ, 'ಫ್ಯೂಕಸ್' (Fucus) ಮತ್ತು 'ಸಾರ್ಗ್ಯಾಸಂ' (Sargassum) ಎಂಬ ಪಾಚಿಗಳನ್ನೊಳಗೊಂಡ ಕಂದುಪಾಚಿಗಳಲ್ಲಿ ಪರಿಸ್ಥಿತಿ ಸ್ವಲ್ಪ ಬೇರೆಯೇ ಇರುತ್ತದೆ. ಇವುಗಳಲ್ಲಿ ಪ್ರತ್ಯುತ್ಪತ್ತಿ ಜನನಾಂಗಗಳು ಸಸ್ಯದ ಒಂದು ನಿರ್ದಿಷ್ಟ ಭಾಗಗಳಿಗೆ ಮಾತ್ರ (Receptacle) ಸೀಮಿತವಾಗಿರುತ್ತವೆ. ಈ 'ರಿಸೆಪ್ಟಕಲ್' (Receptacle) ಎಂಬ ವಿಶಿಷ್ಟ ಭಾಗದ ಮೇಲೆ 'ಕಾನ್‌ಸೆಪ್ಟಕಲ್' (Conceptacle) ಅಥವಾ 'ನಿಧಾನಿ' ಎಂಬ ದೊಡ್ಡ ಚೀಲದಂತಹ ಕೋಶಗಳಿರುತ್ತವೆ. 'ಕಾನ್‌ಸೆಪ್ಟಕಲ್'ಗಳಲ್ಲಿ ಗಂಡು ಮತ್ತು ಹೆಣ್ಣು ಪ್ರತ್ಯುತ್ಪತ್ತಿ ಜನನಾಂಗಗಳು ಇರುತ್ತವೆ. ಕೆಲವು ಪ್ರಭೇದಗಳಲ್ಲಿ (Species) ಅವು ಪ್ರತ್ಯೇಕ 'ಕಾನ್-ಸೆಪ್ಟಕಲ್'ಗಳಲ್ಲಿ ಇರುವುದೂ ಉಂಟು. 'ಊಗೋನಿಯಂ' ಅಥವಾ 'ಸ್ತ್ರೀಧಾನಿ' (Oogonium) ಎಂಬ ಹೆಣ್ಣು ಜನನಾಂಗವು ಗರ್ಭಾಂಕುರತೆಗೆ ಮುಂಚೆ ಹೊರಗೆ ಬರಬಹುದು. 'ಫ್ಯೂಕಸ್' (Fucus) ಎಂಬ ಪಾಚಿಯಲ್ಲಿ ೮ ಅಂಡಾಣುಗಳವರೆಗೂ (Eggs) ಇರುವುದುಂಟು. 'ಸಾರ್ಗ್ಯಾಸಂ' (Sargassum) ಎಂಬ ಪಾಚಿಯಲ್ಲಿ ೮ರ ಪೈಕಿ ೭ ನಾಶಹೊಂದಿ ಕಡೆಗೆ ಒಂದೇ ಉಳಿಯುತ್ತದೆ.

'ಪಾಲಿಸೈಫೋನಿಯ' (Polysiphonia) ಎಂಬ ಪಾಚಿಯಲ್ಲಿ ಅತ್ಯಂತ ಹೆಚ್ಚಿನ ಸುಧಾರಿಸಿದ ಅಥವಾ ಮಾರ್ಪಾಟಾದ ಹಾಗೂ ವಿಕಾಸಹೊಂದಿದ ಬದಲಾವಣೆಗಳು ಕಂಡುಬರುತ್ತವೆ. ಆದರಲ್ಲಿ 'ಸ್ಪರ್ಮೇಷಿಯಂ' ಅಥವಾ 'ಅಚಲ ರೇತ್ರಾಣು' (Spermatium) ಎಂದು ಕರೆಯಲ್ಪಡುವ ಗಂಡುಪ್ರತ್ಯುತ್ಪತ್ತಿ ಜನನಾಂಗವು ಚಲಿಸುವುದಿಲ್ಲ. ಈ 'ಸ್ಪರ್ಮೇಷಿಯ' ಎಂಬ ಜನನಾಂಗಗಳು ಅಸಂಖ್ಯ ಪ್ರಮಾಣದಲ್ಲಿ ಬಿಡುಗಡೆಯಾಗಿ, ಹೆಣ್ಣು ಜನನಾಂಗದ ಕಡೆಗೆ ನೀರಿನ ಪ್ರವಾಹದೊಡನೆ ತೇಲಿಹೋಗುತ್ತವೆ. ಹಾಗೆ ನೋಡಿದರೆ, ಪಾಚಿಗಳ ಮಟ್ಟಿಗೆ ಹೇಳುವಾಗ ಲಿಂಗಭೇದದ ವಿಕಾಸದಲ್ಲಿ ಒಂದು ಕ್ರಮಬದ್ಧವಾದ ರೀತಿ, ಹಂತ ಮತ್ತು ವ್ಯವಸ್ಥೆ ಅಷ್ಟಾಗಿ ಕಂಡುಬರುವುದಿಲ್ಲ. ಈ ವಿಕಾಸವು ಹಸಿರು, ಕಂದು ಮತ್ತು ಕೆಂಪು ಪಾಚಿಗಳಲ್ಲಿ ಸ್ವತಂತ್ರವಾಗಿ ಸಾಗಿದೆಯೆಂದು ತೋರುತ್ತದೆ. ಇದನ್ನು ಸಿದ್ಧಮಾಡುವ ನಿದರ್ಶನವೊಂದನ್ನು 'ಕ್ಲಾಮಿಡೊಮೊನಾಸ್' (Chlamydomonas) ಎಂಬ ಕೆಳವರ್ಗದ ಪಾಚಿಯ ವಿವಿಧ ಪ್ರಭೇದಗಳ ಜೀವನ ಚಕ್ರದಲ್ಲಿಯೇ ಕಾಣಬಹುದು: ಉದಾ:— 'ಕ್ಲಾಮಿಡೊಮೊನಾಸ್ ಸ್ನೊವೀ' (Chlamydomonas Snowiae) ಎಂಬುದರಲ್ಲಿ 'ಸಮರೂಪ (ಸಾದೃಶ) ಸಂಯೋಗ' (Isogamy) 'ಕ್ಲಾ. ಬ್ರಾನಿಯೆಯ್ಯೆ' (C. braunii) ಎಂಬುದ

ರಲ್ಲಿ 'ಅಸಮರೂಪ (ಅಸಾದೃಶ) ಸಂಯೋಗ' (Anisogamy) ಮತ್ತು 'ಕ್ಲಾ. ಕಾಕ್ಸಿಫೆರ'(C. Coccifera) ಎಂಬುದರಲ್ಲಿ 'ವಿಷಮಲಿಂಗತೆ' ಅಥವಾ 'ಭಿನ್ನರೂಪಸಂಯೋಗ' (Oogamy) ಎಂಬುವು ಗೋಚರವಾಗುತ್ತವೆ.

ಇಷ್ಟೆಲ್ಲ ನೋಡಿದಾಗ, ಲಿಂಗಭೇದವೆಂಬುದು (Sex) ಪರಿಸರದ ಸಂದರ್ಭ ಮತ್ತು ಒತ್ತಡಗಳ ಪರಿಣಾಮವಾಗಿ ರೂಪುಗೊಂಡಿತೆಂತಲೂ, ಲಿಂಗಾಣುಗಳು (Gametes) ಜಲಚರಜೀವಾಣು (Zoospores) ಎಂಬುವುಗಳಿಂದ ಉತ್ಪಾದನೆಗೊಂಡುವೆಂತಲೂ ಒಂದು ನಿರ್ಣಯಕ್ಕೆ ಬರಬಹುದು. ಲಿಂಗಾಣುಗಳ ರೂಪುಗೊಳ್ಳುವಿಕೆಯಲ್ಲಿ ಮೊದಲ ಹಂತವು ಸಮರೂಪದ ಸಂಯೋಗ(Isogamy) ವೆಂತಲೂ ಅದು ಕ್ರಮೇಣ ಅಸಮರೂಪ ಸಂಯೋಗಕ್ಕೆ (Anisogamy) ಎಡೆ ಮಾಡಿಕೊಟ್ಟಿತೆಂತಲೂ, ಅಲ್ಲಿಂದ ಮುಂದೆ ಭಿನ್ನರೂಪಸಂಯೋಗ ಅಥವಾ ವಿಷಮಲಿಂಗತೆ (Heterogamy or Oogamy) ಎಂಬುದರಲ್ಲಿ ಪರ್ಯವಸಾನವಾಯಿತು ಎಂತಲೂ ಈಗ ಭಾವಿಸಲಾಗಿದೆ. ಈ ವಿಷಮಲಿಂಗತೆ ಅಥವಾ ಭಿನ್ನರೂಪಸಂಯೋಗಸ್ಥಿತಿ ಅಥವಾ ಹಂತದಲ್ಲಿ, ಕಷ್ಟಕಾಲಕ್ಕೆ ಹಾಗೂ ಮುಂದಿನ ಬೆಳವಣಿಗೆಗೆ ಹೆಚ್ಚು ಆಹಾರ ಸಂಗ್ರಹಿಸಿಟ್ಟುಕೊಳ್ಳಲು ಹೆಣ್ಣು ಜನನಾಂಗವು ಗಾತ್ರದಲ್ಲಿ ಹಿಗ್ಗಿತು. ಆದರೆ ಗಂಡುಜನನಾಂಗವು ಅಸಂಖ್ಯ ಹಾಗೂ ಕ್ರಿಯಾಶೀಲವಾದ ಚಿಕ್ಕ ಚಿಕ್ಕ ಲಿಂಗಾಣುಗಳನ್ನು ಉತ್ಪಾದಿಸಿತು. ಇದರಿಂದ ಗರ್ಭಾಂಕುರತೆ ನಿಶ್ಚಿತವಾಗಿ ನಡೆಯುವಂತೆ ಆಯಿತು ಹೆಣ್ಣು ಲಿಂಗಾಣು ಅಥವಾ ಅಂಡಾಣು (ಡಿಂಬಾಣು) ತನ್ನ ಚಲನಶಕ್ತಿಯನ್ನು ಕಳೆದುಕೊಂಡುದುದು, ಶಕ್ತಿಹ್ರಾಸವನ್ನು ಕಡಿಮೆ ಮಾಡುವ ಮತ್ತು ಗರ್ಭಾಂಕುರತೆಯನ್ನು ನಿಶ್ಚಿತಗೊಳಿಸುವ ಉದ್ದೇಶಗಳಿಂದಲೇ ಆಗಿರಬಹುದು.

ಗರ್ಭಾಂಕುರತೆಯ ಫಲವಾಗಿ ರೂಪುಗೊಳ್ಳುವ ಹೊಸ ಜೀವಿಗೆ ಯುಗ್ಮಜ ಅಥವಾ 'ಯುಗ್ಮಾಣುಜೀವಿ' (Zygote) ಎನ್ನುವುದುಂಟು. ಅದಕ್ಕೆ ದಪ್ಪವಾದ ವಿಶೇಷ ರಕ್ಷಣಾಹೊದಿಕೆಯೂ ಉಂಟು. ಅಂದಮೇಲೆ ಪಿತೃಸಮಾನವಾದ ಗಂಡು ಸಂತತಿಯು (Paternity, ಅನೇಕ ವೀರ್ಯಾಣು ಅಥವಾ ರೇತ್ರಾಣು ಅಥವಾ ಪುರುಷಾಣು (Antherozoids) ಗಳನ್ನು ಉತ್ಪಾದಿಸುವುದರ ಮೂಲಕ ಗರ್ಭಾಂಕುರತೆಯನ್ನು ನಿಶ್ಚಿತಗೊಳಿಸಿದೆ. ಅದರಂತೆ ಮಾತೃಸಮಾನವಾದ ಹೆಣ್ಣು ಸಂತತಿಯೂ (Maternity) ಇದರಲ್ಲಿ ಹಿಂದೆ ಬಿದ್ದಿಲ್ಲ. ಯುಗ್ಮಜ ಅಥವಾ ಭ್ರೂಣ ಅಥವಾ ಮುಂದಿನ ಸಂತತಿಯನ್ನು ರಕ್ಷಿಸುವುದರ ಮೂಲಕವೂ ಅದಕ್ಕೆ ಆಹಾರ ಪೂರೈಸಿ ಬೆಳಸುವುದರ ಮೂಲಕವೂ ಅದು ತನ್ನ ಕಾರ್ಯ ನಿರ್ವಹಿಸುತ್ತದೆ.

ಇದರಿಂದ, ಸಸ್ಯಜಗತ್ತಿನಲ್ಲಿ ಲೈಂಗಿಕ ರೀತಿಯ ಪುನರುತ್ಪತ್ತಿಯು ನಿರ್ಲಿಂಗ ರೀತಿಯ ಪುನರುತ್ಪತ್ತಿಯನ್ನು ಅಳಿಸಿಹಾಕದೆ ಪರಸ್ಪರ ಪೂರಕ,

ಪೋಷಕವಾಗಿರುವಂತೆ ಕಂಡುಬರುವುದು ಒಂದು ಗಮನಾರ್ಹ ವಿಷಯ. ಏನೇ ಆದರೂ, ಲೈಂಗಿಕ ಪುನರುತ್ಪತ್ತಿಗೆ ತನ್ನದೇ ಆದ ವಿಶಿಷ್ಟ ಅನುಕೂಲಗಳೂ ಇವೆ. ೨ ಲಿಂಗಾಣುಗಳು ಕಲೆತು ಸಂಯೋಗಹೊಂದಿ ಯುಗ್ಮಜೀವಾಣು ನಿರ್ಮಾಣ ವಾದಾಗ ಮತ್ತು ಮುಂದೆ ಅದು ಒಂದು ಹಂತದಲ್ಲಿ ಸಂಖ್ಯಾಕ್ಷೀಣವಿಭಜನೆ ಹೊಂದುವಾಗ (Reduction or Meiotic division), ವರ್ಣತಂತುಗಳ ಕಲೆತ (Fusion) ಮತ್ತು ಪುನರ್ವಿಂಗಡಣೆ ಸಾಧ್ಯವಾಗುತ್ತದೆ. ಇದರಿಂದ ವಂಶ ವಾಹಿಗಳ ಹೊಸ ಹೊಸ ಬಗೆಯ ಸಂಯೋಜನೆಯುಂಟಾಗಿ, ತನ್ಮೂಲಕ ಹೊಸ ಹೊಸ ರೀತಿಯ ಆನುವಂಶಿಕ ಗುಣಗಳು ರೂಪುಗೊಳ್ಳುತ್ತವೆ. ಹೀಗಾಗಿ ನಿರ್ಲಿಂಗರೀತಿಯ ಪುನರುತ್ಪತ್ತಿಯು ಜೈವಿಕ ಹಾಗೂ ದೈಹಿಕ ಸಮರೂಪತೆ ಅಥವಾ ಏಕತೆಯನ್ನು ಕಾಯ್ದುಕೊಂಡು ಬಂದಿದ್ದರೆ, ಲೈಂಗಿಕ ಪುನರುತ್ಪತ್ತಿಯು ಆನುವಂಶಿಕವಾಗಿ ಸಾಗುವ ವಿಭೇದಗಳನ್ನೊಳಗೊಂಡ (Heritable variations) ಭಿನ್ನತೆಯನ್ನೂ ಕಾಯ್ದುಕೊಂಡು ಬಂದಿದೆ. ಇದರಿಂದ ವಿಕಾಸದ ವಿಧಾನ ಹಾಗೂ ದಿಶೆಯಲ್ಲಿ ಮುನ್ನೋಟ ಮತ್ತು ವೇಗೋತ್ಕರ್ಷ ಉಂಟಾಗುವುದು ಸಾಧ್ಯವಾಗಿದೆ.

[ಸಾಧಾರ]

★ ಎಂ. ಎಸ್. ಎಸ್. ರಾವ್

ಇಂದ್ರಿಯೆಂಬ ಅಪ್ಸರೆ
(ಉತ್ತರ ಕನ್ನಡ ಜಾನಪದ ಕಥೆ)

ಕುಚ್ಚಿನಾಡ ಸೀಮೆಯ ರಾಜನು ಹಾಲಕ್ಕಿ ಗೌಡರ ಮನೆತನದವನು. ಅವನ ಹೆಸರು ಬೈರಗೌಡ. ಅವನ ವಂಶದವರು ರಾಜರಾಗುವ ಮೊದಲು ರೈತರ ಹೋರೆಯನ್ನೇ ಮಾಡುತ್ತಿದ್ದರು. ಅವನು ರಾಜನಾದಮೇಲೆಯೂ ರೈತ-ಕಸಬಿನಲ್ಲಿ ಒಳ್ಳೇ ಲಕ್ಷ್ಯ ಹಾಕುತ್ತ, ಬೇಸಾಯದ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದನು.

ರಾಜನ ಮೂವರು ಮಕ್ಕಳಲ್ಲಿ ಹಿರಿಯವನು ಜಕ್ಕಣ್ಣ; ಎರಡನೆಯವ ಸಿಂಗಣ್ಣ, ಮೂರನೆಯವನೇ ಹನುಮ.

ರಾಜನು ತಾನು ಮುದುಕನಾದ್ದರಿಂದ ತನ್ನ ಮಕ್ಕಳ ಬಲವನ್ನು ತಿಳಿದು ಅವರಿಗೆ ಯೋಗ್ಯ ಜವಾಬದಾರಿಯನ್ನು ವಹಿಸಿಕೊಡಬೇಕೆಂದು ನಿಶ್ಚಯ ಮಾಡಿದನು. ಒಬ್ಬೊಬ್ಬರನ್ನಾಗಿ ಕರೆಸಿ, "ನೀನು ಏನೇನು ಕೆಲಸ ಮಾಡಬಲ್ಲೆ ?" ಎಂದು ಕೇಳಿದನು. ಜಕ್ಕಣ್ಣನು, "ನಮ್ಮ ಜಮೀನು ಐನೂರು ಎಕರೆ ಉಂಟು. ನಮ್ಮ ಒಕ್ಕಲುಮಕ್ಕಳು ಕೆಲವು ಜಮೀನನ್ನು ಸರಿಯಾಗಿ ಸಾಗುವಳಿ ಮಾಡದೆ ಹಾಳುಕೆಡವುತ್ತಾರೆ. ಆದರಿಂದ ಹಾಳುಬಿದ್ದ ಉಪ್ಪರಮಕ್ಕಿ ಜಮೀನನ್ನು ನಾನು ಸ್ವತಃ ಸಾಗುವಳಿಗೆ ತೆಗೆದುಕೊಳ್ಳುತ್ತೇನೆ. ಹೊತ್ತುಹೊತ್ತಿಗೆ ಹೂಟಿ, ಬಿತ್ತನೆ ಇತ್ಯಾದಿ ಮಾಡಿದರೆ, ಎಷ್ಟು ಹೆಚ್ಚು ಉತ್ಪನ್ನ ತೆಗೆದುಕೊಳ್ಳಬಹುದು ಎಂಬುದನ್ನು ತೋರಿಸುತ್ತೇನೆ. ನಮ್ಮನ್ನು ಸಾಕಿ ಸಲಹುವ ಭೂಮಿತಾಯಿಯ ಸೇವೆ ಮಾಡುವಲ್ಲಿ ಆಲಸ್ಯ ತೋರಿಸಬಾರದು" ಎಂದನು. ತಾನೂ ಸ್ವತಃ ಉತ್ತಮ ಸಾಗುವಳಿದಾರನಾದ ರಾಜನಿಗೆ ಬಹಳ ಆನಂದವಾಯಿತು. "ಶಾಬಾಸ್, ಹುಟ್ಟಿದರೆ ಇಂಥ ಮಗ ಹುಟ್ಟಬೇಕು" ಎಂದು ಮಗನನ್ನು ಹೊಗಳಿದನು.

ಆಮೇಲೆ ತನ್ನ ಎರಡನೆಯ ಮಗ ಸಿಂಗಣ್ಣನನ್ನು ಕರೆದು "ನೀನು ಏನೇನು ಕೆಲಸ ಮಾಡಬಲ್ಲೆ?" ಎಂದು ಕೇಳಿದನು. ಸಿಂಗಣ್ಣನು, "ನಮ್ಮ ರಾಜ್ಯದಲ್ಲಿ ಅನೇಕ ಬೆಟ್ಟಬೇಣಗಳುಂಟು. ಅಲ್ಲದೆ ಮಹಾನವಮಿ ಬಯಲಿನಲ್ಲಿ ಬೇಕಾದಷ್ಟು ಹುಲ್ಲುಗಾವಲುಂಟು—ನಮ್ಮ ದನ-ಕರು ಸಂಪತ್ತನ್ನು ಬೆಳೆಸಲಿಕ್ಕೆ ತುಂಬಾ ಅವಕಾಶವಿದೆ—ಇನ್ನೂ ಎರಡು ಕೊಟ್ಟಿಗೆ ಕಟ್ಟಿಸಿ, ನಾಲ್ಕು ಕೊಟ್ಟಿಗೆ ತುಂಬ ಎಮ್ಮೆಗಳನ್ನು ಸಾಕಿ, ಅವುಗಳ ಹಾಲನ್ನು ತುಪ್ಪಮಾಡಿ, ದಿನದಿನವೂ ದೂರದ ಊರುಗಳಿಗೆ ಮಾರಾಟಮಾಡಲಿಕ್ಕೆ ಕಳಿಸುತ್ತೇನೆ" ಎಂದನು. "ಶಾಬಾಸ್ ಮಗನೇ, ಹಾಲು, ಮಜ್ಜಿಗೆ, ತುಪ್ಪ ನಮಗೆ ಮಾತ್ರವಲ್ಲ; ನಮ್ಮ ಪ್ರಜೆಗಳಿಗೂ ಬೇಕಷ್ಟು ದೊರೆಯಬೇಕು. ಇದು ಅವಶ್ಯವಾಗಿ ಮಾಡಬೇಕಾದ ಕೆಲಸ" ಎಂದು

ಹೊಗಳಿದನು. ಆಮೇಲೆ ಮೂರನೆಯ ಮಗ ಹನುಮನನ್ನು ಕರೆಸಿ ವಿಚಾರ ಮಾಡಿದನು.

ಅವನು "ಅಪ್ಪಾ, ಹೊಲಮನೆ ನೋಡಿಕೊಳ್ಳಲಿಕ್ಕೆ ಹಿರಿ ಅಣ್ಣನಿದ್ದಾನೆ. ದನಕರು ನೋಡಿಕೊಳ್ಳಲಿಕ್ಕೆ ನಿಂಗಣ್ಣನಿದ್ದಾನೆ. ಜಕ್ಕಣ್ಣನಿಗೆ ಒಕ್ಕಲತನ ಮಾಡುವುದಕ್ಕೆ ರಾಜದುರುಸು (ವೇಷಭೂಷಣ) ಬೇಡ. ನಿಂಗಣ್ಣನಿಗೆ ಸಹ ದನಕರುಗಳನ್ನು ನೋಡಿಕೊಳ್ಳಲಿಕ್ಕೆ ರಾಜದುರುಸು ಬೇಡ. ಆದರೆ ನನಗೆ ಮಾತ್ರ ರಾಜದುರುಸು ಬೇಕು. ಕಮರಿಟ್ಟಿನ ನಿಲುವಂಗಿ, ಚುರಮುರಿ ಕಾಲ ಮೆಟ್ಟು (ಚುರಮುರಿ ತಿನ್ನುವಾಗ ಆಗುವ ಶಬ್ದದಂತೆ ನಡೆಯುವಾಗ ಶಬ್ದ ಮಾಡುವ ಜೋಡು) ಆಗಬೇಕು. ರೇಶಿಮೆಯ ಗರ್ಭಸುತ್ತಿ ರುಮಾಲು, ಬೆಳ್ಳಿಯ ನಾಗಬೆತ್ತ ಮತ್ತು ಬಾರುಕೋಲಿನ ಪಟ್ಟಿಯಾಗಬೇಕು. ಬೆಳ್ಳಿಯ ಸುಣ್ಣದ ಕಾಯಿಯಿರುವ ವೀಳ್ಯ(ಕವಳ)ದ ಸಂಚಿಯಾಗಬೇಕು. ಈ ರೀತಿ ದುರುಸು ಹಾಕಿಕೊಂಡು, ನಾನು ಜರ್ಬಿನಿಂದ ದಿಕ್-ದೇಶ ತಿರುಗಿ, ಮಹಾ ಶೇಷನ ಮಗಳು ಮಾಕರ್ಣಿಯನ್ನೂ ದೇವೇಂದ್ರನ ಮಗಳು ಇಂದ್ರಿಯನ್ನೂ ಅಗ್ನಿಯ ಮಗಳು ಭೂದಂಡಿಯನ್ನೂ ಮದುವೆಯಾಗಿ ಬರುತ್ತೇನೆ" ಎಂದು ಹೇಳಿದನು.

ರಾಜನಿಗೆ ಸಿಟ್ಟುಬಂತು. "ಅಣ್ಣಂದಿರು ದುಡಿದ ಸಂಪತ್ತನ್ನು ಧೂಳು ಗೇರಿ ಹಾಳುಮಾಡಲಿಕ್ಕೆ ಹುಟ್ಟಿದ ಧರ್ವೇಳಿ (ಹಾಳುಮೂಳ) ನೀನು. ನೀನು ಇರುವುದಕ್ಕಿಂತ ಸತ್ತರೇ ಒಳ್ಳೇದು" ಎಂದು ಹೇಳಿ ಕೊಲೆಗಡಿಕರನ್ನು ಕರೆಸಿ ಹನುಮನ ತಲೆಹೊಡೆದು ಕುರುಹು ತನ್ನಿ" ಎಂದು ಹೇಳಿದ್ದಲ್ಲದೆ ಒಂದು ಲಂಗೋಟಿಯನ್ನು ಮಾತ್ರ ಇಡಿಸಿ, ಅವನು ಬಿಟ್ಟ ವಸ್ತ್ರಗಳನ್ನೆಲ್ಲಾ ತೆಗೆಸಿ ಕಳಿಸಿದನು. ರಾಜನ ಸಿಟ್ಟಿಗೆ ಅಂಜಿ ಯಾರೂ ಅವನ ಎದುರಿಗೆ ಮಾತಾಡಲಿಕ್ಕೆ ಧೈರ್ಯ ಮಾಡಲಿಲ್ಲ.

ಹನುಮನ ತಾಯಿಯು ಈ ಶಿಕ್ಷೆಯನ್ನು ಕೇಳಿ, ಕೊಲೆಗಡಿಕರನ್ನೂ ಮಗ ನನ್ನೂ ಅಂತಃಪುರದ ಹಿಂಬಾಗಿಲಿನಿಂದ ಕರೆಸಿದಳು. "ಮಗನೇ, ದುಡುಕಿ ಏನೇನೋ ಹೇಳಿ ಕಷ್ಟ ತಂದುಕೊಂಡೆಯಲ್ಲ. ನಿನ್ನ ಪ್ರಾರಬ್ಧಕರ್ಮ. ದಾರಿ ಯಲ್ಲಿ ನಿನಗೆ ಬುತ್ತಿಯು ಸಹಾಯಕ್ಕೆ ಇರಲಿ" ಎಂದು ಹೇಳಿ ಅನ್ನ ಪಲ್ಲೆ ಹಾಕಿ ಬುತ್ತಿಗಂಟನ್ನು ಕಟ್ಟಿದಳು. ರೊಟ್ಟಿ ಮಾಡುವಾಗ, ರೊಟ್ಟಿಗಳೊಳಗೆ ಹೊನ್ನು ಇಟ್ಟು ರೊಟ್ಟಿ ಬರೆದು, "ಮುಂದೆ ನಿನ್ನ ಖರ್ಚಿಗೆ ಬೇಕಾದಾಗ ಇವನ್ನು ಉಪಯೋಗಿಸಿಕೋ" ಎಂದು ಹೇಳಿ ರೊಟ್ಟಿ ಸುಟ್ಟುಕೊಟ್ಟಳು. ಅವನ ಅಣ್ಣಂದಿರ ಹೆಂಡಿರು ತಾವು ಉಟ್ಟ ಸೀರೆಗಳನ್ನು ಹರಿದು ಅವನಿಗೆ ಉಡಲಿಕ್ಕೂ ತೊಡಲಿಕ್ಕೂ ಕೊಟ್ಟರು. ಹನುಮನು ದಾರಿಯಲ್ಲಿ "ಸಾಯಲಿಕ್ಕೆ ಹೊರಟವನಿಗೆ ಊಟವೇಕೆ? ನಾಣ್ಯವೇಕೆ?" ಎಂದು ಅವನ್ನೆಲ್ಲ ಕೊಲೆಗಡಿಕರಿಗೆ ಕೊಟ್ಟನು.

ಅವರು ಕರುಣೆಹೊಂದಿ, ಅಡವಿಯ ಬೆಟ್ಟಹೊನ್ನೆಮರದ ರಸವನ್ನು ಕತ್ತಿಗಳಿಗೆ ಲೇಪಿಸಿಕೊಂಡು, ರಾಜನಿಗೆ ಕುರುಹನ್ನು ತಂದು ತೋರಿಸಿದರು. ರಾಜನು, "ರಾಜ್ಯಕ್ಕೆ ಬಂದ ಒಂದು ಮಾರಿ ಹೋಯಿತು" ಎಂದು ಹೇಳಿ ಕೊಲೆಗಡಿಕರಿಗೆ ಸಂಭಾವನೆ ಕೊಡಿಸಿ ಕಳಿಸಿದನು.

ಹನುಮನು ಅಡವಿಯಲ್ಲಿ ಕಾಲುದಾರಿ ಸಿಕ್ಕ ಕಡೆಗೆ ಮುಂದೆ ಹೋದನು. ಒಂದು ಬೇಣದಲ್ಲಿ ಒಬ್ಬ ಅಜ್ಜಿಯು ಗುಡಿಸಲು ಕಟ್ಟಿಕೊಂಡು ಇದ್ದಳು. ಅವಳು ಮಾಟಗಾತಿಯಾಗಿದ್ದಳು. ದನಗಳನ್ನು ಸಾಕಿಕೊಂಡು ಅವನ್ನು ಬೆಟ್ಟ-ಬೇಣಗಳಲ್ಲಿ ಮೇಯಿಸುತ್ತ ತಿರುಗುತ್ತಿದ್ದಳು. ಅವಳು ಇವನನ್ನು ನೋಡಿ, "ಎಲಾ ಮೊಮ್ಮಗನೇ, ಈ ಬೆಟ್ಟದಡವಿಯಲ್ಲಿ ನೀನು ಎಲ್ಲಿಂದ ಬಂದೆ?'' ಎಂದು ಕೇಳಿದಳು. "ಅಜ್ಜವ್ವ, ನಾನು ರಾಜನ ಮಗನಾಗಿ ಬೆಳೆದೆ. ಹೀಗಿದ್ದ ಸಂಗತಿ ಹೀಗಾಯಿತು (ಎಂದು ತನ್ನ ವಿಷಯವನ್ನು ಹೇಳಿ), ಕೊಲೆಗಡಿಕರು ಕರುಣೆಯಿಂದ ಬಿಟ್ಟದ್ದರಿಂದ ಈ ಅಡವಿಯಲ್ಲಿಯಾದರೂ ಇದ್ದೇನೆ. ಈ ಅಡವಿಯಲ್ಲಿ, ಅಜ್ಜವ್ವಾ, ನಿನಗೆ ತಿರುಗಲಿಕ್ಕೆ ಹೆದರಿಕೆಯಾಗುವದಿಲ್ಲವೋ?" ಎಂದು ಕೇಳಿದ ಹನುಮ.

"ಮಗನೇ, ಅಡವಿಯ ಹುಲಿ, ಮಿಕ, ಕಾಡಾನೆಗಳೂ ಕೂಡ ನನ್ನ ಮಾಯದ ಬಲೆಯ ಪ್ರಭಾವದಿಂದ ನಾನು ಹೇಳಿದ ಹಾಗೆ ಕೇಳುತ್ತವೆ. ನೀನು ನನ್ನ ಸಂಗಡ ಇಲ್ಲಿಯೇ ಇದ್ದುಬಿಡು. ದನಗಳ ಗೋಲಿಗಳನ್ನು ಅಡವಿಯಲ್ಲಿ ಮೇಯಿಸಿಕೊಂಡು, ಅಜ್ಜವ್ವನ ಅಂಬಲಿಯನ್ನು ಉಂಡುಕೊಂಡು ಇಲ್ಲಿಯೇ ಇರು" ಎಂದಳು. ಅವನು, "ನನಗೆ ಬೇಸರವಾದಾಗ ಅಡವಿ ತಿರುಗಿ ಜೇನು ಹಿಡಿಯುತ್ತೇನೆ—ಹೆಣ್ಣುಚಿಗರೆಗಳನ್ನು ಕಟ್ಟಿಹಾಕಿ, ಅವುಗಳ ಹಾಲನ್ನು ಹಿಂಡುತ್ತೇನೆ. ನಾರಿನ ಹಗ್ಗದ ಬಲೆ ನೆಯ್ದು, ಮೊಲಗಳ ಬೇಟೆಯಾಡುತ್ತೇನೆ" ಎಂದನು.

ಅಜ್ಜಿ ದನಗಳನ್ನು ಹೊಡೆದುಕೊಂಡು ಮೊಮ್ಮಗನೊಡನೆ ಮನೆಗೆ ಹೋದಳು. ಕೊಟ್ಟಿಗೆಯಲ್ಲಿ ಒಂದು ದನವನ್ನು ಕಟ್ಟಿ, ತನ್ನ ದೊಣ್ಣೆಯನ್ನು ನೆಲಕ್ಕೆ ಜಪ್ಪಿದಳು. ಆಗ ತಂತಾನೆ ಎಲ್ಲ ದನಗಳೂ ಕಟ್ಟಿಕೊಂಡು ನಿಂತವು. ಒಲೆಗೆ ಬೆಂಕಿಹಚ್ಚಿ, ಪಾತ್ರೆಯನ್ನು ಒಲೆಯ ಮೇಲೆ ಇಟ್ಟು ಅದನ್ನು ದೊಣ್ಣೆಯಿಂದ ಮುಟ್ಟಿದಾಗ ಊಟದ ಪದಾರ್ಥಗಳು ಬೇರೆ ಬೇರೆ ತಯಾರಾದವು.

ಅಜ್ಜವ್ವನು ಮೊಮ್ಮಗನಿಗೆ ಕಾಡುಬಾಳೆಯೆಲೆಯನ್ನು ನೀಡಿ ಊಟಕ್ಕೆ ಬಡಿಸಿದಳು. "ಮೊಮ್ಮಗನೇ, ನೀನು ಅಡವಿಯಲ್ಲಿ ಯಾವ ದಿಕ್ಕಿಗೆ ಹೋಗುವದಾದರೂ ಹೋಗು. ಆದರೆ ಪೂರ್ವದಿಕ್ಕಿಗೆ ಮಾತ್ರ ಹೋಗಬೇಡ" ಎಂದು ಹೇಳಿದಳು. ಕಾಡುಪ್ರಾಣಿಗಳ ಗರ್ಜನೆ ಕೇಳುತ್ತ ಹನುಮ ಗುಡಿಸಿಲಿನಲ್ಲಿ ಮಲಗಿದನು. ಬೆಳಿಗ್ಗೆ ಅಜ್ಜವ್ವನು ಎತ್ತುಗಳನ್ನು ಅಡವಿಯಲ್ಲಿ ಬಿಡುವದಕ್ಕೆ

ಕೊಟ್ಟಿಗೆಗೆ ಹೋಗಿ, ಒಂದು ಎತ್ತಿನ ದಾಬು ಕಳಚಿ, ದೊಣ್ಣೆಯನ್ನು ನೆಲಕ್ಕೆ ಜಪ್ಪಿದಳು. ಎಲ್ಲ ಎತ್ತುಗಳ ಕೊರಳೊಳಗಿನ ದಾಬು ಕಳಚಿ, ಅವು ಮೇಯಲಿಕ್ಕೆ ಹೊರಟವು. ಅಜ್ಜವ್ವನು ಅವುಗಳಲ್ಲಿ ಬುದ್ಧಿವಂತ ಎತ್ತಿನ ಬಾಲಕ್ಕೆ ದೊಣ್ಣೆಯನ್ನು ಕಟ್ಟಿ ಕಳಿಸಿದಳು.

ಬುದ್ಧಿವಂತ ಎತ್ತಿನ ಹಿಂದೆ ಉಳಿದ ಎತ್ತುಗಳು ಮೇಯಲಿಕ್ಕೆ ಹತ್ತಿದವು. ಹನುಮನು "ಅಜ್ಜಿ 'ಪೂರ್ವದಿಕ್ಕಿಗೆ ಹೋಗಬೇಡ' ಎಂದಿದ್ದಾಳೆ. ಆದರೆ ಪೂರ್ವಕ್ಕೆ ಹೋದರೆ ಏನಾಗುತ್ತದೆಯೆಂದು ಹೇಳಲಿಲ್ಲ. ನನಗೆ ಅದು ತಿಳಿಯಬೇಕಾದರೆ ನಾನೇ ಹೋಗಿ ನೋಡಬೇಕು. ಇದಕ್ಕೆಲ್ಲಾ ಹೆದರಿಕೊಂಡು ಹೇಡಿಯಾಗಿ ಕುಳಿತರೆ, ನಾನು ಮಹಾಶೇಷನ ಮಗಳು ಮಾಕರ್ಣಿಯನ್ನೂ ಇಂದ್ರನ ಮಗಳು ಇಂದ್ರಿಯನ್ನೂ ಅಗ್ನಿಯ ಮಗಳು ಭೂದಂಡಿಯನ್ನೂ ಮದುವೆಯಾಗುವದು ಹೌದೋ...? ಪೂರ್ವದಿಕ್ಕಿಗೇ ಹೋಗಿ ನೋಡಬೇಕು" ಎಂದು ಪೂರ್ವಕ್ಕೇ ಹೋದನು. ದೂರ ನಡೆದು ದಣಿವಾಗಿ, ಒಂದು ಅಶ್ವತ್ಥ ಕಟ್ಟೆಯ ಮೇಲೆ ಕೂತನು.

ಅಲ್ಲಿಯೆ ಸಮೀಪದಲ್ಲಿ ಒಂದು ದೊಡ್ಡ ಮಡಗವಿತ್ತು. ಅದರ ನೀರು ಬಹಳ ತಿಳಿಯಾಗಿತ್ತು. ಅಲ್ಲದೆ ಆ ದಿಕ್ಕಿನಲ್ಲಿ ಜನರ ಸಂಚಾರವಿರಲಿಲ್ಲ. ಆದರಿಂದ ಅಲ್ಲಿಗೆ ಮಹಾಶೇಷನ ಮಗಳು ಮಾಕರ್ಣಿ, ಇಂದ್ರನ ಮಗಳು ಇಂದ್ರಿ, ಅಗ್ನಿಯ ಮಗಳು ಭೂದಂಡಿ ಈ ಮೂವರೂ ಜಲಕ್ರೀಡೆಗೆ ಬರುತ್ತಿದ್ದರು.

ಅವರು ತಮ್ಮ ದೇವಾಂಗ(ವಸ್ತ್ರ)ಗಳನ್ನು ಕಳಚಿ ಗಿಡದ ಬಳಿಗಿಟ್ಟು, ನಿರ್ವಾಣಸ್ವರೂಪದಲ್ಲಿ ಮಡಗದಲ್ಲಿಳಿದು, ನೀರಿನಲ್ಲಿ ಈಸಾಡುತ್ತಿದ್ದರು. ಒಬ್ಬರಿಗೊಬ್ಬರು ನೀರನ್ನು ತೂರಾಡುತ್ತಿದ್ದರು. ಅಶ್ವತ್ಥಕಟ್ಟೆಯಿಂದ ಹನುಮನು ಇದನ್ನೆಲ್ಲ ನೋಡಿ, "ಇವರೇ ನನಗೆ ಬೇಕಾದವರು" ಎಂದು ತಿಳಿದನು. (ಅವನಿಗೆ ಅನೇಕ ರಾತ್ರಿಗಳಲ್ಲಿ ಈ ಸುಂದರಿಯರು ಸ್ವಪ್ನಗಳಲ್ಲಿ ಕಾಣುತ್ತಿದ್ದರು.)

ಹನುಮನು ಒಂದು ದೇವಾಂಗವನ್ನು ತೆಗೆದುಕೊಂಡು ಓಡಿದನು. ಅದನ್ನು ನೋಡಿ, "ಅಕೋ ಅಕೋ, ನರಮನುಷ್ಯನು ದೇವಾಂಗವನ್ನು ಕದ್ದುಕೊಂಡು ಓಡಿಹೋಗುತ್ತಾನೆ" ಎಂದು ಮಾಕರ್ಣಿಯೆಂದಳು.

ಇಂದ್ರಿಯು ಇದ್ದ ರೂಪದಲ್ಲಿಯೇ ಓಡಿ ಅವನ ಬೆನ್ನಿಗೆ ಬಂದಳು. ಅವನು ತೆಗೆದುಕೊಂಡಿದ್ದು ಇಂದ್ರಿಯ ದೇವಾಂಗವಾಗಿತ್ತು. ಅವಳು "ನಾನು ನಿನ್ನ ತಾಯಿಯ ಹಾಗೆಯೇ ಇದ್ದೇನೆ. ನಿನ್ನ ತಾಯಿಯನ್ನು ಈ ಅವಸ್ಥೆಯಲ್ಲಿ ಬಿಡುತ್ತೀಯಾ?" ಎಂದಳು. ಆದರೆ ಹನುಮನು ತಿರುಗಿ ನೋಡಲಿಲ್ಲ, ಅವಳ ದೇವಾಂಗವನ್ನು ಕೊಡಲಿಲ್ಲ.

"ನಾನು ನಿನ್ನ ಹೆಂಡತಿಯಂತಿದ್ದೇನೆ. ನನ್ನ ದೇವಾಂಗವನ್ನು ಕೊಡು" ಎಂದಾಗ ಅವನು ತಿರುಗಿ ನೋಡಿದನು. ಅವಳು ಅವನನ್ನು ಕಲ್ಲಾಗಿ ಮಾಡಿದಳು.

ಬುದ್ಧಿವಂತ ಎತ್ತು ಉಳಿದ ದನಗಳನ್ನು ಸಂಜೆಗೆ ಕರೆದುಕೊಂಡು ಅಜ್ಜಿಯ ಬೇಣಕ್ಕೆ ಹೋಯಿತು. ಅಜ್ಜಿ ''ನನ್ನ ಮೊಮ್ಮಗ ಬರಲಿಲ್ಲ. ಮಾತು ಮೀರಿ, ಪೂರ್ವದಿಕ್ಕಿಗೆ ಹೋದ" ಎಂದು ಹೇಳಿ ದನವನ್ನು ಕಟ್ಟಿಹಾಕಿ ತನ್ನ ದೊಣ್ಣೆಯನ್ನು ನೆಲಕ್ಕೆ ಜಜ್ಜಿದಳು. ಉಳಿದ ದನಗಳೂ ಕಟ್ಟಿ ನಿಂತವು. ಆಮೇಲೆ ಊಟದ ಶಾಸ್ತ್ರ ಮಾಡಿದಳು. ಮಲಗಿಕೊಂಡಳು.

ನಸುಕಿನಲ್ಲಿದ್ದು ಕಸಗೋಮಯ ಮಾಡಿ, ಮನೆವಾರ್ತೆ ಮುಗಿಸಿ, ದನಗಳನ್ನು ಹೊಡೆದುಕೊಂಡು ಪೂರ್ವದಿಕ್ಕಿಗೆ ಹೋದಳು. ದಾರಿಯಲ್ಲಿ ಒಂದು ಕಲ್ಲಿನ ಆಕೃತಿ ಹತ್ತಿರ ಹೋದ ಹಾಗೆ ಮನುಷ್ಯನ ರೂಪ ಕಾಣುತ್ತದೆ. "ತನ್ನ ಮೊಮ್ಮಗನನ್ನು ಯಾರೋ ಕಲ್ಲುಮಾಡಿ ಹಾಕಿದ್ದಾರೆ. ಅಪ್ಸರೆಯ ಕೆಲಸ ಇದು" ಎಂದುಕೊಂಡು ತನ್ನ ದೊಣ್ಣೆಯಿಂದ ಕಲ್ಲಿಗೆ ಜಪ್ಪಿದಳು. ಕೂಡಲೇ ಮೊಮ್ಮಗನು ನಿದ್ರೆಯಿಂದ ಎದ್ದಹಾಗೆ ಎದ್ದು ಕುಳಿತನು.

"ಮಗನೇ, ಪೂರ್ವದಿಕ್ಕಿಗೆ ಹೋಗಬೇಡವೆಂದರೂ ಹೋದೆ. ಆದರೆ ಅಪ್ಸರೆಯ ಆಸೆಗೆ ಕಲ್ಲಾಗಿ ಕೂತು ತಪಸ್ಸು ಮಾಡುವೆಯಾ?" ಎಂದು ಕೇಳಿದಳು. "ಅಜ್ಜವ್ವಾ, ದೇವಲೋಕದ ಈ ಹೆಣ್ಣುಗಳನ್ನು ಮದುವೆಯಾಗುವೆನೆಂದು ಹೇಳಿದ ಕಾರಣದಿಂದ ನನ್ನ ತಲೆಯೇ ಛೇದವಾಗಿ ಹೋಗುತ್ತಿತ್ತು. ಅದು ತಪ್ಪಿ ನಿನ್ನ ಬಳಿ ಬಂದೆ. ಅಪ್ಸರೆಯರನ್ನು ಕಂಡ ಹಾಗಾಯಿತು. ಇನ್ನು ಮುಂದೆ ನಿನ್ನ ಮಂತ್ರ-ಮಾಟದ ಸಹಾಯವಿದ್ದರೆ ನಾನು ಅವರನ್ನು ವಶಮಾಡಿಕೊಂಡೇನು" ಎಂದನು ಹನುಮ.

"ದೇವತೆಗಳಿಗೆ ಮುಪ್ಪಿಲ್ಲ; ಮರಣವಿಲ್ಲ. ಅವರು ಮನುಷ್ಯರಿಗೆ ಮರುಳಾಗುವದಿಲ್ಲ. ಅವರು ಲೋಕದಲ್ಲಿ ನಿನ್ನನ್ನು ಸೇರಿಸಿಕೊಳ್ಳುವದಿಲ್ಲ" ಎಂದಳು.

"ನಿನಗೆ ನಾನು ಬದುಕಿರಬೇಕೆಂದಿದ್ದರೆ, ನೀನು ಸಹಾಯ ಮಾಡು."

"ನಾನು ನಿನಗೆ ನೀನು ಎಣಿಸಿದಂತೆ ಆಗುವ ಮೂರು ಕಲ್ಲುಹರಳು ಮಂತ್ರಿಸಿ ಕೊಡುತ್ತೇನೆ. ಅವರು ಜಲಕ್ರೀಡೆ ಮಾಡುವಾಗ, ಮಧ್ಯದ ದೇವಾಂಗವನ್ನು ಕದ್ದುಕೊಂಡು ಬಾ. ಹಿಂತಿರುಗಿ ಮಾತ್ರ ನೋಡಬೇಡ'' ಎಂದಳು ಮುದುಕಿ.

ಅಜ್ಜವ್ವ ಕೊಟ್ಟ ಮಂತ್ರಿಸಿದ ಹರಳುಗಳನ್ನು ತಕ್ಕೊಂಡು ಅವನು ಮದಗದ ಕಡೆಗೆ ಹೋದನು. ದೇವಾಂಗನೆಯರು ಮಧ್ಯಾಹ್ನ ಹನ್ನೆರಡು ಗಂಟೆಗೆ ವಸ್ತ್ರ ಕಳಚಿಟ್ಟು ನೀರಿನಲ್ಲಿಳಿದಿದ್ದರು. ಹನುಮನು ಮಧ್ಯದ ದೇವಾಂಗವನ್ನು ಎತ್ತಿಕೊಂಡು ಓಡಿದನು. ಆಗಲೂ ಇಂದ್ರಿ ಬೆನ್ನಹಿಂದೆ ಬಂದು, "ನಾನು ನಿನ್ನ ತಂಗಿಯಂತೆ. ನನ್ನ ದೇವಾಂಗವನ್ನು ಕೊಡು" ಎಂದಳು. ಅವನು ತಿರುಗಿ ನೋಡಲಿಲ್ಲ. "ನಿನ್ನ ಹೆಂಡತಿಯಂತೆ" ಎಂದಾಗಲೂ ತಿರುಗಿ ನೋಡಲಿಲ್ಲ. ದೇವಾಂಗವನ್ನು ಕೊಡಲಿಲ್ಲ. ಇಂದ್ರಿಯು ಅವನ ಬೆನ್ನ ಹಿಂದೆ ಬಂದಳು.

(ಅವನು ಹರಳು ಒಗೆದು ಮಾಡಿದ ಕಲ್ಲುರಾಶಿ, ಶೀಗೆಬಲೆ, ಸಮುದ್ರಗಳನ್ನು ಅವಳು ದಾಟಿಬರುತ್ತಾಳೆ.)

ಇಂದ್ರಿಯು ಅಜ್ಜವ್ವನ ಹತ್ತಿರ ಬಂದು, "ಅಜ್ಜವ್ವಾ, ದೇವಾಂಗವಿಲ್ಲದೆ ಬಂದರೆ, ನನ್ನನ್ನು ದೇವಲೋಕದಲ್ಲಿ ತೆಗೆದುಕೊಳ್ಳುವದಿಲ್ಲ. ನನ್ನ ದೇವಾಂಗ-ವನ್ನು ನಿನ್ನ ಮೊಮ್ಮಗನ ಕೈಯಿಂದ ಕೊಡಿಸು" ಎಂದು ಹೇಳಿದಳು. ಅಜ್ಜಿ "ಹಾಗಾದರೆ ನನ್ನ ಮೊಮ್ಮಗನ ಸಂಗಡ ಇಲ್ಲಿಯೇ ಇದ್ದುಬಿಡು" ಎಂದು ಹೇಳಿದಳು. ಇಂದ್ರಿ, "ಅಜ್ಜವ್ವಾ, ಮಾನ ಮುಚ್ಚಲಿಕ್ಕೆ ಸೀರೆಯನ್ನು ಮೊದಲು ಕೊಡಿಸು" ಎಂದಳು. ಅಜ್ಜವ್ವ ಹರಕು ಚಾಪೆಯನ್ನು ಕೊಟ್ಟಳು. ಇಂದ್ರಿಯು ಅದನ್ನೇ ಮಾಯದಿಂದ ಸೀರೆಯನ್ನು ಮಾಡಿ ಉಟ್ಟಳು.

ಇಂದ್ರಿಯು ಮಾಯದ ಶಕ್ತಿಯಿಂದ ಏಳುಪ್ಪರಿಗೆ ಮನೆಯನ್ನು ಕಟ್ಟಿದಳು. ಮರುದಿನ ಚೌರ(ಕ್ಷೌರ)ದವನು ಅರಸನ ಮನೆಗೆ ಆ ದಾರಿಯಿಂದ ಹೋಗು-ತ್ತಿದ್ದವನು ಆ ದೊಡ್ಡ ಮನೆಯನ್ನು ಕಂಡು ದಂಗಾಗಿಹೋದನು. "ಇದು ನಿನ್ನೆ ಇಲ್ಲಿ ಇರಲಿಲ್ಲ" ಎಂದುಕೊಂಡು ಕುತೂಹಲದಿಂದ ಆ ಮನೆಯ ಬಾಗಿಲಿನ ಹತ್ತಿರ ಬಂದನು. ಇಂದ್ರಿಯೂ ಹನುಮನೂ ಮಂಚದ ಮೇಲೆ ನಗುತ್ತ, ಮಾತಾಡುತ್ತ ಕುಳಿತಿದ್ದರು. ಇಂದ್ರಿಯ ಅಂದಚೆಂದವನ್ನೂ ರೂಪುಲಾವಣ್ಯ-ವನ್ನೂ ಕಣ್ಣುಗಳ ಬೆಳಕನ್ನೂ ನೋಡಿ ಅವನ ಕಣ್ಣು ಕುಕ್ಕಿದ ಹಾಗಾಗಿ, ಅವನು ಎಚ್ಚರತಪ್ಪಿಬಿದ್ದನು. ದಾಸಿಯು ಓಡಿಬಂದು, ಅವನ ಕಣ್ಣಿಗೆ ನೀರು ಹಚ್ಚಿ, ಬೀಸಣಿಕೆ ಬೀಸಿ ಅವನನ್ನು ಎಚ್ಚರಗೊಳಿಸಿದಳು.

ಹನುಮನು, "ಏನೋ ಚೌರಿಕಾ, ಯಾಕೆ ಎಚ್ಚರತಪ್ಪಿ ಬಿದ್ದೆ?" ಎಂದು ಕೇಳಿದನು. "ನಾನು ಹೊಗೆಸೊಪ್ಪಿನ ಕವಳ ಹಾಕಿದ್ದೆ. ಬಿಸಿಲಿನಲ್ಲಿ ಅದು ತಲೆಗೆ ಹತ್ತಿ ತಲೆತಿರುಗಿ ಬಿದ್ದೆ" ಎಂದು ಹೇಳಿದನು. "ಪಿತ್ತ ಹೆಚ್ಚಾಯಿತು. ಮನೆಗೆ ಹೋಗಿ ಮಲಗಿಕೊ" ಎಂದನು ಹನುಮ. ಕೆಲಸಿ (ಕ್ಷೌರಿಕ) ಗೆ ಸಿಟ್ಟುಬಂದು, "ಇವನಿಗೆ ಮದುವೆ ಮಾಡಿಸಬೇಕು" ಎಂದುಕೊಂಡು, ರಾಜನ ಮನೆಗೆ ಹೋದನು. "ಅರಸರೇ, ನಿಮ್ಮ ಅರಮನೆಯನ್ನು ಮೀರಿಸುವ ಅರಮನೆಯನ್ನು ಒಬ್ಬನು ಕಟ್ಟಿಸಿದ್ದಾನೆ. ಅವನ ಹೆಸರು ಹನುಮಗೌಡ. ಅವನ ಹೆಂಡತಿ ಒಬ್ಬಳಿದ್ದಾಳೆ. ಸಾಕ್ಷಾತ್ ಅಪ್ಸರೆ. ಅವಳನ್ನು ನೋಡಿದರೆ ಕಣ್ಣು ಕುಕ್ಕುತ್ತದೆ. ಅವಳು ನಿಮಗೆ ಸಲ್ಲತಕ್ಕ ಹೆಣ್ಣು. ಅವಳನ್ನು ನೀವು ಕರೆಸಿಕೊಂಡರೆ ಅವಳು ನಿಮ್ಮ ಹೆಂಡತಿಯಾಗುತ್ತಾಳೆ. ನಿಮ್ಮ ಮಗಳು ನನ್ನ ಹೆಂಡತಿಯಾಗಲಿ. ಆಗಬಹುದೊ?" ಎಂದು ಕೇಳಿದನು. ರಾಜನು "ಅವಳು ಅಂಥ ಸುಂದರಿಯಾದದ್ದೇ ಹೌದಾದರೆ, ನಾನು ನಿನ್ನ ಮಾತಿಗೆ ಒಪ್ಪುತ್ತೇನೆ" ಎಂದು ಹೇಳಿದನು. "ಇದಕ್ಕೆ ಏನು ಉಪಾಯ ಮಾಡೋಣ? ಅವಳನ್ನು ಬಲಾತ್ಕಾರವಾಗಿ ತಂದರೆ ಅಪಖ್ಯಾತಿ. ನೀನೇ ಉಪಾಯ ಹೇಳಿಕೊಡು" ಎಂದು ಮತ್ತೆ ಅರಸನು ಹೇಳಿದನು.

"ನೀವು ಹನುಮಗೌಡನನ್ನು ಕರಿಸಿ ಅವನು ಯಾರ ಒಪ್ಪಿಗೆಯಿಂದ ನಿಮ್ಮ ಅರಮನೆಯನ್ನು ಮೀರಿಸುವಷ್ಟು ದೊಡ್ಡ ಕಟ್ಟಡವನ್ನು ಕಟ್ಟಿಸಿದನೆಂದು ಜೋರುಮಾಡಿ, ಅವನ ಮೇಲೆ ಅಪರಾಧ ಹೊರಿಸಿ, ಅವನ ರುಂಡವನ್ನು ಹಾರಿಸುವೆನೆಂದು ಹೆದರಿಕೆ ಹಾಕಿ. ಅವನು 'ತಪ್ಪಾಯಿತು' ಎಂದು ಹೇಳಿದಾಗ, ನಿನ್ನ ತಪ್ಪನ್ನು ಕ್ಷಮಿಸಬೇಕಾದರೆ, ಪಾತಾಳದ ಮಹಾಶೇಷನ ಮನೆಯಲ್ಲಿದ್ದ ಘೋರ ವಿಷದ ಕರಡಿಗೆಯನ್ನು ಎಂಟು ದಿನಗಳಲ್ಲಿ ತೆಗೆದುಕೊಂಡು ಬಾ ಎನ್ನಿರಿ. ಅಲ್ಲದಿದ್ದರೆ ರುಂಡ ಹೊಡೆಸುವೆ ಎನ್ನಿರಿ. ಅವನು ಹೇಗಿದ್ದರೂ ಸತ್ತುಹೋಗುತ್ತಾನೆ. ಹೆಣ್ಣು ಸುಲಭವಾಗಿ ನಿಮಗೆ ದಕ್ಕುತ್ತಾಳೆ" ಎಂದು ಹೇಳಿದನು ಚೌರಿಕ.

ಅರಸನು ಅದರಂತೆ ಹನುಮನನ್ನು ಕರೆಸಿ ಅವನಿಗೆ ಹೆದರಿಕೆ ಹಾಕಿದನು. ಹನುಮನು ಮನೆಗೆ ಬಂದು, ಮುಸುಕು ಹಾಕಿಕೊಂಡು ಮಲಗಿದನು. ಇಂದ್ರಿ ಬಂದು, "ಸ್ನಾನಮಾಡಿ ಊಟಕ್ಕೇಳಿ" ಎಂದು ಕರೆದಳು. ಅವನು "ಈಗ ಊಟ ಮಾಡಿ ಪ್ರಯೋಜನವೇನು? ಎಂಟು ದಿನಗಳಲ್ಲಿ ಅರಸನು ನನ್ನ ತಲೆ ಹೊಡೆಸುತ್ತಾನೆ" ಎಂದನು. ಇಂದ್ರಿಯು "ನಾನಿರುವಾಗ ನಿಮಗೇನು ಹೆದರಿಕೆ? ಏಳಿ, ಊಟಮಾಡಿದ ಅನಂತರ ಮಾತನಾಡೋಣ" ಎಂದು ಹೇಳಿ ಅವನನ್ನೆಬ್ಬಿಸಿದಳು.

ಊಟವಾದ ಮೇಲೆ "ಮಹಾಶೇಷನ ಘೋರ ವಿಷದ ಕರಡಿಗೆಯನ್ನು ನಾನು ತರಬೇಕಂತೆ. ಅದಕ್ಕೆ ಎಂಟು ದಿನಗಳ ಅವಧಿಯನ್ನು ಕೊಟ್ಟಿದ್ದಾನೆ ರಾಜ. ಅದನ್ನು ತರದಿದ್ದರೆ ಶಿರಚ್ಛೇದ ಮಾಡಿಸುವನಂತೆ" ಎಂದನು ಹನುಮ. "ರಾಜನ ಹತ್ತಿರ ಹೋಗಿ ಒಂದು ಸಾವಿರ ರೂಪಾಯಿ ಖರ್ಚಿಗೆ ಕೊಡಬೇಕು, ಎಂದು ಹೇಳಿ ತನ್ನಿ" ಎಂದಳು. ಅವನು ಹೋಗಿ ಸಾವಿರ ರೂಪಾಯಿ ತಂದನು.

ಇಂದ್ರಿಯು ಮಹಾಶೇಷನಿಗೆ ಒಂದು ಚೀಟಿಯನ್ನು ಬರೆದುಕೊಟ್ಟಳು. "ಈ ದಾರಿಯನ್ನು ಹಿಡಿದು ಹೋದರೆ ಶೇಷಾಚಲಪರ್ವತದ ಗುಹೆಯ ಬಾಗಿಲು ಸಿಕ್ಕುತ್ತದೆ. ಅದರಲ್ಲಿ ಮುಂದೆ ಹೋದರೆ, ಒಂದು ದೊಡ್ಡ ಹುತ್ತ ಕಾಣುತ್ತದೆ. ಇದು ಮಹಾಶೇಷನ ಊರಿಗೆ ಹೋಗುವ ದಾರಿಯ ಗುರುತು. ಅಲ್ಲಿಂದ ರಸ್ತೆ ಎರಡು ರೀತಿಯಾಗಿ ಹೋಗುತ್ತದೆ. ಮಹಾಶೇಷನ ಮರಿಗಳು ಅಲ್ಲಿಯವರೆಗೆ ಬರುತ್ತಿರುತ್ತವೆ. ಅವುಗಳ ಹತ್ತಿರ ಚೀಟಿಯನ್ನು ಒಗೆದರೆ, ಅವು ಅದನ್ನು ಓದಿಕೊಂಡು, ನಿನ್ನನ್ನು ಮಹಾಶೇಷನ ಹತ್ತಿರ ಕರೆದುಕೊಂಡು ಹೋಗುತ್ತವೆ" ಎಂದು ಹೇಳಿದಳು.

ಹನುಮನು ಚೀಟಿಯನ್ನು ತೆಗೆದುಕೊಂಡು, ದಕ್ಷಿಣ ದಿಕ್ಕಿನ ರಸ್ತೆಯನ್ನು ಹಿಡಿದು, ಹತ್ತು ಮೈಲು ಹೋಗುವದರೊಳಗೆ ಶೇಷಾಚಲಪರ್ವತದ ದೊಡ್ಡ ಹುತ್ತಿನ ಬಿಲಕ್ಕೆ ಬಂದು ಮುಟ್ಟಿದನು. ಬಿಲದ ಆಕಾರವು ಏಳು ಹೆಡೆಗಳ ಮಹಾಶೇಷನ ಹೆಡೆಗಳ ಅಚ್ಚಿನ ಹಾಗೆ ಕಾಣುತ್ತಿತ್ತು. ಅಲ್ಲಿಂದ ಅವನು ಗವಿಯ ಒಳಕ್ಕೆ ಹೋದನು. ಮಹಾಶೇಷನ ಮರಿಗಳು ಹೆಡೆಗಳ ಮೇಲೆ ಮಣಿಗಳನ್ನು

ಹೊತ್ತುಕೊಂಡು ತಿರುಗುತ್ತಿದ್ದವು. ಮಹಾಶೇಷನ ಮರಿಗಳಿಗೆ ಅವನು ಚೀಟಿಯನ್ನು ಒಗೆದನು. ಅವು ಅದನ್ನು ತಕ್ಕೊಂಡು ಹೋಗಿ ಶೇಷನಿಗೆ ಕೊಟ್ಟವು. ಅವನು ಅದನ್ನೋದಿ, "ನರಮನುಷ್ಯನನ್ನು ಕರೆದು ತನ್ನಿರಿ" ಎಂದು ಹೇಳಿ ಮರಿಗಳನ್ನು ಕಳಿಸಿದನು. ಅವುಗಳ ಜತೆಗೆ ಅವನು ಹೋಗುವಾಗ, ಗುಹೆಯ ದಾರಿ ಅಗಲವಾಗುತ್ತ ಹೋಯಿತು. ಮಣಿನಾಗಗಳು ಎಲ್ಲ ಕಡೆಗೂ ಸಂಚಾರ ಮಾಡುತ್ತ ತಿರುಗುತ್ತಿದ್ದವು. ಆದರಿಂದ ಅಲ್ಲಿಲ್ಲಾ ಮಣಿಪ್ರಭೆ ತುಂಬಿತ್ತು. ಮಹಾಶೇಷನ ಮನೆಗೆ ಮಾಣಿಕ್ಯದ ಕಂಬಗಳ ಸಾಲುಗಳಿದ್ದವು ಇಂದ್ರನೀಲದ ಬಣ್ಣದ ನೆಲದ ಮೇಲೆ ಅವುಗಳ ಬಣ್ಣ ಸೂಸುತ್ತಿತ್ತು.

ಕಾಲಿನ ಬದಿಯಿಂದ ಬೆನ್ನಿನ ಮೇಲೇರಿ ತಲೆಯ ಹಿಂದೆ ಏಳು ಹೆಡೆಗಳ ನೆಳಲನ್ನು ಚೆಲ್ಲುವ ಸರ್ಪಪ್ರಭಾವಳಿಗಳನ್ನು ಧರಿಸಿದ ಅನೇಕ ದಿವ್ಯಸುಂದರಿ-ಯರು ಅಲ್ಲಿ ಓಡಾಡುತ್ತಿದ್ದರು. ಕೆಂಪು ಬಣ್ಣದ ಓಕುಳಿಯಲ್ಲಿ ಮಿಂದುಬಂದವ ರಂತೆ ಅವರು ಕಾಣುತ್ತಿದ್ದರು.

ಹನುಮನು ಮಹಾಶೇಷನ ದರಬಾರಕ್ಕೆ ಹೋದನು. ಅಲ್ಲಿ ಮಹಾಶೇಷನು ನವರತ್ನದ ಸಿಂಹಾಸನದ ಮೇಲೆ ಮಲಗಿ, ತನ್ನ ಏಳೂ ಹೆಡೆಗಳನ್ನು ತೆರೆದು ಕೊಂಡಿದ್ದನು. ಹನುಮನು ಅವನಿಗೆ ನಮಸ್ಕಾರಮಾಡಿ, ಅವನು ತೋರಿಸಿದ ಆಸನದಲ್ಲಿ ಕುಳಿತುಕೊಂಡನು. ಮಹಾಶೇಷನು "ನೀನು ನರಮನುಷ್ಯನಾದರೂ ನನ್ನ ಮಗನ ಗೆಳತಿಯಾದ ಇಂದ್ರಿಯನ್ನು ಈಗಾಗಲೇ ಮದುವೆಯಾಗಿದ್ದರಿಂದ, ಅವಳ ಚೀಟಿಯ ಅಭಿಪ್ರಾಯದಂತೆ ಮಾಕರ್ಣಿಯನ್ನೂ ನಿನಗೆ ಮಾದುವೆ ಮಾಡಿಕೊಡುತ್ತೇನೆ" ಎಂದು ಹೇಳಿ ಮಾಕರ್ಣಿಯನ್ನು ಕರೆದನು. ಅವಳು ಇವನು ತಾನು "ನಿರ್ವಾಣಿಯಾಗಿ ಕೆರೆಯಿಂದ ಎದ್ದು ಬರುವದನ್ನು ನೋಡಿದ ನರಮನುಷ್ಯ. ಶೇಷನಗರಕ್ಕೆ ಇವನು ಹೇಗೆ ಬಂದ?" ಎಂದು ಆಶ್ಚರ್ಯ ಪಟ್ಟಳು. ನಾಚಿಕೆಯಿಂದ ಮೋರೆಯನ್ನು ಕೆಳಗೆ ಹಾಕಿಕೊಂಡು ನಿಂತಳು.

ಮಹಾಶೇಷನು ಇಂದ್ರಿಯ ಚೀಟಿಯನ್ನು ಮಗಳಿಗೆ ತೋರಿಸಿದನು. ಅವಳು ಮುಗುಳುನಗೆ ಬೀರಿ, ಹನುಮನನ್ನು ನೋಡಿ ತನ್ನ ಒಪ್ಪಿಗೆಯನ್ನು ಸೂಚಿಸಿದಳು. ಮಹಾಶೇಷನು ಅವನಿಗೆ ಮಾಕರ್ಣಿಯನ್ನು ಮದುವೆಮಾಡಿ ಕೊಟ್ಟನು. ಹನುಮನು ಮೂರು ದಿನಗಳ ಅನಂತರ, "ರಾಜನ ಅಪ್ಪಣೆಯಂತೆ ನಾನು ನಿನ್ನ ಘೋರವಾದ ವಿಷದ ಕರಡಿಗೆಯನ್ನು ತೆಗೆದುಕೊಂಡು ಹೋಗಿ ಇನ್ನು ನಾಲ್ಕು ದಿನಗಳಲ್ಲಿ ಅವನಿಗೆ ಒಪ್ಪಿಸಬೇಕು" ಎಂದನು. ಮಹಾಶೇಷನು "ಈ ಕರಡಿಗೆಯನ್ನು ಸಮುದ್ರದ ದಂಡೆಯ ಮೇಲೆಯೇ ಮುಚ್ಚಳು ತೆರೆಯ ಬೇಕು. ಬೇರೆ ಕಡೆ ತೆರೆದರೆ ಎಲ್ಲರೂ ಇದರ ಘೋರ ವಿಷದಿಂದ ಸಾಯುತ್ತಾರೆ. ರಾಜನಿಗೆ ಇದನ್ನು ತೋರಿಸಿದ ಅನಂತರ ನನ್ನ ಹೆಸರು ಹೇಳಿ ಇದನ್ನು ಸಮುದ್ರ ದಲ್ಲಿ ಒಗೆಯಬೇಕು" ಎಂದು ಹೇಳಿ ವಿಷದ ಕರಡಿಗೆಯನ್ನು ಕೊಟ್ಟನು.

ಹನುಮನು ಮಾಕರ್ಣಿಯನ್ನು ಕರೆದುಕೊಂಡು ಮರಳಿ ಊರಿಗೆ ಬಂದು, ಮಾಕರ್ಣಿಯನ್ನು ಮನೆಯಲ್ಲಿ ಬಿಟ್ಟು, ರಾಜನ ಮನೆಗೆ ವಿಷದ ಕರಡಿಗೆಯು ಸಮೇತ ಹೋದನು. ರಾಜನನ್ನೂ ಮಂತ್ರಿ-ಸೇನಾಪತಿ-ಮುಂತಾದ ಪರಿವಾರ ದವರನ್ನೂ ಕರೆದುಕೊಂಡು ರಾಜನು ಅವನೊಡನೆ ಸಮುದ್ರತೀರಕ್ಕೆ ಬಂದನು. ಹನುಮನು ವಿಷದ ಕರಡಿಗೆಯ ಮುಚ್ಚಳು ತೆಗೆದ ಕೂಡಲೆ ವಿಷವು ಹರಡಿ, ಕೆಲವರು ಮೂರ್ಛೆಯಿಂದ ಬಿದ್ದರು.ಕೆಲವರು ಸತ್ತುಹೋದರು. ರಾಜನು, "ಪ್ರಾಣಘಾತಕ ವಿಷ. ಬೇಗ ಕರಡಿಗೆ ಮುಚ್ಚು" ಎಂದು ಹೇಳಿದನು. ಹನುಮನು "ಏಳು ಹೆಡೆ ಮಹಾಶೇಷಾ, ನಿನ್ನ ವಿಷವನ್ನು ನೀನೊಪ್ಪಿಸಿಕೊಂಡು, ಇದರ ವಿಷವನ್ನು ಶಾಂತಮಾಡು" ಎಂದು ಹೇಳಿ ಅದನ್ನು ಹಾಗೆಯೇ ಸಮುದ್ರದಲ್ಲಿ ಬೀಸಾಡಿದನು.

ಎಂಟು ದಿನಗಳ ಅನಂತರ ಕೆಲಸಿಯು ರಾಜನ ಮನೆಗೆ ಕ್ಷೌರಮಾಡಲು ಅದೇ ದಾರಿಯಿಂದ ಬರುವಾಗ, ಇಂದ್ರಿಯನ್ನೂ ಮಾಕರ್ಣಿಯನ್ನೂ ನೋಡಿ, ಎಚ್ಚರತಪ್ಪಿ ಬಿದ್ದನು. ಹನುಮನು ಒಂದು ಒದೆತ ಕೊಟ್ಟು ಅವನನ್ನು ಎಚ್ಚರ ಗೊಳಿಸಿ, "ಏನೋ? ಯಾಕೋ ಎಚ್ಚರತಪ್ಪಿ ಬಿದ್ದೆ ?" ಎಂದು ಕೇಳಿದನು. "ಏನಿಲ್ಲ ಒಡೆಯಾ, ಮಲಬಾರ ಹೊಗೆಸೊಪ್ಪಿನ ಕವಳ ತಿಂದಿದ್ದೆ. ತಲೆತಿರುಗಿ ಬಿದ್ದೆ" ಎಂದನು ಕೆಲಸಿ. ಹನುಮನು "ಪಿತ್ತ ಕೆಣಕಿರಬೇಕು. ಹೋಗು. ಇನ್ನು ಮುಂದೆ ಎಚ್ಚರಿಕೆಯಿಂದಿರು" ಎಂದು ಹೇಳಿದನು.

ಕ್ಷೌರಿಕನು ಅರಸನ ಮನೆಗೆ ಹೋಗಿ, "ಅರಸರೇ, ಈ ಸಲ ಹನುಮಗೌಡನು ಇನ್ನೊಬ್ಬ ಹೊನ್ನಕೂದಲಿನ ಹನುಮಿಯನ್ನು ಗಂಟುಹಾಕಿಕೊಂಡಿದ್ದಾನೆ. ಅವನ ಇಬ್ಬರು ಹೆಂಡಿರಲ್ಲಿ ಒಬ್ಬಳು ನಿಮಗೆ; ನೀವು ಆರಿಸಿ. ಬಿಟ್ಟವಳು ನನಗೆ" ಎಂದು ಹೇಳಿದನು. ಅರಸನು "ಹಿಂದಿನ ಸಲ ನಿನ್ನ ಉಪಾಯದಿಂದ ಅವನಿಗೆ ಸಾವು ಬಾರದೆ, ಮತ್ತೊಬ್ಬ ಸುಂದರಿ ದೊರಕಿದಳು. ಈ ಸಲ ಅವನು ಸತ್ತು, ಆವರಿಬ್ಬರೂ ನಮಗೆ ದೊರೆವ ಉಪಾಯ ಮಾಡು" ಎಂದು ಹೇಳಿದನು.

"ಹಾಗಾದರೆ ಕೇಳಿ: ನನ್ನ ಹಳಿಯುವರು (ಪಿತೃಗಳು) ಸ್ವರ್ಗದಲ್ಲಿದ್ದಾರೆ. ಅವರ ಕ್ಷೇಮಸಮಾಚಾರ ತಿಳಿದು ಬಾ. ಅಗ್ನಿಕುಂಡವನ್ನು ತಯಾರು ಮಾಡಿಸಿ 'ಇದರಲ್ಲಿ ಬಿದ್ದು ಸ್ವರ್ಗಕ್ಕೆ ಹೋಗಿ ಬಾ' ಎನ್ನಬೇಕು. ಇದು ರಾಮಬಾಣ ಉಪಾಯ" ಎಂದು ಹೇಳಿದನು. ರಾಜನು ಒಳ್ಳೇ ಆನಂದದಿಂದ "ಸರಿ. ಇದೊಳ್ಳೇ ಉಪಾಯ" ಎಂದು ಹೇಳಿ ಹನುಮನಿಗೆ ಕರೆಬಿಟ್ಟನು. ಹನುಮನು, "ರಾಜನ ಕರೆ. ಕೆಲಸಿಯ ತರಲೆಯಿಂದ ಇನ್ನೊಂದು ಉಪದ್ರವ ಬಂತು" ಎನ್ನುತ್ತ ಹೋದನು. ರಾಜನು "ಹನುಮಗೌಡಾ, ಮಹಾಶೇಷನ ಮನೆಗೆ ಹೋಗಿ ವಿಷದ ಕರಡಿಗೆ ತಂದವನು ನೀನು. ನಿನಗೆ ಅಸಾಧ್ಯವಾದ ಕೆಲಸ ಯಾವದೂ ಇಲ್ಲ. ಆದರಿಂದ ಈಗ ಒಂದು ತುರ್ತ ಕೆಲಸ ನಿನ್ನಿಂದ ಆಗಬೇಕು" ಎಂದನು. ಹನು-

ಮನು ಹೆದರಿ, " ಮಹಾರಾಜರೇ, ಆಗುವ ಕೆಲಸವಾದರೆ ಹೇಳಿ. ಆಗದ ಕೆಲಸ ಹೇಳಬೇಡಿ " ಎಂದನು.

ರಾಜನು "ನಮ್ಮ ಹಳೆಯರು ಸತ್ತು ಸ್ವರ್ಗದಲ್ಲಿದ್ದಾರೆ. ಅವರ ಕ್ಷೇಮ ಸಮಾಚಾರವನ್ನು ನೀನು ತಿಳಿದುಕೊಂಡು ಬರಬೇಕು. ನಾಳೆಗೇ ಕೊಂಡವನ್ನು ತಯಾರು ಮಾಡಿಸುತ್ತೇನೆ. ನೀನು ಅದರಲ್ಲಿ ಬಿದ್ದು ಸ್ವರ್ಗಕ್ಕೆ ಹೋಗಿ ಬರ-ಬೇಕು. ಇದಕ್ಕೆ ತಪ್ಪಿದರೆ ನಾಳೆಗೇ ನಿನ್ನ ರುಂಡ ಹಾರಿಸುತ್ತೇನೆ" ಎಂದು ಹೇಳಿದನು. ಹನುಮನು "ನಾಳೆಗೆ ಬರುತ್ತೇನೆ" ಎಂದು ಹೇಳಿ ಮನೆಗೆ ಬಂದು ಮುಸುಕು ಹಾಕಿಕೊಂಡು ಮಲಗಿದನು.

ಮಾಕರ್ಣಿಯು ಹನುಮನನ್ನು ಕೈತಟ್ಟಿ ಎಬ್ಬಿಸಿ, " ಏನು, ಶರೀರದಲ್ಲಿ ಆಲಸ್ಯವಾಗಿದೆಯೋ ?" ಎಂದು ಕೇಳಿದಳು. ಅವನು ರಾಜನು ಹೇಳಿಕಳಿಸಿದ ವಿಚಾರವನ್ನು ಹೇಳಿದನು. ಆವಳು ಇಂದ್ರಿಯು ಸಂಗಡ ವಿಚಾರ ಮಾಡಿದಳು. ಆಮೇಲೆ, " ನೀವು ಹೆದರುವ ಕಾರಣವಿಲ್ಲ. ನಾವು ಮಾಯೆಯಿಂದ ಸುರಂಗವನ್ನು ಮಾಡಿಸುತ್ತೇವೆ. ನೀವು ಕೊಂಡದಲ್ಲಿ ಬೀಳುವಾಗ, ಅಗ್ನಿ, ಮಹಾಶೇಷ ಮತ್ತು ದೇವೇಂದ್ರರ ಹೆಸರು ಹೇಳಿಕೊಂಡು ಅದರಲ್ಲಿ ಬೀಳಬೇಕು. ಸೂಡಿದ ಹೂವು ಬಾಡದೆ ಸುರಕ್ಷಿತವಾಗಿ ಸುರಂಗದಲ್ಲಿ ಬಂದು ಮನೆ ಸೇರಬಹುದು" ಎಂದು ಹೇಳಿದಳು. ಇಂದ್ರಿಯು, " ರಾಜನ ಹತ್ತಿರ ' ನನ್ನ ಸಂಸಾರದ ಖರ್ಚಿಗೆ ಎರಡು ಸಾವಿರ ರೂಪಾಯಿ ಕೊಡು ' ಎಂದು ಹೇಳಿ ತಂದುಕೋ" ಎಂದ ಪ್ರಕಾರ ಅವನು ರಾಜನ ಹತ್ತಿರ ಹೋಗಿ ಹಣವನ್ನು ತಂದನು. ಆಗ ರಾಜನು " ಎಂಟು ದಿನಗಳಲ್ಲಿ ನೀನು ತಿರುಗಿ ಬರಲಿಕ್ಕೆ ತಪ್ಪಿದರೆ ನಿನ್ನ ಹೆಂಡರನ್ನೂ ಮನೆಯನ್ನೂ ವಶಕ್ಕೆ ತೆಗೆದುಕೊಳ್ಳುವೆ" ಎಂದು ಹೇಳಿದ್ದನು.

ರಾಜನು ನೂರಾರು ಹೊರೆ ಸೌದೆ ರಾಶಿ ಹಾಕಿಸಿ ದೊಡ್ಡ ಕೊಂಡವನ್ನು ಮಾಡಿಸಿದ್ದನು. ನೂರಾರು ಜನರು ಹನುಮನು ಅದರಲ್ಲಿ ಬೀಳುವವನ್ನು ನೋಡಲಿಕ್ಕೆ ಸುತ್ತಲೂ ನೆರೆದಿದ್ದರು. ಹನುಮನು ಅಗ್ನಿ, ಮಹಾಶೇಷ ಮತ್ತು ದೇವೇಂದ್ರರನ್ನು ನೆನೆದು ಕೊಂಡದಲ್ಲಿ ಬೀಳುವ ಹೊತ್ತಿನಲ್ಲಿ ಕೊಂಡದ ಬೆಂಕಿಯು ಇಬ್ಭಾಗವಾಗಿ, ಹನುಮನು ಸುರಕ್ಷಿತವಾಗಿ ಸುರಂಗದಲ್ಲಿ ಹೋಗಿ ಬಿದ್ದನು. ದಟ್ಟವಾದ ಹೊಗೆಯ ಮೂಲಕ ಇದು ಜನರಿಗೆ ತಿಳಿಯಲಿಲ್ಲ, ಎಲ್ಲರೂ " ಆಹ್'' " ಓಹ್'' " ಹೋ ಹೋ ಧೀರ!'' ಎಂದು ಮನಸ್ಸಿಗೆ ಬಂದಂತೆ ಕೂಗಿಕೊಂಡರು. ಕೆಲವರು " ಪಾಪ, ಅನ್ಯಾಯವಾಗಿ ಕೊಂಡದಲ್ಲಿ ಬಿದ್ದು ಪ್ರಾಣ ಕಳಕೊಳ್ಳುವ ಹೊತ್ತು ಬಂತು ಅವನಿಗೆ" ಎಂದು ದುಃಖ ಮಾಡಿದರು. ರಾಜನಿಗೂ ಕೆಲಸಿಗೂ ಬಹಳ ಆನಂದವಾಯಿತು.

ಅಗ್ನಿಯು ಅವನನ್ನು ತನ್ನ ರಾಜ್ಯಕ್ಕೆ ಕರೆದುಕೊಂಡು ಹೋಗಿ ತನ್ನ ಮಗಳಾದ ಭೂದಂಡಿಯನ್ನು ಅವನಿಗೆ ಮದುವೆ ಮಾಡಿಕೊಟ್ಟನು. ಅವನು

ಕೊಟ್ಟ ಮುತ್ತುರತ್ನಗಳ ಬಳುವಳಿ ಸಮೇತ ಹನುಮನು ನಾಲ್ಕೈದು ದಿನಗಳಲ್ಲಿ ಭೂದಂಡಿಯನ್ನು ಕರೆದುಕೊಂಡು ಮನೆಗೆ ಬಂದನು. ಕೊಂಡದಲ್ಲಿ ಬಿದ್ದಮೇಲೆ ಎಂಟು ದಿನಗಳಾದಮೇಲೆ ಅವನು ರಾಜನ ಮನೆಗೆ ಹೋದನು.

ರಾಜನಿಗೆ ಅವನನ್ನು ನೋಡಿ ಬಹಳ ಆಶ್ಚರ್ಯವಾಯಿತು. ಅವನು "ಕೊಂಡದಲ್ಲಿ ಬಿದ್ದು ಬದುಕಿ ಬಂದ ಇವನು ಮಹಾಮಾಂತ್ರಿಕನಿರಬೇಕು. ಇವನ ವಿರುದ್ಧ ಹೋದರೆ ಇನ್ನು ನನಗೆ ಉಳಿಗಾಲವಿಲ್ಲ" ಎಂದು ಮನಸ್ಸಿನಲ್ಲಿ ತಿಳಿದುಕೊಂಡು, "ನನ್ನ ಹಳೆಯುವರ ಹತ್ತಿರ ಹೋಗಿ ಬಂದೆಯೋ?" ಎಂದು ಕೇಳಿದನು. "ಹೌದು, ಅವರೆಲ್ಲ ಆರಾಮ ಇದ್ದಾರೆ. ಆದರೆ ಅಲ್ಲಿ ಚೌರದವನು ಚನ್ನಾದವನಲ್ಲ. ಅದರಿಂದ ನಿನ್ನ ಅಜ್ಜನೂ ನಿನ್ನ ತಂದೆಯೂ ನಿನ್ನ ಚೌರದವನನ್ನೇ ಕಳಿಸಲು ನಿನಗೆ ತಿಳಿಸಬೇಕೆಂದು ಹೇಳಿದ್ದಾರೆ. ಅಲ್ಲದೆ, ಚೌರದವನ ತಾಯಿ–ತಂದೆಗಳಿಗೆ ಬಹಳ ರೋಗವಾಗಿ ಅವರು ಸಂಕಟಪಡುತ್ತಿದ್ದಾರೆ. ತಮ್ಮ ಮಗನನ್ನು ನೋಡುವ ಹಂಬಲ ಅವರಿಗೆ ಬಹಳವಾಗಿದೆ. ನಾನು ಮುದ್ದಾಂ ಅವನನ್ನು ಅವರಿದ್ದಲ್ಲಿಗೆ ಕಳಿಸುತ್ತೇನೆ ಎಂದು ಮಾತುಕೊಟ್ಟು ಬಂದಿದ್ದೇನೆ" ಎಂದು ಹೇಳಿದನು. ರಾಜನು "ಹಾಗಾದರೆ ನಾನೇ ಚೌರದವನನ್ನು ಕರೆದುಕೊಂಡು ಸ್ವರ್ಗಕ್ಕೆ ಹೋಗಿ ಬರುತ್ತೇನೆ" ಎಂದನು. ಹನುಮನು, "ನೀನು ಹೋಗಬಹುದು. ಆದರೆ ಈಗಲೇ ಅವಸರವೇನಿಲ್ಲ. ತಡ, ಮೊದಲು ಚೌರದವನು ಹೋಗಿ ಬರಲಿ" ಎಂದು ಹೇಳಿದನು.

ಅರಸನ ಅಪ್ಪಣೆಯಂತೆ ಕೂಡಲೆ ಕೊಂಡ ತಯಾರಾಯಿತು. ಹನುಮನ ಹೆಂಡತಿಯನ್ನು ಅನುಭವಿಸುವ ಆಶೆಯಿಂದ ರಾಜನ ಮನೆಗೆ ಬಂದ ಕೆಲಸಿಯು ಕೊಂಡದಲ್ಲಿ ಬೀಳಲೇಬೇಕಾಯಿತು. ಚೌರದವನು ಬೆಂಕಿಯಲ್ಲಿ ಸುಟ್ಟುಕೊಂಡು ಕೂಗುತ್ತ ಪ್ರಾಣಬಿಟ್ಟನು. ಆಮೇಲೆ ಹನುಮನು "ಪರರ ಕೇಡು ತನ್ನ ಕೇಡು. ಚೌರದವನ ತರಲೆ ಅವನ ತಲೆಗೇ ಮೋಸ ತಂದಿತು" ಎಂದು ಹೇಳಿದನು. ರಾಜನು ತಾನೂ ಈ ಒಳಸಂಚಿನಲ್ಲಿ ಸೇರಿ ಪ್ರಾಣ ಕಳಕೊಳ್ಳುತ್ತಿದ್ದೆನೆಂದು ಪಶ್ಚಾತ್ತಾಪ ಮಾಡಿಕೊಂಡು, ಅದರ ತಪ್ಪುದಂಡವೆಂದು ತನ್ನ ಮಗಳನ್ನು ಹನುಮನಿಗೆ ಮದುವೆ ಮಾಡಿಕೊಟ್ಟನು.

ಹನುಮನು ರಾಜನ ಮಗಳನ್ನು ಮದುವೆಯಾಗುವದು ಇಂದ್ರಿಗೆ ಮನಸ್ಸಿರಲಿಲ್ಲ. ಅದರಿಂದ ಅವಳಿಗೆ ಅವನ ಮೇಲೆ ಬೇಸರವಾಗಿ ತಾನು ಹೇಗಾದರೂ ದೇವಾಂಗವನ್ನು ತೆಗೆದುಕೊಂಡು ದೇವಲೋಕಕ್ಕೆ ಹೋಗಿಬಿಡಬೇಕೆಂದು ನಿಶ್ಚಯುಮಾಡಿದಳು.

ಹನುಮನು ತನ್ನ ನಾಲ್ಕು ಹೆಂಡಿರನ್ನು ಕರೆದುಕೊಂಡು ಅಡವಿಯಲ್ಲಿನ ಅಜ್ಜವ್ವನ ಮನೆಗೆ ಹೋದನು. ಅಲ್ಲಿ ಎರಡು ದಿನ ಉಳಿದನು. ಅಜ್ಜವ್ವನು ಇಂದ್ರಿಯ ವರ್ತನೆಯಿಂದ ಅವಳ ಬೇಸರದ ಕಾರಣವನ್ನು ಸೂಕ್ಷ್ಮವಾಗಿ ತಿಳಿದು

ಕೊಂಡಳು. ಹನುಮನು ಹೊರಡುವಾಗ ಅವನ ಹತ್ತಿರ ಏಕಾಂತದಲ್ಲಿ "ಇಂದ್ರಿ ದೇವಲೋಕಕ್ಕೆ ಹಾರಿಹೋಗುವ ವಿಚಾರದಲ್ಲಿದ್ದಾಳೆ. ಅವಳ ದೇವಾಂಗವನ್ನು ಕೊಡಬೇಡ" ಎಂದು ಹೇಳಿದಳು.

ಇತ್ತ ಕುಚ್ಚಿನಾಡ ರಾಜನ ಅರಮನೆಗೆ ಬೆಂಕಿ ಬಿದ್ದು, ಅವನ ದವಸು ಧಾನ್ಯ, ಭಂಡಾರ ಎಲ್ಲ ಭಸ್ಮವಾಗಿ ಹೋದವು. ಸೈನಿಕರು ಸಂಬಳವಿಲ್ಲದೆ ಹೋದದ್ದರಿಂದ ರಾಜನನ್ನು ಬಿಟ್ಟುಹೋದರು. ಪುಂಡಪಾಳಯಗಾರರು ಎದ್ದು ಬಿದ್ದು, ಅವನನ್ನು ರಾಜ್ಯದಿಂದ ಹೊರಹಾಕಿದರು. ರಾಜನೂ ಅವನ ಹಿರಿಯ ಗಂಡುಮಕ್ಕಳೂ ಈ ತೆಂಕಣ ರಾಜ್ಯಕ್ಕೆ ಬಂದು ಸೌದೆ ಕಡಿದು, ಸೌದೆಹೊರೆ ಹೊತ್ತು ತಂದು ಮಾರಿ ಹೊಟ್ಟೆ ಹೊರೆದುಕೊಳ್ಳಹತ್ತಿದರು. ಒಂದು ದಿನ ಅವರು "ಇಲ್ಲೊಂದು ದೊಡ್ಡ ಶ್ರೀಮಂತನ ಮನೆಯಿದೆ" ಎಂದು ಹೇಳಿ, "ಸೌದೆ ಹೊರೆ ಬೇಕೊ?" ಎಂದು ಕೇಳುತ್ತ ಬಂದರು. ಹನುಮನು "ಪಾಪ, ತಾಯಿ ತಂದೆ ಸೌದೆ ಹೊರೆ ಹೊತ್ತು ಮಾರಾಟ ಮಾಡುವ ಹಾಗಾಯಿತು" ಎಂದು ಹೇಳಿ, ಅವರ ಕಟ್ಟಿಗೆಹೊರೆಯನ್ನು ಒಂದಕ್ಕೆರಡು ಹಣ ಕೊಟ್ಟು ಕೊಂಡನು. "ನೀವು ನಮ್ಮ ಮನೆಯಲ್ಲೇ ಕೆಲಸಕ್ಕುಳಿಯಿರಿ" ಎಂದು ಹೇಳಿ ಅವರನ್ನು ಉಳಿಸಿಕೊಂಡನು. ತನ್ನ ತಾಯಿಯನ್ನೂ ಕರೆಸಿಕೊಂಡನು. ಅಣ್ಣಂದಿರನ್ನು ಮರಗಳ ಸೊಪ್ಪನ್ನು ತಂದುಹಾಕುವ ಕೆಲಸಕ್ಕೆ ಹಚ್ಚಿದನು. ಅವನ ತಾಯಿಗೆ ಇದರಿಂದ ಸ್ವಲ್ಪ ಬೇಸರವಾಯಿತು. ಅದರಿಂದ ಅವನು ಅಣ್ಣಂದಿರ ಕೆಲಸವನ್ನು ಬಿಡಿಸಿ, ಅವರಿಗೆ ಒಳ್ಳೇ ಮರ್ಯಾದೆಯಿಂದ ನಡೆಸಿಕೊಂಡನು.

ಒಂದು ದಿನ ಅವನು ತಾಯಿಯನ್ನು ಕರೆದು, "ಅವ್ವಾ, ಇದು ನಿನ್ನ ಹಿರಿ ಸೊಸೆ ಇಂದ್ರಿಯ ದೇವಾಂಗ. ಇದನ್ನು ನೀನು ಅವಳಿಗೆ ಕಾಣಿಸದೆ ಕಾಪಾಡಿಕೋ. ಅವಳು ಕೇಳಿದರೂ ಕೊಡಬಾರದು" ಎಂದು ಹೇಳಿಕೊಟ್ಟನು. ದೇವಾಂಗವನ್ನು ಕೊಡುವಾಗಲೇ ಇಂದ್ರಿಯು ಕಿಡಿಕಿ ಕಿಂಡಿಯಿಂದ ಅದನ್ನು ನೋಡಿದಳು. ಅವನು ಹೋದಮೇಲೆ ಅವನ ತಾಯಿಗೆ ಮಾಯದ ನಿದ್ರೆಯು ಬರುವಂತೆ ಮಾಡಿ, ಅವಳು ಅವಳ ಗಂಟಿನಿಂದ ದೇವಾಂಗವನ್ನು ಬಿಡಿಸಿಕೊಂಡು ಅದನ್ನು ಹಾಕಿಕೊಂಡು ದೇವಲೋಕಕ್ಕೆ ಹಾರಿಹೋದಳು.

ಹನುಮನು ಮನೆಗೆ ಬಂದು ಮಾಕರ್ಣಿ, ಭೂದಂಡಿಯರಿಂದ ಇಂದ್ರಿಯು ದೇವಾಂಗವನ್ನು ಕಿತ್ತುಕೊಂಡು ಹಾರಿಹೋದದ್ದನ್ನು ತಿಳಿದುಕೊಂಡು ಬಹಳ ವ್ಯಥೆ ಮಾಡಿದನು. "ಅಜ್ಜವ್ವನೇ ನನಗೆ ದಿಕ್ಕು" ಎಂದು ತಿಳಿದು ಅವನು ಅಡವಿಗೆ ಹೋದನು. ಅಜ್ಜವ್ವನಿಗೆ "ಹೀಗಿದ್ದ ಸಂಗತಿ ಹೀಗಾಯಿತು" ಎಂದು ತಿಳಿಸಿದನು. ಅಜ್ಜವ್ವನು "ನನ್ನ ಹತ್ತಿರ ತಂದು ದೇವಾಂಗವನ್ನು ಕೊಟ್ಟರೂ ಹೀಗಾಗುತ್ತಿರಲಿಲ್ಲ. ಈಗ ಆದದ್ದು ಆಗಿಹೋಯಿತು. ನಿನಗೆ ಇನ್ನು ಮೂರು

ಮಂದಿ ಹೆಂಡಂದಿರಿದ್ದಾರೆ. ನಿನಗೆ ಸಾಕು. ಕೈಗೊಂದು ಕಾಲಿಗೊಂದು (ಅಂದರೆ ಒಟ್ಟು ನಾಲ್ಕು ಜನ) ಹೆಂಡಿರು ನಿನಗೆ ಯಾಕೆ?" ಎಂದು ಕೇಳಿದಳು.

ಹನುಮನು ದೊಡ್ಡದಾಗಿ ಅಳಲಿಕ್ಕೆ ಹತ್ತಿದನು. ಅಜ್ಜಿಯು ಮೊಮ್ಮಗನ ಕಣ್ಣೀರನ್ನು ನೋಡಲಾರದೆ, "ಅಳಬೇಡ, ಇಲ್ಲಿಂದ ಮೂಡಬೆಟ್ಟಕ್ಕೆ ಹೋಗು. ಅಲ್ಲಿ ನನ್ನ ಅಣ್ಣ ಅಜ್ಜಮುನಿ ತಪಸ್ಸು ಮಾಡುತ್ತಿದ್ದಾನೆ. ರಂಧ್ರವಾದ ಪಾತ್ರೆಯನ್ನು ಒಂದು ಶಿಬ್ಬಲು (ಸಣ್ಣ ಬುಟ್ಟಿ) ಅಕ್ಕಿಯನ್ನೂ ಕೊಡುತ್ತೇನೆ. ನೀನು ಅವನ ಮುಂದೆ ಮೂರು ಕಲ್ಲುಗುಂಡು ಹೂಡಿಕೊಂಡು ಬೆಂಕಿ ಮಾಡಿ, ರಂಧ್ರಪಾತ್ರವನ್ನು ಒಲೆಯ ಮೇಲೆ ಇಡು. ಶಿಬ್ಬಲಿನಲ್ಲಿ ನೀರು ತಂದು ಅನ್ನದ ರಂಧ್ರಪಾತ್ರಕ್ಕೆ ಹಾಕು. ಅಜ್ಜಮುನಿ ಇದನ್ನು ನೋಡಿ ನಿನ್ನ ಕೂಡ ಮಾತಾಡಿದರೆ ನಿನಗೆ ಇಂದ್ರಿ ದೊರಕುತ್ತಾಳೆ. ಇಲ್ಲದಿದ್ದರೆ ಸಿಕ್ಕುವದಿಲ್ಲ" ಎಂದು ಹೇಳಿದಳು.

ಅವನು ಅಜ್ಜವ್ವ ಕೊಟ್ಟ ಶಿಬ್ಬಲು ಅಕ್ಕಿಯನ್ನೂ ರಂಧ್ರಪಾತ್ರವನ್ನೂ ತೆಗೆದುಕೊಂಡು ಮೂಡಬೆಟ್ಟಕ್ಕೆ ಹೋದನು. ಅಜ್ಜಮುನಿ ತಪಸ್ಸು ಮಾಡುವ ಜಾಗಕ್ಕೆ ಹೋಗಿ, ಅಲ್ಲಿ ಮೂರು ಗುಂಡುಕಲ್ಲುಗಳನ್ನು ಒಲೆಯ ಹಾಗೆ ಮಾಡಿ ಹೂಡಿ ಅಕ್ಕಿಯನ್ನು ರಂಧ್ರಪಾತ್ರಕ್ಕೆ ಹಾಕಿ ಒಲೆಯ ಮೇಲಿಟ್ಟನು. ಒಲೆಯಲ್ಲಿ ಬೆಂಕಿ ಮಾಡಿದನು. ಕೆರೆಯ ನೀರನ್ನು ಶಿಬ್ಬಲಿನಲ್ಲಿ ಮೊಗೆದು ತರಲಿಕ್ಕೆ ಹೋದನು. ಅಜ್ಜಮುನಿ ಈ ಸಪ್ಪಳಕ್ಕೆ ಎಚ್ಚತ್ತು ಕಣ್ಣು ತೆರೆದನು. ಈ ವ್ಯರ್ಥ ಪ್ರಯತ್ನವನ್ನು ನೋಡಿ ದೊಡ್ಡದಾಗಿ ನಗೆಯಾಡಿದನು. "ಎಂಥ ಮರುಳ ನೀನು! ಶಿಬ್ಬಲಿನಲ್ಲಿ ನೀರನ್ನು ಹೊತ್ತು ತರಲಿಕ್ಕೆ ಆಗುತ್ತದೆಯೋ? ನೀರೆಲ್ಲ ಸೋರುತ್ತದೆ. ರಂಧ್ರಪಾತ್ರದಲ್ಲಿ ಅನ್ನ ಮಾಡುವದಾದರೂ ಹೇಗೆ?" ಎಂದು ಕೇಳಿದನು.

ಕೂಡಲೆ ಹನುಮನು ಅಜ್ಜಮುನಿಗೆ ನಮಸ್ಕಾರಮಾಡಿದನು. "ಮಹಾತ್ಮರೇ, ನಾನು ಈ ಬೆಟ್ಟದಲ್ಲಿ ಅನ್ನ ಮಾಡಿ ಉಣ್ಣುವದಕ್ಕಾಗಿ ಬರಲಿಲ್ಲ. ಇಂದ್ರಿ ನನ್ನನ್ನು ಬಿಟ್ಟುಹೋದರೂ ಅವಳನ್ನು ಪುನಃ ಪಡೆದು ಲಗ್ನವಾಗಬೇಕೆಂದು ತುಂಬಾ ಆಶೆಯಿದೆ. ಅವಳು ನನಗೆ ಪುನಃ ದೊರೆತು ಅವಳು ನನ್ನ ಮಡದಿಯಾಗಿ ಉಳಿಯುವದಕ್ಕೆ ನೀವು ಸಹಾಯ ಮಾಡಬೇಕು" ಎಂದು ಹೇಳಿ ಮತ್ತೆ ಮುನಿಗೆ ಅಡ್ಡಬಿದ್ದನು.

ಅಜ್ಜಮುನಿಯು "ತಮ್ಮಾ, ನಾನು ಅವಳನ್ನು ಪುನಃ ಕರೆಸಬಹುದು. ಆದರೆ ಅವಳು ನಿನ್ನನ್ನು ಲಗ್ನವಾಗುವದಕ್ಕೆ ಒಪ್ಪುವದು ಕಷ್ಟ. ಹೇಗಾದರೂ ಉಪಾಯ ಮಾಡಿ ತಪ್ಪಿಸಿಕೊಂಡು ಹೋಗಬಹುದು" ಎಂದು ಹೇಳಿದನು. "ನೀವೇ ನನಗೆ ಗತಿ. ನಿಮ್ಮಂಥ ತಪಸ್ವಿಗಳ ಅನುಗ್ರಹವಿದ್ದರೆ ಯಾವ ಕೆಲಸವೂ ಅಸಾಧ್ಯವಲ್ಲ" ಎಂದು ಹೇಳಿದನು ಹನುಮ.

ಅಜ್ಜಮುನಿಯು “ಭೂದಂಡಿ, ಮಾಕರ್ಣಿ ಇವರಿಬ್ಬರೂ ಇಂದ್ರಿಯ ಸಂಗಡ ನಿಂತಾಗ ಇಂದ್ರಿಯು ಯಾರು ಎಂದು ಆರಿಸಿಕೊಂಡರೆ ಅವಳು ನಿನ್ನ ಸಂಗಡ ಉಳಿಯುತ್ತಾಳೆ. ನಾನು ನನ್ನ ತಪಃಶಕ್ತಿಯಿಂದ ಅವರು ಮೂವರನ್ನು ಇಲ್ಲಿಗೆ ಕರೆಸುತ್ತೇನೆ. ಇಂದ್ರಿಯ ತಲೆಯ ಮೇಲೆ ನಾನು ವಜ್ರದುಂಬಿಯಾಗಿ ಕಾಣಿಸಿಕೊಳ್ಳುತ್ತೇನೆ. ನೀನು ಈ ಗುರುತಿನಿಂದ ಅವಳನ್ನೇ ಆರಿಸು” ಎಂದು ಹೇಳಿದನು.

ಅಜ್ಜಮುನಿ ಮೂವರನ್ನೂ ಕರೆಸಿದನು. ಅವರು ಮೂವರೂ “ನಮ್ಮೊಳಗೆ ನೀನು ಇಂದ್ರಿ ಯಾರು ಅಂತ ಗುರ್ತಿಸಿದರೆ ಇಂದ್ರಿ ನಿನ್ನನ್ನು ಮದುವೆಯಾಗುತ್ತಾಳೆ” ಎಂದು ಒಂದೇ ಸಲ ಆ ಮೂವರೂ ಹೇಳಿದರು. ಅಜ್ಜಮುನಿ ವಜ್ರದುಂಬಿಯಾಗಿ ಇಂದ್ರಿಯ ತಲೆಯ ಮೇಲೆ ಗುಂಯ್‌ಗುಡುತ್ತ ನಿಂತನು. ಹನುಮನು ಇಂದ್ರಿಯನ್ನೇ ಆರಿಸಿ ತೋರಿಸಿದನು. ಆಗ ಇಂದ್ರಿಯು ಹನುಮನಿಗೆ ಮಾಲೆ ಹಾಕಿದಳು. ಅಜ್ಜಮುನಿಗೆ ವಂದಿಸಿ ಆ ಮೂವರು ಮಡದಿಯರನ್ನೂ ಕರೆದುಕೊಂಡು ಹನುಮನು ತನ್ನ ಊರಿಗೆ ಬಂದು ಸುಖಸಂತೋಷದಿಂದ ಉಳಿದನು.

(ಕಥೆ ಹೇಳಿದವರು : ಇಟ್ಟಪ್ಪ ಹಾಂಡು ನಾಯ್ಕ, ಕೂಜಳ್ಳಿ)

★ ಎಲ್. ಆರ್. ಹೆಗಡೆ

ಗೋವಿನ ಹಾಡು

(ಡೊಳ್ಳಿನ ಪದ)

ಸ್ವಾಮಿ ನಮ್ಮ ದೇವರು ಬಂದಾವು ಬನ್ನಿರೆ |
ಗುರುವೇ ನಮ್ಮ ದೇವರು ಬಂದಾವು ಬನ್ನಿರೆ ||

ಹತ್ತು ದೈವವು ಚಿತ್ತವಿಟ್ಟು ಕೇಳಬೇಕು ಸತ್ಯಕ್ಕೆ ಸಾವಿಲ್ಲವೆ |
ಸತ್ಯದಿಂದಽ ನಡೆದವರಿಗೆ ಸಕಲ ಸೌಖ್ಯ ದೊರೆವುದು || ೧ ||

ಪೃಥ್ವಿಯಲ್ಲಿ ಸತ್ಯವಂತೋ ಆಕಳಿತ್ತು |
ನಿತ್ಯ ಕಾಲದಿ ಗುಡ್ಡಕ್ಹೋಗಿ ಹುಲ್ಲು ಮೇದು ಬರುವದೇ || ೨ ||

ಒಂದಾನೊಂದು ದಿನದಲ್ಲಿ ಗೋಪೆಮ್ಮ ಮುಂಜಾನೆದ್ದು ಹೊರಟಾಳೆ |
ಮನೆಯಾಗ ಮಗನ ಬಿಟ್ಟು ಗೋಪೆಮ್ಮ ಕರಡಿ ಗುಡ್ಡಕ್ಹೋದಾಳೆ || ೩ ||

ಅನುಮಾನವಿಲ್ಲದೆ ಗೋಪಿತಾಯವ್ವ ಹರಿದಾಡೆಲ್ಲಾ ಮೇದಾಳೆ |
ಹುಲ್ಲು ಮೇಯುತ ಗೋಪಿತಾಯವ್ವ ಹುಲಿಯ ಗವಿಗೆ ಬಂದಾಳೆ || ೪ ||

ಎಳಯ ಹುಲ್ಲು ಕಂಡಾಳು ಗೋಪೆವ್ವ ಹುಲಿಯ ಗವಿಯ ಹೊಕ್ಕಾಳೆ |
ಆಕಳು ಬರುವದು ಕಂಡು ಹುಲಿರಾಜ ಅನ್ನ ಸಿಕ್ಕೀತೆಂದಾನೆ || ೫ ||

ಆರು ತಿಂಗಳಿಂದ ನನಗೆ ಅನ್ನ ಸಿಕ್ಕಿದ್ದಿಲ್ಲವೆ |
ಆರು ತಿಂಗಳನ್ನವೆನಗೆ ಹರನು ಕೊಟ್ಟು ಕಳವ್ಯಾನೆ || ೬ ||

ಶಾಬಾಷ ಶಾಬಾಷೆಂದೆನ್ನುತ ಗಂಭೀರ ನಾದವು ಮಾಡ್ಯಾನೆ |
ಗಂಭೀರ ನಾದವು ಮಾಡ್ಯಾನಲ್ಲೊ ಆಕಳು ಮುಂದಕ್ಹಾರ್‍ಯಾನೆ || ೭ ||

ಹುಲಿಯ ಕಣ್ಣೀಲೆ ಕಂಡಾಳು ಗೋಪೆವ್ವ ಘಾತವಾದೀತೆಂದಾಳೆ |
ಘಾತವಾದೀತೆಂದಾಳಲ್ಲೊ ಮಗನ ಗತಿಯೇನಂದಾಳೆ || ೮ ||

ಮಗನ ಗತಿಯೇನಂದಾಳಲ್ಲೊ ಪಳಪಳ ಕಣ್ಣೀರು ಸುರಿಸ್ಯಾಳೆ |
ಆಕಳ ಕಣ್ಣೀರು ಕಂಡ ಹುಲಿರಾಜ ಏನೆಂದಾಡುತ ಅದಿಯ್ಯಾನೆ || ೯ ||

ಹೇಳು ಹೇಳೆಲೇ ಗೋಪಿ ನೀನು ಯಾತಕಳುತ್ತಿದೆಂದಾನೆ |
ನೀನು ಅಳುವ ಕಾರಣ ಗೋಪೆವ್ವ ನನಗೆ ಹೇಳಬೇಕೆಂದಾನೆ || ೧೦ ||

ಮರಣ ಬಂದೀತೆಂದು ಗೋಪೆವ್ವ ನೀನು ಅಳುತ್ತಿದೇನಂದಾನೆ |
ಹೊನ್ನಬಣ್ಣದ ಹುಲಿಯರಾಜ ನೀನು ನನ್ನ ಮಾತು ಕೇಳಯ್ಯ || ೧೧ ||

ಮಲ್ಲಿಗ್ಹೂವಿನಂಥ ಮಗನ ಬಿಟ್ಟು ಬಂದೀನೆಂದಾಳೆ |
ಹುಲ್ಲು ಮೇಯುವನಲ್ಲ ನನ ಮಗ ನೀರು ಕುಡಿಯುವನಲ್ಲವೇ || ೧೨ ||

ಅಂತಃಕರಣವಿಟ್ಟು ಎನಗೆ ಅಪ್ಪಣೆ ಕೊಡಬೇಕೆಂದಾಳೆ |
ಮಲಿಯ ಕುಡಿಸಿ ಬರ್ತೀನಿ ನನಗೆ ಅಪ್ಪಣೆ ಕೊಡಬೇಕೆಂದಾಳೆ || ೧೩ ||

ಎಷ್ಟು ದಿನಽ ಇದ್ದರೇನೀದೇಹ ಕೆಟ್ಟುಹೋಗುವದು ತನುವೇಳೆ |
ಹೊಲಸು ತನುವಿನ ಆಸೆ ಹುಲಿರಾಜ ನನಗೆ ಇಲ್ಲೋ ನಮ್ಮೈ || ೧೪ ||

ಹರನ ಪಾದಸಾಕ್ಷಿಯಾಗಿ ಆಗ-ಬೇಗದಲ್ಲಿ ಬರುವೆನು |
ಆಕಳು ಮಾತು ನಂಬಿ ಹುಲಿರಾಜ ಅಪ್ಪಣೆ ಕೊಟ್ಟು ಕಳಿವ್ಯಾನೆ || ೧೫ ||

ಯಾವಾಗ ಮಗನ ನೋಡೇನೆಂದು ಭೋರೆಗುಟ್ಟುತ ಬಂದಾಳೆ |
ತಾಯಿ ಬರಲಿಲ್ಲೆಂದು ಮಗನು 'ಅಮ್ಮಾ' ಎಂದು ಕರೆದಾನೆ || ೧೬ ||

ಕರಿಯೋ ಕರುವಿನ ದನಿಯು ಕೇಳಿ ಹಾರಿ ಮುಂದಾಕೆ ಬಂದಾಳೆ |
ತಾಯಿ ಕಣ್ಣೀರು ಕಂಡು ಮಗನು ಏನೆಂದಾಡೂತ ಅದಿಯಾನೆ || ೧೭ ||

ಯಾರು ಬೈದ್ದಿದಾರು ಹೇಳು ತಾಯಿ ನಿನಗೆ ಯಾರು ಬಡಿದಿದಾರೆಂದಾನೆ |
ಮಲಿಯ ಕುಡಿಸೂತ ಗೋಪಿತಾಯಮ್ಮ ಏನೆಂದಾಡುತ ಅದಿಯಾಳೆ || ೧೮ ||

ಕರಡಿಗುಡ್ಡದೊಳಗೆ ಮಗನೆ ಹುಲಿಯ ಕೈಯಾಗೆ ಸಿಕ್ಕೀನೆ |
ಹುಲಿಗೆ ನಂಬಿಗೆ ಹೇಳಿ ಮಗನೆ ನಾನು ಬಂದೀನೆಂದಾಳೆ || ೧೯ ||

ನಿನಗೆ ಬುದ್ಧಿಹೇಳಬೇಕೆಂದು ನಾನು ಬಂದೀನೆಂದಾಳೆ |
ಮೂಕನಾಗಬೇಕೆಂದಾಳಲ್ಲೊ ಜ್ವಾಕೇಲಿರಬೇಕೆಂದಾಳೆ || ೨೦ ||

ಹಲವು ಮಾತೀಗೆ ಹಲವರ ಕೂಡ ಕಲಹಮಾಡಬ್ಯಾಡೆಂದಾಳೆ |
ಒಬ್ಬೋನೆ ಏಕಾಂಗಿಯಾಗಿ ಅರಣ್ಯಕೆ ಹೋಗುಬ್ಯಾಡೆಂದಾಳೆ || ೨೧ ||

ಎಳಿಯ ಹುಲ್ಲಿನಾಸೆಗೆ ಮಗನೆ ಗುಡ್ಡಕ್ಹೋಗಬ್ಯಾಡೆಂದಾಳೆ |
ಹುಲ್ಲಿನಾಸೆಗ್ಹೋಗಿ ಮಗನೆ ಘಾಸಿ ಆದೇನೆಂದಾಳೆ || ೨೨ ||

ಮಗನಿಗೆ ಬುದ್ಧಿ ಹೇಳಿ ಗೋಪೆಮ್ಮ ದನದ ಹಟ್ಯಾಗ ಬಿಟ್ಟಾಳೆ |
ದನದ ಹಟ್ಯಾಗ ಮಗನು ಬಿಟ್ಟು ಮುಂದಕ್ಕೆ ಮೂರೆಜ್ಹೋದಾಳೇ || ೨೩ ||

ಎಲ್ಲ ಆಸೆಯ ಬಿಟ್ಟು ಗೋಪಮ್ಮ ಹುಲಿಯ ಗವಿಗೆ ಬಂದಾಳೆ |
ಬಾರೋ ಬಾರೋ ಹುಲಿರಾಜ ನೀನು ನನ್ನ ನುಂಗಾಕೆ ಬಾರೈ || ೨೪ ||

ಅನುಮಾನವಿಲ್ಲದೆ ಹುಲಿರಾಜ ನೀನು ನನ್ನ ನುಂಗಬೇಕೆಂದಾಳೆ |
ಪಂಚಭೂತಂಗಳಿಗೆ ನೀನು ಶಾಂತಮಾಡಬೇಕೆಂದಾಳೆ || ೨೫ ||

ಆಕಳ ಮಾತು ಕೇಳಿ ಹುಲಿರಾಜ ಏನೆಂದಾಡೂತ ಅದಿಯಾನೆ |
ಸತ್ಯವಂತೆ ಅಂದಾನಲ್ಲೊ ಧೈರ್ಯಶಾಲಿ ಅಂದಾನೆ || ೨೬ ||

ನಿಮ್ಮಂಥವರ್ನ ತಿಂದರೆ ತಾಯಿ ನಾನು ನರಕದೊಳಗೆ ಬಿದ್ಹೋದನೆ |
ಹೆತ್ತ ತಾಯಿಗಿಂತ ಎನಗೆ ನೀನು ಹೆಚ್ಚೆಂದಾನೆ || ೨೭ ||

ಸತ್ಯವಂತೆ ಗೋಪಿ ನಿನಗೆ ಮುಕ್ತಿಯಾಗಲೆಂದಾನೆ |
ಆಕಳು ಪಾದಕ ಶರಣುಮಾಡಿ ಅಪ್ಪಣೆ ಕೊಟ್ಟು ಕಳಿವ್ಯಾನೆ || ೨೮ ||

ನಿನ್ನ ಮಗನ ಕೂಡಿ ಗೋಪೆಮ್ಮ ಸುಖದಿಂದಿರ್ಹೋಗೆಂದಾನೆ |
ಸತ್ಯದಿಂದ ನಡೆದು ಗೋಪೆಮ್ಮ ಸೌಖ್ಯದಿಂದಿದ್ದಾಳೆ || ೨೯ ||

ತನ್ನ ಮಗನ ಕೂಡಿ ಗೋಪೆಮ್ಮ ಸೌಖ್ಯದಿಂದಿದ್ದಾಳೆ |
ಸತ್ಯದಿಂದ ನಡೆದವರಿಗೆ ಕುತ್ತು ಬರುವುದುಂಟೇನೆ || ೩೦ ||

ಪರೋಪಕಾರ ಮಾಡಬೇಕು ಪನ್ನಂಗಧರನ ನೆನಿಬೇಕು |
ಪರೋಪಕಾರ ಮಾಡಿದವರಿಗೆ ಪರಮೇಶ್ವರ ತಾ ಒಲಿವನೇ || ೩೧ ||

ಪನ್ನಂಗಧರನ ಪಾದ ನೆನೆದಾರೆ ಪಾಪಪರಿಹಾರಾದಾವೆ |
ದೇವಾರು ಬಂದಾವು ಬನ್ನಿರೇ || ೩೨ ||

★ ಎಸ್. ಜಿ. ಮುಕ್ಕುಂದಿಮಠ

ಗೋಪವ್ವನ ಹಾಡು

(ಸೋಬಾನ ಪದ)

ಎವ್ಮಿಯು ಮುಂದ ಹಾಲಗಣಿಕೆ ಹೂಗಣಿಕೆ
ನನ್ನ ಮುಂದೆರಡ ಒಣದಂಟ ....ಸೋಬಾನ

ನನ್ನ ಮುಂದೆರಡ ಒಣದಂಟನಾದರ
ಚೆಲ್ಲಿ ಹೋಗ ಬಂಜೆಂದು ಹೊಡವತಾರ ....ಸೋಬಾನ

ಚೆಲ್ಲ ಬಂಜೆಂದು ಹೊಡವತಾರ ಅವರಿನ್ನು
ಬಾರ ಬಂಜೆಂದು ಕರೆಯುತಾರ ....ಸೋಬಾನ

* * *

ಕಾಲಕಾಲಾಡುತ ಕೊಳಗ ಚಿವ್ಯಾಡುತ
ಗೋಪಂತಿಗೆ ಬಾಲ ಎಳೆಯುತ ....ಸೋಬಾನ

ಗೋಪಂತಿಗೆ ಬಾಲ ಎಳೆಯುತ ಗೋಪೆವ್ವ
ಹೋದಳ ಶಿವನಾರಮನಿಗೆ ....ಸೋಬಾನ

ಎಂದಿಲ್ಲದ ಗೋಪವ್ವ ಇಂದ್ಯಾಕ ಬಗಿಬಂದೆ
ಕುಂಡರಗೊಳ್ಳ ಮಣಿ ಚೌಕಿ ....ಸೋಬಾನ

ಕುಂಡರನಾ ಬಂದಿಲ್ಲಾ ನಿಂದರನಾ ಬಂದಿಲ್ಲಾ
ಬಂಜೆಂಬು ಶಬುದ ಬಿಡಿಸಯ್ಯಾ ....ಸೋಬಾನ

ಬುಟ್ಟ್ಯಾನ ಇಬೂತಿ ಬಟ್ಟೇಲೆ ತೆಗೊಂಡು
ಇಟ್ಟ್ಯಾನ ಗೋಪವ್ವ ನೊಸಲಾಗ ....ಸೋಬಾನ

* * *

ಕಾಲಕಾಲಾಡುತ ಕೊಳಗ ಚಿವ್ಯಾಡುತ
ಗೋಪಂತಿಗೆ ಬಾಲ ಎಳೆಯುತ ....ಸೋಬಾನ

ಗೋಪಂತಿಗೆ ಬಾಲ ಎಳೆಯುತ ಬಂದಾಳ
ಗೋಪವ್ವ ತನ್ನ ಅರಮನಿಗೆ ....ಸೋಬಾನ

ಒಂದೆಂಬು ತಿಂಗಳಿಗೆ ಒಂದೇನ ಬಗಿಸ್ಯಾಳ
ಕಾಕೀಯ ಹಣ್ಣ ಕೈಯ್ಯ ತುಂಬ ....ಸೋಬಾನ

ಎರಡೆಂಬು ತಿಂಗಳಿಗೆ ಎರಡೇನು ಬಗಿಸ್ಯಾಳ
ಎಡಗೈಯ್ಯಾಗ ಉಪ್ಪ ಎಳೆಹುಣಿಸೆ ....ಸೋಬಾನ

ಮೂರೆಂಬು ತಿಂಗಳಿಗೆ ಮೂರೇನ ಬಗಿಸ್ಯಾಳ
ಮೂಡಲ ದಿಕ್ಕ ಮಗಿಮಾವ ....ಸೋಬಾನ

ನಾಲ್ಕೆಂಬು ತಿಂಗಳಿಗೆ ನಾಲ್ಕೇನ ಬಗಿಸ್ಯಾಳ
ಮಕ್ಕಳ ತಾಯೆಂದು ಕರೆದಾರ ....ಸೋಬಾನ

ಐದೆಂಬು ತಿಂಗಳಿಗೆ ಐದೇನು ಬಗಿಸ್ಯಾಳ
ಕೊಯ್ದು ಮಲ್ಲಿಗೆ ನೆನೆದಂಡೆ ....ಸೋಬಾನ

ಆರೆಂಬು ತಿಂಗಳಿಗೆ ಆರೇನು ಬಗಿಸ್ಯಾಳ
ಆರಿದ ಬಾನ ಕೆನೆಮಸರು ....ಸೋಬಾನ

ಏಳೆಂಬು ತಿಂಗಳಿಗೆ ಏಳೇನು ಬಗಿಸ್ಯಾಳ
ಹೇಳಿ ಕಳುವ್ಯಾಳ ತವರೀಗೆ ....ಸೋಬಾನ

ಎಂಟೆಂಬು ತಿಂಗಳಿಗೆ ಎಂಟೇನು ಬಗಿಸ್ಯಾಳ
ಕಂಟಲಿ ಎತ್ತ ಕರಿ ಬರಲಿ ....ಸೋಬಾನ

ಒಂಬತ್ತು ತಿಂಗಳಿಗೆ ತುಂಬ್ಯಾವ ದಿನಗಳು
ಸಂದಿಗೆ ಸಂದೆಲ್ಲ ಕಿರಿಬ್ಯಾನಿ ....ಸೋಬಾನ

ಐತಾರ ಸಂಜೀಲಿ ಸ್ವಾಮಾರ ಮುಂಜೇಲಿ
ಹುಟ್ಯಾನ ಉಳವೀಯ ಬಸವಣ್ಣ ...... ಸೋಬಾನ

* * *

ಕಾಲಕಾಲಾಡುತ ಕೊಳಗ ಚಿಮ್ಯಾಡುತ
ಗೋಪಂತಿಗೆ ಬಾಲ ಎಳೆಯೂತ ....ಸೋಬಾನ

ಗೋಪಂತಿಗೆ ಬಾಲ ಎಳೆಯೂತ ಗೋಪೆವ್ವ
ಏರತಾಳ ಗುಡ್ಡ ಮೇಯುತಾಳ ....ಸೋಬಾನ

ಕಡ ಕಡ ಎನ್ನುತ ಕುಡಿಮಿಂಚು ಹೊಡೆಯುತ
ಎದ್ದಾನ ಹುಲಿರಾಯ ಮೆಯ್‌ಮುರಿದ ....ಸೋಬಾನ

ಎದ್ದಾನ ಹುಲಿರಾಯ ಮೆಯ್‌ಮುರಿಯುತ
ಮೆಯ್ ಮುರಿಯುತೇನ ನಿನ್ನ ಅನ್ನತಾನ ....ಸೋಬಾನ

ಬಾಳ ದಿನಕೊಂದು ಕಂದನ ಹಡದೇನ
ಕಂದಗ ಮಲಿ ಕೊಟ್ಟು ಬರತೇನ ....ಸೋಬಾನ

ಏನಾದರೂ ಹೇಳಿದರು ನಾನಂದ್ರ ಕೇಳುದಿಲ್ಲ
ಈಗ ನಿನ್ನs ಮುರಿಯುತೇನಿ ....ಸೋಬಾನ

ಆ ದೇವರಾಣೆ ಈ ದೇವರಾಣೆ
ಮನೆಯೊಳಗಿದ್ದ ಕಂದವ್ವನಾಣೆ ....ಸೋಬಾನ

ನನ್ನಾಣೆ ನಿನ್ನಾಣೆ ಸುಣ್ಣದ ಕಲ್ಲಿನ ಮದಲಾಣೆ
ನೀ ಹೇಳಿದ ಮಾತು ತಪ್ಪೋದಿಲ್ಲ ....ಸೋಬಾನ

ನೀ ಹೇಳಿದ ಮಾತು ತಪ್ಪೋದಿಲ್ಲ ಹುಲಿರಾಯ
ಬಾಲಾಗ ಮಲಿ ಕೊಟ್ಟು ಬರತೇನ ....ಸೋಬಾನ

* * *

ಕಾಲಕಾಲಾಡುತ ಕೊಳಗ ಚಿಮ್ಯಾಡುತ
ಗೋಪಂತಿಗೆ ಬಾಲ ಎಳೆಯುತ ....ಸೋಬಾನ

ಗೋಪಂತಿಗೆ ಬಾಲ ಎಳೆಯುತ ಹೋದಾಳ
ಗೋಪೆವ್ವ ತನ್ನ ಅರಮನೆಗೆ ....ಸೋಬಾನ

ಬಾರಪ್ಪ ಮಗನೆ ಮಲಿಯು ಉಣ್ಣು
ಸಣ್ಣ ಹೋರಿನ ಮಾಡಿ ಗಳೇಕ ಕರಿತಾರ ....ಸೋಬಾನ

ಸಣ್ಣ ಹೋರಿನ ಮಾಡಿ ಗಳೇಕ ಕರಿದರ
ಕಾಲಾಗಿನ ಸಾಲ ಮುರಿಬ್ಯಾಡ ....ಸೋಬಾನ

ದೊಡ್ಡ ಹೋರಿನ ಮಾಡಿ ರೆಂಟಿಗೆ ಕರಿತಾರ
ಕಳ್ಳತನ ಮಾಡಿ ಬಿಡಬ್ಯಾಡೋ ....ಸೋಬಾನ

ಇಷ್ಟೆಲ್ಲ ಹೇಳತಿ ನೀ ಎಲ್ಲಿ ಹೋಗತಿ
ನಾನು ಬರತೇನ ನಿನ ಕೂಡ ....ಸೋಬಾನ

ಹೂ ಆಗುವವ ನೀನು ಕಾಯಾಗುವವ ನೀನು
ಬೇಡಪ್ಪ ಮಗನೆ ನನ ಕೂಡ ....ಸೋಬಾನ

ನೀನೇನಾದರೂ ಹೇಳಿದರೂ ನಾನೇನೂ ಕೇಳೂದಿಲ್ಲಾ
ನಾನೂ ಬರತೇನ ನಿನ್ನ ಕೂಡ ....ಸೋಬಾನ

ಹಿಂದ್ಹಿಂದ ತಾಯವ್ವ ಮುಂದಮುಂದ ಮಗನವ್ವ
ಏರತಾರ ಗುಡ್ಡ ಮೇಯುತಾರ ....ಸೋಬಾನ

ಕಡ ಕಡ ಎನ್ನುತ ಕುಡಿಮಿಂಚು ಹೊಡೆಯುತ
ಎದ್ದಾನ ಹುಲಿರಾಯ ಮೈಯು ಮುರದ ....ಸೋಬಾನ

ನಮ್ಮವ್ವನ ಮುರಿಬ್ಯಾಡ ನನ್ನ ಮುರಿ ಹುಲಿರಾಜ
ನನ್ನ ಎಳೆಯು ಖಂಡ ಬಹಳ ಸವಿಯೋ ....ಸೋಬಾನ

ನನ್ನ ಮಗನ ಮುರಿಬ್ಯಾಡ ನನ್ನ ಮುರಿ ಹುಲಿರಾಜ
ನನ್ನ ಬಲಿತ ಖಂಡ ಬಹಳ ಸವಿಯೋ ....ಸೋಬಾನ

ನಿನ್ನನ್ನು ಮುರಿದರೂ ನನಗೆ ಕಷ್ಟ ಶ್ರೀಗೋಪಿ
ನಿನ್ನ ಕಂದನ ಮುರಿದರೂ ನನಗೆ ಕಷ್ಟ ....ಸೋಬಾನ

ನಿನ್ನ ಕಂದನ ಮುರಿದರೂ ನನಗೆ ಕಷ್ಟ ಶ್ರೀಗೋಪಿ
ನೀ ಮಕ್ಕಳ ತಾಯಾಗಿ ಇರಹೋಗ ....ಸೋಬಾನ

ಕಾಲಕಾಲಾಡುತ ಕೊಳಗ ಚಿಮ್ಯಾಡುತ
ಹೋದಾಳ ಗೋಪವ್ವ ತನ್ನರಮನೆಗೆ ....ಸೋಬಾನ

★ ಎಂ. ಎಸ್. ಇಂಚಲ

ವೀರಶೈವ ಅಪ್ರಕಟಿತ ಕೃತಿಗಳು

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಅ. ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
401	ಪರಮರಹಸ್ಯ	?	1600	ಟೀ.	III. 397
402	ಪರಮರಹಸ್ಯೋಪದೇಶಸಂಗ್ರಹ	?	?	?	III. 425
403	ಪರಮರಹಸ್ಯೋಪದೇಶಸಂಗ್ರಹ ಟೀಕೆ	?	18 ಶ.	ಟೀ.	III. 425
404	ಪರಮಮೂಲಜ್ಞಾನಪ್ರಶಸ್ತಿ	ಸೋ. ಚಿಕ್ಕವೀರಒಡೆಯ		ವ. 815	ಸ.ದೀ., 133 (ಪು. 9–16)
405	ಪರಮವಿರಕ್ತನ ಐಕ್ಯಸ್ಥಲ	ಕ. ನಾಗಲಿಂಗ	1430	ತ್ರಿ.-61	KRI. VIII. ಸಂ. 60
406	ಪರಮಶಿವಾಧಿಕ್ಯಚೂಡಾಮಣಿ	ಸಿದ್ಧನಂಜಯ್ಯ	?	?	III. 425
407	ಪರಮಾತ್ಮಪ್ರಕಾಶಿಕೆ	ಸೋ. ರೇವಣಾಚಾರ್ಯ	1623	ಟೀ.	III. 365–66
408	ಪರಮಾರ್ಥಜ್ಞಾನತ್ರಿಪದಿ	?	?	ತ್ರಿ.	III. 425
409	ಪರಮಾರ್ಥತತ್ವಬೋಧೆ	?	17 ಶ.	?	III. 425
410	ಪರಮಾರ್ಥತ್ರಿಪದಿ	ಪುಷ್ಪದಂತ	?	ತ್ರಿ.	AIKM., ಸಂ. 656–58
411	ಪರವಾದಿಗಜಾಂಕುಶತಾರಾವಳಿಯ ಟೀಕೆ	?	?	ಟೀ.	III. 425
412	ಪರಾಕುಸ್ತೋತ್ರ	ಕರಿಬಸವಾರ್ಯ	?	?	ಶಿ.ಭ., 6 (ಪು. 233)
413	ಪರ್ವತಚರಿತ್ರ	?	17 ಶ.	ಷ.	III. 425
414	ಪಂಚಕಲಶದೀಕ್ಷಾವಿಧಿ	?	?	ಗ.	K. 271/1
415	ಪಂಚಗದ್ಯಟೀಕೆ	ವಿರಕ್ತತೋಂಟದಾರ್ಯ	1560	ಟೀ.	II. 282 (ಅಲಭ್ಯ)
416	ಪಂಚಚಾಮರವೃತ್ತ	ಚನ್ನವೀರದೇಶಿಕ	1650	?	RCS. No. 2 (ಪು. 9)

ವ.ಪ್ರ. ೧೫

417	ಪಂಚಬ್ರಹ್ಮೋದಯಭಾಷ್ಯ	ಸಾಸಲ ಚಿಕ್ಕಾರಾಧ್ಯ	1450	ಗ.-ಅಧ್ಯಾಯ 9	III. 378–79
418	ಪಂಚಮೋದ್ಭವ ಕಾವ್ಯ	ಮೊದಿಯರುದ್ರ	1737	?	III. 39 (ಅಲಭ್ಯ)
419	ಪಂಚರತ್ನಪ್ರಪ್ರತಿಪಾಕಸವ	ಸಕ್ಕರೆಶಾಂತ	1800	ವ.	K. 241/1
420	ಪಂಚವಟೀರಾಮಾಯಣ	ವೀರನಗೆರೆ ಪುಟ್ಟಣ್ಣ	19 ಶ.	ಯ.	III. 770
421	ಪಂಚಾಕ್ಷರಿಯಪ್ರಣಮಂಗಳು	?	1700	ಗ.	III. 308
422	ಪಂಚಾಕ್ಷರಿಮಹಿಮೆ	?	?	ಭಾ. ಷ.	L. 89/2
423	ಪಂಚಾಕ್ಷರಿಯಂತ್ರಮಂತ್ರ	?	?	ಹಾ.	GOML. IV. ಸಂ. 741
424	ಪಂಚಾಕ್ಷರಿರಗಳೆ	?	?	ರ.–37	KA. 567
425	ಪಂಚಾಕ್ಷರೀವಲ್ಲಭಶತಕ	?	1550	ವೃ.	ಶಂ.ಶ., (ಪೀಠಿಕೆ) xxiv
426	ಪಂಚಾಕ್ಷರೋಪದೇಶ	?	?	ಗ.	ಶ್ರೀ. ಎಲ್. ಬಿ. ಅವರ ಪ್ರತಿ
427	ಪಂಚಾಚಾರ್ಯರ ಶೋಭನದ ತ್ರಿವಿಧಿ	?	?	ತ್ರಿ.	III. 424
428	ಪಂಚಾಚಾರ್ಯವಂಶಪಾರಂಪರ್ಯ	?	18 ಶ.	?	III. 424
429	ಪಂಚಾಚಾರ್ಯವಂಶಾವಳಿಯ ಟೀಕೆ	?	?	ಟೀ.	III. 424
430	ಪಂಚಾಶಿಕೆ	ಗುರುಸಿದ್ಧ	1528	ಭಾ. ಷ.–13·673	III. 277
431	ಪಂಚಾಸ್ಯಪುರಾಣ	ಕರಿಸಿದ್ಧಯೋಗಿ	?	?	ಸ.ದೀ., 97-8
432	ಪಂಚೀಕರಣಟೀಕೆ	?	?	ಟೀ	III. 424
433	ಪಂಚೀಕರಣಪದಗಳ ಟೀಕೆ	?	17 ಶ.	ಟೀ.	III. 425
434	ಪಂಡಿತಚರಿತ್ರೆ	ಇಡಗೂರು ರುದ್ರಕವಿ	19 ಶ.	?	ದೇ.ದಾ.ಪ್ರ., 42 (ಅಲಭ್ಯ)

ಅ. ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
435	ಪಂಡಿತಾರಾಧ್ಯಚಾರಿತ್ರ (ಗುರುರಾಜ) ವ್ಯಾಖ್ಯಾನ	ಮಲ್ಲಿಕಾರ್ಜುನ	1593	ಟೀ.	II. 313–14
436	ಪಂಪಾಶತಕ	ಗ. ಸಂಗವಿಭು	1720	ವೃ.	ಶ್ರೀ ಶಾಂತರಸರಲ್ಲಿನ ಪ್ರತಿ
437	ಪ್ರಬೋಧಚಂದ್ರೋದಯ	ಕರಿಯಸಿದ್ಧೇಶ	?	ಮಿ. 11.1197	ಶ್ರೀ ಎಸ್. ಬಸವಾರಾಧ್ಯರಲ್ಲಿನ ಪ್ರತಿ
438	ಪ್ರಭುಚರಿತ್ರೆ	ರಾಚಯ್ಯ	?	ಸಾಂ. 9.1077	ಶ. ಸಾ., 1.6
439	ಪ್ರಭುಚರಿತ್ರೆ	?	?	ಯು.	K. 531/2, K. 631
440	ಪ್ರಭುಚರಿತ್ರೆಯ ಪೀಠಿಕೆ	?	?	ಯು.	KB. 341/2
441	ಪ್ರಭುದೇವರ ತಾರಾವಳಿ	?	17 ಶ.	?	III. 425
442	ಪ್ರಭುದೇವರ ಅಷ್ಟಕ	?	?	ವೃ.	K. 1106/V
443	ಪ್ರಭುದೇವರ ಟೀಕಿನ ವಚನ	ಕುಮಾರ ಬಂಕನಾಥ	1430	ಟೀ.	II. 56
444	ಪ್ರಭುದೇವರ ಲಿಂಗಾಂಗಸಮರಸ ವಚನದ ವ್ಯಾಖ್ಯಾನ	?	?	ಟೀ.	ಶಸಾ., 12.4 (ಪು. 176)
445	ಪ್ರಭುದೇವರ ಸೃಷ್ಟಿಯ ವಚನದ ಟೀಕೆ	?	?	ಟೀ.	III. 425
446	ಪ್ರಭುದೇವಸ್ತುತಿ	?	?	ಕಂ.	GOML. V. ಸಂ. 841
447	ಪ್ರಭುನಾಟಕ	ಸಕ್ಕರೆಶಾಂತ	1800	ನಾ.	III. 390
448	ಪ್ರಭುಲಿಂಗಲೀಲೆ	ಚನ್ನಮಲ್ಲ	?	?	ಜಕ., 7.4

449	ಪ್ರಭುಲೀಲೆ	?	17 ಶ.	ಸಾಂ.	III. 425
450	ಪ್ರಭುವಿನಸಾಂಗತ್ಯ	ಪರ್ವತೇಶ	1600	ಸಾಂ.	K. 585
451	ಪ್ರಮಥಮಹಿಮೆ	?	?	ಗ.	KRI. VI. ಸಂ. 63
452	ಪ್ರಸನ್ನಲಿಂಗನ ಹಾಡು	?	16 ಶ.	ಹಾ.	III. 425
453	ಪ್ರಸಾದಚಾರಿತ್ರ	ವೀರಣಾರ್ಯ	1650	ಸಾಂ.-3.290	II. 433
454	ಪ್ರಸಾದಚಿಂತಾಮಣಿ	ಜಡೆಯ ಸಿದ್ಧಲಿಂಗೇಶ	17 ಶ.	ಸಾಂ.	III. 425
455	ಪ್ರಸಾದಚಿಂತಾಮಣಿ	ವೀರಣಾರ್ಯ	17 ಶ.	ಸಾಂ.	III. 425
456	ಪ್ರಸಾದಮಾಹಾತ್ಮ್ಯ	?	?	?	III. 425
457	ಪ್ರಸಾದರಗಳೆ	ಶಂಕರದೇವ	1500	ರ.	ಪ್ರಕ., 17.4 (ಪು. 11-2)
458	ಪ್ರಸಾದವಾಕ್ಯ	ಎರಡನೆಯ ಚೆನ್ನಬಸವ	15 ಶ.	?	III. 425
459	ಪ್ರಸಾದವಾಕ್ಯ	ಬಾಲಲೀಲಾ ಮಹಾಂತ ಶಿವಯೋಗಿ	1840	ವ.	KB. 341/7
460	ಪ್ರಸಾದಸಂಪಾದನೆ	ನೀಲಮ್ಮ	1160	?	I. 201
461	ಪ್ರಸ್ತಾವಶ್ಲೋಕ	ಪು. ಚೆನ್ನಸಂಗಪ್ಪ	1875	ಟೀ. 120	OUL., ಸಂ. 234
462	ಪಾದಸ್ತೋತ್ರ	ಸಂ. ಸಿದ್ಧವೀರಣಾಚಾರ್ಯ	1600	?	II. 324-25 [ಅಲಭ್ಯ]
463	ಪಾದೋದಕಪ್ರಸಾದಲಿಂಗಾರ್ಪಣ ಕ್ರಮದ ಟೀಕೆ	?	?	ಟೀ.	III. 425
464	ಪಾರಮೇಶ್ವರಟೀಕೆ	?	17 ಶ.	ಟೀ.	III. 425
465	ಪಾರಿಜಾತಹೋಳಿಪದ	ಕುಂದಗೋಳ ಬಸವಲಿಂಗ	1800	ಹಾ. 78	OUL., ಸಂ. 249

ಅ. ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
466	ಪಾಲಕಾಪ್ಯಕೃತ ಹಸ್ತ್ಯಾಯುರ್ವೇದಟೀಕೆ	ವೀರಭದ್ರರಾಜ	1600	ಟೀ.	II. 343–44
467	ಪಾಲ್ಕುರಿಕೆಸೋಮನಾಥನ ಪಂಚಗದ್ಯದ ಟೀಕೆ	?	?	ಟೀ.	III. 425
468	ಪಾರ್ವತೀಕಲ್ಯಾಣ	?	18 ಶ.	ಸಾಂ.	III. 425
469	ಪ್ರಾಣಲಿಂಗನಿರ್ಣಯ	?	17 ಶ.	?	III. 425
470	ಪ್ರಾಣಲಿಂಗಶತಕ	ಗುರುವ	1700	ವೃ–101	III. 248
471	ಪಿಟ್ಟವ್ವೆಚರಿತ್ರೆ	ರಾಚಯ್ಯ	?	ಸಾಂ.-1.42	ಶ.ಸಾ., 1.6
472	ಪಿಂಡೋತ್ಪತ್ತಿ	?	?	ಗ.	K. 391/2
473	ಪುನರ್ದೀಕ್ಷೆರಗಳೆ	ಶಂಕರದೇವ	1500	ರ.	III. 283-84
474	ಪುರಾತನಭಕ್ತವಿಲಾಸ	?	?	?	III. 425
475	ಪುರಾತನರಗಳೆ	ಗುಬ್ಬಿಯ ಮಲ್ಲಣಾರ್ಯ	1513	ರ.	II. 191 [ಅಲಭ್ಯ]
476	ಪುರಾತನರ ಪ್ರಕರಣಗಳು	?	?	?	ವ.ವಾ.ಭಾಂ. (ಧಾ)
477	ಪುರಾತನರ ರಗಳೆ	ಮಲ್ಲಿಕಾರ್ಜುನ	?	ರ.	III. 425
478	ಪುರಾತನರ ಸಾಂಗತ್ಯ	ಅಂ/ಚೆನ್ನಗುರುಮಲ್ಲೇಶ್ವರ	?	ಸಾಂ.–150	GOML. IV., ಸಂ. 749
479	ಪುರಾತನವಚನ	?	?	ವ.	III. 425
480	ಪುಷ್ಪದಷ್ಟಕ	ಶಂಕರದೇವ	1500	ಷ.–17	III. 284
481	ಪುಷ್ಪಲಿಂಗಚರಿತ್ರೆ	?	17 ಶ.	?	III. 425

482	ಪ್ರೇಮಾಷ್ಟಕ	ಅಂ/ಹಂಪೆಯ ವಿರೂಪಾಕ್ಷ	1700	ಕಂ.-9	III. 397
483	ಫಕೀರೇಶ್ವರಪುರಾಣ	?	?	?	III. 425
484	ಬಲ್ಲಾಳಚರಿತೆ	?	17 ಶ.	ತ್ರಿ.	III. 426
485	ಬಸವಕಂದ	?	?	ಕಂ.	ಶಿಫ., 7.1 (ಪು. 58)
486	ಬಸವಚರಿತ್ರೆ	?	17 ಶ.	ಷ+ಶ್ಲೋ.	III. 426; K. 506/3
487	ಬಸವನ ಅನುಭವ	?	17 ಶ.	?	III. 426
488	ಬಸವನ ಚರಿತೆ	?	?	ಷ+ಹಾ.	III. 426
489	ಬಸವನ ಚಂದದ ಅರಮನೆ	?	?	?	III. 426
490	ಬಸವನ ಷಡಕ್ಷರೀ ರಗಳೆ	?	?	ರ.	III. 426
491	ಬಸವ ನೀಲಮ್ಮನುರುಟಣೆ	ಶಿದ್ವೀರಪುತ್ರ	?	ದ್ವಿ. ? – 25	KB. 55
492	ಬಸವಪವಾಡದ ಕಂದ	?	?	ಕಂ.	III. 426
493	ಬಸವಪವಾಡದ ರಗಳೆ	ಅಂ/ಹಂಪೆಯ ವಿರೂಪಾಕ್ಷ	1600	ರ–112	III. 284
494	ಬಸವಪವಾಡಲೀಲಾಮೃತ	ಸರೀಗಲ್ಲ ಶಿವಬಸಪ್ಪಶಾಸ್ತ್ರಿ	1840	ಭಾ.ಷ.–11.980	III. 461-62
495	ಬಸವಪುರಾಣದ ಪುರಾತನರ ಚರಿತೆ	ಕುಮಾರ ಚೆನ್ನಬಸವ	1550	ವಾ.ಷ.-9.350	II. 254-56
496	ಬಸವಪುರಾಣ (ಶಂಕರಕವಿ)ದ ವ್ಯಾಖ್ಯಾನ	ಮಲ್ಲಿಕಾರ್ಜುನ	1593	ಟೀ.	II. 313-14
497	ಬಸವಪುರಾಣಾರ್ಥಪ್ರಕಾಶಿಕೆ	?	17 ಶ.	ಗ.	III. 426
498	ಬಸವರಗಳೆ	ಕರಿಬಸವಾರ್ಯ	?	ರ.	ಶಿ.ಫ., 6 (ಪು. 233)
499	ಬಸವರಾಜನ ಪವಾಡ	ಮುರುಳಸಿದ್ಧ	1700	ಗ.	II. 530-31

ಅ. ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
500	ಬಸವವೃತ್ತಾಂತ	?	17 ಶ.	?	III. 426
501	ಬಸವಶತಕ	ಸಿದ್ಧನಂಜೇಶ	1650	?	II. 379-80 (ಅಲಭ್ಯ)
502	ಬಸವಶತಕ	ಯೋಗಾನಂದ	1750	ಸಾಂ.-110	III. 106-07
503	ಬಸವಶಿಖಾಮಣಿ	ಹಾರುವ ?	1700	ಸಾಂ.-11·1270	III. 250-51
504	ಬಸವಶಿಖಾಮಣಿ	?	?	ದ್ವಿ.	ಬ.ಕಾ., 43-4
505	ಬಸವಸಂಪಾದನೆ	?	?	ಸಾಂ.-49·4613	ಬ.ಸಾ.ದ., ಸಂ. 124
506	ಬಸವಸ್ತುತಿ	?	?	5	GOML. IV., ಸಂ. 760
507	ಬಸವಸ್ತೋತ್ರ	?	?	?	III. 426
508	ಬಸವಸ್ತೋತ್ರದ ತ್ರಿವಿಧಿಯ ಟೀಕೆ	?	18 ಶ.	ಟೀ.	III. 426
509	ಬಸವಸ್ತೋತ್ರಷಟ್ಪದಿ	ಅಂ/ಸಿದ್ಧವಟಧಾಮ	?	ಮಿ. 109	KB. 231
510	ಬಸವಾದಿಪ್ರಮಥರ ಚರಿತೆ	?	17 ಶ.	ಷ.	III. 426
511	ಬಸವೇಶದೇವರ ತ್ರಿಪದಿ	?	?	ತ್ರಿ.-49	ಶ್ರೀ. ಎಲ್. ಬಿ. ಅವರ ಪ್ರತಿ
512	ಬಸವೇಶ್ವರದೇವರ ವಚನಸಾರಾರ್ಥ	ಪರ್ವತಶಿವಂಯೋಗಿ	1650	ಟೀ.	II. 397
513	ಬಸವೇಶ್ವರನ ಕಾವ್ಯ	ಗರಣಿ ಬಸವಲಿಂಗ	1700	ಸಾಂ. 19.3108	KBV. 58
514	ಬಸವೇಶ್ವರನ ತಾರಾವಳಿ	?	1600	ವಾ. ಷ. 86	III. 286
515	ಬಸವೇಶ್ವರನ ನೂರೆಂಟು ನಾಮ	ಅಂ/ನಿರಂಜನಲಿಂಗಾ	?	ಹಾ.	KV. 68/11

516	ಬಸವೇಶ್ವರನ ಪವಾಡ	?	17 ಶ.	?	III. 426
517	ಬಸವೇಶ್ವರನ ಪಂಚಸ್ತೋತ್ರ	?	?	ವಾ.ಷ.-5	III. 278
518	ಬಸವೇಶ್ವರನ ಪಂಚಸ್ತೋತ್ರ	?	?	ಟೀ. 5	GOML. IV., ಸಂ. 761
519	ಬಸವೇಶ್ವರನ ಪಂಚಸ್ತೋತ್ರ	?	?	ವಾ+ಭಾ.ಷ-57	KA. 212/2
520	ಬಸವೇಶ್ವರನ ಮಹಿಮಾಶತಕ	ಶಂಕರಾ	1600	ವೃ.-118	K. 767
521	ಬಸವೇಶ್ವರಪರಿವರ್ಧಿನಿ	ಕರಿಬಸವಾರ್ಯ	?	ಷ.	ಶಿಭ., 6 (ಪು. 233)
522	ಬಸವೇಶ್ವರ ಪುರಾಣದ ಕಥಾಸಾಗರ	ಉ. ಬಸವಲಿಂಗದೇವ	1600	ಗ.-464	II. 321–22
523	ಬಸವೇಶ್ವರ ಸಹಸ್ರನಾಮ	?	?	?	III. 426
524	ಬಸವೇಶ್ವರಸಂಗೀತ	?	1800	?	III. 426
525	ಬಹುರೂಪಿ ಚೌಡಯ್ಯಗಳ ರಗಳೆ	ಶಂಕರದೇವ	1500	ರ.	ಹ.ಕೃ. ಸಂ., 150
526	ಬ್ರಹ್ಮಾದ್ವೈತಸಿದ್ಧಾಂತಷಟ್ಸ್ಥಲಾಭರಣ	?	?	ಗ.	III. 426
527	ಬ್ರಹ್ಮೋತ್ತರಖಂಡ	ಮಹಾದೇವ	1725	ಭಾ.ಷ., 32-1898	III. 33–6
528	ಬ್ರಹ್ಮೋತ್ತರಖಂಡ	ರೇವಣ			III. 426
529	ಬಾಣಗದ್ಯ	ಸೋಮನಾಥ	?	ಗ.	III. 426
530	ಬಾರಮಾಸ	ಕಲ್ಲೂರ ಲಿಂಗಕವಿ		30	OUL., ಸಂ. 238
531	ಬಾಲಕುಮಾರರಾಮನ ಸಾಂಗತ್ಯ	ಹಂಪೆಯ ಮಹಲಿಂಗಸ್ವಾಮಿ	1550	ಸಾಂ.-19.4283	ಕ.ಸಾ., 7.2–3
532	ಬಿಜ್ಜಮಹಾದೇವಿಯ ಪುರಾಣ	?	?	?	ಪು.ದೇ.ತ್ರಿ., 26
533	ಬಿಜ್ಜವ್ವೆಯ ಕಥೆ	?	?	?	III. 426

ಅ. ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
534	ಬಿಜ್ಜಳದೇವಿಯ ವಚನ	?	?	ವ.	III. 426
535	ಬಿಜ್ಜಾಂಬಚರಿತೆ	ಗುರುಸಿದ್ಧ	1720	ಯ.	ಪ್ರಲೀ., ಪೀಠಿಕೆ viii
536	ಬಿಡುವಚನ	?	18 ಶ.	ಹಾ.	III. 426
537	ಬಿಬ್ಬಿಬಾಚಯ್ಯಗಳ ರಗಳೆ	ಶಂಕರದೇವ	1500	ರ.	ಹ. ಕೃ. ಸಂ., 150
538	ಬಿರುದಾವಳಿಗದ್ಯಚತುರ್ಭೇರಿ	?	?	ಗ.	III. 426
539	ಬಿಲ್ಲಮೇಶ್ವರನ ಕಾವ್ಯ	ಶಾಂತವೀರದೇಶಿಕ	1650	?	GOML. IV., ಸಂ. 803
540	ಬೆಡಗಿನ ಪದಗಳು	ಶಿವಲಿಂಗದೇವ	?	ಹಾ.	K. 629/1
541	ಬೋಧಾಮೃತ	ಕಿರೀಟ ಮಹಲಿಂಗದೇವ	?	ತ್ರಿ.	'ಜ್ಯೋತಿ ಬೆಳಗುತಿದೆ', 145
542	ಭಕ್ತಾಧಿಕ್ಯದ ಟೀಕೆ	?	?	ಟೀ.	III. 426
543	ಭಕ್ತಾಧಿಕ್ಯರತ್ನಾವಳಿ (ಷಡಕ್ಷರದೇವ) ಟೀಕೆ	ಗುರುಸಿದ್ಧಸ್ವಾಮಿ	?	ಟೀ.	ಶಸಾ., 27.6 (ಪು. 234)
544	ಭಕ್ತಾಧಿಕ್ಯರತ್ನಾವಳಿಯ ಟೀಕೆ	?	?	ಟೀ.	III. 426
545	ಭಕ್ತಾನಂದಲೀಲೆ	ನಿಂಬಾಣದ ಗಣೇಶ್ವರ	1160	?	I. 202
546	ಭಕ್ತಿಜನ್ನಹದ ರಗಳೆ	ಶಂಕರದೇವ	1500	ರ.–138	II. 361–63
547	ಭಕ್ತಿರಸಸೋನೆ	ಮಂಚಯ್ಯ	1650	ಸಾಂ.–25.2409	KB. 463
548	ಭರತಶಾಸ್ತ್ರಟೀಕೆ	ಮಲ್ಲಿಕಾರ್ಜುನ ?	17 ಶ.	ಟೀ.	III. 426
549	ಭಸ್ಮವಿಧಾನಕ್ರಮ	?	17 ಶ.	ಗ.	III. 426

550	ಭಾವಚಿಂತಾರತ್ನ (ಗುಬ್ಬಿಯ ಮಲ್ಲಣ್ಣ) ಟೀಕೆ	ಪಟ್ಟುಗಂಬಳಿ ಸಿದ್ಧಲಿಂಗಸ್ವಾಮಿ	1700	ಟೀ.	II. 532
551	ಭಾವಚಿಂತಾರತ್ನದ ಟೀಕೆ	?	?	ಟೀ.	III. 426
552	ಭಿಕ್ಷಾಚರ್ಯೆಯ ಹಾಡು	?	17 ಶ.	ಹಾ.	III. 427
553	ಭಿಕ್ಷಾದಾನಕಾವ್ಯ	ಕುಮಾರಮಲ್ಲಯ	17 ಶ.	?	III. 427
554	ಭಿಕ್ಷುಕಮಹೋತ್ಸವಿಲಾಸ	ಕುಮಾರವಿಧು	1821	ಚಂ.	III. 459-60
555	ಭಿಲ್ಲಮರಾಯಚರಿತೆ	ಎಮ್ಮೆಬಸವ	1543	ಸಾಂ.-8 ?	ಕಸಾ., 12.4 (ಪು. 176)
556	ಭಿಲ್ಲಮರಾಯನ ಸಾಂಗತ್ಯ	?	?	ಸಾಂ.	III. 427
557	ಭುವನಕೋಶ	?	1650	ಗ.	III. 298
558	ಭುವನಕೋಶ	ಅಂ/ಗುರುಶಾಂತೇಶಾ	?	ಗ.	K. 638
559	ಭುವನಕೋಶ	ಉ. ಬಸವಲಿಂಗದೇವ	1600	ಗ.	K.A. 184/1
560	ಭುವನೈಕನಾಯಕಿಶತಕ	ಗ. ಸಂಗಪ್ಪ	1720	ವೃ.	ಶ್ರೀ ಶಾಂತರಸರ ಪ್ರತಿ
561	ಭೂಚಕ್ರದ ವಿವರ	?	?	?	K.B. 320/2
562	ಭೃಂಗಿದಂಡಕ	ಭೀಮಕವಿ	1369	ರ. ?	I. 481
563	ಭೃಂಗಿಸ್ತವ	ಗುರುದೇವ	1550	ಟೀ.	I. 467
564	ಭೈರವಪುರಾಣ	ಗೋಪಿನಾಥ	?	ಭಾ.ಷ., 30.1369.	K.B. 437
565	ಭೈರವೇಶ್ವರಕಾವ್ಯದ ಕಥಾಸಾಗರ	ಉ. ಬಸವಲಿಂಗದೇವ	1600	ಗ-316	II. 321-22
566	ಭೈರವೇಶ್ವರಪವಾಡ	?	?	? ?	III. 427

ಅ. ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
567	ಭೈರವೇಶ್ವರಪುರಾಣ	ಸಿದ್ಧಲಿಂಗ ಶಿವಯೋಗಿ	1600	ಚಂ.	II. 322–24 (ಅಸಮಗ್ರ)
568	ಭೋಗಲಿಂಗಶತಕ	ಕರಿಬಸವಾರ್ಯ	?	ವೃ.	ಶಿಭ., 6 (ಪು. 233)
569	ಮಗ್ಗೆಯ ಮಾಯಿದೇವ ವಚನ	ಮಗ್ಗೆಯ ಮಾಯಿದೇವ	1430	ವ.	II. 70
570	ಮಠಸ್ಥಲ	?	?	ಗ.	ಶ್ರೀ ಎಲ್. ಬಿ. ಅವರ ಪ್ರತಿ
571	ಮಠಸ್ಥಲಪಂಚಾಚಾರ್ಯ ಉತ್ಪತ್ತಿ	?	?	?	ಜಕ., 7·3 (ಪು. 170)
572	ಮಡಿವಾಳಪ್ಪನ ಕಾವ್ಯ	ತೊರವೆ ಸಿದ್ಧಲಿಂಗ	?	ವಾ.ಷ-11·541	KRI. II. ಸಂ. 23
573	ಮಡಿವಾಳಯ್ಯಗಳ ತಾರಾವಳಿ	ಕ. ನಾಗಲಿಂಗ	1650	ಹಾ–27	III. 293
574	ಮಡಿವಾಳಯ್ಯನವರ ಚರಿತ್ರೆ	ಕ. ಸಿದ್ಧಲಿಂಗ	1600	ಯ.	ಬ.ಕ.ರ., 589
575	ಮಡಿವಾಳಯ್ಯನ ಸಂಗೀತ	?	17 ಶ.	?	III. 427
576	ಮಡಿವಾಳೇಶ ಶತಕ	?	?	ವೃ-109	ವ.ವಾ.ಭಾಂ. (ಧಾ)
577	ಮಣ್ಣೇಶ್ವರಕಾವ್ಯದ ನಾಂದ್ಯ	?	1600	ಷ-13	III. 282–83
578	ಮಣ್ಣೇಶ್ವರಪುರಾಣ	?	1600	ಷ.	III. 427
579	ಮಣ್ಣೇಶ್ವರಪುರಾಣದ ಟೀಕೆ	?	17 ಶ.	ಟೀ.	III. 427
580	ಮನೋವಿಕಾರನಿರಸನ ರಗಳೆ	ಶಂಕರದೇವ	1500	ರ–127	III. 283
581	ಮನೋವಿಜಯ (ಗುರುಬಸವ) ಟೀಕೆ	ಎನ್. ಶಿವಪ್ಪಶಾಸ್ತ್ರಿ	19 ಶ.	ಟೀ.	III. 228
582	ಮರುಳದೇವರ ಕಂದ	ಮರುಳದೇವ	1160	ಕಂ-135	I. 203

583	ಮುರುಳದೇವರ ಕಂದಸಾರದ ಟೀಕೆ	?	?	ಟೀ.	III. 427
584	ಮುರುಳಸಿದ್ಧಕಾವ್ಯ	ಗುರುಸಿದ್ಧ	?	?	ಶಿ.ಸಾ., 24.4
585	ಮುರುಳಸಿದ್ಧಕಾವ್ಯಚರಿತ್ರೆ	?	?	?	III. 427
586	ಮುರುಳಸಿದ್ಧಸ್ವಾಮಿಗಳು ನಿರೂಪಿಸಿದ ನಾಂದ್ಯ	ಮುರುಳಸಿದ್ಧಸ್ವಾಮಿ	?	ವಾ–25	OUL., ಸಂ. 83
587	ಮುರುಳಸಿದ್ಧೇಶನ ಪವಾಡ	ಶ್ರೀಶೈಲ ?	?	ಸಾಂ.	ಮು.ಸಿ., 143–44
588	ಮುರುಳಾರಾಧ್ಯವಿಜಯ	ಪಂಚವಣ್ಣಿಗೆ ನಂದೀಶ	1650	ಭಾ.ಷ.–18-?	ಮು.ಸಿ., 179–224
589	ಮಲ್ಲಮರತರವಚನ	?	17 ಶ.	ವ.	III. 427
590	ಮಲ್ಲಸರ್ಜನಕಾವ್ಯ	ರುದ್ರಕವಿ	1800	?	ಲಿಂ.ಸಾ.ಲಿಂ.ಕೃ., 109
591	ಮಲ್ಹಣಸ್ತೋತ್ರ	ಗುರುದೇವ	1350	ಟೀ.	I. 467
592	ಮಲ್ಲಿಕಾರ್ಜುನಜಪ	ಮಲ್ಲಿಕಾರ್ಜುನ ?	1600	ಗ.	II. 345-46
593	ಮಲ್ಲಿಕಾರ್ಜುನನ ತ್ರಿಪದಿ	?	?	ತ್ರಿ.	'ಜ್ಯೋತಿ ಬೆಳಗುತಿದೆ', 145
594	ಮಲುಹಣನ ಹೋಳಿಪದ	ಕುಂದಗೋಳ ಬಸವಲಿಂಗ	1800	ಹಾ.–59	OUL., ಸಂ. 249
595	ಮಲೆಯ ಮಾದಾಷ್ಟಕ	ಬಸವಲಿಂಗರಾಜ	?	ಚೌ.–8	GOML. V., ಸಂ. 844
596	ಮಲೆಯರಾಜಸ್ತೋತ್ರ	ಗುರುದೇವ	1350	ಟೀ.	I. 467
597	ಮಲ್ಲೇಶನ ತಾರಾವಳಿ	ಕವಿಚೆನ್ನ	?	ಹಾ.–5	K. 1139/35
598	ಮಲ್ಲೇಶ ಶತಕ	ಗುರುಬಸವ ?	17 ಶ.	ಷ.	III. 427
599	ಮಲ್ಲೇಶಸ್ತೋತ್ರ	?	16 ಶ.	ಷ.	III. 427
600	ಮಲ್ಲೇಶ್ವರನ ನಾಂದ್ಯ	?	?	ವಾ.ಷ.–71	K. 325/15

ಅ. ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
601	ಮಲ್ಲೇಶ್ವರಶತಕ	ಸಿರಿನಾಮಧೇಯ	1550	ವೃ.–111	II. 257–58
602	ಮಲ್ಲೇಂದ್ರಮಾನಸೋಲ್ಲಾಸತರಂಗಿಣಿ	ಅಮೃತೇಶ್ವರ	1800	?	ಶಿ.ಭ., 31·1 (ಪು. 26)
603	ಮಹತ್ವರತ್ನಮಾಲೆ	ಶಾಂತವೀರದೇವ ?		ಹಾ.	K. 322/8
604	ಮಹದೇವಿರಾಣಿರಗಳೆ	ಶಂಕರದೇವ	1500	ರ.	ಹ.ಕೃ.ಸಂ., 150
605	ಮಹದೇವೀಚಾರಿತ್ರ	?	17 ಶ.	?	III. 427
606	ಮಹಲ್ಪಾದಕಂದ	ಷಡಕ್ಷರಿ	?	ಕಂ.	ಶಿ.ಭ., 7·1 (ಪು. 58)
607	ಮಹಲಿಂಗಪೌರಾಣ	ಸಂಗನಬಸವ	?	ಭಾ.ಷ.	(ಅಲಭ್ಯ)
608	ಮಹಾತ್ರಿಪುರೀಶ್ವರಶತಕ	?	?	?	ಶ.ಸಾ., 4·5–6
609	ಮಹಾದೇವರಗಳೆ	ತ್ರಿಭುವನತಾತ	1165	ರ.	III. 285–86
610	ಮಹಾದೇವಿಯಕ್ಕನ ಸಾಂಗತ್ಯ	ರಾಚಯ್ಯ	?	ಸಾಂ. 6·308	ಶ.ಸಾ., 1·6
611	ಮಹಾದೇವಿಯಕ್ಕನ ಸೃಷ್ಟಿಯ ವಚನದ ಟೀಕೆ	?	?	ಟೀ.	III. 427
612	ಮಹಾನಾಟಕ	ವೀರಭದ್ರ	?	?	ಶ.ಸಾ., 4·7 (ಪು. 220)
613	ಮಹಾವಿಭೂತಿಮಹಾತ್ಮೆ	ಬಸವರಾಜೇಂದ್ರ	1700	ಗ.–ಅ. 22	II. 538
614	ಮಹಿಮ್ನಸ್ತವ	ಗುರುದೇವ	1350	ಟೀ.	I. 467
615	ಮಹಿಮ್ನಸ್ತವಟೀಕೆ	ಸೋಸಲೆ ರೇವಣಾಚಾರ್ಯ	1623	ಟೀ.	II. 365–66

616	ಮಹಿಮಾದಿಪಂಚಸ್ತೋತ್ರದ ಟೀಕೆ	?	?	ಟೀ.	III. 427
617	ಮಹಿಮಾಷ್ಟಕ	?	1700	ಕಂ.-9	III. 303
618	ಮಹಿಮಾಷಟ್ಪದಿ	?	?	ಷ.	OUL., ಸಂ. 48
619	ಮಹೇಶ್ವರಶತಕ	?	1430	ವೃ.	ಶಂ.ಶ., ಪೀಠಿಕೆ xxiii
620	ಮಳೆಬಗೆಯ ಪುರಾಣ	?	1796	ವಾ.ಷ.	ಶ.ಸಾ., 4.5
621	ಮಳೆಯಮಲ್ಲೇಶನ ಪುರಾಣ	ಅದೃಶ್ಯಕವಿ	1580	?	(ಅಲಭ್ಯ)
622	ಮಳೆಯರಾಜನ ಚರಿತ್ರೆ	ಸೆಜ್ಜೆಯ ಸಿದ್ಧಲಿಂಗಾರ್ಯ	1665	ವಾ.ಷ. 34.1375	III. 452–54; K534
623	ಮಂಗಳಾಷ್ಟಕ	ಅಂ/ಗುರುಪುರದ ಮಲ್ಲಿನಾಥ	1600	ವಾ.ಷ-8	GOML. IV., ಸಂ. 767
624	ಮಂಡೂಕವೃತ್ತ	ಚೆನ್ನವೀರದೇಶಿಕ	1650	?	RCS. No. II. ಪು. 9
625	ಮಂತ್ರಗೋಪ್ಯ	ಬಸವ	1160	?	I. 172
626	ಮಂತ್ರಮಹತ್ವ	?	17 ಶ.	?	III. 427
627	ಮಂತ್ರಮಾಲೆಯ ಕಂದ	?	?	ಕಂ.	ತಿ.ಭ., 7.1 (ಪು. 58)
628	ಮಂತ್ರಮಾಹಾತ್ಮ್ಯ	ಪ್ರಭುದೇವ	1160	?	I. 179
629	ಮಂತ್ರಮಾಹಾತ್ಮ್ಯದ ಕಂದ	ಎಳಮಲೆ ಗುರುಶಾಂತದೇವ	17 ಶ.	ಕಂ.	III. 427
630	ಮಾಚಿದೇವಪುರಾಣ	?	?	?	III. 427
631	ಮಾಧವಾಂಕನ ಕಾವ್ಯ	ಕೋಳೂರು ಶಂಕರ	1757	ವಾ.ಷ.	MAR.-1935 (ಪು. 73-4), III. 427
632	ಮಾಯಾಸಾಂಗತ್ಯ	ರಾಚಯ್ಯ	?	ಸಾಂ., 6.443	ಶ.ಸಾ. 1.6
633	ಮಾಲತೀಮಾಧವ	ಬಸವಪ್ಪಶಾಸ್ತ್ರೀ	1843-91	ನಾ.	III. 468

ಅ. ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
634	ಮಿಶ್ರಸ್ತೋತ್ರ	ಅಂ/ಗುರುಸೋಮನಾಥ	1550	ಕು.ಷ.-110	III. 279
635	ಮಿಶ್ರಸ್ತೋತ್ರ	ಸಂ. ಸಿದ್ಧವೀರಣಾಚಾರ್ಯ	1600	ಸಾ. 111	II. 324-25
636	ಮಿಶ್ರಾರ್ಪಣ(ಚೆನ್ನಬಸವ)ದ ಟೀಕೆ	ಪರ್ವತಶಿವಯೋಗಿ	1650	ಟೀ.	II. 397
637	ಮಿಶ್ರಾರ್ಪಣಪದ	ಗುರುಸಿದ್ಧ	1720	ವಾ.ಷ.	K. 322/4
638	ಮೀನಾಕ್ಷಿಕಲ್ಯಾಣ	ಇ. ರುದ್ರಕವಿ	19 ಶ.	?	III. 226
639	ಮುಕ್ಕಣ್ಣಚೋಳರಾಜಚರಿತ್ರೆ	?	17 ಶ.	?	III. 427
640	ಮುಕ್ತಿಕಂಠಾಭರಣ	?	?	ವ.	ಬ.ಸ್ಮಾ.ಸಂ., 475
641	ಮುಕ್ತಿಮುದ್ರಾಗದ್ಯ	ಅಂ/ಗುರುಗೋಗೇಶ್ವರಲಿಂಗ	?	ರ.	ಹ.ಕೃ.ಸಂ., 383
642	ಮುಕ್ತಿರಾಮೇಶ್ವರಶತಕ	?	1700	ಕಂ.	III. 302
643	ಮುಕ್ತಿರಾಮೇಶ್ವರಶತಕ	?	1300	ವೃ.	ಶಂ.ಶ , ಪೀಠಿಕೆ xii-xiii
644	ಮುಗ್ಧರ ಚಾರಿತ್ರ	ಶಾಂತವೀರ ದೇಶಿಕ	1650	?	GOML. IV., ಸಂ. 803
645	ಮುಗ್ಧಸಂಗಮಲೀಲೆ	ಬಸವಕವಿ	1860	ಷ.	[ಅಲಭ್ಯ]
646	ಮುಗ್ಧಸಂಗಯ್ಯನ ಚರಿತ್ರೆ	?	?	?	III. 427
647	ಮುಗ್ಧಸಂಗಾರ್ಯರ ಪುರಾಣ	ಅದೃಶ್ಯ	1580	ಷ.	[ಅಲಭ್ಯ]
648	ಮುರಿಗೆಯ ಶಾಂತವೀರನ ಸಾಂಧ್ಯ	ಮಹಾಂತಸ್ವಾಮಿ	1560	ಭಾ.ಷ.-25	II. 293
649	ಮುರಿಗೆಯಸ್ವಾಮಿಗಳ ಸ್ತೋತ್ರದ ಸಾಂಧ್ಯ	ಕಂಪಿನಂಜಯ್ಯ	1560	ವಾ.ಷ.-24	II. 294

650	ಮುರಿಗೆಯ ಸ್ವಾಮಿಗಳು ನಿರೂಪಿಸಿದ ಸಾಂಧ್ಯ	ಮಹಾಂತಸ್ವಾಮಿ	1560	ವಿ. ಷ.-24	II. 294
651	ಮುರಿಗೆ ಶಾಂತವೀರಸ್ವಾಮಿಗಳ ಏಕೋನ-ವಿಂಶತಿ ಪ್ರಬಂಧದ ಟೀಕೆ	?	?	ಟೀ.	III. 427
652	ಮುರಿಗೆಸ್ವಾಮಿಗಳ ತಾರಾವಳಿ	?	17 ಶ.	?	III. 427
653	ಮುರಿಗೆಸ್ವಾಮಿಗಳ ಮುಕ್ತಿಪ್ರದೀಪಿಕೆ	?	27 ಶ.	?	III. 427
654	ಮುರಿಗೆಸ್ವಾಮಿಗಳ ವಚನ	?	17 ಶ.	ಶ.	III. 427
655	ಮುರಿಗೆಸ್ವಾಮಿಗಳ ಸಮಾಧಿಕ್ರಿಯೆ	?	17 ಶ.	?	III. 427
656	ಮೂರು ಸಾವಿರದ ಒಂಬಯ್ನೂರು ವಚನ	?	17 ಶ.	ವ.	III. 427
657	ಮೂರು ಸ್ತೋತ್ರದ ತ್ರಿವಿಧಿ	?	17 ಶ.	ತ್ರಿ.	III. 427
658	ಮೇದರ ಕೇತಯ್ಯನ ರಗಳೆ	ಶಂಕರದೇವ	1500	ರ.	ಹ.ಕೃ.ಸಂ., 150
659	ಮೈದುನರಾಮನ ರಗಳೆ	ಶಂಕರದೇವ	1500	ರ.-151	II. 364
660	ಮೈದುನರಾಮಯ್ಯನ ಕಥೆ	?	?	?	III. 428
661	ಮೈದುನರಾಮಯ್ಯನ ಚರಿತ್ರೆ	?	?	?	III. 428
662	ಮೈದುನರಾಮಯ್ಯನ ಸುವ್ವಿ	?	17 ಶ.	ತ್ರಿ.	III. 428
663	ಮೊರಸ ವೇಮಯ್ಯ ರಗಳೆ	ಶಂಕರದೇವ	1500	ರ.	ಹ.ಕೃ.ಸಂ., 150
664	ಮೋಕ್ಷಚಿಂತಾರತ್ನ	ಮಡಿವಾಳ ದೇಶಿಕೇಂದ್ರ	1750	ಭಾ.ಷ. 9.576	KB. 449
665	ಮಂತ್ರಮಹಾತ್ಮ್ಯ	ಪ್ರಭುದೇವ	1160	?	I. 179

(ಮುಂದುವರಿಯುವುದು)

★ ಎಸ್. ಶಿವಣ್ಣ

ಶಾಸನಪದಸೂಚಿ

(ದಕ್ಷಿಣ ಭಾರತದ ಶಾಸನಗಳು, ಸಂಪುಟ ೯, ಭಾಗ ೧)

ಕಳೆದ ಸಂಚಿಕೆಯಿಂದ

ಚ

ಛ

ಜ

ತ

ದ

ಧ

ನ

(ಮುಂದುವರಿಯುವುದು)

★ ಎಸ್. ರಾಜಶೇಖರ

ಗ್ರಂಥಾವಲೋಕನ

ಸಂಗಮ : (ಕವನಸಂಕಲನ) : ಸಂಪಾದಕರು — ಸರ್ವಶ್ರೀ ಆರ್. ಸಿ. ಭೂಸನೂರುಮಠ, ಡಾ|| ಜಿ. ಎಸ್. ಶಿವರುದ್ರಪ್ಪ, ಅನ್ನದಾನಯ್ಯ ಪುರಾಣಿಕ ಹಾಗೂ ಜಿ. ಆರ್. ಚನ್ನಬಸಪ್ಪ; ಪ್ರಕಾಶಕರು—ಬಸವ ಸಮಿತಿ, ಬೆಂಗಳೂರು–೯; ಪುಟ ೭೩, ಬೆಲೆ ರೂ. ೧–೨೫.

ಶ್ರೀ ಬಸವೇಶ್ವರ ಅಷ್ಟಶತಮಾನೋತ್ಸವದ ಅಂಗವಾಗಿ ' ಬಸವ ಸಮಿತಿ' ಯುವರು ಪ್ರಕಟಿಸಿದ ' ಸಂಗಮ' ಸ್ವಾಗತಾರ್ಹವಾದ ಕೃತಿಯಾಗಿದೆ. ಭಕ್ತಿ, ಶ್ರದ್ಧೆ, ಗೌರವಗಳಿಂದ ಪ್ರೇರಿತವಾದ, ನಮ್ಮ ನಾಡಿನ ಹಿರಿ–ಕಿರಿಯರ ಕವನಗಳಿಗೆಲ್ಲ ಇಲ್ಲಿ ಬಸವಣ್ಣನವರ ಮೂರ್ತಿತ್ವ ಕೇಂದ್ರಬಿಂಬವಾಗಿದೆ. ಅಂತೆಯೇ ಇವುಗಳ ಒಟ್ಟಂದ ಬೆಳಕು–ಬಣ್ಣಗಳಲ್ಲಿ ಕಂಡುಬರುವ ಬಗೆಯುನ್ನು ಒರೆದು ನೋಡುವುದೇ ಉಚಿತವಾಗಿದೆ.

ನಮಗೆಲ್ಲರಿಗು ಗೊತ್ತಿರುವಂತೆ ಶ್ರೀ ಬಸವಣ್ಣನವರದು ಅದ್ಭುತರಮ್ಯ ಬದುಕು–ಬಾಳು. ಅದೊಂದು ಅಮೌಲ್ಯವಾದ ಬಹುಮುಖದ ವಜ್ರದ ಹರಳು. ನೋಡುವ ನಿಟ್ಟು–ದಿಟ್ಟಗಳಿಗೆ ಅನುಗುಣವಾಗಿ ಅದರ ರೂಪು–ರಂಗು, ಒಲವು–ನಿಲವು ಒಂದೊಂದು ವಿಧವಾದ ಅಂದ–ಚಂದವನ್ನೊಳಗೊಂಡು ಕಾಣಬರುವಂಥದು. ನಮ್ಮ ಕವಿಗಳು ಬಳಸಿದ ಹಲಕೆಲವು ಉಪಮೆ–ರೂಪಕ, ಪ್ರತಿಮೆ–ಸಂಕೇತಗಳು ಇದಕ್ಕೆ ನಿದರ್ಶನವಾಗಿವೆ. ಜೇನುಹುಟ್ಟಿನಂತೆ ಆಪ್ಯಾಯಮಾನವಾಗಿವೆ.

ಹಿರಿಯ ಕವಿ ಕುವೆಂಪು ಅವರ ಕಣ್ಣಿಗೆ ಬಸವಣ್ಣನವರು,

> ಕಾರ್ತಿಕದ ಕತ್ತಲಲ್ಲಿ ಆಕಾಶದೀಪವಾಗಿ
> ....
> ಬಟ್ಟೆಗೆಟ್ಟವರಿಗೊಂದು ದೊಂದಿ ದಿಕ್ಕಾಗಿ

ಮೆರೆದ ' ಬೆಳಕಿ'ನ ಬಿಂಬ. ಇಲ್ಲಿಯ ' ಆಕಾಶದೀಪ', ' ದೊಂದಿ' ಎಂಬ ರೂಪಕ ಧ್ವನಿರಮ್ಯವಾಗಿವೆ, ಉಜ್ವಲವಾಗಿವೆ. ತರುಣಕವಿ ಜಿ. ಎಸ್. ಸಿದ್ಧಲಿಂಗಯ್ಯನವರೂ ಈ ' ಬೆಳಕಿ'ನ ರೂಪಕವನ್ನೆ ಇನ್ನೊಂದು ತೆರನಾಗಿ ಬಳಸಿಕೊಂಡಿದ್ದಾರೆ, ಸ್ವಾರಸ್ಯಪೂರ್ಣವಾಗಿ :

> ನುಡಿಯೆಲ್ಲ ಜ್ಯೋತಿರ್ಲಿಂಗ
> ನಡೆಯೊ ಬೆಳಕಿನ ಕಂಭ
> ಬೆಳೆಯುತ್ತಿರುವೆ ಬೆಳೆದಂತೆಲ್ಲ
> ಭೂಮಿಯಿಂದಾಕಾಶಕ್ಕೆ
> ಇನ್ನೂ ಇನ್ನೂ ಮೇಲಕ್ಕೆ

ಅದೇ ಕವಿ ರಂ. ಶ್ರೀ. ಮುಗಳಿಯವರಿಗೆ ಅವರು

ಅಶಿವ ನಾಶಕವಾಗಿ ಶಿವನ ವಾಹಕವಾಗಿ
ಮೇಲಿಂದ ಕೆಳಗಿಳಿದು ಕೆಳಗಿಂದ ಮೇಲೇರಿ

ಬಂದ 'ಬಿರುಗಾಳಿ'ಯಾಗಿದ್ದಾರೆ. ಇಲ್ಲಿಯ 'ಬಿರುಗಾಳಿ'ಯ ರೂಪಕ ಸಜೀವವಾಗಿದ್ದು, ಬಸವಣ್ಣನವರು ಮಸೆದ ಕ್ರಾಂತಿಗೆ ಕನ್ನಡಿ ಹಿಡಿಯಲು ಸಮರ್ಥವಾಗಿದೆ.

ಕವಿಗಳಾದ ಜಿ. ಎಸ್. ಶಿವರುದ್ರಪ್ಪ ಹಾಗೂ ಸಿ. ಪಿ. ಕೆ. ಅವರಿಗಾದರೊ ಬಸವಣ್ಣನವರು ಸಂಗಮೇಶ್ವರನಿಗೆ ಬದುಕನ್ನೆ ಸಮರ್ಪಿಸಿದ 'ಕರ್ಪೂರ'! ಅದೆ ಪರಿಮಳ-ಪರಿಶುದ್ಧಿ !

ತರುಣಕವಿ ಗುರುಲಿಂಗ ಕಾಪಸೆಯವರಿಗೆ ಅವರು 'ಕಲ್ಪವೃಕ್ಷ'ವಾಗಿ ಕಂಡುಬಂದರೆ, ಸಮರ್ಥ ನವ್ಯಕವಿ ಕೆ. ಎಸ್. ನಿಸಾರ್ ಅಹಮದ್ ಅವರಿಗೆ

ಸಂಸಾರದುಸುಬಿನಲಿ, ಆಳಿಯಾಸೆ ಕೆಸರಿನಲಿ
ದೇಹ ಕುಸಿದರು ಮೇಲಕೆತ್ತಿ ಕಣ್ಣ
...............ನೆರೆಹೊರೆಯ ಶರಣರಿಗೆ
ತಂಪಾಗಿ ಕೊಡೆ ಹಿಡಿದು ನಿಂತ

'ಅಶ್ವತ್ಥ'. ಈ ರೂಪಕವಿಶೇಷಗಳು ಭಾವಸೌರಭದಿಂದ ತುಂಬಿ ತುಳುಕುತ್ತವೆ.

ಕವಿ ಚೆನ್ನವೀರ ಕಣವಿಯವರ ಭಾವುಕ ಹೃದಯಕ್ಕೆ ಅವರು

ಭವದ ಸಾರವ ಹೀರಿ, ದಿವದ ಬಣ್ಣವ ಬೀರಿ

ಮೆರೆದ ಮಹಾನುಭಾವರು; ದೇಶಕಾಲಾತೀತವಾಗಿ 'ಮುಗಮುಗಿಸುತಿರುವ' ವ್ಯಕ್ತಿತ್ವದ ಪರಿಮಳವುಳ್ಳ ಶಿವಶರಣರು!

ಗ್ರಂಥದ ಮುನ್ನುಡಿಯಲ್ಲಿ ಜಿ. ಎಸ್. ಶಿವರುದ್ರಪ್ಪನವರು ಹೇಳಿದಂತೆ, "ಕನ್ನಡದ ಕವಿಮನದ ಕಮ್ಮಟದಲ್ಲಿ ಬಸವಸ್ಮೃತಿ........ ಪುಟಗೊಂಡು ಸ್ಫುಟಗೊಂಡು" ಇಲ್ಲಿ ಈ ರೀತಿಯಾಗಿ ಬೆಳಗಿದೆ. ಇಲ್ಲಿಯ ರೂಪಕ-ವಿಶೇಷಗಳಲ್ಲಿ ರಮ್ಯವಾದ ಕಲ್ಪನೆ, ರೋಚಕವಾದ ಕನಸುಗಾರಿಕೆ ಕೆನೆಗಟ್ಟಿ ನಿಂತಿವೆ.

ಆದರೆ ಬಸವಣ್ಣನವರ ದಿನದಿನದ ಬದುಕಿನ ಬಗೆ ಹೇಗೆ?—ಎಂದು ನಾವು ಕುತೂಹಲಗೊಳ್ಳದಿರಲಾರೆವು. ಕವಿ ಜಿ. ಎಸ್. ಶಿವರುದ್ರಪ್ಪನವರು ಒಂದೆರಡು ರೇಖೆಗಳಲ್ಲಿ ಬರೆಯುವ ಪುರಾಣಚಿತ್ರ ಅತ್ಯಂತ ಹೃದ್ಯವಾಗಿದೆ:

ಇರಲಾರರೆಂದೇ ತೋರುತಿದೆ ನಿನ್ನಂತೆ ಒಳಗು ಹೊರಗುಗಳನ್ನು
ಮುಚ್ಚುಮರೆಯಿಲ್ಲದೆಯೆ ದಿನವೂ ಬಿಚ್ಚಿಟ್ಟು
ಒಗೆದು ಮಡಿಮಾಡಿ, ಇಷ್ಟದೈವದ ಗುಡಿಗೆ ನಡೆ
ಮಡಿಯಾಗಿ ಹಾಸಿದವರು; ಕರ್ತಾರ ನೀ ಕಮ್ಮಟದ
ಅಡಿಗಲ್ಲು-ಸುತ್ತಿಗೆಯು ನಡುವೆ ಕಡಿಹಕ್ಕೆ ಬಡಿಹಕ್ಕೆ ಸಿಕ್ಕಿ
ಮೃಡನ ಶರಣ ಕಾಲ ಕಡೆಯಾಣಿಯಾದವರು........

ಆದರಂತೆಯೇ ಕವಿ ಸುಮತೀಂದ್ರ ನಾಡಿಗರೂ ಆವರ ಬದುಕಿನ ಹೋರಾಟದ ಚಿತ್ರವನ್ನು ಚೇತೋಹಾರಿಯಾಗುವಂತೆ ಬರೆದಿದ್ದಾರೆ:

ಹೊಸ ಸಮಾಜದ ನೊಗಕೆ ಹೆಗಲನ್ನು ಕೊಟ್ಟಾಗ, ಮುಗಿಲಲ್ಲಿ ನಡೆದಾಗ
ಗಾಡಿ ಗಡಗಡಿಸಿತ್ತು, ಕೀಲು ಕಳಚಿತ್ತು, ಗಾಲಿ ತಪ್ಪಿತ್ತು
ಮುಗ್ಗರಿಸಿ ಮೃತ್ಯುವಿನ ಒಗ್ಗಾಲಿಯಲ್ಲಿ.

ವಾಸ್ತವತೆಯು ಜೀವಸ್ಪರ್ಶದಿಂದ ಈ ಚಿತ್ರ ಚೆಲುವಾಗಿದೆ.

ಇನ್ನು ಬಸವಣ್ಣನವರ ವ್ಯಕ್ತಿತ್ವ-ವಚನಗಳ ಬೆಳಕಿನಲ್ಲಿ ಇಂದಿನ ಬದುಕನ್ನು ನಮ್ಮ ಕವಿಗಳು ಅದು ಹೇಗೆ ಬರೆದು ನೋಡಲು ಹವಣಿಸಿದ್ದಾರೆ ಗಮನಿಸೋಣ. ಇವರಲ್ಲಿ ಇನ್ನೊಬ್ಬ ಸಮರ್ಥ ನವ್ಯಕವಿ ಚಂದ್ರಶೇಖರ ಪಾಟೀಲರು ಯಾವ ಭಿಡೆ-ಮುರವತ್ತು, ಹಂಗು-ಹೆದರಿಕೆಯಿಲ್ಲದೆ ಅಂತರಂಗದ ಪ್ರಾಮಾಣಿಕ ಭಾವ-ಭಾವನೆಗಳಿಗೆ ಅಭಿವ್ಯಕ್ತಿಯೊದಗಿಸಿದ್ದಾರೆ. ಆದರ ಕಾವ್ಯದ ಧಾಟಿ-ಧೋರಣೆ, ವಿಡಂಬನೆಯು ವೈಖರಿ ಹೊಚ್ಚಹೊಸ ಒಗರು-ಹೊಗರುಗಳನ್ನು ಒಳಗೊಂಡಿದೆ:

........ಗುರುತಿಲ್ಲ ಖೂನಿಲ್ಲ ನಿನಗೆ. ಎಲ್ಲಾ ಖರೆ.
....ಆರೆ
ನಿನ್ನ ಪೈಕೀ ಜನರ ಪೈಕಿಯೇ ನಾನು!
× × ×
ನಮ್ಮ ಕೊರಳಿನ ಸುತ್ತ ನಿನ್ನ ಮುತ್ತಿನ ಹಾರ.
× × ×
ನಮ್ಮ ಮನೆ-ಮಕ್ಕಳಿಗೆ, ನಮ್ಮ ಬಂಗಲೆಗಳಿಗೆ
ಚುಟ್ಟ, ಬೀಡಾ, ಸೋಡ, ಚಹದ ಅಂಗಡಿಗಳಿಗೆ
ನಿನ್ನ ಹೆಸರನಿಟ್ಟು ಅಮರ ಮಾಡುತ್ತೇವೆ.

ಇಂಥದೇ ಒಂದು ಚುರುಕು-ಚುಚ್ಚು ತರುಣಕವಿ ಎಸ್. ಎಸ್. ಲಕ್ಷ್ಮೀನಾರಾಯಣ ಭಟ್ಟ ಅವರ ಕವಿತೆಯಲ್ಲೂ ಇದೆ:

ನಿನ್ನ ಪಟದೆದುರಿಗೇ
ತಲೆವಾಗುತಿದೆ ಏತ.

ಕೈಮುಗಿದು ಇಕ್ಕೆಳ
ಗಿಳಿಯು ಹಿಂಡೇ ನೆರದು ಕಲಿತಿದ್ದ ಒದರುತಿದೆ.
“ ಅಯ್ಯಾ,
ನಾವು ಗಳಿಸಿದ್ದೆಲ್ಲ
ನೀ ಕೊಟ್ಟ ದ್ರಾಕ್ಷಿಗಳ ಹುಳಿಸಿ
ಮದ್ಯವ ಇಳಿಸಿ
ಕುಡಿವ ಕಲೆಯು
ಓಡೆತ್ತ ಬಲ್ಲುದೊ ಅವಲಕ್ಕಿಯು ಸವಿಯು?
ಕತ್ತೆ ತಿಳಿದೀತೆ ಹೊತ್ತಿರುವ ಗಂಧದ ಬೆಲೆಯು?”

ಆದರೆ ಕವಿ ಜಿ. ಎಸ್. ಸಿದ್ಧಲಿಂಗಯ್ಯನವರ ವಿಡಂಬನೆಯು ವಿಲಾಸ–ವಿದಗ್ಧತೆಗಳ ಸೊಗಸೇ ಬೇರೆ ತರದ್ದಾಗಿದೆ. ಬಸವಣ್ಣನವರ ವ್ಯಕ್ತಿತ್ವ–ವಚನಗಳ ಉಜ್ವಲ ಹಿನ್ನೆಲೆಯಲ್ಲಿ ನಮ್ಮ ರೀತಿ–ನೀತಿಗಳನ್ನು ಚಿತ್ರಿಸುವ, ನಿಜಬಣ್ಣವನ್ನು ಹೊರಗೆಳೆಯುವ ವಿಧಾನ ಅನನ್ಯವಾಗಿದೆ. ‘ವೈದೃಶ್ಯ’ದ ಧ್ವನಿಪೂರ್ಣವಾದ ಬಳಕೆ ವಿಡಂಬನೆಗೆ ಒಂದು ಮಿಂಚನ್ನೂ ಮೊನಚನ್ನೂ ಒದಗಿಸಿದೆ :

ಕೊಂಬೆಯಿಂದ ಕೊಂಬೆಗಳಿಗಿನ್ನೂ ನೆಗೆದಾಡುತ್ತಿದ್ದೇವೆ
ತರತರದ ಗರಹೊಡೆದು ನುಡಿಯಲ್ಲದಿದ್ದೇವೆ—
ಉರದುದ್ದ ಕೊರಳುದ್ದ ಇನ್ನೂ ಮುಳಿಗಿದ್ದೇವೆ
ಐವರೇ ಏನು, ನೂರಾರು ಜನ ಸುಡುತಿದ್ದಾರೆ
ನಮ್ಮನ್ನು ಜೀವನವಿಡೀ ಜೀವಚಿತೆಯಲ್ಲಿ.

ಒಟ್ಟಿನಲ್ಲಿ ಈ ಕೃತಿ ನಮ್ಮ ಕನ್ನಡಕವಿಗಳ ಭಾವ ‘ಸಂಗಮ’ವಾಗಿದೆ. ಇದರಲ್ಲಿ ಮಿಂದೆದ್ದ ಮನಸ್ಸು ಪರಿಮಳಿತವಾಗುತ್ತದೆ. ಆತ್ಮನಿರೀಕ್ಷಣೆ, ಆತ್ಮವಿಕಸನಕ್ಕೆ ಪ್ರೇರೇಪಿತವಾಗುತ್ತದೆ. ಅಂದಷ್ಟಕ್ಕೆ ಇಲ್ಲಿಯ ಕವನಗಳೆಲ್ಲವೂ ಯಶಸ್ವಿಯಾಗಿವೆಯೆಂದಲ್ಲ. ಹಾಗೆ ನೋಡಿದರೆ ಇಲ್ಲಿಯ ಹೆಚ್ಚು ಪಾಲು ಕವಿತೆಗಳು ನಿರಾಶೆ ಹುಟ್ಟಿಸುತ್ತವೆ; ನಿರ್ಜೀವವಾದ ಮಣ್ಣಿನಮುದ್ದೆಗಳಾಗಿವೆ. ಕೆಲವೊಂದು ಕವನಗಳಲ್ಲಿ ಅಲ್ಲಲ್ಲಿ ಹೊಳೆಮಿಂಚಿನ ರೇಖೆಗಳು ಕಾಣಿಸಿಕೊಂಡಿವೆ. ಆದರೆ ಸರ್ವಶ್ರೀ ಜಿ. ಎಸ್. ಶಿವರುದ್ರಪ್ಪ, ಕೆ. ಎಸ್. ನಿಸಾರ್ ಅಹಮದ್, ಚಂದ್ರಶೇಖರ ಪಾಟೀಲ, ಸುಮತೀಂದ್ರ ನಾಡಿಗ, ಹಾಗೂ ಲಕ್ಷ್ಮೀನಾರಾಯಣ ಭಟ್ಟ ಇವರ ಕವನಗಳು ಮಾತ್ರ ಏಕತಾನವಾಗಿ ಸುಂದರವಾಗಿವೆ. ಉಸಿರು, ನೆತ್ತರು, ಕಾವುಗಳನ್ನು ಒಳಗೊಂಡ ಸಜೀವಶಿಲ್ಪಗಳಾಗಿವೆ.

★ ಎಂ. ಅಕಬರ ಅಲಿ

ಶ್ರೀಮನ್ನಿಜಗುಣಶಿವಯೋಗಿ ವಿರಚಿತ ವಿವೇಕಚಿಂತಾಮಣಿ :

ಸಂಪಾದಕರು:— ಪ್ರೊ. ಜಿ. ಎಂ. ಉಮಾಪತಿಶಾಸ್ತ್ರಿ, ಎಂ.ಎ., ಪ್ರಕಾಶಕರು:— ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಲಿ, ಮೂರುಸಾವಿರ ಮಠ, ಹುಬ್ಬಳ್ಳಿ, ಪುಟಗಳು (ಒಟ್ಟು) ೬೨೪, ಡೆ. ೧/೮ ಆಕಾರ, ಬೆಲೆ : ೧೨ ರೂಪಾಯಿಗಳು.

ಕನ್ನಡನಾಡಿನ ದಾರ್ಶನಿಕ ಕವಿಶ್ರೇಷ್ಠರಲ್ಲಿ ಶ್ರೀಮನ್ನಿಜಗುಣರು ಪ್ರಖ್ಯಾತರಾದ ರಾಜರ್ಷಿಗಳು. ಅವರು ರಚಿಸಿದ ಕೃತಿಗಳು, ಧರ್ಮ-ದರ್ಶನ ದೃಷ್ಟಿಯಿಂದ ಪ್ರಮಾಣಭೂತವಾದ ಆಧಾರಗ್ರಂಥಗಳಾಗಿವೆ. ಅವರ ಕೃತಿಗಳಲ್ಲಿ ಶೈಲಿ ಸುಂದರವಾಗಿದೆ, ಭಾಷೆ ಬಂಧುರವಾಗಿದೆ. ಮಧುರ ಪದಸಮುಚ್ಚಯದಿಂದಲೂ ಶಾಸ್ತ್ರಬದ್ಧ ಅರ್ಥಾಲಂಕಾರದಿಂದಲೂ ಛಂದೋಬದ್ಧವಾಗಿಯೂ ಈ ಕೃತಿಗಳು ರಾರಾಜಿಸುತ್ತಿವೆ. ಜನಪ್ರಿಯವಾದ "ಕೈವಲ್ಯಪದ್ಧತಿ" ತಾತ್ವಿಕ ದೃಷ್ಟಿಯಿಂದ ರಚಿತವಾದ ಸಂಗೀತ ಸಂಯೋಜಿತ ಕೃತಿಯಾಗಿದೆ. ಯೋಗಶಾಸ್ತ್ರಪ್ರತಿಪಾದಿತವಾದ "ಪರಮಾರ್ಥಪ್ರಕಾಶಿಕೆ", ಭಕ್ತಶಿಖಾಮಣಿಗಳನ್ನು ಸ್ತುತಿಸುವ "ಅರುವತ್ತುಮೂವರ ತ್ರಿವಿಧಿ", ಉಪನಿಷತ್ತಿನ ಸಾರರೂಪವಾದ "ಪರಮಾನುಭವಬೋಧೆ", ಧರ್ಮಪ್ರಧಾನವಾದ ಶೃತಿ, ಸ್ಮೃತಿ, ಪುರಾಣಾದಿಗಳಿಂದ ವಿಷಯ ಸಂಗ್ರಹೀತವಾದ "ಪರಮಾರ್ಥಗೀತೆ", ವೇದವಿಚಾರದರ್ಶಿನಿಯಂತಿರುವ "ಅನುಭವಸಾರ", ವಿಶ್ವದ ತತ್ವಕೋಶವೆಂದು ಖ್ಯಾತಿಪಡೆದಿರುವ "ವಿವೇಕ ಚಿಂತಾಮಣಿ", ಎಂಬ ಗ್ರಂಥಗಳು ಕನ್ನಡದ ರತ್ನಭಂಡಾರಕ್ಕೆ ಅವರು ಅರ್ಪಿಸಿದ ಅಮೂಲ್ಯ ರತ್ನಗಳು. ಈ ಕೃತಿಗಳು ಬಹುಕಾಲದವರೆಗೆ ಕನ್ನಡ ನಾಡಿನ ಪಂಡಿತಪಾಮರರೆಲ್ಲರ ಮನ್ನಣೆ ಪಡೆದು ಜನಜೀವನದ ನಿತ್ಯಜ್ಯೋತಿಯಾಗಿ ಬೆಳಗುತ್ತಿದ್ದುವು. ಈ ಕೃತಿಗಳಲ್ಲಿ ಯಾವುದಾದರೊಂದರ ಒಂದು ಹಾಡನ್ನಾಗಲಿ ನುಡಿಯನ್ನಾಗಲಿ ಕೇಳದ ಮತ್ತು ತಾವೇ ಹಾಡಿಕೊಳ್ಳದ ಮನೆಗಳು ಕನ್ನಡ ನಾಡಿನಲ್ಲಿ ಒಂದಾದರೂ ಇಲ್ಲವೆನ್ನುವಷ್ಟು ಪ್ರಬಲವಾಗಿತ್ತು ಈ ಸಾಹಿತ್ಯ. ಇತ್ತೀಚಿನ ಒಂದೆರಡು ದಶಕಗಳಲ್ಲಿ ಅವುಗಳ ಪ್ರಚಾರ ಇಳಿಮುಖವಾಗಿದೆ. ಅದಕ್ಕೆ ಕಾರಣ ಜನರ ನಿರಾಸಕ್ತಿ ಎನ್ನಲಾಗುವುದಿಲ್ಲ. ಸುಬದ್ಧವಾದ ಸಂಶೋಧಿತವಾದ ಸುಲಭ ದರದಲ್ಲಿ ದೊರೆಯುವ ಪ್ರತಿಗಳು ಮುದ್ರಣವಾಗದೇ ಇರುವುದು ಒಂದು ಪ್ರಮುಖ ಕಾರಣವೆನ್ನಬಹುದು. ಅಂತಹ ಪರಿಸ್ಥಿತಿಯನ್ನು ಸುಧಾರಿಸುವ ಸುಂದರ ಸನ್ನಿವೇಶದ ಕಲ್ಪನೆಯಾಗಿ ಶ್ರೀ ನಿಜಗುಣರ ಒಂದೆರಡು ಕೃತಿಗಳು ಪ್ರಕಟವಾಗಿರುವುದು ಕನ್ನಡಿಗರ ಸುಯೋಗವೆನ್ನಬಹುದು.

ನಿಜಗುಣರ ಕೃತಿಗಳಲ್ಲಿ ಬರುವ ತತ್ವದ ಅಂತರಾರ್ಥವನ್ನು ಗುರುಮುಖದಿಂದ ಅರಿಯಬೇಕು. ಅರಿತು ಅನುಭವಿಸಬೇಕು. ಅಂದೇ ನಮಗೆ ನಿಜಾನಂದ

ದೊರಕುವುದು ಎಂದು ಮಹಾನುಭಾವರು ಹೇಳುತ್ತಾರೆ. ಕೇವಲ ಸಾಹಿತ್ಯದಲ್ಲಿ ಪಾಂಡಿತ್ಯವನ್ನೂ ದರ್ಶನಶಾಸ್ತ್ರದಲ್ಲಿ ಪ್ರತಿಭೆಯನ್ನೂ ಪಡೆದ ಮಾತ್ರಕ್ಕೆ ಇವು ಸುಲಭವಾಗಿ ಒಲಿಯುವ ಸಂಪತ್ತಲ್ಲ. ಅರಿತು ಅನುಭವಿಸುವ ಅನುಭಾವಿಗಳ ಸಹವಾಸ ಸನ್ನಿವೇಶಗಳಲ್ಲಿ ಬೆಳೆದ ಶ್ರೀ ಉಮಾಪತಿ ಶಾಸ್ತ್ರಿಗಳವರಿಂದ ಪ್ರಸ್ತುತ "ವಿವೇಕಚಿಂತಾಮಣಿ" ಎಂಬ ಮಹಾಕೃತಿಯು ಸಂಪಾದಿತವಾಗಿ ಪ್ರಕಟಿತವಾಗಿರುವುದು ಆನಂದದ ಸಂಗತಿ. ನಿಜಗುಣರ ಕೃತಿಗಳ ವಿಷಯದಲ್ಲಿ ಅವರಿಗೆ ದೊರೆತ ನಿರ್ದೇಶನ-ಪ್ರೋತ್ಸಾಹಗಳು ಗಣನೀಯವಾದುವು. ಶ್ರೀ ಶಾಸ್ತ್ರಿಗಳು "ಪರಮಾರ್ಥಪ್ರಕಾಶಿಕೆ" ಎಂಬ ನಿಜಗುಣರ ಕೃತಿಯನ್ನು ಈಗಾಗಲೇ ಸಂಪಾದಿಸಿ ಪ್ರಕಟಿಸಿ ಅಭಿಮಾನಿಗಳಿಗೆ ಆಶಾಭಾವನೆಯ ಆನಂದ-ಜ್ಯೋತಿಯನ್ನು ಬೆಳಗಿಸಿದ್ದರು. ಸುಮಾರು ೨೩೦ ಪುಟಗಳ ಪ್ರಸ್ತಾವನೆಯಿಂದ ಕೂಡಿದ ಈ ಕೃತಿ ಶ್ರೀ ಶಾಸ್ತ್ರಿಗಳ ಪಾಂಡಿತ್ಯ, ಅನುಭವ, ಅಭಿಮಾನಗಳ ಸತ್ಯಪ್ರತೀಕವಾಗಿದೆ. ಅವರ ಸಾಹಸ ಶ್ಲಾಘ್ಯವಾಗಿದೆ.

> ಗಣಿಸಲ್ ವಿವೇಕಚಿಂತಾ
> ಮಣಿಯೊಳ್ ಗ್ರಂಥಂಗಳಾರುಸಾವಿರಮುಕ್ಕುಂ ।
> ಗುಣರುಚಿವಿಷಯಪ್ರಕ
> ರಣ ದಶಕಮಿದಾಗೆ ನಿಜಗುಣಾಹ್ವಯರಚಿತಂ ||

ಎಂದು ಶ್ರೀ ನಿಜಗುಣರೇ ಈ ಕೃತಿಯ ಸ್ವರೂಪವನ್ನು ಹೇಳಿದ್ದಾರೆ.

ಆರು ಸಹಸ್ರ ಗ್ರಂಥಗಳಲ್ಲಿ ಉಕ್ತವಾದ ವಿಷಯಗಳನ್ನು ವಿವೇಕ-ಚಿಂತಾಮಣಿಯಲ್ಲಿ ಸಂಗ್ರಹಿಸಿರುವುದಾಗಿ ಶ್ರೀ ನಿಜಗುಣರು ಸೂಚಿಸಿದ್ದಾರೆ. ಕನ್ನಡದಲ್ಲಿ ಅತ್ಯಮೂಲ್ಯವಾದ ವಿಶ್ವಕೋಶವೆಂದು ಈ ಕೃತಿ ಪ್ರಖ್ಯಾತಿ ಹೊಂದಿದೆ. ಸಂಸ್ಕೃತದಲ್ಲಿ ಸೋಮೇಶ್ವರನ ಮಾನಸೋಲ್ಲಾಸ, ಕೆಳದಿಯ ಬಸವ-ರಾಜನ ಶಿವತತ್ವರತ್ನಾಕರ ಗ್ರಂಥಗಳು ವಿಶ್ವಕೋಶಗಳೆನಿಸಿದರೂ ವಿವೇಕ-ಚಿಂತಾಮಣಿಯು ಅವುಗಳಿಗಿಂತಲೂ ಅಪಾರ ವಿಷಯಗಳಿಂದ ತುಂಬಿದ ಕನ್ನಡದ ಪ್ರಥಮ ವಿಶ್ವಕೋಶ. ಹತ್ತು ಪರಿಚ್ಛೇದಗಳಲ್ಲಿ ವೇದ, ಆಗಮ, ಉಪನಿಷತ್ತು, ಶೃತಿ, ಸ್ಮೃತಿ, ಪುರಾಣ, ಇತಿಹಾಸ ಮುಂತಾದ ಮಹಾಕೃತಿಗಳ ತಾತ್ವಿಕ ಹಾಗೂ ಭೌಗೋಲಿಕ ವಿಷಯಗಳನ್ನೆಲ್ಲ ವಿವೇಚಿಸಿರುವ ವಿವೇಕೋದಯದ ಕೃತಿಯಿದು. ಒಂದೊಂದು ವಿಷಯವನ್ನೇ ಬಳಸಿಕೊಂಡು ಬೃಹತ್ ಕೃತಿರಚನೆಯಾಗಿರುವುದರ ಸಾರವನ್ನು ಸೂತ್ರರೂಪದಲ್ಲಿ ಸೂಚಿಸಿರುವ ಸುಂದರ ಶೈಲಿಯ ಮಹಾಕೃತಿ ವಿವೇಕಚಿಂತಾಮಣಿ. ಸುಮಾರು ಐವತ್ತು ವರ್ಷಗಳ ಹಿಂದೆ ಅಶಾಸ್ತ್ರೀಯವಾಗಿ ಪ್ರಕಟಿತವಾದ ಗ್ರಂಥಗಳೂ ಸಹ ಇಂದು ದೊರೆಯುತ್ತಿಲ್ಲ. ಆದುದರಿಂದ ಇಂದಿನ ಪೀಳಿಗೆಗೆ ಈ ಕೃತಿಯ ಹಿರಿಮೆಗರಿಮೆಗಳ ಗೋಚರವಾಗಲು ಅವಕಾಶ-

ವಿರಲಿಲ್ಲ. ಶ್ರೀ ಶಾಸ್ತ್ರಿಗಳ ಸತ್ಪ್ರಯತ್ನ ಈ ಕೊರತೆಯನ್ನು ನಿವಾರಿಸಿದೆ. ಸಾಧ್ಯವಾದಮಟ್ಟಿಗೆ ಮೂಲಕೃತಿಯನ್ನು ಅನುಸರಿಸಿ ನಿಷ್ಪಕ್ಷಪಾತವಾಗಿ ಎಲ್ಲ ವಿಷಯಗಳನ್ನು ಸಂಶೋಧಿಸಿ ಸೂಕ್ತ ಪಾಠಾಂತರದೊಡನೆ ಮೂಲಕೃತಿಯನ್ನು ಪ್ರಕಟಿಸಿ ಕನ್ನಡಿಗರಿಗೆ ಮಹದುಪಕಾರ ಮಾಡಿದ್ದಾರೆ. ಹಿಂದೆ ಪ್ರಕಟವಾಗಿದ್ದ ಕೃತಿಗಳಿಂದ ವಿದ್ವಾಂಸರಲ್ಲಿ ಮೂಡಿದ್ದ ವಾದವಿವಾದಗಳನ್ನೂ ಸಂಶಯವನ್ನೂ ನೀಗಿಸಿದ್ದಾರೆ. ಕನ್ನಡಿಗರ ಅಭಿನಂದನೆಗೆ ಪಾತ್ರರಾಗಿದ್ದಾರೆ.

ಈ ಕೃತಿಗೆ ಪ್ರಸ್ತಾವನೆಯಾಗಿ ಬರೆದಿರುವ ದೀರ್ಘ ಪ್ರಬಂಧ ಕೃತಿಯ ಮಹತ್ವವನ್ನು ಹೆಚ್ಚಿಸಿದೆ. ಕೃತಿಕರ್ತರ ಜೀವನಚಿತ್ರ, ಕಾಲಮಾನವಿಷಯಗಳ ವಿಮರ್ಶೆ, ಕೃತಿಯಲ್ಲಿ ರೂಪುಗೊಂಡ ವಿಷಯಗಳಿಗೆ ನಿಶ್ಚಯಿಸಬಹುದಾದ ಹಿನ್ನೆಲೆಯ ಕೃತಿಗಳ ವಿವೇಚನೆ ಈ ಪ್ರಸ್ತಾವನೆಯಲ್ಲಿ ಪ್ರತಿಭಾಯುತವಾಗಿ ಮೈವೆತ್ತಿದೆ. ಶ್ರೀ ಶಾಸ್ತ್ರಿಗಳವರು ಶ್ರೀ ನಿಜಗುಣರ ಜೀವನವನ್ನು ಚಿತ್ರಿಸಲು ಕನ್ನಡ ನಾಡಿನ ಅಪಾರ ಐತಿಹಾಸಿಕ ಸಂಗತಿಗಳನ್ನೂ ಅನ್ಯಕವಿಗಳು ನೀಡಿದ ವಿವರಣೆಯನ್ನೂ ಬಳಸಿಕೊಂಡಿದ್ದಾರೆ. ನಿಜಗುಣರು ರಾಜತ್ವವನ್ನು ತೊರೆದು ತಪೋನಿಷ್ಠರಾದ ಮಹಿಮರಾದರೆಂಬುದನ್ನು ಒಪ್ಪಿದ್ದಾರೆ. ಆದರೂ ಸಹ ಅವರ ಜೀವನದ ಬಗೆಗೆ ಪೂರ್ಣ ಚಿತ್ರ ದೊರೆತಿದೆಯೆಂದು ಹೇಳಲು ಸಾಧ್ಯವಿಲ್ಲವಾಗಿದೆ. ಈ ಬಗೆಗೆ ಇನ್ನೂ ಸಂಶೋಧನೆ ನಡೆಯಬೇಕು ಎನ್ನಿಸುತ್ತದೆ.

ಶ್ರೀ ನಿಜಗುಣರ ಕಾಲಮಾನದ ವಿಷಯದಲ್ಲಿ ವಿದ್ವಾಂಸರಲ್ಲಿ ಅನೇಕ ಭಿನ್ನಾಭಿಪ್ರಾಯಗಳಿದ್ದುವು. ಭಿನ್ನಭಿನ್ನ ಆಧಾರಗಳ ಮೇಲೆ ಪ್ರತ್ಯೇಕ ಅಭಿಮತ-ಗಳಿದ್ದುವು. ಶ್ರೀ ಶಾಸ್ತ್ರಿಗಳವರು ಇದುವರೆಗೆ ಇರಬಹುದಾದ ಕಾಲನಿರ್ಣಯದ ವಾದವಿವಾದಗಳನ್ನೆಲ್ಲಾ ಇಲ್ಲಿ ವಿವೇಚಿಸಿದ್ದಾರೆ. ಅಲ್ಲದೆ ಇತರ ಕೃತಿಗಳ ವಿಷಯ, ಶೈಲಿ ಮತ್ತು ಆಯಾ ಕರ್ತೃಗಳ ಕಾಲಮಾನವನ್ನು ಐತಿಹಾಸಿಕವಾಗಿ ಮತ್ತು ವೈಜ್ಞಾನಿಕವಾಗಿ ವಿಮರ್ಶಿಸಿ ಕ್ರಿ.ಶ. ೧೫೦೦ ಎಂದಿದ್ದಾರೆ. ಇದುವರೆಗಿನ ಸಂಶೋಧಕರಲ್ಲಿ ಬಹುಮತವನ್ನು ಪಡೆದಿರುವ ಕಾಲಕ್ಕೂ ಶ್ರೀ ಶಾಸ್ತ್ರಿಗಳ ನಿರ್ಣಯಕ್ಕೂ ಅಪಾರ ಅಂತರವಿಲ್ಲ ಆದುದರಿಂದ ಇವರ ಕಾಲನಿರ್ಣಯವನ್ನು ಒಪ್ಪಬಹುದು. ಆದರೆ ಅವರು ಈ ನಿರ್ಧಾರಕ್ಕೆ ಬರಲು ಬಳಸಿಕೊಂಡ ಸಾಧನ, ರೀತಿ, ನೀತಿಗಳು ಪ್ರಶಂಸನೀಯವಾಗಿವೆ.

ಶ್ರೀ ನಿಜಗುಣರ ಗುರುಪರಂಪರೆಯನ್ನು ವಿವೇಚಿಸುತ್ತಾ "ಶ್ರೀ ತೋಂಟದ ಸಿದ್ಧಲಿಂಗ ಶಿವಯೋಗಿಗಳೇ ನಿರಾಭಾರಿದೇಶಿಕವರೇಣ್ಯರು. ಶ್ರೀ ನಿಜಗುಣರ ಗುರುಗಳ ಗುರು—ಪರಮಗುರುಗಳು. ಶ್ರೀ ಜಗುನಿ ಮರುಳದೇವರು ನಿರಾಭಾರಿ-ದೇಶಿಕರು ಶ್ರೀ ನಿಜಗುಣರ ಪ್ರಸಾದಿಸ್ಥಲದ ಜ್ಞಾನೋಪದೇಶ ದೇಶಿಕರು. ಶ್ರೀ ಶಂಭುಲಿಂಗದೇಶಿಕರು ಶ್ರೀ ನಿಜಗುಣರಿಗೆ ವಿಶೇಷ ವೀರಶೈವ ದೀಕ್ಷೆಯನ್ನು ಕರುಣಿಸಿದ ಶ್ರೀಸದ್ಗುರುವು" ಎಂದು ಗುರುಪರಂಪರೆಯನ್ನು ಹೇಳಿದ್ದಾರೆ.

ನಂತರ ಸೋದೆಯ ಶ್ರೀ ಭುಜಲಿಂಗಸ್ವಾಮಿಗಳು ಶ್ರೀ ನಿಜಗುಣಶಿವಯೋಗಿಗಳ ಸಂಸ್ಕೃತ, ಶಬ್ದವ್ಯಾಕರಣಪ್ರಮಾಣಾದಿಗಳ ಲಕ್ಷಣಶಿಕ್ಷೆಗಳ ಗುರುಗಳಾಗಿರಬೇಕು, ಎಂದಿದ್ದಾರೆ. ಈ ಸಂಪ್ರದಾಯವಿವರಣೆಯಲ್ಲಿ ಗುರುಲಕ್ಷಣವಿಮರ್ಶೆ ಮಾಡಿ-ರುವುದು ಅರ್ಥವತ್ತಾಗಿದೆ. ಆದರೂ ಅದರ ವಿವೇಚನೆ ಪೂರ್ಣವಾಯಿತೆನ್ನಲು ಸಾಧ್ಯವಾಗಲಾರದು. ಶ್ರೀ ತೋಂಟದ ಸಿದ್ಧಲಿಂಗೇಶ್ವರರ ಜನ್ಮಭೂಮಿಯೇ ಮೈಸೂರು ಜಿಲ್ಲೆಯ ಹರದನಹಳ್ಳಿ ಗ್ರಾಮ. ಅವರ ಶಿಷ್ಯರಾದ ಶ್ರೀ ಘನಲಿಂಗಿ ಶಿವಯೋಗಿಗಳು 'ಮೈಸೂರು ಜಿಲ್ಲೆಯ ಸುತ್ತೂರು ವೀರಸಿಂಹಾಸನದ ಹನ್ನೊಂದನೆಯ ಪೀಠಾಧೀಶ್ವರರು' ಇವರೀರ್ವರೂ ಬಸವಾದಿ ಶಿವಶರಣರ ಪಂಥವನ್ನು ಪುನುರುಜ್ಜೀವನಗೊಳಿಸಿದ ಮಹಾನುಭಾವರು. ಶ್ರೀ ತೋಂಟದ ಸಿದ್ಧಲಿಂಗೇಶ್ವರರು ತಮ್ಮ ಅಮೂಲ್ಯ ವಚನವೊಂದರಲ್ಲಿ,

"ಸದ್ರೂಪವೇ ಸಂಗನಬಸವಣ್ಣ ನೋಡಾ, ಚಿದ್ರೂಪವೇ ಚೆನ್ನಬಸವಣ್ಣ ನೋಡಾ, ಆನಂದಸ್ವರೂಪವೇ ಪ್ರಭುದೇವರು ನೋಡಾ, ಇದುಕಾರಣ, ಸದ್ರೂಪವಾದ ಸಂಗನಬಸವಣ್ಣನೇ ಗುರು, ಚಿದ್ರೂಪವಾದ ಚೆನ್ನಬಸವಣ್ಣನೇ ಲಿಂಗ; ಆನಂದಸ್ವರೂಪವಾದ ಪ್ರಭುದೇವರೇ ಜಂಗಮವು ನೋಡಾ, ನಿತ್ಯನಿರಂಜನ ಪರತತ್ವ ತಾನೆ ಮೂರು ತೆರನಾಯಿತ್ತು ನೋಡಾ, ಮಹಲಿಂಗಗುರು ಶಿವ-ಸಿದ್ಧೇಶ್ವರ ಪ್ರಭುವೇ" ಎಂದಿದ್ದಾರೆ.

ಘನಲಿಂಗಶಿವಯೋಗಿಗಳು ತಮ್ಮ ವಚನದಲ್ಲಿ:

"ನಿಮ್ಮಂ ಸೆರಗೊಡ್ಡಿ ಬೇಡಿಕೊಂಬೆನಯ್ಯ,ಭಕ್ತಿಗೆ ಭಂಡಾರವಾಗಿಪ್ಪ ಸಂಗನ ಬಸವಣ್ಣಾ, ಎನಗೆ ಹಾಗ ತೂಕ ಭಕ್ತಿಯ ಕೊಡಯ್ಯಾ, ಪ್ರಸಾದವನೆ ಚಿತ್ಪಿಂಡ ಸ್ವರೂಪವಾದ ಚೆನ್ನಬಸವಣ್ಣ ಎನಗೆ ಹಾಗ ತೂಕ ಜ್ಞಾನ ಕೊಡಯ್ಯಾ, ಮಾಯಾ ಕೋಲಾಹಲನಪ್ಪ ಅಲ್ಲಮಪ್ರಭುವೇ, ಎನಗೆ ಹಾಗ ತೂಕ ವೈರಾಗ್ಯವ ಕೊಡಯ್ಯಾ" ಮುಂತಾಗಿ ಶರಣರನ್ನು ಪರಿಪರಿಯಿಂದ ನುತಿಸಿದ್ದಾರೆ.

ಅಂತಿರುವಾಗ ಶ್ರೀನಿಜಗುಣರು, ಶ್ರೀತೋಂಟದ ಸಿದ್ಧಲಿಂಗೇಶ್ವರರ ಪರಂ-ಪರೆಯ ಪ್ರಭಾವಕ್ಕೆ ಸಿಕ್ಕಿದ್ದರೆ ಬಸವಾದಿಶರಣರ ಹೆಸರೆತ್ತದೆ ಬಿಡುತ್ತಿದ್ದರೇ? ಡಾ|| ಹಳಕಟ್ಟಿಯವರ ಅಭಿಪ್ರಾಯವನ್ನು ಪುಷ್ಟೀಕರಿಸಿದಾಕ್ಷಣವಲ್ಲಿ ಶ್ರೀ ರೇವಣ ಸಿದ್ಧರ ತರುವಾಯ ವೀರಶೈವಧರ್ಮ ಪ್ರಚಾರವಾಗಿರಲಿಲ್ಲ. ನಿಜಗುಣರು ಬಸವಣ್ಣನವರನ್ನು ನೆನೆಯದಿರುವುದಕ್ಕೆ ಇದೇ ಕಾರಣವಾಗಿರಬೇಕು ಎನ್ನುವುದು ಸಮಂಜಸವಾಗಲಾರದು. ಶ್ರೀ ತೋಂಟದ ಸಿದ್ಧಲಿಂಗೇಶ್ವರರ ಶಿಷ್ಯಸಂಪ್ರ-ದಾಯಕ್ಕೆ ಶ್ರೀ ನಿಜಗುಣರು ಸೇರಿದವರೆಂಬುದೂ, ಅವರು ಶರಣರನ್ನು ನುತಿಸ ದಿರುವುದೂ ಇನ್ನೂ ಸಮಸ್ಯೆಯಾಗಿಯೇ ಉಳಿದಿದೆಯಾದುದರಿಂದ ಈ ವಿಷಯ ಗಳನ್ನು 'ಇದಮಿತ್ಥಂ' ಎಂದು ನಿಶ್ಚಯಿಸಿದಂತಾಗುವುದಿಲ್ಲ. ಈ ವಿಚಾರದಲ್ಲಿ ಮತ್ತಷ್ಟು ಸಂಶೋಧನೆ ನಡೆಯಲೆಂದು ಆಶಿಸುವೆ.

ಪ್ರಸ್ತಾವನೆಯಲ್ಲಿ ಶ್ರೀನಿಜಗುಣರ ಈ ಕೃತಿಗೆ ಆಧಾರಗ್ರಂಥಗಳನ್ನು ನಿರ್ಧರಿಸಲು ಶ್ರೀ ಶಾಸ್ತ್ರಿಗಳು ನಡೆಸಿರುವ ಪ್ರಯತ್ನ ಅತ್ಯಂತ ಪ್ರಶಂಸಾತ್ಮಕ ಸಂಗತಿ. ಆದರೊಡನೆ ದರ್ಶನಗಳ ಸೂಕ್ಷ್ಮಸ್ವರೂಪವನ್ನೂ ಚಿತ್ರಿಸಿ, ಮೂಲಕೃತಿಯನ್ನು ಅರಿಯಲು ಅಪಾರ ಉಪಕಾರವನ್ನೆಸಗಿದ್ದಾರೆ. ಸಂಗೀತಶಾಸ್ತ್ರಜ್ಞರ ಬಗೆಗೆ ಅವರು ನಡೆಸಿರುವ ಸಂಶೋಧನೆಯೂ ಮೆಚ್ಚುವಂತಹುದು. ಮೂಲಕೃತಿಯಲ್ಲಿ ಸೂಕ್ತ ಪಾಠಾಂತರಗಳನ್ನಿತ್ತು ಕೃತಿಯನ್ನು ಪರಿಶುದ್ಧಗೊಳಿಸಿದ್ದಾರೆ. ಒಪ್ಪೋಲೆಯಿದ್ದರೂ ಇನ್ನೂ ನುಸುಳಿರುವ ಮುದ್ರಣದೋಷಗಳಿವೆ. ಇಷ್ಟಾದರೂ ನಿಜಗುಣರ ಕೃತಿಗಳ ವಿಷಯದಲ್ಲಿ ಅಧಿಕೃತ ಪಾಂಡಿತ್ಯವನ್ನು ಶ್ರೀ ಶಾಸ್ತ್ರಿಗಳು ಗಳಿಸಿದ್ದಾರೆ, ಎನ್ನಬಹುದು. ಅವರ ಪ್ರಸ್ತಾವನೆಯೂ ಸಹ ವಿಶ್ವವಿದ್ಯಾನಿಲಯದ ಪ್ರಶಸ್ತಿಗೆ ಪಾತ್ರವಾಗಬಲ್ಲ ಪ್ರಬಂಧವೇ ಆಗಿದೆ. ಇಂತಹ ಪರಿಶೋಧಿತವಾದ "ವಿವೇಕಚಿಂತಾಮಣಿ"ಯನ್ನು ಕನ್ನಡನಾಡಿಗೆ ಅರ್ಪಿಸಿದ ಶ್ರೀ ಶಾಸ್ತ್ರಿಗಳವರು ಅಭಿನಂದನಾರ್ಹರು. ಅವರ ಸಾಹಸದ ಫಲವಾಗಿ ಶ್ರೀ ನಿಜಗುಣರ ಇತರ ಕೃತಿಗಳೂ ಇದೇ ರೀತಿ ಸಂಶೋಧನಾಪೂರ್ಣವಾಗಿ ಹೊರಬರಲೆಂದು ಆಶಿಸುತ್ತೇವೆ. ಈ ಕೃತಿಗೆ ಮುನ್ನುಡಿಯನ್ನು ಬರೆದ ಡಾ|| ಆರ್. ಸಿ. ಹಿರೇಮಠರವರು ಈ ಕೃತಿಯ ಸ್ವರೂಪದರ್ಶನವನ್ನು ಸೂಕ್ಷ್ಮವಾಗಿ ಮಾಡಿಸಿರುವುದೂ ಸಹ ಸ್ಮರಿಸಬಹುದಾದ ಸಂಗತಿ. ಅಂತಹ ಹಿರಿಯ ಸಾಹಿತಿಗಳ ನೇತೃತ್ವದಲ್ಲಿ ಶ್ರೀ ಶಾಸ್ತ್ರಿಗಳ ಪ್ರತಿಭೆ ಬೆಳೆಯಲೆಂದು ಮತ್ತೊಮ್ಮೆ ಹಾರೈಸುವೆ.

★ **ಹೆಚ್. ಗಂಗಾಧರನ್,**
ಮೈಸೂರು

ಸಾದರ ಸ್ವೀಕಾರ

೧. **ಜೀವನಸಿದ್ಧಾಂತ (ಭಕ್ತಸಂಪುಟ)**

ಲೇಖಕರು: ಶ್ರೀ ಜ. ಚ. ನಿ.
ಪ್ರಕಾಶಕರು: ಶ್ರೀಶೈಲ ಜಗದ್ಗುರು ನಿಡುಮಾಮಿಡಿ ಪುಸ್ತಕ ಭಂಡಾರ
ನಂ. ೪೯, ಹ.ಬ. ಸಮಾಜ ರಸ್ತೆ, ಬೆಂಗಳೂರು -೪.
ಪುಟ: xxvi+೮೭೨ ಬೆಲೆ: ೧೦–೫೦

೨. **ಜೀವನಸಿದ್ಧಾಂತ (ಮಾಹೇಶಸಂಪುಟ)**

ಲೇಖಕರು: ಶ್ರೀ ಜ. ಚ. ನಿ.
ಪ್ರಕಾಶಕರು: ಶ್ರೀಶೈಲ ಜಗದ್ಗುರು ನಿಡುಮಾಮಿಡಿ ಪುಸ್ತಕ ಭಂಡಾರ
ನಂ. ೪೯, ಹ.ಬ. ಸಮಾಜ ರಸ್ತೆ, ಬೆಂಗಳೂರು-೪.
ಪುಟ: ೧೪+೭೫೨ ಬೆಲೆ: ಸಾದಾ ಪ್ರತಿ ೧೦–೦೦
ಕ್ಯಾಲಿಕೋ ೧೨–೦೦

೩. **ಜೀವನಸಿದ್ಧಾಂತ (ಪ್ರಸಾದಿಸಂಪುಟ)**

ಲೇಖಕರು: ಶ್ರೀ ಜ. ಚ. ನಿ.
ಪ್ರಕಾಶಕರು: ಶ್ರೀಶೈಲ ಜಗದ್ಗುರು ನಿಡುಮಾಮಿಡಿ ಪುಸ್ತಕ ಭಂಡಾರ
ನಂ. ೪೯, ಹ. ಬ. ಸಮಾಜ ರಸ್ತೆ, ಬೆಂಗಳೂರು–೪
ಪುಟ: ೧೨+೩+೯೭೬ ಬೆಲೆ: ಸಾದಾ ೧೫–೦೦
ಕ್ಯಾಲಿಕೋ ೧೭–೦೦

೪. **ಜೀವನಸಿದ್ಧಾಂತ (ಪ್ರಾಣಲಿಂಗಿಸಂಪುಟ)**

ಲೇಖಕರು: ಶ್ರೀ ಜ. ಚ. ನಿ.
ಪ್ರಕಾಶಕರು: ಶ್ರೀಶೈಲ ಜಗದ್ಗುರು ನಿಡುಮಾಮಿಡಿ ಪುಸ್ತಕ ಭಂಡಾರ
ನಂ. ೪೯, ಹ. ಬ. ಸಮಾಜ ರಸ್ತೆ, ಬೆಂಗಳೂರು–೪.
ಪುಟ: xiv+೫೯೨ ಬೆಲೆ: ಸಾದಾ ಪ್ರತಿ ೬–೦೦
ಕ್ಯಾಲಿಕೋ ೮–೦೦

೫. **ಜೀವನಸಿದ್ಧಾಂತ (ಶರಣಸಂಪುಟ)**

ಲೇಖಕರು: ಶ್ರೀ ಜ. ಚ. ನಿ.
ಪ್ರಕಾಶಕರು: ಶ್ರೀಶೈಲ ಜಗದ್ಗುರು ನಿಡುಮಾಮಿಡಿ ಪುಸ್ತಕ ಭಂಡಾರ
ನಂ. ೪೯, ಹ. ಬ. ಸಮಾಜ ರಸ್ತೆ, ಬೆಂಗಳೂರು–೪
ಪುಟ: ೧೬+೪೮೦ ಬೆಲೆ: ಸಾದಾ ಪ್ರತಿ ೬–೦೦
ಕ್ಯಾಲಿಕೋ ೮–೦೦

೬. ಜೀವನಸಿದ್ಧಾಂತ (ಐಕ್ಯಸಂಪುಟ)

ಲೇಖಕರು: ಶ್ರೀ ಜ. ಚ. ನಿ.
ಪ್ರಕಾಶಕರು: ಶ್ರೀಶೈಲ ಜಗದ್ಗುರು ನಿಡುಮಾಮಿಡಿ ಪುಸ್ತಕ ಭಂಡಾರ
ನಂ. ೪೯, ಹ.ಬ. ಸಮಾಜ ರಸ್ತೆ, ಬೆಂಗಳೂರು-೪.
ಪುಟ: xiv+೩೪೮+ii ಬೆಲೆ: ಸಾದಾ ಪ್ರತಿ ೫-೮೦
ಕ್ಯಾಲಿಕೋ ೭-೦೦

೭. ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಸುಪ್ರಭಾತ

ಲೇಖಕರು: ಗಂಗಪ್ಪ ವಾಲಿ
ಪ್ರಕಾಶಕರು: ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಲ
ಮೂರುಸಾವಿರಮಠ, ಹುಬ್ಬಳ್ಳಿ
ಪುಟ: ೨೬ ಬೆಲೆ: ೦-೫೦

೮. ತಕರಾರಿನವರು (ಕವನಸಂಕಲನ)

ಲೇಖಕರು: ಚಂದ್ರಶೇಖರ ಕಂಬಾರ
ಪ್ರಕಾಶಕರು: ಅಕ್ಷರ ಪ್ರಕಾಶನ, ಸಾಗರ, ಮೈಸೂರು ರಾಜ್ಯ
ಪುಟ: ೫೬ ಬೆಲೆ: ೪-೦೦

೯. ಸಂಜೆ ಐದರ ಮಳೆ (ಕವನಸಂಕಲನ)

ಲೇಖಕರು: ಕೆ. ಎಸ್. ನಿಸಾರ್ ಅಹಮದ್
ಪ್ರಕಾಶಕರು: ಅಕ್ಷರ ಪ್ರಕಾಶನ, ಸಾಗರ, ಮೈಸೂರು ರಾಜ್ಯ
ಪುಟ: ೬೪ ಬೆಲೆ: ೪-೦೦

೧೦. ಶರಾವತಿ (ಕವನಸಂಕಲನ)

ಲೇಖಕರು: ನಾರಾಯಣ ಕಾಗಾಲ
ಪ್ರಕಾಶಕರು: ನಾರಾಯಣ ಕಾಗಾಲ, ಕುಮಟಾ (ಉತ್ತರ ಕನ್ನಡ)
ಪುಟಗಳು: ೧೦+೭೨ ಬೆಲೆ: ೧-೫೦

೧೧. ಪ್ರೇಮಗಾನ (ಕವನಸಂಕಲನ)

ಲೇಖಕರು: ಅಪ್ಪಾಸಾಹೇಬ ಸದರಜೋಶಿ, ಎಂ.ಎ., ಎಲ್‌ಎಲ್.ಬಿ.
ಪ್ರಕಾಶಕರು: ಸುಶೀಲಾ ಪ್ರಕಾಶನ, ಗೆಳೆಯರ ಬಳಗ,
ಚಿಕ್ಕೋಡಿ, ಜಿ. ಬೆಳಗಾವಿ
ಪುಟ: viii+೩೨ ಬೆಲೆ: ೧-೦೦

೧೨. ದೀವಿಗೆ (ಕವನಸಂಕಲನ)

ಲೇಖಕರು: ಜಿ. ಎಸ್. ಅನ್ನದಾನಿ
ಪ್ರಕಾಶಕರು: ಮಿತ್ರಭಾರತಿ ಪ್ರಕಾಶನ ಸಮಿತಿ, ವಿಜಾಪೂರ
ಪುಟ: iv+iv+ii+೫೪+ii ಬೆಲೆ: ೨-೦೦

೧೩. ಮಕ್ಕಳ ಲೋಕ (ಮಕ್ಕಳ ಕವನಸಂಗ್ರಹ)

ಲೇಖಕರು: ಈಶ್ವರ ಕಮ್ಮಾರ
ಪ್ರಕಾಶಕರು: ನಂದೀಶ್ವರ ಪ್ರಕಾಶನ, ಹಿರೇನಂದಿಹಳ್ಳಿ
ಪುಟ: ೬+೪೮ ಬೆಲೆ: ೧-೦೦

೧೪. ನಾನಲ್ಲ (ಕಥೆಗಳು)

ಲೇಖಕರು: ಪಿ. ಲಂಕೇಶ್
ಪ್ರಕಾಶಕರು: ಅಕ್ಷರ ಪ್ರಕಾಶನ, ಸಾಗರ, ಮೈಸೂರು ರಾಜ್ಯ
ಪುಟ: ೧೧೬ ಬೆಲೆ: ೫-೦೦

೧೫. ದೃಷ್ಟಿ (ಕಥೆಗಳು)

ಲೇಖಕರು: ಆರ್ಯ
ಪ್ರಕಾಶಕರು: ಅಕ್ಷರ ಪ್ರಕಾಶನ, ಸಾಗರ, ಮೈಸೂರು ರಾಜ್ಯ
ಪುಟ: ೧೦೬ ಬೆಲೆ: ೫-೦೦

೧೬. ಭಾಷೆಯ ಬಗೆಗೆ ನೀವೇನು ಬಲ್ಲಿರಿ?

ಲೇಖಕರು: ಡಾ. ಡಿ. ಎನ್. ಶಂಕರಭಟ್ಟ
ಪ್ರಕಾಶಕರು: ಭಾಷಾ ಪ್ರಕಾಶನ, ಯರವಾಡ, ಪುಣೆ
ಪುಟ: ೧೦+೯೪ ಬೆಲೆ: ೪-೦೦

೧೭. ಗೋರ್ಕಿಯ ಕಥೆಗಳು

ಅನುವಾದಕರು: ಕೆ. ವಿ. ಸುಬ್ಬಣ್ಣ
ಪ್ರಕಾಶಕರು: ಅಕ್ಷರ ಪ್ರಕಾಶನ, ಸಾಗರ, ಮೈಸೂರು ರಾಜ್ಯ
ಪುಟ: ೯೩ ಬೆಲೆ: ೨-೦೦

೧೮. ಪ್ರಸಾದವಾಣಿ

ಲೇಖಕರು: ಎಸ್ ಡಿ. ಸವದತ್ತಿಮಠ
ಪ್ರಕಾಶಕರು: ಸಂಗಮೇಶ ಪ್ರಕಾಶನ, ಮುರಗೋಡ
ಪುಟ: ೨೬ ಬೆಲೆ: ೧-೦೦

೧೯. **ಜೀವನವಿಕಾಸ** (ಹುಬ್ಬಳ್ಳಿ ಮೂರುಸಾವಿರಮಠದ ಶ್ರೀ ಜಗದ್ಗುರುಗಳವರ ಐದು ಆಶೀರ್ವಚನಗಳು)

ಸಂಪಾದಕರು: ಇಲಕಲ್ಲ ಗುರುಸಿದ್ಧದೇವರು
"ವೇದಾಂತಶಾಸ್ತ್ರಾಚಾರ್ಯ", ಕಾವ್ಯತೀರ್ಥ, ಕಾವ್ಯನಿಧಿ
ಪ್ರಕಾಶಕರು: ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಲ
ಮೂರುಸಾವಿರಮಠ, ಹುಬ್ಬಳ್ಳಿ
ಪುಟ: viii + ೪೪ ಬೆಲೆ: ೦೦-೭೫

೨೦. **ಭಾಗೀರಥಿ** (ಸಾಮಾಜಿಕ ಏಕಾಂಕ ನಾಟಕ)

ಲೇಖಕರು: ಈಶ್ವರ ಕಮ್ಮಾರ, ಹಿರೇನಂದಿಹಳ್ಳಿ
ಪ್ರಕಾಶಕರು: ಎಂ. ಎಸ್. ಶಾಬಾದಿಮಠ, ಗದಗ
ಪುಟ: viii + ೩೪ ಬೆಲೆ: ೦೦-೫೦

೨೧. **ಜೀವನ ರಹಸ್ಯ** (ಸಾಮಾಜಿಕ ನಾಟಕ)

ಲೇಖಕರು: ಆರ್. ಭರಮಲಿಂಗಪ್ಪ ಮಾಷ್ಟರ
ಪ್ರಕಾಶಕರು: ಎ. ವೀರಭದ್ರಪ್ಪ, ರಾಮಸಾಗರ
ಡಿ. ಹಗಲೂರಪ್ಪ, ಕಾಮಲಾಪೂರ, ಬಳ್ಳಾರಿ ಜಿಲ್ಲೆ
ಪುಟ: ೮ + ೧೩೬ ಬೆಲೆ: ૨-೦೦

೨೨. **ಜ್ಞಾನಕರ್ನಾಟಕ** (ಕನ್ನಡ ಮಾಸಪತ್ರಿಕೆ)

ಸಂಪುಟ: ೧, ಸಂಚಿಕೆ: ೧

ಸಂಪಾದಕರು: ರಾಮಭಟ್ಟ ಪ್ರ. ಪೂಜಾರ
ಬಾಲಚಂದ್ರ ಎಸ್. ಬಡಿಗೇರ
ಬಾಬೂರಾವ ಈ. ಕರಲಿಂಗಣ್ಣವರ
ಪ್ರಕಾಶಕರು: ಭಾರತೀ ಪ್ರಕಾಶನ, ನುಗುಟಿಖಾನ ಹುಬ್ಬಳ್ಳಿ,
ಜಿ. ಬೆಳಗಾವಿ
ಪುಟ: ೨೬ ಬೆಲೆ: ೦೦-೪೦

೨೩. **ವಿದ್ಯಾ** (ಸಾಂಸ್ಕೃತಿಕ ಮಾಸಪತ್ರಿಕೆ)

ಸಂಪುಟ: ೫, ಸಂಚಿಕೆ: ೪

ಸಂಪಾದಕರು: ಕೆ. ನಾಗೇಶ ಹತ್ವಾರ
ಪ್ರಕಾಶಕರು: ಭಾರತೀಯ ಸಂಸ್ಕೃತಿ ವಿದ್ಯಾಪೀಠ
ಚಾಮರಾಜಪೇಟೆ, ಬೆಂಗಳೂರು-೧೮
ಪುಟ: ೩೨ ಬೆಲೆ: ೦೦-೨೫

ಸಂಪಾದಕೀಯ

ತ್ರೈಮಾಸಿಕ— ಕರ್ನಾಟಕ ಭಾರತಿ

'ಆಯನಪತ್ರಿಕೆ'ಯಾಗಿದ್ದ ಕರ್ನಾಟಕ ಭಾರತಿಗೆ ಎರಡು ವರ್ಷಗಳು ತುಂಬಿದವು. ಈ ಸಂಚಿಕೆಯೊಂದಿಗೆ ಅದು ತ್ರೈಮಾಸಿಕವಾಗಿ ಹೊರಬರುತ್ತಲಿದೆ. ತನ್ನ ಎರಡು ವರುಷಗಳ ಅವಧಿಯಲ್ಲಿ ೧೩ ಕವನ, ೨ ಕತೆ, ೭ ಸಾಹಿತ್ಯಪ್ರಬಂಧ, ೧೭ ವೈಜ್ಞಾನಿಕ ಪ್ರಬಂಧ, ೧ ನಾಟಕ, ೭ ವಿಮರ್ಶೆ, ೨೯ ಸಂಶೋಧನ, ೪ ಸಂಪಾದನೆ—ಹೀಗೆ ಒಟ್ಟು ೮೦ ಲೇಖನ ಮತ್ತು ಕವನಗಳನ್ನು ಅದು ಪ್ರಕಟಿಸಿದೆ. ಸುವಿಖ್ಯಾತ ಲೇಖಕರಿಗೆ ವೇದಿಕೆಯಾಗುವುದರೊಂದಿಗೆ ವೈಜ್ಞಾನಿಕ ಲೇಖಕರನ್ನು, ಹೊಸ ಲೇಖಕರನ್ನು ಸೃಷ್ಟಿಸಿ ಅದು ಬರಹಗಾರರ ಸೈನ್ಯವನ್ನು ಸಜ್ಜುಗೊಳಿಸಿದೆ, ಸಜ್ಜುಗೊಳಿಸುತ್ತಲಿದೆ. ಈವರೆಗೆ ಉನ್ನತಮಟ್ಟದ ಲೇಖನ ನೀಡಿದ ಲೇಖಕರು, ಭಾರತಿಯನ್ನು ಬರಮಾಡಿಕೊಂಡ ವಾಚಕರು ಇಂದಿಗಿಂತ ಹೆಚ್ಚು ಆಸಕ್ತಿ ತೋರಬೇಕಾಗಿ ಪ್ರಾರ್ಥನೆ.

ಸ್ನಾತಕೋತ್ತರ ಶಿಕ್ಷಣಕೇಂದ್ರ

ಇಪ್ಪತ್ತು ವರ್ಷಗಳ ಹಿಂದೆ ಈ ಪ್ರದೇಶದ ಜನರ ಆಶೋತ್ತರಗಳ ಪ್ರತೀಕವಾಗಿ ಹುಟ್ಟಿದ ಕರ್ನಾಟಕ ವಿಶ್ವವಿದ್ಯಾಲಯ ಭರದಿಂದ ಬೆಳೆದು ಈ ಭಾಗದಲ್ಲಿ ಇನ್ನೊಂದು ವಿಶ್ವವಿದ್ಯಾಲಯದ ಜನನಕ್ಕೆ ಅವಕಾಶ ಮಾಡಿಕೊಟ್ಟಿದೆ. ಇದನ್ನು ಮನದಂದು ಈ ವರುಷದಿಂದ ಕಲಬುರ್ಗಿಯಲ್ಲಿ ಸ್ನಾತಕೋತ್ತರ ಶಿಕ್ಷಣಕೇಂದ್ರವನ್ನು ಪ್ರಾರಂಭಿಸಲಾಗಿದೆ. ಈ ಕೇಂದ್ರಸ್ಥಾಪನೆ ನಮ್ಮ ವಿಶ್ವವಿದ್ಯಾಲಯದ ಇತಿಹಾಸದಲ್ಲಿ ಇನ್ನೊಂದು ಮೈಲುಗಲ್ಲೆಂದು ಹೇಳಬಹುದು. ಇದರ ಸ್ಥಾಪನೆಗೆ ನಮ್ಮ ಕುಲಪತಿಗಳಾದ ಡಾ. ಎ. ಎಸ್. ಅಡಕೆ, ಬಿ ಇ., ಪಿಎಚ್.ಡಿ., ಎ.ಎಮ್.ಆಯ್.ಇ., ಅವರು ಅವಿಶ್ರಾಂತ ಪರಿಶ್ರಮಪಟ್ಟಿರುವುದು ಸಂಸ್ಮರಣೀಯವೆಂದು ಹೇಳಬಯಸುತ್ತೇವೆ. ಅವರಿಗೆ ಈ ನಾಡು ಚಿರಋಣಿಯಾಗಿದೆ.

ಕುಲಪತಿಗಳ ವಿದೇಶ ಪ್ರಯಾಣ

ಕರ್ನಾಟಕ ವಿಶ್ವವಿದ್ಯಾಲಯದ ಕರ್ಣಧಾರಿಗಳಾದ ಮಾನ್ಯ ಕುಲಪತಿ ಡಾ. ಎ. ಎಸ್. ಅಡಕೆ ಅವರು ಭಾರತೀಯ ವಿಶ್ವವಿದ್ಯಾಲಯಗಳ ಪ್ರಾತಿನಿಧಿಕ ನಿಯೋಗದ ಸದಸ್ಯರಾಗಿ ಯುಗೊಸ್ಲಾವಿಯಾಕ್ಕೆ ತೆರಳಲಿರುವರು. ಇದು ನಮ್ಮ ವಿಶ್ವವಿದ್ಯಾಲಯಕ್ಕೆ ಸಂದ ಒಂದು ದೊಡ್ಡ ಗೌರವ. ಅವರ ಪ್ರಯಾಣ ಸಫಲವಾಗಲಿ, ಸುಖಕರವಾಗಲಿ ಎಂದು ಭಾರತಿ ಹಾರೈಸುತ್ತದೆ.

ರಾಜ್ಯಸಾಹಿತ್ಯ ಅಕಾಡೆಮಿ ಪುರಸ್ಕಾರ

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ವೀರಶೈವ ಶಾಖೆಯ ಪ್ರಾಧ್ಯಾಪಕರಾಗಿರುವ ಪ್ರೊ. ಎಸ್. ಎಸ್. ಭೂಸನೂರಮಠ ಅವರು ಹಿರಿಯ ತಲೆಮಾರಿನ ವಿದ್ವಾಂಸರು. ವೀರಶೈವ ತತ್ವಶಾಸ್ತ್ರವನ್ನು ತಲಸ್ಪರ್ಶಿಯಾಗಿ ಅಭ್ಯಾಸ ಮಾಡಿದ ಇವರ 'ಶೂನ್ಯಸಂಪಾದನೆಯ ಪರಾಮರ್ಶೆ' ಒಂದು ದೊಡ್ಡ ಗ್ರಂಥ. ಕನ್ನಡ ವಿಭಾಗದ ಅಂಗವಾಗಿ ನಡೆಯುತ್ತಿರುವ ಶೂನ್ಯಸಂಪಾದನೆಯ ಇಂಗ್ಲಿಷ್ ಅನುವಾದಕಾರ್ಯವನ್ನು ನೋಡಿಕೊಳ್ಳುತ್ತಿರುವ ಪ್ರೊ. ಭೂಸನೂರ-ಮಠ ಅವರಿಗೆ ಈ ವರ್ಷ ರಾಜ್ಯಸಾಹಿತ್ಯ ಅಕಾಡೆಮಿ ಸನ್ಮಾನ ಲಭಿಸಿದೆ.

ವೀ.ಸಿ. ಎಂದು ಖ್ಯಾತನಾಮರಾಗಿರುವ ಶ್ರೀ ವೀ. ಸೀತಾರಾಮಯ್ಯ ಅವರು ಕವಿಗಳಾಗಿ ವಿಮರ್ಶಕರಾಗಿ ಕನ್ನಡವನ್ನು ಬೆಳೆಸಿದ ಸುಪ್ರಸಿದ್ಧ ಸಾಹಿತಿಗಳು. ಜ್ಞಾನದ ಹಲವು ಶಾಖೆಗಳನ್ನು, ಹಲವು ಭಾಷೆಗಳನ್ನು ಆತ್ಮೀಕರಿಸಿಕೊಂಡ ಇವರದು ಸಮಷ್ಟಿವ್ಯಕ್ತಿತ್ವ. ಕನ್ನಡದ ವಿವಿಧ ಕಾರ್ಯಕ್ಷೇತ್ರಗಳಲ್ಲಿ ಶ್ರದ್ಧೆಯಿಂದ ದುಡಿದ ಅವರಿಗೆ ರಾಜ್ಯಸಾಹಿತ್ಯ ಅಕಾಡೆಮಿ ಸನ್ಮಾನ ಸಂದುದು ಅಕಾಡೆಮಿಗೆ ಗೌರವ ತರುವ ವಿಷಯ

ಶ್ರೀ ಗೊರೂರು ಅವರು ಕನ್ನಡದ ಜನಪದದೊಂದಿಗೆ ಬೆಳೆದವರು. ಜನ-ಪದ ಜೀವನದ ಹಾಸ್ಯಮುಖವನ್ನು ಹತ್ತಿರದಿಂದ ಕಂಡವರು. ಕಾದಂಬರಿ, ಹಾಸ್ಯ ಮತ್ತು ಗಂಭೀರ ಪ್ರಬಂಧಗಳನ್ನು ಬರೆದು ಕನ್ನಡವನ್ನು ಶ್ರೀಮಂತಗೊಳಿಸಿದ ಶ್ರೀಯುತರಿಗೆ ಈ ವರುಷ ರಾಜ್ಯಸಾಹಿತ್ಯ ಅಕಾಡೆಮಿ ಪುರಸ್ಕಾರ ಲಭಿಸಿದೆ.

ಪ್ರಾಥಮಿಕ ಶಾಲೆಯ ಶಿಕ್ಷಕ ಏನನ್ನು ಸಾಧಿಸಬಲ್ಲ ಎಂಬುದಕ್ಕೆ ಆದರ್ಶವಾಗಿರುವವರಲ್ಲಿ ಶ್ರೀ ಮಿರ್ಜಿ ಅಣ್ಣಾರಾಯರು ಒಬ್ಬರು. ಕಾದಂಬರಿ, ವಿಮರ್ಶೆ ಮತ್ತು ಜೈನಸಾಹಿತ್ಯಗಳಲ್ಲಿ ವಿಶೇಷ ಕೃಷಿಗೆಯ್ದ ಇವರಿಗೆ ಈ ವರುಷ ರಾಜ್ಯಸಾಹಿತ್ಯ ಅಕಾಡೆಮಿ ಪುರಸ್ಕಾರ ಲಭಿಸಿದೆ.

ಈ ನಾಲ್ವರಿಗೆ ಕರ್ನಾಟಕ ಭಾರತಿ ಧನ್ಯವಾದಗಳನ್ನು ಅರ್ಪಿಸುತ್ತದೆ.

ಕನ್ನಡ ಪ್ರಾಧ್ಯಾಪಕರಿಗೆ ಉನ್ನತ ಸ್ಥಾನಗಳು

ಕನ್ನಡ ನುಡಿಯ ಏಳ್ಗೆಯಾಗಬೇಕಾದರೆ ಕನ್ನಡ ಭಾಷೆ, ಸಾಹಿತ್ಯಗಳ ಅಧ್ಯಯನದಲ್ಲಿ ಅಭಿವೃದ್ಧಿಯಾಗುವುದು ಅತ್ಯವಶ್ಯ; ಅನಿವಾರ್ಯ. ರಾಜ್ಯದ ಆಡಳಿತ ಭಾಷೆ, ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣಮಾಧ್ಯಮ ಭಾಷೆ ಕನ್ನಡವೇ ಆಗುವ ಕಾಲ ಸನ್ನಿಹಿತವಾಗಿರುವ ಈ ಸಮಯದಲ್ಲಿ ಕನ್ನಡ ಅಭ್ಯಾಸದ ವ್ಯಾಪ್ತಿ ಹೆಚ್ಚುವದು ಅತ್ಯಗತ್ಯ. ವೈಜ್ಞಾನಿಕ, ತಾಂತ್ರಿಕ ಮುಂತಾದ ಕ್ಷೇತ್ರಗಳಲ್ಲಿ ವಿಶಿಷ್ಟವಾದ, ವಿಪುಲವಾದ ಜ್ಞಾನಸಂಪಾದನೆಗಾಗಿ ಇಂಗ್ಲಿಷ್, ಫ್ರೆಂಚ್, ರಶಿಯನ್ ಮುಂತಾದ ಭಾಷೆಗಳ ಪರಿಜ್ಞಾನ ಅವಶ್ಯವೆಂಬುದು ಇಂದಿನ ಪರಿಸ್ಥಿತಿ

ಯಲ್ಲಿ ಒಪ್ಪತಕ್ಕ ಮಾತು. ಆದರೆ ರಾಜ್ಯದ ಆಡಳಿತ ಭಾಷೆಯಾಗಿ, ವಿಶ್ವ-ವಿದ್ಯಾಲಯಗಳಲ್ಲಿ ಶಿಕ್ಷಣದ ಮಾಧ್ಯಮವಾಗಿ ಆಂಗ್ಲ ಭಾಷೆಯೇ ಮುಂದು ವರಿಯಬೇಕೆಂಬುದು ಶಿಕ್ಷಣತತ್ವಕ್ಕೆ ವಿರೋಧಕವೂ ವಸ್ತುಸ್ಥಿತಿಗೆ ವಿಪರೀತವೂ ಆಗಿದೆಯೆಂದು ಹೇಳಬಯಸುತ್ತೇವೆ. ಕಾರಣ ಇದುವರೆಗೆ ಈ ದಿಶೆಯಲ್ಲಿದ್ದ ಇಂಗ್ಲಿಷ್‌ಭಾಷೆಯ ಸ್ಥಾನವನ್ನು ಇನ್ನುಮುಂದೆ ಕನ್ನಡ ಪಡೆಯುವುದು ಸೂಕ್ತ; ಅವಶ್ಯ. ಬದಲಾಗುತ್ತಿರುವ ಈ ಪರಿಸ್ಥಿತಿಯ ಸಂವೇದನೆ ಸರ್ವರಿಗೂ ತೀವ್ರ ವಾದಷ್ಟು ವಿಹಿತ.

ಬದಲಾವಣೆಯಾಗುತ್ತಿದೆಯೆಂಬುದಕ್ಕೆ ಕನ್ನಡ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ, ಕಲಿಸುವ ಪ್ರಾಧ್ಯಾಪಕರ ಸಂಖ್ಯೆ ಹೆಚ್ಚುತ್ತಿರುವುದೇ ಸಾಕ್ಷಿ. ಮುಂಬೈ ಕರ್ನಾಟಕಕ್ಕೆ ಅಂದಿನ ಸರಕಾರ ಕೇವಲ ಇಬ್ಬರು ಕನ್ನಡ ಅಧ್ಯಾಪಕರ (ಒಂದು Class II, ಇನ್ನೊಂದು Subordinate)ನ್ನು ಕಲ್ಪಿಸಿಕೊಟ್ಟಿದ್ದಿತು. ಈಗ ನೂರು ಕಾಲೇಜುಗಳನ್ನು ಪಡೆದ ನಮ್ಮ ವಿಶ್ವವಿದ್ಯಾಲಯದಲ್ಲಿ ೨೫ಂಕ್ಕೆ ಮೇಲ್ಪಟ್ಟು ಕನ್ನಡ ಅಧ್ಯಾಪಕರಿರುವರು. ಹಿರಿಯ ಪ್ರಾಧ್ಯಾಪಕರ ಎರಡು ಹುದ್ದೆಗಳಿಗೆ ಕಲಬುರ್ಗಿಯ ಸ್ನಾತಕೋತ್ತರ ವಿಭಾಗದ ಇನ್ನೊಂದು ಕನ್ನಡ ಪ್ರಾಧ್ಯಾಪಕ ಹುದ್ದೆ ಹೊಸತಾಗಿ ಸೇರಿದುದು ಒಂದು ಸಂತೋಷ. ಆ ಹುದ್ದೆಗೆ ಡಾ. ಎಂ. ಎಸ್. ಸುಂಕಾಪುರ ಅವರ ನಿಯಾಮಕವಾದುದು ಇನ್ನೂ ಸಂತಸದ ವಿಷಯ. ಡಾ. ಸುಂಕಾಪುರ ಅವರದು ಹಾಸ್ಯ ಸಾಹಿತ್ಯದೊಂದಿಗೆ ಹೊಸೆದು ನಿಂತ ಹೆಸರು; ಹಿರಿಕಿರಿಯರೆಲ್ಲರನ್ನು ಆಕರ್ಷಿಸಿದ ವ್ಯಕ್ತಿತ್ವ. ಬೋಧನ-ಸಂಶೋಧನಗಳ ಮೂಲಕ ಹೆಸರಾದ ಡಾ. ಸುಂಕಾಪುರ ಅವರು ಆ ಭಾಗದಲ್ಲಿ ಚಿರಸ್ಮರಣೀಯವಾದ ಕಾರ್ಯವನ್ನು ಮಾಡುವರೆಂದು ಹಾರೈಸಿ ಅವರಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳನ್ನು ಅರ್ಪಿಸುತ್ತೇವೆ.

ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗಕ್ಕೆ ಡಾ. ಜಿ. ಎಸ್. ಶಿವರುದ್ರಪ್ಪನವರು ಮುಖ್ಯ ಪ್ರಾಧ್ಯಾಪಕರಾಗಿ ಬಂದುದು ವಿಭಾಗಕ್ಕೆ ಹೊಸ ರಕ್ತ ಬಂದಂತಾಗಿದೆ. ಡಾ. ಶಿವರುದ್ರಪ್ಪನವರು ಸುಪ್ರಸಿದ್ಧ ಕವಿಗಳು ಮತ್ತು ವಿಮರ್ಶಕರು. ಇವರ ನೇತೃತ್ವದಲ್ಲಿ ಈ ಹೊಸ ವಿಶ್ವವಿದ್ಯಾಲಯದ ಹೊಸ ವಿಭಾಗ ವೈಶಿಷ್ಟ್ಯಪೂರ್ಣವಾಗಿ ಬೆಳೆಯುವುದೆಂಬ ಆಸೆ ಹುಟ್ಟಿದೆ. ಭಾರತಿ ಇವರಿಗೆ ಅಭಿವಂದನೆಗಳನ್ನು ಅರ್ಪಿಸುತ್ತದೆ.

ಡಾ. ಎಲ್. ಬಸವರಾಜು ಎಂಬ ಹೆಸರು ವಿದ್ವತ್ತೆಗೆ ಪರ್ಯಾಯನಾಮ ಎಂದರೆ ಅತ್ಯುಕ್ತಿಯಲ್ಲ. ಒಂದು ಸಂಸ್ಥೆ ಮಾಡುವಷ್ಟು ಕೆಲಸವನ್ನು ಡಾ. ಎಲ್. ಬಸವರಾಜು ಒಬ್ಬರೇ ಮಾಡಿರುವರು; ಮಾಡುತ್ತಿರುವರು. ಅವರು ಇದೀಗ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕ ರೆಂದು ನಿಯಮಿಸಲ್ಪಟ್ಟಿರುವರು. ಅವರಿಗೆ ಹಾರ್ದಿಕ ಅಭಿವಂದನೆಗಳು.

ಲೇಖಕರ ಪರಿಚಯ

೧ ಶ್ರೀ ಎಮ್. ಎಸ್. ಸುಂಕಾಪುರ

ಕನ್ನಡ ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರು, ಸ್ನಾತಕೋತ್ತರ ಶಿಕ್ಷಣ ಕೇಂದ್ರ, ಕಲಬುರ್ಗಿ.

೨. ಶ್ರೀ ಭೀಮರಾವ್ ಚಿಟಗುಪ್ಪಿ

ಕನ್ನಡದಲ್ಲಿ ಸಂಶೋಧನ ಲೇಖನ ಬರೆಯುತ್ತಿರುವ ಮುಂಬೈಯ ವಿದ್ವಾಂಸರು.

೩. ಶ್ರೀ ಗುರುಮೂರ್ತಿ ಕೆ. ಗೌಡರ

ಅಧ್ಯಾಪಕರು, ಮಾನವಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೪. ಶ್ರೀ ಎಂ. ಎಂ. ಕಲಬುರ್ಗಿ

ಅಧ್ಯಾಪಕರು, ಕನ್ನಡ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫. ಶ್ರೀ ಗೌರೀಶ ಕಾಯ್ಕಿಣಿ

ಗೋಕರ್ಣದವರಾದ ಇವರು ಪ್ರಸಿದ್ಧ ವಿಮರ್ಶಕರು.

೬. ಶ್ರೀ ಎನ್. ಆರ್. ನಾಯಕ

ಅಧ್ಯಾಪಕರು, ಆರ್ಟ್ಸ್ ಹಾಗೂ ಸಾಯನ್ಸ್ ಕಾಲೇಜ್, ಹೊನ್ನಾವರ.

೭. ಶ್ರೀ ಎನ್. ಕೆ. ಕಡೆತೋಟದ

ಸಹಾಯಕ ಸಂಶೋಧಕರು, ಮಾನವಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ.

೮. ಶ್ರೀ ಎಸ್. ಜಿ. ಘಟಪಣದಿ

ಸಹಾಯಕ ಸಂಶೋಧಕರು, ಇತಿಹಾಸ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೯. ಶ್ರೀ ಎಂ. ಎಸ್. ಎಸ್. ರಾವ್

ಅಧ್ಯಾಪಕರು, ಪ್ರಾಣಿಶಾಸ್ತ್ರ ವಿಭಾಗ, ಬಸವೇಶ್ವರ ಸೈನ್ಸ್ ಕಾಲೇಜ್, ಬಾಗಲಕೋಟೆ

೧೦. ಶ್ರೀ ಎಲ್. ಆರ್. ಹೆಗಡೆ

ಅಧ್ಯಾಪಕರು, ಕನ್ನಡ ವಿಭಾಗ, ಬಾಳಿಗಾ ಕಾಲೇಜ್, ಕುಮಟಾ.

೧೧. ಶ್ರೀ ಎಸ್. ಜಿ. ಮುಕ್ಕುಂದಿಮಠ

ಅಧ್ಯಾಪಕರು, ಕನ್ನಡ ವಿಭಾಗ, ಗವರ್ನ್ಮೆಂಟ ಕಾಲೇಜ, ಚಿಕ್ಕಮಗಳೂರು

೧೨. ಶ್ರೀ ಎಂ. ಎಸ್. ಇಂಚಲ

ಅಧ್ಯಾಪಕರು, ಕನ್ನಡ ವಿಭಾಗ, ಆರ್ಟ್ಸ್ ಮತ್ತು ಸೈನ್ಸ್ ಕಾಲೇಜ್, ಅಥಣಿ.

೧೩. ಶ್ರೀ ಎಸ್. ಶಿವಣ್ಣ

ಸಂಶೋಧನ ವಿದ್ಯಾರ್ಥಿ, ಮಹಾರಾಜ ಕಾಲೇಜ್ ಹಾಸ್ಟೆಲ್, ಮೈಸೂರು.

೧೪. ಶ್ರೀ ಎಸ್. ರಾಜಶೇಖರ

ಅಧ್ಯಾಪಕರು, ಇತಿಹಾಸ ವಿಭಾಗ, ಕರ್ನಾಟಕ ಕಾಲೇಜ್, ಧಾರವಾಡ.

೧೫. ಶ್ರೀ ಎಂ. ಅಕಬರ ಅಲಿ

ಅಧ್ಯಾಪಕರು, ಕನ್ನಡ ವಿಭಾಗ, ಜಿ. ಎಸ್. ಆರ್ಟ್ಸ್ ಮತ್ತು ಸಾಯನ್ಸ್ ಕಾಲೇಜ್, ಕಾರವಾರ.

೧೬. ಶ್ರೀ ಹೆಚ್. ಗಂಗಾಧರನ್

ಮೈಸೂರಿನಲ್ಲಿ ವಕೀಲ ವೃತ್ತಿಯಲ್ಲಿ ಇರುವ ಇವರು ಕನ್ನಡದಲ್ಲಿ ಕೃಷಿ ಮಾಡುತ್ತಿರುವರು.

ಕಳೆದ ಸಂಚಿಕೆಗಳ

ಲೇಖನಸೂಚಿ

೧. ಕವನ

೨. ಕತೆ

೩. ಸಾಹಿತ್ಯ, ಪ್ರಬಂಧ

೪. ವೈಜ್ಞಾನಿಕ ಪ್ರಬಂಧ

೫. ನಾಟಕ

೬. ವಿಮರ್ಶೆ

೭. ಸಂಶೋಧನೆ

೮. ಸಂಪಾದನೆ

೯. ಗ್ರಂಥಾವಲೋಕನ

೧೦. ಚಿತ್ರಗಳು

KARNATAK UNIVERSITY PUBLICATIONS

ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟನೆಗಳು

I. Text Books

(ಪಠ್ಯಪುಸ್ತಕಗಳು)

		PRICE Rs. Ps.
1	Selections from Mahābhārata & Rāmāyaṇa (Sanskrit)	3·00
2	Sanskrit Selections for P. U. C. (Arts & Science)	1·50
3	ಕಾವ್ಯಮಂಜರಿ : ಭಾಗ ೧, ಸಂಪುಟ ೧	1·00
4	ಕಾವ್ಯಮಂಜರಿ : ಭಾಗ ೧, ಸಂಪುಟ ೨	1·00
5	ಕಾವ್ಯಮಂಜರಿ : ಭಾಗ ೨, ಸಂಪುಟ ೧	1.00
6	ಕಾವ್ಯಮಂಜರಿ : ಭಾಗ ೨, ಸಂಪುಟ ೨	1·00
7	ಗದ್ಯಮಂಜರಿ	2·00
8	ಕಾವ್ಯವಿಲಾಸ	1·50
9	ಗದ್ಯವಿಲಾಸ	1·25
10	ಕಾವ್ಯಕುಂಜ	1·50
11	ಕಾವ್ಯಮಂಜರಿ : ಭಾಗ ೧, ಸಂಪುಟ ೩	2·00

II. Research Publications Series

(ಸಂಶೋಧನ ಗ್ರಂಥಮಾಲೆ)

1	Pleistocene Studies in the Malaprabha Basin (Joint Publication of Karnatak University, Dharwar and Deccan College Research Institute, Poona)	—*R. V. Joshi*	15·00
2	The Karnatak Theatre —*H. K. Ranganath*	Ord. binding	3·00
		Half Calico	5·00
3	Some Problems in Jaina Psychology —*T. G. Kalghatgi*	Full cal.	7·00
		Half calico	6·00
4	ಕನ್ನಡ ಜಾನಪದ ಗೀತಗಳು	—ಜಿ. ಎಸ್. ಗದ್ದಗಿಮಠ	10·00
5	The Concept of Comedy	—*G. S. Amur*	7·00
			$ 2 or Sh. 13
6	Local Self-Government in Mediaeval Karnatak —*G. S. Dikshit*		7·00
			$ 2 or Sh. 13
7	ಕನ್ನಡ ಸಾಹಿತ್ಯದಲ್ಲಿ ಹಾಸ್ಯ	—ಎಂ. ಎಸ್. ಸುಂಕಾಪುರ	8·00
8	Basic Syllabus in Practice	—*N. R. Hiremath*	10·00
			$ 3 or £. 1

9 The Later Phase in the Development of
W. B. Yeats —*S. R. Mokashi* 10·00
$ 3 or £. 1

10 Some Studies in Boolean Algebra 7·00
—*E. Sampathkumarachar* $ 2 or Sh. 14

11 ನೇಮಿಚಂದ್ರ —ಜಿ. ಎಸ್. ಕುಲಕರ್ಣಿ 12·00

12 History of South Kanara —*K. V. Ramesh* (IN PRESS)

13 Havyaka Dialect of North Kanara —*K. G. Shastri* („)

14 A Critical Study of the Hindu Astronomy
in the Light and Language of the Modern („)
—*D. A. Somayaji*

III. Extension Lectures Publications Series

(ವಿಶೇಷ ಉಪನ್ಯಾಸ ಗ್ರಂಥಮಾಲೆ)

1 Introduction to Karnatak Mysticism 1.00
—*R. D. Ranade*

2 Hindu Code Bill —*P. B. Gajendragadkar* 2·00

3 Karnataka's Trans-Oceanic Contacts 3.00
—*B. A. Saletore*

4 Kālidāsa —*R. D. Karmarkar* 4.00

5 Bhavabhūti —*R. D. Karmarkar* 3.00
$ 1 or Sh. 7

6 Bāṇa —*R. D. Karmarkar* 3·00

7 Rockets, Satellites and Space Travel 2·00
—*G. B. Pant*

8 Purandara and Haridāsa Movement 6.00
—*M. V. Krishna Rao* $ 2 or Sh. 13

9 ಮಹಾಕವಿ ಷಡಕ್ಷರದೇವ ಹಾಗು ಅವನ ಕೃತಿಗಳು 3·00
—ಬಿ. ಶಿವಮೂರ್ತಿಶಾಸ್ತ್ರಿ

10 Śaṅkara's Advaita —*R. D. Karmarkar* 3·00

11 ಸಾಹಿತ್ಯ : ಸಂಪ್ರದಾಯ ಮತ್ತು ಹೊಸ ಮಾರ್ಗ 4·00
— ವಿ. ಸೀತಾರಾಮಯ್ಯ

12 ಕನ್ನಡ ಸಾಹಿತ್ಯದಲ್ಲಿ ನಾಲ್ಕು ನಾಯಕರತ್ನಗಳು 3·00
—ದ. ರಾ. ಬೇಂದ್ರೆ

13 ವಿಚಾರಸಾಹಿತ್ಯನಿರ್ಮಾಣ —ಕೆ. ಎಸ್. ಕಾರಂತ 2·00

14 ಕನ್ನಡ ರಂಗಭೂಮಿಯ ಪುರೋಭಿವೃದ್ಧಿ 2·50
—ಆದ್ಯ ರಂಗಾಚಾರ್ಯ

15 ಸಾಹಿತ್ಯವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು
—ರಂ. ಶ್ರೀ. ಮುಗಳಿ 3·00

IV. Economics Series

1 A Survey of Handicrafts in Eight Districts of the Mysore State —*S. S. Mensinkai* 5·00

2 Community Development and Employment 3·00
—*D. M. Nanjundappa*

3 Research Reporting in Social Sciences 2·00
—*M. H. Gopal*

4 Economy of Scarcity Areas —*T. K. Meti* 4·00
$ 1 or Sh. 7

5 Foreign Trade and Economic Development 1·50
—*V. L. D'souza*

6 Food and Freedom —*V. M. Dandekar* 2·50

7 Local Taxation in Urban Areas 3·00
—*D. M. Nanjundappa & M. V. Nadkarni*

8 Economic Development in India 5·00
—*R. Balakrishna*

9 Economic Development of the under-developed regions in Italy —*T. K. Meti* 10·00

10 Rural Industrialisation— An Integrated Approach —*V. S. Vyas* $ 5 or Sh. 30 (IN PRESS)

V. ಕನ್ನಡ ಕಾವ್ಯಮಾಲೆ

Kannada Classical Series

1 **ರಾಜಶೇಖರವಿಳಾಸ ಸಂಗ್ರಹ** 2·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

2 **ಸೋಮನಾಥಚಾರಿತ್ರ** 5·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

3 **ರಾಜಶೇಖರವಿಳಾಸಂ** 10·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

4 **ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ—ಭಾಗ ೧** 6·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

5 **ತ್ರಿಷಷ್ಟಿಪುರಾತನಚಾರಿತ್ರ** ಸಂ. : ಆರ್. ಸಿ. ಹಿರೇಮಠ 12·00

6 **ಬಸವರಾಜವಿಜಯಂ** ಸಂ. : ಆರ್. ಸಿ. ಹಿರೇಮಠ 20·00

7 **ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ—ಭಾಗ ೨** 8·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

8 **ಹರಿಹರದೇವಕೃತ ಪುರಾತನರ ಆರು ರಗಳೆಗಳು** 3·50
ಸಂ. : ಆರ್. ಸಿ. ಹಿರೇಮಠ

9	ನೇಮಿನಾಥಪುರಾಣಂ	ಸಂ. : ಬಿ. ಎಸ್. ಕುಲಕರ್ಣಿ	6.00
10	ಅಕ್ರೂರಚರಿತ್ರೆ	ಸಂ. : ಬೆಟಗೇರಿ ಕೃಷ್ಣಶರ್ಮಾ	4.00
11	ಹರಿಹರದೇವಕೃತ ಪುರಾತನರ ರಗಳೆಗಳು		(ಅಚ್ಚಿನಲ್ಲಿ)
12	ಮಹಾಭಾರತ (ಪೌಲೋಮ-ಆಸ್ತೀಕಪರ್ವ)		(,,)
13	ಜೀವಂಧರಚರಿತೆ		(,,)

VI. ಉಪನ್ಯಾಸ ಗ್ರಂಥಮಾಲೆ

Kannada Extension Lectures Booklets Series

ಬೆಲೆ : ಪ್ರತಿ ಒಂದಕ್ಕೆ ೨೫ ಪೈಸೆ

1. ಭವಭೂತಿ — ಕೆ. ಕೃಷ್ಣಮೂರ್ತಿ
2. ಮನೋರೋಗಗಳು — ಎನ್. ಆರ್. ಕುಲಕರ್ಣಿ
3. ಪ್ರಥಮ ಪಂಚವಾರ್ಷಿಕ ಯೋಜನೆ ಹಾಗೂ ಒಕ್ಕಲುತನ — ಎನ್. ಪಿ. ಪಾಟೀಲ
4. ಗಾದೆಗಳು — ಎ. ಕೆ. ರಾಮಾನುಜನ್
5. ಭಾರತದಲ್ಲಿ ಜಾತಿಪದ್ಧತಿ — ವ್ಹಿ. ಎಸ್. ಡಿ'ಸೋಜಾ
6. ಕೀಟಕ ಪಿಡುಗುಗಳ ಸಮೀಕ್ಷಣೆ — ಎಸ್. ಎಸ್. ಕಟಗಿಹಳ್ಳಿಮಠ
7. ರಾಜಕೀಯ ಪಕ್ಷಗಳು — ಎನ್. ರಾಜಗೋಪಾಲರಾವ್
8. ಸ್ವಾದಿ ಅರಸುಮನೆತನ — ಎಸ್. ಎಸ್. ಮಾಳವಾಡ
9. ಮಕ್ಕಳ ಶಿಕ್ಷಣ — ಡಿ. ಎಸ್. ಕರ್ಕಿ
10. ಮೂಢ ನಂಬಿಕೆಗಳು — ಎಲ್. ಆರ್. ಹೆಗಡೆ
11. ಸಂಸ್ಕೃತ ಕವಯಿತ್ರಿಯರು — ಕೆ. ಟಿ. ಪಾಂಡುರಂಗಿ
12. ನಿತ್ಯಜೀವನದಲ್ಲಿ ರಸಾಯನಶಾಸ್ತ್ರ — ಬಿ. ವಿರೂಪಾಕ್ಷಪ್ಪ
13. ಸಾರ್ವಜನಿಕ ಆಡಳಿತ — ಜಿ. ಎಸ್. ಹಾಲಪ್ಪ
14. ವಿಚಾರವಾದ — ಗೌರೀಶ ಕಾಯ್ಕಿಣಿ
15. ಮಹಾಕವಿ ಮಿಲ್ಟನ್ — ಜಿ. ಎಸ್. ಆಮೂರ
16. ಭಾರತದಲ್ಲಿ ಗ್ರಂಥಾಲಯ ಪ್ರಸಾರ — ಕೆ. ಎಸ್. ದೇಶಪಾಂಡೆ
17. ಭಾರತೀಯ ನಾಗರಿಕತೆಗೆ ಮನುವಿನ ಕೊಡುಗೆ — ಬಿ. ಎಚ್. ಶ್ರೀಧರ
18. ಜನಸಂಖ್ಯೆ ಹಾಗೂ ಆಹಾರ ಸಮಸ್ಯೆ — ಪಿ. ಎಂ. ಉಮಾಕಾಂತಶಾಸ್ತ್ರಿ
19. ಸೌರವ್ಯೂಹ — ಸಿ. ಎನ್. ಶ್ರೀನಿವಾಸ ಅಯ್ಯಂಗಾರ
20. ಪ್ರಾಚೀನ ಭಾರತದಲ್ಲಿ ಸಾಮಾಜಿಕ ಜನಜೀವನ — ಸಿ. ವಿ. ರಂಗಸ್ವಾಮಿ
21. ಸಮಾಜ ಕಾರ್ಯ — ಎಚ್. ಎಂ. ಮರುಳಸಿದ್ಧಯ್ಯ
22. ಸಂಸತ್ತಿನ ಕಾರ್ಯಪದ್ಧತಿ — ಎ. ಎಂ. ರಾಜಶೇಖರಯ್ಯ

23. ಕನ್ನಡನಾಡಿನ ಶಾಸನಗಳು — ಪಿ. ಬಿ. ದೇಸಾಯಿ
24. ಕವೀಂದ್ರ ರವೀಂದ್ರರು — ಎಸ್. ಎಸ್. ಮಾಳವಾಡ
25. ನಾಗಾನಂದ — ಎಚ್. ಪಿ. ಮಲ್ಲೇದೇವರು
26. ಜೀವನದಲ್ಲಿ ನಗೆ — ಎಂ. ಎಸ್. ಸುಂಕಾಪುರ
27. ಬಸವಣ್ಣನವರ ಯೋಜನೆಗಳು — ಬಿ. ಸಿ. ಜವಳಿ
28. ೧೮೫೭ರ ಕ್ರಾಂತಿ — ಸಿ. ವೀರಬಸಣ್ಣ
29. ಕನ್ನಡ ಕಥಾಸೃಷ್ಟಿ — ಬಿ. ಬಿ. ಮಹೀಶವಾಡಿ
30. ಸಂಸ್ಕೃತ ಸಾಹಿತ್ಯದಲ್ಲಿ ಶೃಂಗಾರರಸ — ಕೆ. ಕೃಷ್ಣಮೂರ್ತಿ
31. ನೀರಾವರಿ ಬೇಸಾಯ — ಎಸ್. ಎ. ಹೊಸಮನಿ
32. ಸಾರ್ವಜನಿಕ ಅಭಿಪ್ರಾಯ — ಎನ್. ರಾಜಗೋಪಾಲರಾವ್
33. ಕನ್ನಡ ಕಾವ್ಯಗಳಲ್ಲಿ ಕಿರಾತಾರ್ಜುನಪ್ರಸಂಗ —ದೇವೇಂದ್ರಕುಮಾರ ಹಕಾರಿ
34. ಕನ್ನಡಕ್ಕೆ ಪುರಂದರದಾಸರು ನೀಡಿದ ಕೊಡುಗೆ — ಜಿ. ಡಿ. ನಾಡಕರ್ಣಿ
35. ಫ್ಯಾಶನ್ನುಗಳು — ಕೆ. ಡಿ. ತಂಗೋಡ
36. ಮಹಾಕವಿ ರಾಘವಾಂಕನ ಪಾತ್ರಗಳಲ್ಲಿ ತತ್ವನಿಷ್ಠೆ — ಬಿ. ವ್ಹಿ. ಮಲ್ಲಾಪುರ
37. ಅಭಿವೃದ್ಧಿಯೋಜನೆಗಳಲ್ಲಿ ಸಹಕಾರದ ಪಾತ್ರ — ಎಸ್. ಜಿ. ಕರಭಂಟನಾಳ
38. ಕನ್ನಡ ಜೈನಪುರಾಣಗಳು — ಎಸ್. ಎನ್. ನಾಯಕ
39. ಕನ್ನಡ ನಾಟ್ಯಸೃಷ್ಟಿ — ಎಚ್. ಜಿ. ಲೋಕೂರ
40. ಹರಿಹರನು ಚಿತ್ರಿಸಿದ ಶಿವಶರಣೆಯರು — ಬಿ. ಬಿ. ಹೆಂಡಿ
41. ನೀವು ಬಯಸುವ ಮಗು ಗಂಡೋ? ಹೆಣ್ಣೋ? — ಕೆ. ಆರ್. ರಾಮಸ್ವಾಮಿ
42. ಆಂಡಯ್ಯ — ಬಿ. ಎಸ್. ಕುಲಕರ್ಣಿ
43. ಬೆಳವಲನಾಡಿನ ಬೆಳೆಗಳು — ಎಸ್. ಎ. ಹೊಸಮನಿ
44. ಜಾನಪದ ಕಥೆಗಳು — ಎಲ್. ಆರ್. ಹೆಗಡೆ
45. ಸುಧಾರಿಸಿದ ಬೇಸಾಯ — ಎ. ಸಿ. ಕಲ್ಯಾಣಿಮಠ
46. ಕನ್ನಡನಾಡಿನ ಐತಿಹಾಸಿಕ ಮಹಾಪುರುಷರು — ಬಿ. ಆರ್. ಗೋಪಾಲ್
47. ಗ್ರಂಥಾಲಯದ ಅಂತರಂಗ — ಎಸ್. ಆರ್. ಗುಂಜಾಳ
48. ಸ್ತ್ರೀ ಮತ್ತು ಶಿಕ್ಷಣ — ವನಮಾಲಾ ಆಚಾರ್
49. ಜಾಗತಿಕ ಸರಕಾರ — ಸಿ. ವೀರಬಸಣ್ಣ
50. ಸಮುದಾಯ ಸಂಘಟನೆ — ಎಚ್. ಎಂ. ಮರುಳಸಿದ್ದಯ್ಯ
51. ಅಶೋಕನ ಧರ್ಮಶಾಸನಗಳು — ಶ್ರೀನಿವಾಸ ರಿತ್ತಿ
52. ಪ್ರಾಚೀನ ಭಾರತದ ರಾಜ್ಯಪದ್ಧತಿ — ಸಿ. ವ್ಹಿ. ರಂಗಸ್ವಾಮಿ
53. ಅಕ್ಕಮಹಾದೇವಿ ಮತ್ತು ಮೀರಾಬಾಯಿ — ಎಸ್. ಎಸ್. ಕಬ್ಬಿನ
54. ಕನ್ನಡ ಕಾವ್ಯದಲ್ಲಿ ವೀರರಸನಿರೂಪಣೆ — ಬಿ. ಬಿ. ಮಹೀಶವಾಡಿ
55. ಹರಿಹರ ಮಹಾಕವಿಯ ಕೆಲವು ಮಹೋನ್ನತ ವಿಚಾರಗಳು
— ಬಿ. ಸಿ. ಜವಳಿ

56. ಭಾರತ ರಾಜ್ಯಘಟನೆ — ಎಂ. ಎಸ್. ಪಾಟೀಲ
57. ಪಂಚಾಯತಿ ರಾಜ್ಯ — ಎಸ್. ಜಿ. ಕರಭಂಟನಾಳ ಮತ್ತು ಕೆ. ಡಿ. ಬಸವ
58. ವಿಷಮಜ್ವರ — ಪಿ. ಎಸ್. ಶಂಕರ
59. ಪುಸ್ತಕ ಭಾಂಡಾರ ಕಾಯದೆ — ಜಿ. ಎಂ. ಪಾಟೀಲ
60. ಸರ್ ಐಸಾಕ್ ನ್ಯೂಟನ್ — ಆರ್. ವ್ಹಿ. ಅಬ್ಬಿಗೇರಿ
61. ಗ್ರಾಮಾಭ್ಯುದಯದ ಯೋಜನಾಂಗಗಳು — ಟಿ. ಕೆ. ಮೇಟಿ
62. ಹರಿಜನರ ಸಮಸ್ಯೆಗಳು ಹಾಗು ಅವುಗಳ ಪರಿಹಾರ
— ಎನ್. ಕೆ. ಕಡೆತೋಟದ
63. ರಾಸಾಯನಿಕ ಕಿಣ್ವಗಳು — ಎಂ. ಎಸ್. ಎಸ್. ರಾವ್
64. ಪ್ರಜಾಪ್ರಭುತ್ವದ ಮೂಲತತ್ವಗಳು — ಕೆ. ಬಿ. ಬಕ್ಕಪ್ಪ
65. ಹೃದಯಾಘಾತ — ಪಿ. ಎಸ್. ಶಂಕರ್
66. ಆಭರಣಗಳ ಬಗೆಗೆ ಸಾಮಾಜಿಕ ದೃಷ್ಟಿಕೋನ — ಡಿ. ಎ. ಚಿಕ್ಕಿ
67. ಶ್ರೀರಾಮಾಯಣದರ್ಶನದಲ್ಲಿ ಕುವೆಂಪು ಸೃಜಿಸಿದ ಮೂರು ಪಾತ್ರಗಳು
— ಎಂ. ಜಿ. ಬಿರಾದಾರ
68. ಯೋಜನೆಗಳೇಕೆ ಬೇಕು? — ಎಸ್. ಎಸ್. ಯಮ್ಮಿ
69. ಸಗರನಾಡಿನ ಶಿವಶರಣರು — ವ್ಹಿ. ಶಿವಾನಂದ
70. ವಿಜ್ಞಾನದ ದೃಷ್ಟಿಯಲ್ಲಿ ಸೃಷ್ಟಿ — ಆರ್. ಎಸ್. ಭೂಸನೂರಮಠ
71. ವಿಜಯನಗರದ ನಿರ್ಣಾಯಕ ಯುದ್ಧ — ಎಸ್. ಬಿ. ಕೋಡದ
72. ಬಸವಣ್ಣನವರನ್ನು ಕುರಿತ ಶಾಸನಗಳು — ಎಂ. ಎಂ. ಕಲಬುರ್ಗಿ
73. ಆಧುನಿಕ ಭಾಷಾವಿಜ್ಞಾನ — ಜಿ. ಎಸ್. ಕುಳ್ಳಿ
74. ಪುರಾಣ ಜಿಜ್ಞಾಸೆ — ಎಲ್. ಆರ್. ಹೆಗಡೆ
75. ಭಾರತದಲ್ಲಿ ಶೈಕ್ಷಣಿಕ ಪ್ರಯೋಗ — ವ್ಹಿ. ಎಸ್. ಕುಲಕರ್ಣಿ
76. ಅಧಿಕ ಉತ್ಪಾದನೆಗಾಗಿ ಮಿಶ್ರತಳಿ ಬೆಳೆಗಳು — ಎ. ಸಿ. ಕಲ್ಯಾಣಮಠ
77. ಕನ್ನಡ ನುಡಿಯ ಬೆಳವಣಿಗೆ — ಎಚ್. ಜಿ. ಲೋಕೂರ
78. ಹರಿಹರನ ಗಿರಿಜಾಕಲ್ಯಾಣ — ಬಿ. ವ್ಹಿ. ಶಿರೂರ
79. ಹೊಟ್ಟೆಯ ಹುಣ್ಣು — ಪಿ. ಎಸ್. ಶಂಕರ
80. ಸಂಯೋಜಕ ಶಕ್ತಿ — ಬಿ. ಜಿ. ಜ್ಯೋತಿ
81. ಸಂಸದೀಯ ಸರಕಾರವು ಭಾರತಕ್ಕೆ ಒಪ್ಪುವುದೇ? — ವಸಂತ ಪಾಟೀಲ
82. ನಮ್ಮ ರೈತರೇಕೆ ಹಿಂದುಳಿದಿದ್ದಾರೆ? — ಎಂ. ಸಿ. ಕೊಡ್ಲಿ
83. ನಗೆಗಾರ ನಯಸೇನ — ಎಂ. ಎಸ್. ಸುಂಕಾಪುರ
84. ಶೂನ್ಯಸಂಪಾದನೆ — ವ್ಹಿ. ಎಸ್. ಕಂಬಿ
85. ಮಹಮೂದ ಗವಾನ — ಎಲ್. ಆರ್. ಕುಲಕರ್ಣಿ
86. ಕೆಳದಿಯ ನಾಯಕರು — ಜಿ. ಎಸ್. ದೀಕ್ಷಿತ

87. ಮುಳುಗುಂದನಾಡು — ಎಸ್. ಎಚ್. ರಿತ್ತಿ
88. ಶ್ವಾಸಕೋಶಕ್ಷಯ — ಪಿ. ಎಸ್. ಶಂಕರ
89. ಕರ್ನಾಟಕದಲ್ಲಿ ಗ್ರಂಥಾಲಯಗಳು — ಎಸ್. ಆರ್. ಗುಂಜಾಳ
90. ಮಿರ್ಜಾ ಘಾಲಿಬ್ — ಅಬ್ದುಲ್ ಮಜೀದಖಾನ್
91. ಕಬೀರದಾಸ — ಬಿ. ಎಸ್. ಸಿರೋಳ
92. ಬ್ಯಾಂಕುಗಳ ರಾಷ್ಟ್ರೀಕರಣ — ಎಸ್. ಜಿ. ಕರಭಂಟನಾಳ
93. ಪ್ರಾಚೀನ ಭಾರತದಲ್ಲಿ ಶ್ರಮಜೀವಿಗಳು —ಎಸ್. ಜಿ. ಘಟಪಣದಿ
94. ಹಿಂದುಸ್ಥಾನಿ ಸಂಗೀತ ಪದ್ಧತಿಯ ರೂಪರೇಷೆಗಳು
— ಎ. ಯು. ಪಾಟೀಲ
95. ಶ್ರೀ ಅರವಿಂದ ಸ್ಮರಣೆ — ಸ. ಸ. ಮಾಳವಾಡ
96. ಮಾನವಜೀವನ ಹಾಗೂ ಭೌಗೋಲಿಕ ಪರಿಸರ
— ಡಿ. ಜಿ. ಕುಲಕರ್ಣಿ
97. ಲಕ್ಕಣದಂಡೇಶ — ವ್ಹಿ. ಶಿವಾನಂದ
98. ವ್ಯಾವಹಾರಿಕ ಮಾನವಶಾಸ್ತ್ರ — ಕೆ. ಜಿ. ಗುರುಮೂರ್ತಿ
99. ಪ್ರಾಚೀನ ಗ್ರೀಕರ ಅಮರ ಕೊಡುಗೆಗಳು — ಡಿ. ಟಿ. ಜೋಶಿ
100. ಭರ್ತೃಹರಿಯ ನೀತಿಶತಕ — ಡಿ. ಎನ್. ಶಾನಭಾಗ
101. ಹರ್ಡೇಕರ ಮಂಜಪ್ಪನವರು ಹಾಗೂ ಅವರ ಕೃತಿಗಳು
— ಜಿ. ಎಸ್. ಹಾಲಪ್ಪ
102. ಪೇಟಿ ಮತ್ತು ಜಾಹೀರಾತುಗಳು — ಟಿ. ಎಂ. ಪಂಡಿತ
103. ಪೃಥ್ವಿ ಹಾಗೂ ಜೀವಿಗಳ ರೂಪಾಂತರ—ಎಂ. ಎಸ್. ಎಸ್. ರಾವ್
104. ಪ್ರಜಾಪ್ರಭುತ್ವದಲ್ಲಿ ಕಾಯದೆಯ ಸ್ಥಾನ — ಸಿ. ಕೆ. ಎನ್. ರಾಜ

VII. ವಿಶೇಷ ವಾಙ್ಮಯ ಪ್ರಸಾರ ಪುಸ್ತಕಮಾಲೆ

		PRICE
1	ನಿಜಗುಣ ಶಿವಯೋಗಿ ಹಾಗೂ ಅವರ ಕೃತಿಗಳು	0·50
2	ಮಹಾಕವಿ ರನ್ನ ಹಾಗೂ ಅವನ ಕೃತಿಗಳು	1·00
3	ಮಹಾಕವಿ ಪಂಪ ಹಾಗೂ ಅವನ ಕೃತಿಗಳು	1·00
4	ಸರ್ವಜ್ಞಕವಿ : ಜೀವನ ಹಾಗೂ ಕಾವ್ಯ	1·50
5	ಬಸವಣ್ಣನವರ ವ್ಯಕ್ತಿತ್ವ ಹಾಗೂ ಜೀವನಸಿದ್ಧಿ	1·50
6	ಸಾಹಿತ್ಯವಿಮರ್ಶೆ	1·50
7	ಗಾಂಧೀತತ್ವವಿಶ್ಲೇಷಣೆ	1·50
8	ದಾಸಸಾಹಿತ್ಯ : ದ್ವಿತೀಯ ಘಟ್ಟದ ಸಾಧನೆ (ಅಚ್ಚಿನಲ್ಲಿ)	2·00

VIII. Other Publications

(ಇತರ ಪ್ರಕಟನೆಗಳು)

1 Hubli City—A Study in Urban Economic Life 10·00
—*B. R. Dhekney* $ 3 or £ 1

2 Private International Law — *N. K. Dixit & Negalur Ranganath* 10.00

3 The Structure of Kannada — *R. C. Hiremath* 5.00

4 विवेकचितामणि 6.75

(Marathi rendering of Nijaguna Shivayogi's Viveka Chintamani in Kannada)
(Joint publication of the Karnatak University, Dharwar & the Poona University, Poona)
—Ed. *D. N. Awalikar*

5 ಸಸ್ಯಶಾಸ್ತ್ರ — ಪಿ. ಎಸ್. ಚಿಕ್ಕಣ್ಣಯ್ಯ 1.50

6 ರಸಾಯನಶಾಸ್ತ್ರ — ಆರ್. ಎಸ್. ಹವಸಾಗರ 4.00

7 ಪ್ರಾಯೋಗಿಕ ರಸಾಯನಶಾಸ್ತ್ರ — ಆರ್. ಬಿ. ಕಂಠಿ 3.00

8 ಕನ್ನಡ ಸಂತರ ಪರಮಾರ್ಥಪಥ — ಆರ್. ಡಿ. ರಾನಡೆ 5.00
—(ಅನು. : ಎಂ. ಎಸ್. ದೇಶಪಾಂಡೆ)

9 ಕನ್ನಡ ಪರಮಾರ್ಥಸೋಪಾನ —ಸಂ. ಎಂ. ಎಸ್. ದೇಶಪಾಂಡೆ 2.50

10 Studies in State Administration 15·00
—Ed. *G. S. Halappa*

11 Yashodhara Charita —Ed. *K. Krishnamoorthy* 5·00
$ 1.50 or Sh. 10

12 Essays in Sanskrit Criticism 5·00
—*K. Krishnamoorthy*

13 The First General Elections in Goa 3·00
—*G. S. Halappa, A. M. Rajashekharaiah & K. Raghavendra Rao*

14 Sunyasampadane—Vol-I (*English version of a Kannada work with Commentary and Notes*) 12·00
—Ed. *S. C. Nandimath, L. M. A. Menezes & R. C. Hiremath*

15 Kavi Kaumudi —Ed. *K. Krishnamoorthy* 1.50

16 ಚನ್ನಬಸವಣ್ಣನವರ ವಚನಗಳು —ಸಂ. ಆರ್. ಸಿ. ಹಿರೇಮಠ 15.00

17 ಷಟ್‌ಸ್ಥಲಪ್ರಭೆ —ಆರ್. ಸಿ. ಹಿರೇಮಠ 7·00

18 ಶ್ರೀ ಸಿದ್ಧರಾಮೇಶ್ವರ ವಚನಗಳು — ಸಂ. ಆರ್. ಸಿ. ಹಿರೇಮಠ 20·00

19 ಶಿವಶರಣೆಯರ ವಚನಗಳು (ಸಮಗ್ರ ಸಂಪುಟ) 20 00
—ಸಂ. ಆರ್. ಸಿ. ಹಿರೇಮಠ

20 Sunyasampadane—Vol. II 20·00
—Ed. *S. S. Bhoosanurmath & Armando Menezes*

21 ಬಸವಣ್ಣನವರ ವಚನಗಳು —ಸಂ. ಆರ್. ಸಿ. ಹಿರೇಮಠ 20·00

22 ಮಹಾದೇವಿಯಕ್ಕನ ವಚನಗಳು —ಸಂ. ಆರ್. ಸಿ. ಹಿರೇಮಠ 7·00

23 ನೀಲಮ್ಮನ ವಚನಗಳು ಮತ್ತು ಲಿಂಗಮ್ಮನ ವಚನಗಳು 5·00
—ಸಂ. ಆರ್. ಸಿ. ಹಿರೇಮಠ

24 ಇಪ್ಪತ್ತೇಳು ಶಿವಶರಣೆಯರ ವಚನಗಳು 5·00
—ಸಂ. ಆರ್. ಸಿ. ಹಿರೇಮಠ

25 ಅಮುಗೆ ರಾಯಮ್ಮನ ವಚನಗಳು ಮತ್ತು 5·00
ಅಕ್ಕಮ್ಮನ ವಚನಗಳು —ಸಂ. ಆರ್. ಸಿ. ಹಿರೇಮಠ

26 Critical Essays on Indian Writing in English 20·00
—Ed. *M. K. Naik, S. K. Desai and*
G. S. Amur $ 4 or Sh 30

27 Sāyaṇa's Subhāṣita-Sudhānidhi 10·00
—Ed. *K. Krishnamoorthy*

28 ಶಾಸನಸಂಪದ —ಸಂ. ಆರ್. ಸಿ. ಹಿರೇಮಠ, 2·00
ಎಂ. ಎಂ. ಕಲಬುರ್ಗಿ

29 Urban Studies : An Aid to Research 30·00
—B. N. Sinha & T. N. Achut Rao $ 10

30 Sunyasampadane – Vol. III 20·00
—Ed. S. S. Bhoosnurmath &
Armando Menezes $ 5 or Sh 30

31 Old Peopele of Makunti 10·00
—H. M. Marulasiddaiah

32 ಗೂಳೂರು ಸಿದ್ಧವೀರಣ್ಣೊಡೆಯರ ಶೂನ್ಯಸಂಪಾದನೆ (ಅಚ್ಚಿನಲ್ಲಿ)

33 ಗುಮ್ಮಳಾಪುರ ಸಿದ್ಧಲಿಂಗದೇವರ ಶೂನ್ಯಸಂಪಾದನೆ (ಅಚ್ಚಿನಲ್ಲಿ)

34 ಬ್ರಹ್ಮಾದ್ವೈತಸಿದ್ಧಾಂತ ಷಟ್ಸ್ಥಲಾಭರಣ (ಅಚ್ಚಿನಲ್ಲಿ)

35 ಮುಕ್ತಿಕಂಠಾಭರಣ ,,

36 ಲಿಂಗಚಿದಮೃತಬೋಧೆ ,,

37 ಸಕಲ ಪುರಾತನರ ವಚನಗಳು ,,

38 ವೀರಶೈವಚಿಂತಾಮಣಿ ,,

39 ವಿಶೇಷಾನುಭವಷಟ್ಸ್ಥಲ ,,

40 Analytical Survey of Īśāvāsyopaniṣad (IN PRESS)
—V. V. Mudholkar

41 Essays in Criminal Law (IN PRESS)
—V. R. Bhat

42 Sunyasampadane - Vol. IV.
—Ed. S. S. Bhoosnurmath & Armando Menezes

43 Konkani, a Language (IN PRESS)
—Jose Pereira

44 The Image of India in the Western ,,
Creative Writing *—Ed. M. K. Naik and Others*

IX. UNIVERSITY JOURNALS

(Annuals)

1 Journal of the Karnatak University — Science
2 Journal of the Karnatak University — Humanities
3 Journal of the Karnatak University — Social Sciences

Rate of Annual Subscription for Each Journal:

Rs. 5-00 (In India)

2 Dollars }
14 Shillings } (Foreign)

KARNATAK UNIVERSITY BULLETIN (MONTHLY)

Subscription:

Monthly : 50 paise
Annual : Rs. 6/-

ಕರ್ನಾಟಕ ಭಾರತಿ (ತ್ರೈಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ : ರೂ. ೮/- (ಅಂಚೆವೆಚ್ಚ ಸಹಿತ)
ಬಿಡಿ ಸಂಚಿಕೆಯ ಬೆಲೆ : ರೂ. ೧.೫೦ (ಅಂಚೆವೆಚ್ಚ ಪ್ರತ್ಯೇಕ)

ಕನ್ನಡ ಪಠ್ಯಪುಸ್ತಕ ಮಾಲೆ

ಪಿ.ಯು.ಸಿ. ಪಠ್ಯಪುಸ್ತಕಗಳು

		ರೂ. ಪೈಸೆ
೧.	ರಾಜ್ಯಶಾಸ್ತ್ರ ಪರಿಚಯ	೩ – ೦೦
೨.	ಸಂಸ್ಕೃತ ಗದ್ಯಪದ್ಯ ಪರಿಚಯ	೩ – ೦೦
೩.	ಉದ್ಯಾನಶಾಸ್ತ್ರ ಪರಿಚಯ	೩ – ೭೫
೪.	ಅರ್ಥಶಾಸ್ತ್ರ ಪರಿಚಯ	೪ – ೦೦
೫.	ವಾಣಿಜ್ಯಶಾಸ್ತ್ರ ಪರಿಚಯ	೫ – ೦೦
೬.	ತರ್ಕಶಾಸ್ತ್ರ ಪರಿಚಯ	೩ – ೦೦
೭.	ಜಗತ್ತಿನ ಇತಿಹಾಸ	೪ – ೫೦
೮.	ಬೀಜಗಣಿತ – ಕಲನಶಾಸ್ತ್ರ ಪರಿಚಯ	೪ – ೫೦
೯.	ಸಮಾಜಶಾಸ್ತ್ರ ಪರಿಚಯ	೩ – ೦೦
೧೦.	ಮಾನವಶಾಸ್ತ್ರ ಪರಿಚಯ	೩ – ೦೦
೧೧.	ಸಸ್ಯಶಾಸ್ತ್ರ ಪರಿಚಯ	೫ – ೫೦
೧೨.	ಪ್ರಾಯೋಗಿಕ ರಸಾಯನಶಾಸ್ತ್ರ ...	೩ – ೫೦
೧೩.	ಗಣನಶಾಸ್ತ್ರ ಪರಿಚಯ	೫ – ೦೦
೧೪.	ಸಂಸ್ಕೃತ ಗದ್ಯ–ಪದ್ಯ ಪ್ರವೇಶ	೨ – ೫೦
೧೫.	ಭೂಮಿತಿ ಹಾಗೂ ತ್ರಿಕೋನಮಿತಿ ಪರಿಚಯ	(ಅಚ್ಚಿನಲ್ಲಿ)
೧೬.	ಪ್ರಾಯೋಗಿಕ ಭೌತಶಾಸ್ತ್ರ	,,
೧೭.	ಸಂಖ್ಯಾಶಾಸ್ತ್ರ ಪರಿಚಯ	,,
೧೮.	ಭೂಮಂಡಲ ಪರಿಚಯ	,,
೧೯.	ಭೌತಶಾಸ್ತ್ರ ಪರಿಚಯ	,,
೨೦.	ಸಂಗೀತಶಾಸ್ತ್ರ ಪರಿಚಯ ...	,,
೨೧.	ರಸಾಯನಶಾಸ್ತ್ರ ಪರಿಚಯ ...	,,